

॥೨॥

॥೩॥

॥೪॥

॥೫॥

ಶ್ರೀ ನಿಜಗುಣಶಿವಯೋಗಿ ವಿರಚಿತ

ಕೈವಲ್ಯ ಪದ್ಧತಿ

ಶಿವಕಾರುಣ್ಯಸ್ಥಲ

*

೧. ರಾಗ : [ನಾದನಾಮ ಕ್ರಿಯೆ]

ಶ್ರೀ ಗುರವಚನೋಂ…
ವಾಗಳಹುದು ನರರಿಗೆ ೧ಮುಕುತಿ ॥ಪಲ್ಲ॥

ರ್ಮವನೊಲ್ಲದಿರು ಪುಣ್ಯವನೆ ಮಾಡು
ವಿಡಿ ಶಾಂತರೊಡನಾಡು
ರಲಿ ಜೀವರೊಳು ನೀತಿಪಿದನಾಗು
ರ್ಪೊರ್ದಿದರನೆಂದು ಬೆಸಸುವ ॥೧॥

ಮುಕ್ತಿ (ಅ, ಇ)

ನಿಂದಿಸಿ ನುಡಿಯದಿರಾರನು ಮನಸಿಗೆ
ಬಂದಂತೆ ನಡೆಯದಿರಿಹದಲ್ಲಿ
ಕುಂದುವಡೆಯದಿರು ಕಾಮಾದಿ೨ಗಳ೨ ಜಯಿ
ಸೆಂದು ಕೈವಿಡಿದನುಗ್ರಹಿಸುವ

ಭವಮಾಲೆಗಲಸು ಪುಸಿಯದಿರೆಡರು ಬಂದು
ಕವಿಯಲಂಜದಿರು ಸಂಪದದೊಳು
ತವೆ ಮದವಳಿದಿರು ತತ್ತ್ವ ಸಂತತಿಯನು
ವಿವರಿಸಿ ನೋಡೆಂದು ತಿಳುಪುವ

ಬಳಸದಿರದ್ವೈತವನು ಬಾಹ್ಯ೩ದಲ್ಲಿ೩ ನಿ
ನ್ನೊಳಗೇ೪ಕೋ೪ಭಾವನೆಯೊಡಗೂಡು
ತಿಳಿದು ಸಮಯ ನಿಷ್ಠೆಯಲಿ ವೇದ೫ವಿದ೫ ಭಕ್ತಿ
ಗಳನಗಲದಿರೆಂ೬ದುಸುರ್ವ೬ವ

ಆರು ನಾನೆಂದು ವಿಚಾರಿಸು ವಿಷಮ ಸಂ
ಸಾರವಿದನು ಕನಸೆಂದರಿ
ಮಾರಮರ್ದನ ಶಂಭುಲಿಂಗವನೊಲಿಸಿ ಗಂ
ಭೀರ ಸುಖದೊಳಿರೆಂದರುಪುವ

೧-೧ ಯನು (ಇ) ೨-೨ ದೊಳಗೆ (ಅ) ೩ ೩ ಕ (ಅ, ಇ) ೪-೪ ಧ (ಇ, ಅ) ಧಿ (ಊ) ೫-೫ ಅರಪು (ಅ,) ೬-೬ ದಿರು (ಅ-ಇ

೨ ರಾಗ : ಧನ್ಯಾಸಿ

ಏಳು ದಿನದುದಯದೊಳು ಗಾನ ಮೂರುತಿಗಳಾ
ದೇಳು ನಡೆತಂದಿರಿವು ಮರವೆ ಪುಗದಭವ ನೀ
ನೇಳೆನುತ್ತುಪ್ಪವಡೆದುಪಚಾರವನು ಮಾಡಿ೧ ಕೇಳಿಸಿದರಗಜೇಶನ ॥ಪಲ್ಲ॥

ಏಳು ಪಾತಾಳ ಮೇಲೇಳು ಲೋಕಾಬ್ಧಿಯೇ
ಳೇಳು ಶೈಲಂಗಳೇಳು ದ್ವೀಪ೨ ಪ್ರಕೃತಿ
ಯೇಳೇಳು ಮಿಶ್ರಾಧ್ವಪತಿಗಳು ಸಭಾಂಗಯೆಂಬೇಳರೊಡನಮರಗಣರು
ಏಳ: ನೂರೆಪ್ಪತ್ತು ಮಾತೃಕೆಯರೆನಿಸಿಕೊಂ
ಬೇಳು ಶಕ್ತಿಗಳು ಕೈವಲ್ಯ ಸೋಪಾನಂಗ
ಳೇಳುಳ್ಳ ಶರಣರೇಳೆಂಟು ದೇಶದ ಜನವಿದೇಳುತ್ತೈತಂದಿದೆ ಶಿವ ॥೧॥

ಏಳು ರಸನೆಗಳೇಳು ವಾಜಿ ೩ಮೆರೆವಿ೩ಪ್ಪತ್ತು
ವೇಳುತಾರಾರಮಣನೆನಿಳಪಳ ತ್ರಿಲೋಚನನೆ
ಏಳವಸ್ಥೆಗಳೇಳು ಧಾತು ವ್ಯಸನಂಗಳು ಏಳಾವರಣ೪ಹಿ೪ತನೆ
ಏಳು ಮೂದೆರದ ಸ್ವರಾಳಿಮುಯ:ಗಳ ತಂತ್ರಿ
ಏಳಿಸೆವ ವೀಣಾದಿ ಲೋಲನಯನೋದಯದ೫
ಏಳು ನದಿಗಳ ಸೂಡಿದನೆ ಮಹಾ ಮಂತ್ರಂಗಳೇಳುಕೋಟಿಗಳರ್ಥನೆ ॥೨॥

---

೧ ಪಾಡಿ (ಅ,ಊ, ಮ) ೨ ಗಳಾ(ಉ) ವಾ(ಇ) ೩-೩ ಮಿರುಗುಪ(ಉ)ಮೆರೆಯು(ಮ) ೪-೪ ಸುವ(ಉ,ಮ) ೫ ನೆ(ಮ)

ಏಳು ಸುನಿಯಾಮದಿಂದೇಳು ಕುಟಿಲದ[೬] ಭುಜಗ
ನೇಳು ತೋರುವ ಪ್ರಣವದೇಳು ಭೇದವನು ಕಂ
ಡೇಳು ಸುಜ್ಞಾನ ಭೂಮಿಕೆ[೭] ಸಿದ್ಧಿಯಾಗಿ ಪದಿನೇಳು ತತ್ತ್ವದ ತನುಪನು
ಏಳು ಜನ್ಮದ ಕಲುಷವನು ಜಯಿಪ[೮] ಯೋಗಿವರ
ರೇಳು ತಾರಾಗ್ರಹದೊಳು ಕೇಳುವ ಸುನಾದಾತ್ಮ
ಏಳು ಮಲಪಾಶದೂರನೆ ಶಂಭುಲಿಂಗ ನೀನೇಳು ಮುನಿಕುಲವಂದ್ಯನೆ ॥೩॥

೬x(ಮ) ೭ ಗೆ(ಇ-ಊ) ೮ ಸುವ (ಅ) ಸಿ (ಇ, ಊ)

೩ ರಾಗ : ಶಂಕರಾಭರಣ

ಶರಣ ಜನರ ಸದಃಹೃದಯನಳಿನದೊಳು
ಪರಿಶೋಭಿಸುತ್ತಿ೧ಹುದು ನಿನ್ನ ಪಾದ
ಹರಿಯು೨ ನಯಃನದ ಕಃರುಃಹು೪ವಿಡಿದಿಹುದೀಗ
ಗುರು ಶಂಭುಲಿಂಗ ನಿನ್ನ೪ ದಿವ್ಯಪಾದ ||ಪ||

ದಿಟ್ಟರಾವಣನು ರಜತಾಚಲವನೆತ್ತಲೊತ್ತಿ
ಬಿಟ್ಟಿತು ರಸಾತಳಕೆ ನಿನ್ನ ಪಾದ
ನೆಟ್ಟನಂಧಕಾಸುರನೆದೆಯ ಮೇಲೆ ಭರತದ
ಕಟ್ಟಳೆಗೆ ಕುಣಿದುಃದು ನಿನ್ನ ಪಾದ
ಬೊಟ್ಟಿನೊಳು ಬರೆದ೫ ಚಕ್ರವ ಜಲಂಧರನಿಗೆ
ಕೊಟ್ಟು ಶಿರವರಿದುಃದು ನಿನ್ನ ಪಾದ
ತಿಟ್ಟನೆ ತಿರುಗುವ ಮುಃಪ್ಪುರವ ನಿಟ್ಟಿಸಿ೬ ಬೇಗ
ಸುಃಟ್ಟು ಜಯಸಿತು ಶರ್ವ ನಿನ್ನ ಪಾದ ||೧||

---

೧ ತಿ (ಮ) ೨ x (ಮ) ೩ x (ಮ) ಹೊ (ಉ, ಊ)
೪ ಚಿ (ಉ, ಆ ಮ) ೫ ದು (ಮ) ೬ ಸೀಕ್ಷಿ (ಅ)

ಬೆಂ ಸುಲಿಯಿಂದವಾ[೭]ಗಿ ಮುಂದಿರೆ ಕಂದರ್ಪನನು
ಬಂದು ತುಳಿದಾಡಿತಲ್ಲೊ ನಿನ್ನ ಪಾದ
ಕುಂದದಿಳೆಯೆಂಬ ರಥವಂದು ನಾಗಲೋಕದೊಡ
ನೊಂದುವಂತೆ ಮೆಟ್ಟಿದುದು ನಿನ್ನ ಪಾದ
ಚೆಂದ ಚೆಂದದಿಂದೆ ಕಾಳಿದಾಸ ಮೊದಲಾದ ಕವಿ
ವೃಂದವ್ಯ[೮]ದೆ ಬಣ್ಣಿಪುದು ನಿನ್ನ ಪಾದ
ಇಂದು ಕುಂದ ಹಿಮಹಾರ ಪುಂಡರೀಕ ಪಾಂಡುರಂಗ
ಮಂದರ ಮಂದಿರವಾಸ ನಿನ್ನ ಪಾದ ॥೨॥

ಮೃಗರೂಪದಳಿದಗಧರನರಸಲು ತನ್ನ
ಬಗೆದೋರಿತಿಲ್ಲವಲ್ಲೊ ನಿನ್ನ ಪಾದ
ಬಗೆದು ಪಾತಾಳವೇಳನುಳಿದು ಅತ್ತಲತ್ತ
ಮಿಗೆ ಮೀರಿ ಮೆರೆದುದು ನಿನ್ನ ಪಾದ
ನಿಗಮನಿಕರ ಜಾಯಿಲಂಗಳನಾರಣ್ಯದೊಳು
ಪೊಗಲೊಡನ್ನೈದಿಸಿತ್ತು ನಿನ್ನ ಪಾದ
ನಗಜಾಧಿಪತಿ ನಿರುಪಮ ನಿತ್ಯ ನಿರವಧಿ
ಜಗದಂತರ್ಯಾಮಿ ಶಿವ ನಿನ್ನ ಪಾದ ॥೩॥

---

೭ ಮಾ (ಮು) ೮ ವಯ್ದೆ (ಮು)

ಮನು ಮುನಿ ನರ ನಾಗ ದಿವಿಜದನುಜರನು-
ದಿನದೊಳು ಭಜಿಪುದು ನಿನ್ನ ಪಾದ
ವಿನಮಿತಸುರವಿಸರದ ಮುಕುಟದ ಮಣಿ
ಘನತೇಜದೊಡನಾಡಿ ನಿನ್ನ ಪಾದ
ನೆನೆದವರಘರಿಪು ಗಹನದಹನ ನುತ
ಜನವನರುಹರವಿ ನಿನ್ನ ಪಾದ
ಕನಕಶಿಖರೀ ನಿಜನಿಳಯ ಧನದ ಸಖ
ಜನನ ರಹಿತ ಶಿವ ನಿನ್ನ ಪಾದ ॥೪॥

ಪ್ರಣವದ ನೆಲೆ ಮಂತ್ರಗಣದಭವನ ಗುಣ
ಮಣಿಕುಲ ಜಲನಿಧಿ ನಿನ್ನ ಪಾದ
ಅಣಿಮಾದಿಗಳ ಜನನದ ಭೂಮಿ ಸುಖದ ಸಂ
ದಣಿ ಸತ್ಯ ಶುಭದಾಗು ನಿನ್ನ ಪಾದ
ಗಣತತಿಗಳ ಬೀಡು ತಣುವಿನ ತಾಣ ತತ್ತ್ವ
ದಣಿ ಮುಕುತಿಯು ಖಣಿ ನಿನ್ನ ಪಾದ
ಫಣಿಪಂಕಂಕಣ ಕರುಣಾರಸಭರಿತೇ-
ಕ್ಷಣ ಗುರುಶಂಭುಲಿಂಗ ನಿನ್ನ **ದಿವ್ಯ ಪಾದ** ॥೫॥

ಪದ ೪ ರಾಗ:- ಪುನ್ನಾಗ ತೋಡಿ[೧] (ನಾದನಾಮ ಕ್ರಿಯೆ)

ಕಾಯವಿಡಿದಾತ್ಮರಾಶಿಗೆ ಪರತರ ಮುಕ್ತಿಗು
ಪಾಯವಿದು ನಿಜ ಶಿವಮಂತ್ರವಣ್ಣ ॥ಪಲ್ಲ॥

ಅವರಿವರೆಂಬುದೇನೋ ೨ಶಿವ ಶಿವ೨
ಅವರಿವರೆಂಬುದೇನೋ
ಭುವನದ ಮಾನವರೊಮ್ಮೆ ತಾವಾಗಲಿ
ಶಿವಮಂತ್ರವಿದನುಸುರೆ ಮೋಸದೊಳೊಮ್ಮೆ
ಶಿವಮಂತ್ರವಿದನುಸುರೆ

ಸಕೃದುಚ್ಚಾರಮಾತ್ರೇಣ ಪಂಚಾಕ್ಷರ ಮಹಾ ಮನೋಃ
ಸರ್ವೇಷಾಮಪಿಜಂತೂನಾಂ ಸರ್ವಪಾಪಕ್ಷಯೋ ಭವೇತ್

ಎನಲಾಗಿ ಇಂತೆನಲಾಗಿ ಶ್ರುತಿಯೆನಲಾಗಿ
ಹವಣಿಸಬಾರದ ಕಲುಷವಳಿದು ರಾಜಿ-
ಸುವ ನಿರ್ಮಲತೆಯೆಂದೆನಲಾಗಿ ಶ್ರುತಿಯೆನಲಾಗಿ ॥೧॥

ಇನಿತಾದ ವಟಬೀಜದ ಶಿವ೩ ಶಿವ
ಘನತೆಯಿಂತೆಸೆವಾರು ವರ್ಣದ ಮನುವಿದು
ಮನಸಿಜಹರ ಬೋಧಕ ಬೇಗದೊಳೊಮ್ಮೆ
ಮನಸಿಜಹರ ಬೋಧಕ

---

೧ ಶುದ್ಧ ಕಾಂಬೋಧಿ (ಅ) (ಊ) ಭೈರವಿ ೨ ಯೇ ಯಾ (ಊ, ಇ, ಆ)
೩ ಯೇ ಯಾ (ಇ, ಆ)

ಈಶಮಂತ್ರೋ ಮಹಾಶಕ್ತಿರೀಶ್ವರಪ್ರತಿಪಾದಕಃ
ಸಕೃದುಚ್ಚಾರಮಾತ್ರೇಣ ಸರ್ವಸಿದ್ಧಿಪ್ರದೋ ಭವೇತ್

ಎನಲಾಗಿ ಇಂತೆನಲಾಗಿ ಶ್ರುತಿಯೆನಲಾಗಿ
ದಿನದೊಳೀ ತಾನೊಂದು ವೇಳೆ ಜಪಿಸಿದೊಡೆ
ತನಗೆ ಬೇಡಿದುದೀವುದೆನಲಾಗಿ ಶ್ರುತಿಯೆನಲಾಗಿ ॥೨॥

ಗೌತಮ ವಾಮದೇವಳಶಿವ ಶಿವಳ
ಶ್ವೇತ ವಸಿಷ್ಠ ನಾರದ ಸನಕಾದಿ ಪ್ರ
ಸೀತ ಮುನೀಶ್ವರರು ಚಾರು ಪ್ರ
ನೀತ ಮುನೀಶ್ವರರು

ವಶಿಷ್ಠ ವಾಮದೇವಾದ್ಯಾ ಮುನಯೋ ಮುಕ್ತಕಿಲ್ಬಿಷಾಃ
ಮಂತ್ರೇಣಾನೇನ ಸಂಸಿದ್ಧಾ ಮಹಾ ತೇಜಸ್ವಿನೋಽಭವನ್

ಎನಲಾಗಿ ಇಂತೆನಲಾಗಿ ಶ್ರುತಿಯೆನಲಾಗಿ
ಓತು ಜಪಿಸಿ ಮಂತ್ರವಿದನು ಭಕ್ತಿಯೊಳು ವಿ
ಖ್ಯಾತರೆಂದೆನಿಸಿದರೆನಲಾಗಿ ಶ್ರುತಿಯೆನಲಾಗಿ ॥೩॥

೪-೪ ಯೋ ಯಾ (ಅ, ಆ)

ಸರಸಿಜಭವ ಸುರಪ ಶಿವ ಶಿವ
ಹರಿ ದಿನಕರ ಶಶಿ ಮುಖ್ಯ ದೇವತೆಗಳು
ಪರಮ ಪಂಚಾಕ್ಷರಿಯ ವೈಭವದಿಂದೆ
ಪರಮ ಪಂಚಾಕ್ಷರಿಯ

ಬ್ರಹ್ಮಾದೀನಾಂ ಚ ದೇವಾನಾಂ ಜಗತ್ಸೃಷ್ಟ್ಯಾದಿ ಕರ್ಮಣಿ ।
ಮಂತ್ರಸ್ಯಾಸ್ಯೈವ ಮಹಾತ್ಮ್ಯಾತ್ಸಾಮರ್ಥ್ಯಮುಪಜಾಯತೇ ॥

ಎನಲಾಗಿ ಇಂತೆನಲಾಗಿ ಶ್ರುತಿಯೆನಲಾಗಿ
ಸುರುಚಿರ ಜಗದುದಯಾದಿ ಕೃತ್ಯವ ಪಾಳ್ವ
ಸಿರಿ ಪಡೆದಿರ್ಪರೆಂದೆನಲಾಗಿ ಶ್ರುತಿಯೆನಲಾಗಿ

ಮುನ್ನ ಸಾನಂದ ಋಷಿ ಶಿವ ಶಿವ
ಮುನ್ನ ಸಾನಂದ ಋಷಿ
ಸನ್ನಿಧಿಯೊಳು ನುಡಿದೋಂ ನಮಃಶಿವಾಯೆಂ
ದುನ್ನತ ನರಕಿಗಳ ಕಾಣುತವೆ ಸ
ಮುನ್ನತ ನರಕಿಗಳ

ಪುರಾ ಸಾನಂದ ಯೋಗೀಂದ್ರಃ ಶಿವಜ್ಞಾನ ಪರಾಯಣಃ
ಪಂಚಾಕ್ಷರಂ ಸಮುಚ್ಚಾರ್ಯ ನಾರಕಾನುದತಾರಯತ್ ॥

ಎನಲಾಗಿ ಇಂತೆನಲಾಗಿ ಶ್ರುತಿಯೆನಲಾಗಿ
ಚಿನ್ನಿಧಿ ಗುರುಶಂಭುಲಿಂಗದ ಪದವಿತ್ತು
ಮನ್ನಿಸಿ ಪೊರೆದರೆಂದೆನಲಾಗಿ ಶ್ರುತಿಯೆನಲಾಗಿ ॥೫॥

---

೫. ಯೇ ಯಾ (ಅ. ಅ)

ಪದ: ೫ ರಾಗ : ಧನ್ಯಾಸಿ

ಹರನಾಮವನು ಬಿಡದೆ ಜಪಿಸಬಲ್ಲವರು ಭವ-
ಮರಣ ಮಾಯಾಕರ್ಮ ನಿಗಳಪಾಶಬಂಧ ಬಹು
ದುರಿತ ಸಂಸಾರ ಸಂತಾಪ ಸಂಚಯವಳಿದು
ವರಭೋಗ ಮೋಕ್ಷವಹುದು ॥ಪಲ್ಲ॥

ಶಿವ ಮಹಾದೇವ ಶಂಕರ ಶರ್ವ ಪಾರ್ವತೀ
ಧವ ನಂದಿವಾಹ ದೇವೇಶಾನುದಕ್ಷ ವಾ
ಸವನತಪದಾಂಭೋಜ ನಗಚಾಪ ನಿರ್ಮಲ ನಿರಾತಂಕ ನೀಲಕಂಠ
ಭುವನೇಶ ವಿಜಯ ವೇದಾಂಗ ವೈಶ್ರವಣಸಖ
ಪವಮಾನ ಪಂಚಮುಖ ಪಶುಪತಿ ಸಹಸ್ರಾಕ್ಷ-
ಭವ ಭರ್ಗ ಭಸಿತಾಂಗ ಭಾಳಲೋಚನ ಮೇರುಕಾರ್ಮುಕ ಕಪರ್ದಿಯೆಂದು॥೧॥

ಸೋಮ ಶಾಂತಾಭಯ ವಿರೂಪಾಕ್ಷ ವಿಶ್ವಾಭಿ
ರಾಮ ಗಂಭೀರ ಕಾಲಾರಿ ಕೂಟಸ್ಥ ವಿಭು
ವಾಮದೇವಾಘೋರ ಪಂಚಾಕ್ಷರೋಂಕಾರ ತತ್ಪುರುಷ ರುದ್ರಭದ್ರ
ಭೀಮ ಸದ್ಯೋಜಾತ ಮೃಡ ಮಹಾಕಾಲ ಜಿತ-
ಕಾಮ ಮೃತ್ಯುಂಜಯ ಪುರಾತನ ಪರಾತ್ಪರ ನಿ
ರಾಮಯಾನಂತ ತೇಜೋರಾಶಿ ಸರ್ವಜ್ಞ ಶಾಶ್ವತ ಕಪಾಲಿಯೆಂದು ॥೨॥

ಶೂಲಿ ಸುಜನೈಕಬಾಂಧವ ಸದಾಶಿವ ಚಂದ್ರ
ಮೌಳಿ ಮಹಿಮೋಗ್ರ ಚರ್ಮಾಂಬರಾಸುರ ಶಿರೋ
ಮಾಲಿ ಮಂದಾಕಿನೀಧರ ಮಹೇಶ್ವರ ಮೇಘವಾಹ ಮಂದರನಿವಾಸ
ನೀಲಲೋಹಿತ ಪಾರಿಜಾತ ಪಾವನ ಲೋಕ
ಪಾಲ ಕೈಲಾಸಮಂದಿರ ಮಂತ್ರಮಯ ಭಕ್ತಿ
ಲೋಲ ಪಂಚಬ್ರಹ್ಮ ಪರನಾದ ಬಿಂದು ಪರಮಾತ್ಮ ಪುರವೈರಿಯೆಂದು ॥೩॥

ವರದ ವಾಗೀಶ ವರ್ಣಾತೀತ ವಂದ್ಯಜಯ
ಪರಮ ಪರತರ ಪರಂಜ್ಯೋತಿ ಪರಮಾನಂದ
ನಿರಘ ನಿರುಪಮ ನಿರಾವರಣ ನಿರ್ಲೇಪ ನಿರವಯವ ನಿತ್ಯತೃಪ್ತ
ಉರಗಕಂಕಣ ವಿಶ್ವತೋಬಾಹು ವಿಶ್ವಾತ್ಮ
ಸುರಗಣಾರ್ಚಿತ ಸನಾತನ ಸದಾಗತಿ ಹಂಸ
ಗಿರಿಶ ಗಾಂಗೇಯಪಿತ ಗಣನಾಥ ಜಗದೀಶ ವಿಷಧರ ಪಿನಾಕಿಯೆಂದು ॥೪॥

೧ಉದಯಾಸ್ತಮಾನದೊಳಿಂತು೧ ನೂರೆಂಟು ನಾಮವನು
ಪಮುಳದಿಂದೋದಿ ಕೇಳಿದವರ್ಗೆ ಶಂಭುಲಿಂ
ಗದ ಕರುಣದಿಂದಿನಿತು ಕೊರತೆಯಿಲ್ಲದ ಸಕಲ ಸಂಪದದೊಳೊಂದುಗೂಡಿ
ಸದಮಲಜ್ಞಾನ ಸದ್ಭಕ್ತಿಗಳು ಮೇಲೆ ಮೇ
ಲೊದವಿ ಕೈಸಾರುತಿಹವಿಹದಲ್ಲಿ ಪರದೊಳೊಂ
ದಿದ ಗಣಪದವನೈದಿ ನಿಜಸುಖದೊಳಿಹ ಮುಕ್ತಿ ದೊರೆತುದಿದು ಸತ್ಯವೆಂದು

೧-೧ ಉದಯ ಸಮಯದೊಳಿಂತು (ಕೈ)

ಪದ ೬ ರಾಗ : ಧನ್ಯಾಸಿ

ವಾರ್ಧಕ ಷಟ್ಪದಿ

ಪರಮೇಶ್ವರಿಯ ಪುಣ್ಯ ನಾಮವನು ಪಗಲಿರುಳು
ಸರಸಾನುರಾಗದಿಂದೋದಿ ಕೇಳಿದವರ್ಗೆ
ದುರಿತ ಕಂಟಕವಳಿದು ಕೈಸಾರುತಿಹವಮಳತರ ಭೋಗ ಮೋಕ್ಷಂಗಳು ॥ಪಲ್ಲ॥

ಹ್ರೀಂಕಾರಿ ವಾಣಿ ಕಲ್ಯಾಣಿ ರುದ್ರಾಣಿ ರಮೆ
ಓಂಕಾರರೂಪಿಣಿ ಗಣಾನಿ ಗಾನಪ್ರೀತೆ
ಐಂಕಲಾಪಮಾಲಿನಿ ಮಹಾಮಾಯೆ ಮಾತಂಗಿ ಕ್ಲೀಂಕಲೆ ವರ ವರಣ್ಯೇ
ಸೌಂಕಾರ ಸದನೆ ಶರ್ವಾಣಿ ಶಾರದೆ ಸತ್ಯೆ
ಕ್ರೌಂಕವಚ ಮುಖ್ಯ ಮಂತ್ರಾದಿ ದೇವತೆ ದೇವಿ
ಶ್ರೀಂಕಲಾಕಾರೆ ವಿದ್ಯಾಂಗಿ ಮಾತೃಕೆ ಮಾನ್ಯೆ ಶಾಂಕರೀಶಾನಿಯೆಂದು ॥೧॥

ಗಿರಿಜೆ ಗೀರ್ವಾಣಪೂಜಿತೆ ಗೌರಿ ಗುಹಜನನಿ
ಪರನಾದಬಿಂದು ಮಂದಿರೆ ಮನೋಂಬುಜ ಹಂಸೆ
ವರದೆ ವೈಭವೆ ನಿತ್ಯಮುಕ್ತೆ ನಿರ್ಮಲೆ ನಿರಾವರಣೆ ಶಿವೆ ಶಾಂತೆ ಕಾಂತೆ
ಧರಣಿ ಧರ್ಮಾನುಗತೆ ಸಾವಿತ್ರಿ ಗಾಯಿತ್ರಿ
ವಿರಜೆ ವಿಶ್ವಾತ್ಮಕೆ ವಿಧೂತ ಪಾಪವ್ರಾತೆ
ಪರಣಾಮಿತೆ ಸರ್ವಮಂಗಳೆ ಸಚ್ಚಿದಾನಂದೆ ಪರೆಸುಧಾಕಾರಿಯೆಂದು ॥೨॥

ಚಂಡಿ ಚಂಡೀಶ್ವರೀ ಚತುರೆ ಕಾಳಿ ಕೌಮಾರಿ
ಕುಂಡಲೆ ಕುಟಿಲೆ ಬಾಲೆ ಭೈರವಿ ಭವಾನಿ ಚಾ
ಮುಂಡಿ ಮೂಲಾಧಾರೆ ಮನುವಂದ್ಯೆ ಮುನಿಪೂಜ್ಯೆ ಪಿಂಡಾಂಡಮಯೆ ಚಂಡಿಕೆ
ಮಂಡಲತ್ರಯ ನಿಲಯೆ ದಂಡಿಜ[೧]ಯೆ ದುರ್ಗೆ ಫಣಿ-
ಕುಂಡಲಿ ಮಹೇಶ್ವರಿ ಮನೋನ್ಮನಿ ಜಗನ್ಮಾತೆ
ಖಂಡಶಶಿಮಂಡನೆ ಮೃಡಾಣಿ ಪಾರ್ವತೆ ಪರಮಚಂಡಕರ ಮೂರ್ತಿಯೆಂದು ||೩||

ವಿಮಲೆ ವಿಖ್ಯಾತೆ ಮಧುಮಾತೆ ಮುಖ್ಯೆ ಮಹನೀಯೆ
ಸುಮತಿ ಸುಲಲಿತೆ ಹೈಮವತಿ ಭಾವೆ ಭೋಗಾರ್ಥಿ
ಕಮಲೆ ಕಾತ್ಯಾಯಿನಿ ಕರಾಳೆ ತ್ರಿಪುರವಿಜಯೆ ದಮೆ ದಯಾರಸ ಪೂರಿತೆ
ಅಮೃತೆ ಅಂಬಿಕೆ ಅನ್ನಪೂರ್ಣೆ ಅಶ್ವಾರೂಢೆ
ಶಮೆ ಶುದ್ಧೆ ಸಿಂಹವಾಹಿನಿ ಶುಭಕಲಾಪೆ ಸುಪ್ರಮದೆ
ಪಾವನೆ ಪದ್ಮೆ ಪಾಶದೆ ಪರಬ್ರಹ್ಮೆ ಉಮೆ ಸಹಜಸುಮುಖಿಯೆಂದು ||೪||

ಇಂತು ಗುರುಶಂಭುಲಿಂಗದ ಶಕ್ತಿ ಸೌಭಾಗ್ಯ
ಸಂತತ ಶರೀರ ಸಮ್ಯಗ್ಜ್ಞಾನ ಸತ್ಕ್ರಿಯೆ ಸ-
ಮಂತು ಕರುಣಾಸನಾಭರಣಾಯುಧಾದಿ ಸುಗುಣಾಂತರಾದಿಗಳಾಗುತ
ಸಂತಸವನೀವ ಶಾಂಭವಿಯ ನೂರೆಂಟು ಶುಭ
ವಾಂತನಾಮಂಗಳನು ಜಪಿಸಿದೊಡೆ ಸತಿಪುತ್ರ
ಸಂತಾನ ಸಕಲಸಂಪದ ಸಿದ್ಧಿಯಪ್ಪುದೋರಂತೆ ನಿಶ್ಚಯಮಿದೆಂದು ||೫||

---

೧ ಜಯೆ (ಅ)

ಪದ ೭ ಶ್ರೀ ರಾಗ : ಲಲಿತ

ಜಯ ಜಯ ಮಂಗಳಮಯ ಮಹಿಮೋದಯ
ಜಯ ಜಯ ಜನ್ಮಜರಾಮೃತಿ ಭಯಹರ
ಜಯ ಜಯ ನಿತ್ಯನಿರಾಕುಳ ನಿರ್ಮಳ ಜಯ ಜಯ ಶಂಕರನೆ ||ಪಲ್ಲ||

ಕೆಂಬೊಗರಿನ ಜಡೆಮುಡಿಯರ ಮನೆಯೊಳೆ
ಗಂಬುನಿತಂಬಿನಿಯಾಳ್ದನೆ ಅಶ್ವತ
ಕಂಬಲ ಕರ್ಣಾಕಲಿತನೆ ಕೆಂತುಕದಂಬಕರೂಪಕನೆ
ಅಂಬಾಸನವನರುಹ ಮಧುಮದ ರೋ
ಲಂಬಮಿದೆನಿಸುವ ಗಂಧವಹನೆ ಶ್ರುತಿ
ಗಿಂಬಹ ರಸನೆಯ ನುಣ್ಗದಪಿನ ಪೊಳಪಿಂ ಬಗೆಗೊಪ್ಪುವನೆ ||೧||

ಥಳ ಥಳಿಸುವ ತಂಬೆಳಗು ಬಿಸಿಲು ಶಿಖಿ
ಗಳ ಕಂಗಳ ಕಳೆವೆಳಗಿನ ಸುಮುಖನೆ
ಗಳದೊಳು ಕತ್ತುರಿಗೆರೆಯನೆ ಪೊಸವಿಸದಳೆದನೆ ಪೇರುರನೆ
ನಳನಳಿಸುವ ತೋಳ್ಗಳ ಸಾಲ್ಗಳ ಚಲು
ವಳವಟ್ಟನೆ ವರ ಪರಶುಮೃಗಾಭಯ
ವಿಲಸಿತಕರನೆ ಸಕಳ ಜಗದುದರನೆ ಪೊಳೆವ ಜನಾಂಬರನೆ ||೨||

ಹರಿಯಜವಾಸವ ಮನುಮುನಿದಾನವ
ನರನಾಗಾಮರನಮಿತ ಪದಾಬ್ಜನೆ
ಸರಿಮಿಗಿಲೆಲ್ಲಿಯುಮಿಲ್ಲವೆನಿಸಿದುರುತರನೆ ನಿರಂಜನನೆ
ಪರಮನೆ ಬಿಂದುಕಲಾನಾದಾತ್ಮನೆ
ಚಿರಚಿನ್ಮಾತ್ರನೆ ನಿಗಮಾಗಮನುತಿ
ಸರಸಾಮೋದನೆ ಗುರು ಶಂಭುಲಿಂಗ ನಿಜಶರಣಸುರದ್ರುಮನೆ ॥೩॥

ಪದ ೮ ರಾಗ : ಲಲಿತ

ಸುರನತಚರಣೆಗೆ ಸರಸಾಭರಣೆಗೆ
ವರಗುಣ ನಿಕರಿಗೆ ವಿತರಣ ಸುಕರಿಗೆ
ನಿರುಪಮ ಚರಿತೆಗೆ ನಿಜಸುಖಭರಿತೆಗೆ
ಪರತರ ಪಾರ್ವತಿಗೆ ॥ಪಲ್ಲ॥

ಗೌರಿಗೆ ಗಾಂಭೀರಿಗೆ ಶೃಂಗಾರಿಗೆ
ಸಾರಸಗಂಧಿಗೆ ಶಿವತನು ಬಂಧೆಗೆ
ವಾರಿಜವದನೆಗೆ ವಿದ್ಯಾಸದನೆಗೆ· ಧೀರೆಗೆ ಕಾರುಣ್ಯ
ಪಾರಾವಾರೆಗೆ ಪುಣ್ಯಾಕಾರೆಗೆ
ಹಾರದುರೋಜಗೆ ತೀರದಪೂಜೆಗೆ
ಕಾರಣ ರೂಪೆಗೆ ಕೀರ್ತಿಕಲಾಪೆಗೆ ಸಾರದೆ ಸೇವಿತೆಗೇ ॥೧॥

ಜಗದಾಧಾರೆಗೆ ಜನ್ಮವಿದೂರೆಗೆ
ನಗಜಾತೆಗೆ ಗುಹಗಣಪರಮಾತೆಗೆ
ನಿಗಮಾಗಮವಾಣಿಗೆ ಕಲ್ಯಾಣಿಗೆ ಸುಗುಣಗಣಾಮಣಿಗೆ
ಅಗಣಿತನಾಮೆಗೆ ಸೊಗಸಿನ ಸೀಮೆಗೆ
ಮೃಗಧರಜೂಟಿಗೆ ರತ್ನಕಿರೀಟಿಗೆ
ಪೊಗಳುವ ಮುನಿಸಂತಾನಿಗೆ ಮಾನಿಗೆ ಬಗೆಗಳವಡದುಮೆಗೆ ॥೨॥

ದುರಿತವಿರೋಧಿಗೆ ಸಲೆ ನಿರುಪಾಧಿಗೆ
ವಿರಹಿತ ಮಾಯೆಗೆ ಶರಣಸಹಾಯಿಗೆ
ಪರಶಕ್ತಿಗೆ ಪಾವನ ಸದ್ಭಕ್ತಿಗೆ ಸಿರಿಗಧಿದೇವತೆಗೆ
ಕರಿಮುಖ ಲೀಲಾಲೋಲೆಗೆ ಬಾಲೆಗೆ
ಕರಣವಿಶುದ್ಧೆಗೆ ಕಾಮಿತಸಿದ್ಧಿಗೆ
ಗುರುಶಂಭುಲಿಂಗದ ಜೀವಿಗೆ ಭಾವಿಗೆ ಸುರಚಿರ ಶಾಂಭವಿಗೆ ॥೩

ಹರಿಯಜವಾಸವ ಮನುಃಮುನಿದಾನವ
ನರನಾಗಾಮರನಮಿತ ಪದಾಬ್ಜನೆ
ಸರಿಮಿಗಿಲೆಲ್ಲಿಯುಮಿಲ್ಲವೆನಿಸಿದುರುತರನೆ ನಿರಂಜನನೆ
ಪರಮನೆ ಬಿಂದುಃಕಲಾನಾದಾತ್ಮನೆ
ಚಿರಚಿನ್ಮಾತ್ರನೆ ನಿಗಮಾಗಮನುತಿ
ಸರಸಾಮೋದನೆ ಗುರು ಶಂಭುಲಿಂಗ ನಿಜಶರಣಸುರದ್ರುಮನೆ ||೩||

ಪದ ೮ ರಾಗ : ಲಲಿತ

ಸುರನತಚರಣೆಗೆ ಸರಸಾಭರಣೆಗೆ
ವರಗುಣ ನಿಕರಿಗೆ ವಿತರಣ ಸುಕರಿಗೆ
ನಿರುಪಮ ಚರಿತೆಗೆ ನಿಜಸುಖಭರಿತೆಗೆ
ಪರತರ ಪಾರ್ವತಿಗೆ ||ಪಲ್ಲ||

ಗೌರಿಗೆ ಗಾಂಭೀರಿಗೆ ಶೃಂಗಾರಿಗೆ
ಸಾರಸಗಂಧಿಗೆ ಶಿವತನು ಬಂಧೆಗೆ
ವಾರಿಜವದನೆಗೆ ವಿದ್ಯಾಸದನೆಗೆ ಧೀರೆಗೆ ಕಾರುಣ್ಯ
ಪಾರಾವಾರೆಗೆ ಪುಣ್ಯಾಕಾರೆಗೆ
ಹಾರದುರೋಜಗೆ ತೀರದಪೂಜೆಗೆ
ಕಾರಣ ರೂಪೆಗೆ ಕೀರ್ತಿಕಲಾಪೆಗೆ ನಾರದೆ ಸೇವಿತೆಗೇ ||೧||

ಜಗದಾಧಾರೆಗೆ ಜನ್ಮವಿದೂರೆಗೆ
ನಗಜಾತೆಗೆ ಗುಹಗಣಪರಮಾತೆಗೆ
ನಿಗಮಾಗಮವಾಣಿಗೆ ಕಲ್ಯಾಣಿಗೆ ಸುಗುಣಗಣಾಮಣಿಗೆ
ಅಗಣಿತನಾಮಿಗೆ ಸೊಗಸಿನ ಸೀಮೆಗೆ
ಮೃಗಧರಜೂಟಿಗೆ ರತ್ನಕಿರೀಟಿಗೆ
ಪೊಗಳುವ ಮುನಿಸಂತಾನಿಗೆ ಮಾನಿಗೆ ಬಗೆಗಳವಡುವೆಗೆ ||೨||

ದುರಿತವಿರೋಧಿಗೆ ಸಲೆ ನಿರುಪಾಧಿಗೆ
ವಿರಹಿತ ಮಾಯೆಗೆ ಶರಣಸಹಾಯೆಗೆ
ಪರಶಕ್ತಿಗೆ ಪಾವನ ಸದ್ಭಕ್ತಿಗೆ ಸಿರಿಗಧಿದೇವತೆಗೆ
ಕರಿಮುಖ ಲೀಲಾಲೋಲೆಗೆ ಬಾಲೆಗೆ
ಕರಣವಿಶುದ್ಧೆಗೆ ಕಾಮಿತಸಿದ್ಧಿಗೆ
ಗುರುಶಂಭುಲಿಂಗದ ಜೀವಿಗೆ ಭಾವಿಗೆ ಸುರಚಿರ ಶಾಂಭವಿಗೆ ||೩

ಪದ ೯ ರಾಗ : ದೇಸಿ

ಪಾಲಿಸೆನ್ನನು ಪದುಳವೆರಸಿ ಪರಶಿವನಿಗತಿ ||ಪ||
ಮೇಲೆನಿಪ ಸುಗುಣ ಸಂಪನ್ನೆ ಶರ್ವಾಣಿ

ಜರೆ ಮರಣವನು ಜಯಿಂಸುವಂಮೃತ ಸೇವನೆಯುಳ್ಳ
ಹರಿಯಜಾದಿಗಳ ಬಲುಹನಪಹರಿಸಿದ
ಗರಳವನು ಸಲಿದುಂಡು ಹರನಳುಕದುಳಿದ ಭಾ-
ಸುರತೆ ನಿನ್ನೋದೆದಾಳಿಯ ಮಹಿಮೆ ಗಿರಿಜೆ ||೧||

ಮೇಳವೆಸರಿಲ್ಲದಭವನು ನಿನ್ನ ದೆಸೆಯಿಂದೆ
ಫಾಳಲೋಚನನೆನಿಸಿ ನಿಖಿಳ ನಿರ್ಜರರ
ಮೇಳಕಧಿಪತಿಯಾದನೆಂದೊಡಾಗಮ ನಿಗಮ
ಜಾಲವೆಯ್ದುವವೆ ನಿಜನುತಿಗೆ ನಗಜಾತೆ ||೨||

ನಿನಗೆ ತನ್ನರೆಯೊಡಲನೊಲಿದಿತ್ತನೀಶನೆಂ-
ದೆನುತಿಹರು ತಿಳಿದು ನೋಡದೆ ಕವೀಶ್ವರರು
ಮನಸಿಜಾರಿಗೆ ಮಂತ್ರಮಯ ಮೂರ್ತಿಗಳನು ನೀ
ನನುಗೊಳಿಸಿ ಪೂಜ್ಯನೆನಿಸಿದೆ ಲೋಕಜನನಿ ||೩||

---

೧೧ ಸಿದ (ಅ)

ಜಡೆಗಟ್ಟಿ ತಿರಿದುಂಡು ತಿಪ್ಪರುಳಿನೊಡನಾಡಿ ಮೈ
ದೊಡೆದು ಬೂದಿಯನು ಸುಡುಗಾಡದೊಳಗಾಡಿ
ಜಡರೀತಿವಡೆದ ರುದ್ರನಿಗೆ ನೀನೊಲಿದು ಕೈ
ಪಿಡಿದು ಪಾವನ ಚರಿತನೆನಿಸಿದೆ ಭವಾನಿ ||೪||

ಸಿರಿಸಕಲ ಸಿದ್ಧಿ ಸಂಪದ ವಿದ್ಯೆ ವಿಭವಾದಿ
ಪರಿಕರದೊಳೊಂದಿ ನೀನುಪಕರಿಸದಿರಲು
ಗುರು ಶಂಭುಲಿಂಗದೊಳಗಾವ ಲೇಸಿಹುದಿಳೆಯ
ನರರ ಮನದೊಲವೀಯಲೆಳಸಿದೊಡೆ ಗೌರಿ ||೫||

೨-೩ ಮುಲೆಳುಗಳ ಕೂಡಿ (ಅ) ೩ ಚ (ಆ)

ಪದ ೧೦ ರಾಗ : ನಾದನಾಮಕ್ರಿಯೆ

ಅಗಣಿತ ಮಹಿಮೆಯನಗಲದ ವಿಭುವನೆ ಜಾಣರ ದೇವ
ಸೊಗಸುವ ಸುಗುಣಸಂತತಿಗೂಡಿದಘವನೆ ಜಾಣರ ದೇವ ||ಪಲ್ಲ||

ಪಿತಮಾತೆಯರೊಳೊಗೆಯದೆ ರೂಪುವೆತ್ತನೆ ಜಾಣರ ದೇವ
ಮತಿಯ ಹಂಗಿಲ್ಲದೆಲ್ಲವನರಿವಾತನೆ ಜಾಣರ ದೇವ
ಗತಿಗೆಳಸದೆ ನಿತ್ಯಮುಕ್ತನೆನಿಸಿದನೆ ಜಾಣರ ದೇವ
ಯತಿಗಳ ಲೋಚನಾಗ್ರದೊಳು ಸಂಚರಿಪನೆ ಜಾಣರ ದೇವ ||೧||

ತಿರಿದುಂಡು ಸಕಲ ಲೋಕವನಾಳ್ದ ಗರುವನೆ ಜಾಣರ ದೇವ
ವರನಿಗಮವನಸ ಗತಿಯೊಳಗೊರೆದನೆ ಜಾಣರ ದೇವ
ಸುರರ ಬಲುಹನೊಂದು ತೃಣದಿಂದ ಮುರಿದನೆ ಜಾಣರ ದೇವ
ಬರೆದ ಚಕ್ರದೊಳಸುರನ ಶಿರವರಿದನೆ ಜಾಣರ ದೇವ ||೨||

ಪೂಜಿಸುವರಸು ಪೂಜೆಗೊಂಬಧಿಕನೆ ಜಾಣರ ದೇವ
ಮೂಜಗವೆಂಬ ನಾಟಕವನಾಡಿಸುವನೆ ಜಾಣರ ದೇವ
ರಾಜೀವನಾಭನು ಮಧುವಾಗಲಾಳ್ದನೆ ಜಾಣರ ದೇವ
ಸೋಜಿಗದೊಡಲೊಳಾತ್ಮರ ಭೋಗವೀವನೆ ಜಾಣರ ದೇವ ||೩||

ಕಾಮನನುರುಹಿ ಕಾಮಿನಿಯೊಡವೆರೆದನೆ ಜಾಣರ ದೇವ
ತೀವಿ ನಿಜಾನಂದದೊಳು ಮಿಕ್ಕುಮೀರಿದನೆ ಜಾಣರ ದೇವ
ಜೀವರೊಳಿಡೆವಿಡದಿರ್ದು ಕಾಣಿಸದನೆ ಜಾಣರ ದೇವ
ಭಾವಿಸಲಾಪ್ಪವನವರೊಳು ತೋರ್ಪನೆ ಜಾಣರ ದೇವ ||೪||

ಹರಿಯಜರುಗಳ ಪಾದಪನು ಮಾಣಿಸಿದನೆ ಜಾಣರ ದೇವ
ಗರಳವ ಸೇವಿಸಿ ಮರಣವ ಗೆಲಿದನೆ ಜಾಣರ ದೇವ
ಶರಣಜನರ ಭವರುಜಗಾದಿ ವೈದ್ಯನೆ ಜಾಣರ ದೇವ
ಪರಿಭಾವಿಸಲು ಶಂಭುಲಿಂಗ ನೀನೋರ್ವನೆ ಜಾಣರ ದೇವ ॥೫॥

ಪದ ೧೧ ರಾಗ : ಸಾಳಂಗ

ಪರಮಪಾವನ ಪಂಚಮುಖ ದಯಾಸಿಂಧುವೆ ಶಂಭುಲಿಂಗ
ವರದ ವಾಸವನತ ಲೋಕೈಕಬಂಧುವೆ ಶಂಭುಲಿಂಗ ||ಪ||

ಅನುಪಮಾಚಲ ಭಕ್ತಿಭಾವಾನುಕೂಲನೆ ಶಂಭುಲಿಂಗ
ಮನುಮುನಿ ಜನರ ತಪೋನಿಧಿಲೋಲನೆ ಶಂಭುಲಿಂಗ
ಜನನ ಮರಣ ಭಯಹರ ಜಿತಕಾಲನೆ ಶಂಭುಲಿಂಗ
ವನಜಭವಾಂಡ ಮಂಡಲಪರಿಪಾಲನೆ ಶಂಭುಲಿಂಗ ||೧||

ಗಿರಿಜೆಯ ಕುಚಗಂಧ ವಕ್ಷಾನುಲೇಪನೆ ಶಂಭುಲಿಂಗ
ಶಿರಿವರಮನೆಯ ಸಿಂಗರಮಣಿನೋಪನೆ ಶಂಭುಲಿಂಗ
ಶರಣಸತಿಯನೊಲಿಸುವ ಸತ್ಕಲಾಪನೆ ಶಂಭುಲಿಂಗ
ಸರಸ ಸಂಗೀತ ಸಾಹಿತ್ಯ ಸಲ್ಲಾಪನೆ ಶಂಭುಲಿಂಗ ||೨||

ಅಕಳಂಕ ಮಹಿಮ ಸುಗುಣಮಣಿಹಾರನೆ ಶಂಭುಲಿಂಗ
ಸಕಲ ಚರಾಚರ ಜೀವರಾಧಾರನೆ ಶಂಭುಲಿಂಗ
ವಿಕಸಿತ ಹೃದಯನಳಿನವಂಸಾಕಾರನೆ ಶಂಭುಲಿಂಗ
ಪ್ರಕೃತಿ ಸಂಪದಸಿದ್ಧಿ ಸಮುದಾಯೋದಾರನೆ ಶಂಭುಲಿಂಗ ||೩||

ಪದ ೧೨ ರಾಗ : ಸುವ್ಹಾಲೆ

ನೋಡಲಾಗದೆ ದೇವ ನೋಡಲಾಗದೆ
ಕೂಡಿ ನಿನ್ನ ದಿಟ್ಟಿ ಮೂರು ನಾಡೆ ಲೇಸಮಾಡಲೆನ್ನ ||ಪಲ್ಲ||

ಮಿಸುಕಲೀಯದೆನ್ನ ಮೋಹ
ವಿಸರವೆಂಬ ವನವನುರುಹಿ
ಭಸಿತವೆನಿಸಿ ರುದ್ರ ನಿನ್ನ
ನೊಸಲವಹ್ನಿ ನೇತ್ರದಿಂದೆ ||೧||

ಕಲುಷ ತಿಮಿರ ಮುಸುಕಿ ಮುಗಿದು
ನಲಿಯದೆನ್ನ ಹೃದಯ ನಳಿನ
ಮಲರೆ ದಿವ್ಯರೂಪ ನಿನ್ನ
ಬಲದ ಭಾನುನಯನದಿಂದ ||೨||

ಕರುಣಕುಲಚಕೋರ ತಣಿಯೆ
ಹರುಷಶರಧಿ ಮೀರಲೆನ್ನ
ವರದ ಶಂಭುಲಿಂಗ ವಾಮ
ದುರು ಸುಧಾಕರಾಕ್ಷಿಯಿಂದೆ ||೩||

ಪದ ೧೩ ರಾಗ : ನಾದನಾಮಕ್ರಿಯೆ

ನೋಡು ದಯದೊಳೆನ್ನನೆಂದು ಬಾಳನಯನವನೊಪ್ಪ
ಮಾಡಿ ಹರಿಯು ದಿಟ್ಟಿ ನಿಂದುದೀಶನಡಿಯೊಳು ||ಪಲ್ಲ||

ಮೀಳಿದು ಕಾಲಕಾಮಪುರವಜಾಂಡಕೋಟಿಯನುರುಹಿ
ಕಳೆವ ಬಲವನುಳ್ಳ ನಿನ್ನ ಸಲುಗೆಯಿಲ್ಲದೆ
ನೆಲೆಯೆನಿಸದೆನಗೆ ಶಿವಾಂಘ್ರಿಯೆಂದು ಭೀತಿಸಿ ಬೇಡಿ-
ಕೊಳುವೆನೆನ್ನ ನಾಳುಹಿಕೋ ಕೃಶಾನುಚಕ್ಷುವೆ ||೧||

ಹರಿವರಾಹ ಪಾದಿಯಾದ ಹಲವು ಜನನವ ನೈದಿ
ಒರುವ ಚಕ್ರಿಯೊಡನೆ ತಿರುಗಿ ಬಳಲಲಾರದೆ
ಶರಣನುತ್ತಭವನ್ಮ ಚರಣಪಿಡಿದೆನೆಂದೊಡೆ ನಿನಗೆ
ಸರಿಯುಗಾಣೆ ನಾನು ಚಿತ್ರಭಾನುನೇತ್ರನೆ ||೨||

ಜಡಮತಿಗಳೆನಿಸುವ ಕೆಲರು ವಾರಿಜಾಕ್ಷನ ರುದ್ರ
ನೊಡನೆ ಸದೃಶವಾಗಿ ನುಡಿವರದನು ತೊಲಗಿಸಿ
ಮೃಡನೆ ಪೂಜ್ಯನಸುರವೈರಿಯಾಹನು ಪೂಜಕನೆಂದು
ಪ್ರೌಢವಿಗರುಹಿ ಮನ್ನಿಸೆನ್ನನಲದೃಷ್ಟಿಯೆ ||೩||

ನಿಗಮವರಸುವಾಗಮಾವಳಿಗಳು ಪೊಗಳುವ ಮೂರು
ಜಗದ ಜನರು ಸೇವಿಸುವ ಮುನಿಗಳು ಜಾನಿಪ
ನಗಸುತಾಧಿಪತಿಯ ಪನ್ನಳಿವನೊಂದಿದ ಎನ್ನ
ನಗಲಲೀಯದಿರಿಸುವದೆಲೆ ಪಾವಕಾಕ್ಷಿಯೆ ||೪||

ಚೆಂದದಿಂದ ತನ್ನ ನಿಜವನಿಂತು ನುತಿಸುವ ಶೌರಿ
ಯಂದದೀಕ್ಷಣಕ್ಕೆ ಮೆಚ್ಚಿ ಶಂಭುಲಿಂಗದ
ಪೊಂದದಮರನತ ಪದಾರವಿಂದದಲ್ಲಿಯೆ ನೀನಿ
ರೆಂದು ಶಾಂತಿರಸದೊಳೆಸೆದು ೧ ದಳಿಕಲೋಚನ ||೨೪||

೧-೧ ಛಾಳ್ವ (ಅ)

ಪದ ೧೪ ರಾಗ : ನಾದನಾಮಕ್ರಿಯೆ : ಝಂಪೆ ತಾಳ

ನೋಡಿ ಸಲಹಯ್ಯ ನಿನ್ನಡಿವಿಡಿದೆನಘವ ನೆರೆ
ಕಾಡುತಿಹ ಪೂಗೋಲನ-ಬಿಡದೆ-
ಪೇಡಿಗೊಳಿಸುವ ಕಾಲನ-ಬಲುಹಿಂ-
ಗೀಡು ಮಾಡದೆ ಬಾಲನ-ಎನ್ನ.... ॥ಪಲ್ಲ॥

ಎಳೆವರೆಯದಬಲೆ ಕಂಗೊಳಿಸಲಳುಕಿದೊಡೆ ಕೊಲೆ
ಗೆಳಸಿ ಬೇಗದಲಿ ಬಂದು-ಕಡುಪಿಂ.
ಮುಳಿದು ಬೊಬ್ಬಿಡುತಲಂದು-ಮದನ-
ಬಲುವಿಡಿದು ಬಂದು ನಿಂದು-॥
ತಳುವದೆಸೆವೃತ್ತಿಹನು ಮದನ-
ಗೆಲುವಡರಿದಿವನ ಕದನ-ನೀ-
ನುಳುಹಿಕೋ ಪಂಚವದನ-ಎನ್ನ.... ॥೧॥

ತನುವನಂಜಿಸಲು ರೋಗದ ಬೇಸಿಗೆಯ ಬಿಸಿಲು
ವಸು ಮುನ್ನ ದಾಳಿಯಿಂ ಕಾಡಿ-ಕಾಡಿ-
ಘನಬಾಧೆಗಳನುವೊಡಗೂಡಿ-ಕೂಡಿ-
ಮನೆಯ ಸತಿಸುತರು ನೋಡಿ-॥
ಮುನಿದು ಪಾಶವನು ಬೀರಿ-ಕಾಲ-
ನನುಗೆಡಿಸುತಿಹನು ಸಾರಿ-ಪೇಳಿ-
ದೆನು ಶಿವನೆ ನಿಜವ ತೋರಿ-ಎನ್ನ.... ॥೨॥

ಶರಣಜನಬಂಧು ಶಂಕರ ಕೃಪಾಸಿಂಧು ಸ -
ದ್ಗುರು ಶಂಭುಲಿಂಗಕೃಪೆಯಿಂದೆ ನೀನೇ-
ಪರಿಭವಾಂಬುಧಿಯಿಂದಲಿಂದೆ ಬೇಗದಿ-
ಹೊರದೆಗೆದು ಸಂತಸದಿಂದೆ-।।

ಪೊರೆವುದು ಮನೋಜದಂಡ-ದಂಡ-
ಧರವಿಜಿತ ಸುಪ್ರಚಂಡ-ವಿನುತ-
ಹರಿಯು ಅಜರುಗಳ ತಂಡ-ಎನ್ನ.... ।೩।

ಪದ ೧೫ ಭೈರವಿರಾಗ : ಝಂಪೆ ತಾಳ

ಎನ್ನನೊಲವಿಂದ ಪಾಲಿಸು ಪಾರ್ವತೀಶ
ಸನ್ನುತಾಗಮನಿಗಮಜಿತ ಪಂಚಪಾಶ ॥ಪಲ್ಲ॥

ಸುದತಿಯರ ಸವಿನೋಟದಲರಂಬು ಬಂದು
ಹೃದಯವಿಮ್ಮೈಗಾಣಲಂಗಜನ ತಾಪವಂದು
ಮುದವನುಡುಗಿಸುತಿದೆ ವಿವೇಕವಿರಹಿತನೊಂದು
ಪದವರಿಯೆನಿದಕೆ ನಿಮ್ಮಡಿಪಿಡಿದೆನಿಂದು ॥೧॥

ಭವ ಮಹಾವನದೊಳು ಸುಮಾರ್ಗದ ಹೊಲಬು ಗೆಟ್ಟು
ಹವಣಿಸಲು ಬಾರದ ಕಲುಷಕಂಟಕ ನಟ್ಟು
ಜವನದೂತರ ದಾಳಿಯಿಂದಲತಿ ಭಯವಟ್ಟು
ಶಿವದಿಡುವೆ ನಾನು ನಿಮ್ಮವನಾಶೆವಟ್ಟು ॥೨॥

ಹರಿವಿರಿಂಚಿಸುರೇಂದ್ರವಂದಿತ ಪದಸರೋಜ
ಶರಣ ಸಂದೋಹ ಕಾಮಿತ ಕಲ್ಪಭೂಜ
ಗಿರಿಸುತಾವನಧಿವರ್ಧನ ಪೂರ್ಣರಾಜ
ವರದ ಗುರು ಶಂಭುಲಿಂಗವೆ ದಿವ್ಯತೇಜ ॥೩॥

ಪದ ೧೬ ರಾಗ ಬೇಗಡ (ಭೈರವಿ)

ಕಾಯೋ ಸುಖಸಾರ ನೀನುಪಕಾರ
ಮಾಯಾವಿದೂರ ಬಿಡದೆನ್ನ ಗುಣಮಣಿಹಾರ ॥ಪಲ್ಲ॥

ತನು ಮೋಹವಖಿಳೇಂದ್ರಿಯವ ಪರಿತಾಪ
ಧನದಾಶೆ ಸುಜನರ ನಿಂದೆಯಾಲಾಪ
ವನಿತಾಭಿರತಿ ಲೋಕ ಗತಿಯವಲೇಪ
ಮನವಿಡಿದಳಲುವೆನ್ನನು ನಗಚಾಪ ॥೧॥

ಪಲವು ವಿಷಯದುಪಹತಿಯೊಡಗೂಡಿ
ಕಲುಷರೂಪಿನ ಕರ್ಮವನು ಮಿಗೆ ಮಾಡಿ
ಕುಲಜಾತಿರೂಪು ಸಂಪದವನೆ ಬೇಡಿ
ಸಲೆ ಬಾಧೆಬಡುವೆನಭವ ನೀ ನೋಡಿ ॥೨॥

ಕರುಣಾಂಬುನಿಧಿತೆರೆ ಮಸುಗುವಪಾಂಗ
ಗಿರಿರಾಜಸುತೆ ವಿರಾಜಿಸುವ ವಾಮಾಂಗ
ಶರಣ ಸಂಕುಳದ ಮಾನಸ ನಿಜಸಂಗ
ಪರಿಭವಯುತನೆನ್ನನೆಲೆ ಶಂಭುಲಿಂಗ ॥೩॥

ಪದ ೧೭, ರಾಗ: ತೋಡಿ

ಎನ್ನನೆ ಪಾಲಿಸು ಪುಣ್ಯಮಯಗಾತ್ರ
ಸನ್ನುತ ಸುಗುಣಮಣಿಗಣ ಸೂತ್ರ ॥ಪಲ್ಲ॥

ತೋರಿ ಕೆಡುವ ಒಡಲೆ ತಾನಹುದೆಂದು
ಮೂರುತಾಪದುರಿಯ ಮಧ್ಯದಿ ನಿಂದು
ಮೀರಬಾರದರಿವರ್ಗದೊಳು ನೊಂದು ಮತಿ
ಗಾರುಪಾಡುತಿದೆ ಭಕ್ತಸುರಭೂಜ ಕೃಪೆ
ದೋರೆನಗೆ ಕರುಣವಾರಿಧಿರಾಜ ಬೇರೆ
ಬೇರೆ ಕಾಣಿಸುವ ಜಗದಾದಿ ಬೀಜ ॥೧॥

ಭಾಸುರ ರೂಪಿನೊಳು ದಿಟ್ಟಿನಟ್ಟು
ಕಾಮನಲರಂಬುಗಳಿಗೆದೆಗೊಟ್ಟು
ಕಾಮಿದಾಶೆಯೊಡಗೂಡಿ ಗತಿಗೆಟ್ಟು ಮನ
ಧಾವುತಿಗೊಳುತಲಿದೆ ಜಿತಕಾಲ ಪರಿ
ಭಾವಿಸೆನ್ನನಗಜೆಯ ರತಿ-ಲೋಲ ನತ
ದೇವಮಾನವಾದಿ ವಿಶ್ವಲೋಕಪಾಲ ॥೨॥

ಅಸುರಕರ್ಮವೆ ತನಗಂಗವಾಗಿ
ಮೋಸದೊಳಿನಿತು ಸುಖಭೋಗಕಾಗಿ
ಭಾಸುರಾನಂದದ ಮುಕ್ತಿಯನು ನೀಗಿ ಜೀವ
ಗಾಸಿಯಾಗುತಿದೆ ಯೋಗಿ ಜನಸಂಗ ನೋಡಿ
ಲೇಸನೀವುದೆನಗೆ ಭಾವಜಭಂಗ ಸುವಿ
ಲಾಸನಿಧಿ ನೀನೆ ಗುರು ಶಂಭುಲಿಂಗ

ಪದ ೧೮. ರಾಗ : ನಾದನಾಮಕ್ರಿಯೆ

ಯಾಕೆನ್ನನಿಂತು ಸಂಸ್ಕೃತಿಯೊಡಗೂಡಿದೆಯೆಲೆ ದೇವರೆ
ಸಾಕಿನ್ನು ನಿಜವನೀಯದೆ ತಳುಮಾಡಿದೆಲೆ ದೇವರೆಲೆ ದೇವರೆ ॥ಪಲ್ಲ॥

ಮೊದಲು ನೀನೆನ್ನಜ್ಞಾನಶಕ್ತಿಗೆ ಮಾರಿದೆಲೆ ದೇವರೆಲೆ ದೇವರೆ
ಒದವಿ ಮತ್ತದನೇಕೆ ಕೆಡೆಸಲೆಂದರುಹಿದೆಯೆಲೆ ದೇವರೆಲೆ ದೇವ
ಪುದಿದ ಕರ್ಮದ ಪಾಕದನುಗುಣದೊಳು ಮೀರಿದೆಲೆ ದೇವ....
ವಿಧಿಸಿ ಬಳಿಕ ಮಾಯಾಮಲಪಾಶವನು ಬೀರಿದೆಲೆ ದೇವ.... ॥೧॥

ಚಿತ್ರರವೆನಿಪ ಭುವನದೇಹವನು ಮಾಡಿದೆಲೆ ದೇವರೆಲೆ ದೇವರೆ
ಮತ್ತೆನನ್ನವರ ವರಭಿಮಾನದೊಡಗೂಡಿದೆಲೆ ದೇ....
ಸುತ್ತಿಬರಿಸಿ ಬಹು ಜನನಮಾರ್ಗದೊಳಾಡಿಯೆಲೆ ದೇ....
ಮುತ್ತಿ ಮೋಹಿಸುವ ಸುಖಾದಿಭೋಗವನೂಡಿದೆಲೆ ದೇ.... ॥೨॥

ಮರಳಿ ವಿನಯವಿವೇಕವನೆನ್ನೊಳಿಂಬಿಟ್ಟೆಲೆ ದೇ....
ಪರಬೋಧವರುಹಿ ಬಂಧದ ಬಲುವನೆ ಸುಟ್ಟೆಯೆಲೆ ದೇವ
ವರವಾಗಿ ನಿನ್ನಸಮಾನ ಪದವಿಗೊಟ್ಟೆಯೆಲೆ ದೇವ
ಗುರು ಶಂಭುಲಿಂಗ ನೀನೆನಗಾಗಿ ಕೃಪೆವಟ್ಟೆಯೆಲೆ ದೇವ ॥೩॥

ಪದ ೧೯. ರಾಗ : ತೆಲುಗು ಕಾಂಬೋಧಿ

ನೋಡು ನೀನೆನ್ನ ಪರಿಭವದ ಬಾಧೆಯನು ಕೃಪೆ
ಮಾಡು ಬೇಗದೊಳಭಯವಿತ್ತು ಶಂಕರ ॥ಪ॥

ಮಾಯೆಕರ್ಮದ ಬಾಧೆ ಕಾಯಮೋಹದ ಬಾಧೆ
ಪಾಯು ವಿಷಯೇಂದ್ರಿಯದ ಬಾಧೆ ಶಂಕರ
ಹೇಯವಹ ಜನನಮರಣದ ಬಾಧೆ ತಾಪ ಸಮು-
ದಾಯದತಿಬಾಧೆ ಬಲುಹೆನಗೆ ಶಂಕರ ॥೧॥

ಪಶುಪುತ್ರ ಪಗೆಗಳ ಬಾಧೆ ವ್ಯಸನವೇಳರ ಬಾಧೆ
ದೆಸೆಗೆಡಿಸುವರಿಕುಳದ ಬಾಧೆ ಶಂಕರ
ಕುಸುಮಬಾಣನ ಬಾಧೆ ಮದಶೋಕಮೋಹರತಿ-
ವಿಸರದುರುಬಾಧೆ ಘನವೆನಗೆ ಶಂಕರ ॥೨॥

ಬೇರೆಬೇರಿನ್ನು ಮೈದೋರಿ ಕಾಡುವ ಬಾಧೆ
ನೂರುಸಾಸಿರಕೋಟಿಯುಂಟು ಶಂಕರ
ಮೀರಲರಿದಿವನೆನಗೆ ನೀನೆ ತೊಲಗಿಸಿ ಸುಖದ
ಸೂರೆಗೊಡು ಗುರುಶಂಭುಲಿಂಗ ಶಂಕರ ॥೩॥

ಪದ ೨೦ ರಾಗ : ಬಹುಳಿ

ಕರುಣಿಸೆನ್ನೊಳು ಸುಗುಣವಿನಿತಿಲ್ಲವೆಣಿಸುವಡೆ
ನಿರವಧಿಗಳೆನಿಸುತಂಡಲೆವ ದೋಷ
ನೆರದಿವಕೆ ಪರಿಹಾರವಿದು ನೋಡಲಹುದೆನಿಸ
ದಿರುತಿರ್ಪವಾಗಿಯನಿಮಿತ್ತವಭವ ||ಪಲ್ಲ||

ಜನಿಸಬಾರದಯೋನಿ ಮರಣವಾಗದ ತಾಣ
ವನುಗೆಡದರೀತಿ ಮೋಹಿಸದ ವಿಷಯ
ತನುವನುಂಟದ ರುಜೆಯು ಮುಖಗೆಡಿಸದಿಹ ಲಜ್ಜೆ
ಮನವನಡಸದ ಚಿಂತೆ ಮರೆಯದರಿವು
ಕೊ[1]ನೆಯುದ ವಿಕಾರವಂಚಿಸದ ಭೂತಾದಿ ವಂ
ಚನೆ ಮಾಡದನ್ಯಧನವಿಲ್ಲದಧಟ
ಮುನಿಯುದರಿ ಮುಟ್ಟದಾಹಾರವೆನಗಿಲ್ಲವೆನ
ಲಿನಿತವಸ್ಥೆಯೊಳು ಸಿಲುಕಿದೆನೊ ಶಿವನೆ ||೧||

ಅಡಿಯಿಡದ ನೀತಿ ಮಾಡದ ಪಾಪವೆಳಸಿ ಮೈ
ವಿಡಿಯುದಂಗಜ ಮುದ್ರೆಸುಡದ ತಾಪ
ಜಡಿಯದೆಮದೂತರೆಳೆಯುದ ನಿರಯತತಿಯಳ್ಕಿ
ನಡುಗಿಸವ ಕೊರತೆ ನಿಂದಿಸದ ಸುಜನ
ಕಡೆಗಣಿಸದಾಸೆ ಕೆಡಿಸದ ಬಾಳು ಹರಣವನೆ
ಬಿಡಬೇಹುದೆಂದು ಒಗೆಯುದ ಬಡತನ
ಪಡೆಯದಿಪ ದೂಷಣಪರಸಲೆನ್ನೊಳಿಲ್ಲ ವೆಂ
ದೊಡೆ ಪೇಳಲೇನು ಪೆರತಿಹುದು ಮೃಡನೆ ||೨||

---

೧ ಕೊನೆ (ಅ)

ಪರಿಹರಿಸಬಹುದೆಂಬ ದುಃಖವಿನ್ನೇನಿಲ್ಲಿ
ಪರಿಯಂತವೆನಿಸಿಕೊಳುತಿಹ ಸಂಸ್ಕೃತಿ
ತರಹರಿಪನೆಲೆ ಬಾರದಿರುವ ಕಂಟಕವಿನ್ನು
ಚರಿಸದುಳಿದಿರ್ಪುದು ಮಾರ್ಗವೊಂದು
ಪರಿಭಾವಿಸಿದೊಡಿಲ್ಲವೆನ್ನೊಳದು ಕಾರಣದಿ
ಶರಣುಹೊಕ್ಕೆನು ವರದಕರನೆ ನಿನ್ನ
ಬಿರಿದಿಗಾಗಿಯೆ ಬಿಡದೆ ಪೊರೆ ಶಂಭುಲಿಂಗ ನಿಜ
ಚರಣವಾರಿಜದ ನಡುವಗಲದಿರಿಸಿ ॥೩॥

ಪದ ೨೧ ರಾಗ: ಕುರಂಜಿ

ಕರುಣಿಸು ಕಾಡದೆನ್ನುವನು ಬಂದು
ಶರಣು ಹೊಕ್ಕೆನು ಶಂಕರ ನಿನ್ನ ॥ಪಲ್ಲ॥

ಬಿಡಲಾರದ ವಿಷಯಂಗಳಿಗೀ ಮನ
ವೆಡೆಯಾಡುತಿಹುದನವರತ
ತಡೆಯದೆ ನೀನಲ್ಲಲ್ಲಿಯೆ ಕಾಣಿಸಿ
ಕೆಡಿಸೆನಗವರಾಸೆಯನೀಶ ॥೧॥

ತನುಧನ ವನಿತಾದಿಯೊಳಾವಭಿರತಿ
ಜನಿಸಿಹುದಂತೆ ನಿನ್ನಯ ನಿಜಾಂಘ್ರಿ
ವನಜದೊಳೀ ಮತಿಗನುರಾಗವನಿ
ತ್ತೆನಗಭಯವ ಗುಡು ಪುರಮಥನ ॥೨॥

ಶಿಶುವಿನ ದುರುಳತೆಯನು ಮನ್ನಿಸಿ ಪಿತ
ಸೊಸೆದು ಮುದ್ದಿಸಿ ಲಾಲಿಸುವಂತೆ
ಮುಸುಕಿ ದುರ್ಗುಣವಿರಲದನೆಣಿಸದೆ ಮ
ನ್ನಿಸು ಬಿಡದೆನ್ನನುಮಾರಮಣ ॥೩॥

ಕಲುಷವಡಸಿದವನೆಂದು ನೀನೆನ್ನುವ
ನುಳಿಯಲಹುದೆ ನಿನ್ನಯ ನೆನಹು
ತೊಲಗಿಸಲಘವೊಂದಿಲ್ಲದರಿಂದೆನ
ಗೊಲಿದು ಸಲಹು ಸಾರಿದೆನಭವ ॥೪॥

ಬಡವರನೀಕ್ಷಿಸುತವರುಚಿತವನುರೆ
ನಡಸುವರೊಲಿದು ಸಜ್ಜನರೆಲ್ಲ
ಪೊಡವಿಗೆ ದೀನನೆನಿಸುವೆನ್ನಧಿಕ ನೀ
ನೆಡೆವಿಡದಿರು ಗುರು ಶಂಭುಲಿಂಗ ॥೫॥

ಪದ ೨೨ ರಾಗ : ಮಧುಮಾಧವಿ

ನಿನ್ನೊಳಾವ ಸುಗುಣವಿಹುದು ವಿಚಾರಿಸಿ ನೋಡ
ದೆನ್ನೊಳರಸುವೆ ಲೇಸುಗಳನೇಕೆ ದೇವ ॥ಪಲ್ಲ॥

ಕರಚಲುವಿನ ರತಿಪತಿಯಸುರುಹಿದೆ ಮು
ಪ್ಪುರದವರೆಲ್ಲರೊಕ್ಕಲನೆ ಕೆಡಿಸಿದೆ
ವರವೇದವಿದನ ತಲೆಯನೆಚ್ಚು ಕೆಡಹಿದೆ
ಪುರುಷೋತ್ತಮನ ಕಣ್ಣನೊಪ್ಪಿ ತೆಗೆಸಿದೆ ॥೧॥

ಸುತಧರ್ಮರಾಜನನಿರಿದೆ ಮುಮ್ಮೊನೆಯಿಂದೆ
ಶ್ರುತಿತತಿಯನು ಹುಸಿಯೆನಿಸಿ ನಡಿಸಿದೆ
ಕ್ರತುಪೂಜೆಯುಳಿದೆ ದಕ್ಷನ ಋಷಿಯರ ಕುಲ
ಸತಿಯರೆಲ್ಲರನು ಸ್ಥೈತಿರದೆ ಲಜ್ಜಿಸಿದೆ ॥೨॥

ನೋಡಲಿಂತನೇಕ ಗುಣ ನಿಂದೆಯುಂಟು ನಿನಗದ
ನಾಡಲಿನ್ನೇನದು ಕಾರಣದಿ ನಾನರಿಯದೆ
ಮಾಡಿದಪರಾಧ ಕೋಟಿಯನು ಮರೆವವನೊಂದು
ಗೂಡಿಕೊ ನಿನ್ನೊಳೆನ್ನನೆಲೆ ಶಂಭುಲಿಂಗವೆ ॥೩॥

ಪದ ೨೩ ರಾಗ : ನಾದನಾಮಕ್ರಿಯೆ

ಸಾರವಸ್ತುವಲ್ಲದನ್ಯವನೊಲಿವೆ ಸುವಿ-
ಚಾರವಿಲ್ಲವೇಕೆ ನಿನ್ನೊಳು ದೇವರೆ ॥ಪಲ್ಲ॥

ಕೊಡೆ ಕಂಪುವೆತ್ತ ಗಂಧವನುಳಿದು ಸುಡು
ಗಾಡ ಬೂದೆಯು ತಾಳ್ದೆ ಮೈಯೊಳು ದೇವರೆ
ಮಾಡಿದಲಂಕಾರವೆಲ್ಲವನೊಲ್ಲದೆ ಕೊಂ
ಡಾಡಿ ತೊಟ್ಟೆ ಪನ್ನಗಂಗಳ ದೇವರೆ ॥೧॥

ಹಿಂಗಿ ತೋರಹಾರವಂ ಮಿಗೆ ಮುಂಡೆಮಾಲೆ-
ಗಂಗವಿತ್ತೆ ಸಂತಸದಿಂದೆ ದೇವರೆ
ಮಂಗಳ ದುಕೂಲವನೊಮ್ಮೆ ಪೊದೆಯದೆ ಮಾ
ತಂಗ ಚರ್ಮವಾಂತೆ ಭಾವಿಸೆ ದೇವರೆ ॥೨॥

ವಾರಣಾದಿ ವಾಹನಂಗಳನಗಲಿ ನೀನು
ಸಾರಿ ಬಿಡದೆತ್ತನೇರಿದೆ ದೇವರೆ
ಭೂರಿ ವಿಶ್ವವಲ್ಲಭನಾಗಿ ಮತ್ತೆ ಮನ
ವಾರೆ ತಿರಿದುಂಡು ಬಾಳುವರೆ ದೇವರೆ ॥೩॥

ಗಾಡಿಯುಳ್ಳ ನಿರ್ಝರಾಳಿಯನೆಳಸದೊಂದು
ಗೂಡಿದೆ ಪೈಶಾಚವೃಂದವ ದೇವರೆ
ನೋಡದೆ ಹೇಮಾದ್ರಿವಾಸವನೊಪ್ಪ ಮನೆಯ
ಮಾಡಿಕೊಂಡೆ ಪ್ರೇತಭೂಮಿಯ ದೇವರೆ ॥೪॥

ಮೋಹವಿಲ್ಲದೊಂದರೊಳಿಂತು ನೀನು ಸುರಸ-
ಮೂಹದಿಷ್ಟ ಸಿದ್ಧಿ ಮಾಳ್ಪುದು ದೇವರೆ
ಊಹಿಸಲಾತ್ಮಾನುಭಾವಿಗೆ ಭೋಗದೊಳು ನಿ
ರ್ಮೋಹವೈಸೆ ಶಂಭುಲಿಂಗವೆ ದೇವರೆ ॥೫॥

ಪದ ೨೪ ರಾಗ : ಮಧುಮಾಧವಿ¹

ಕೂಡೆ ನೇಮಿಸಿದೆ ಹಿತವಹಿತವೆಂಬೆರಡನು
ನೋಡು ನಿನ್ನದಾವ ಬಲ್ಲತನವೆ²ಮುದಭವ ॥ಪಲ್ಲ॥

ಕಡುಚೆಲುವೆಸೆವ ಜವ್ವನವನು ಜರೆಯನು
ಬಿಡಲರಿದೆನಿಪ ಭೋಗವನು ರೋಗವನು
ತಡೆಯದಖಿಳ ವಿದ್ಯೆಯನು ದರಿದ್ರತೆಯನು
ಪ್ರೊಡವಿಗಧಿಕ ಸಂಪದವನು ಲೋಭವನು ॥೧॥

ಪರಿತೋಷವನು ವಿತ್ತದಳಿಯಾಸೆಯನು
ಪರತರ ಶಮೆಯನು ನೀರೆಯರ ವಿಲಾಸವನು
ಕರ ಸೊಗಸಿನ ಜೀವನವನು ಮರಣವನು
ವಿರತಿಯನಗಲದರಿವನು ಗರ್ವವನು ॥೨॥

ಮನುಜತ್ವವನು ಮುಕ್ತಿಯೊಲವಿಲ್ಲದಹುದನು
ತನುದಂಡನೆಯನು ಚಿತ್ತದೊಳು ಕಾಮವನು
ಮುನಿವರ್ತನೆಯನು ಲೋಕದ ರಂಜನೆಯನು ಪಾ
ವನ ಶಂಭುಲಿಂಗವಾದೆನು ಸಂಸೃತಿಯನು ॥೩॥

---

೧ ತೋಡಿ (ಊ) ೨ ವಿ (ಎ, ಉ)

ಪದ ೨೫ ರಾಗ : ನಾದನಾಮಕ್ರಿಯೆ

ನೀನೊಲಿಯದ ನಿಮಿಷವೆ ಪಲವರುಷವ
ದಾನೆಂತುಳಿವೆನು ಮನ್ನಿಸು ದೇವ ॥ಪಲ್ಲ॥

ಜ್ಞಾನವಿರೋಧಿ ಮಾಯಾವಿಕೃತಿ ಬಹು
ಧಾನ್ಯದೆ ಶುಕ್ಲಧಾತುಗಳಾಗೆ
ಈ ನಿಖಿಳ ಪ್ರಜೋತ್ಪತ್ತಿಯನವರೊಳು
ನಿನುಂಟುಮಾಳ್ಪೆ ಸರ್ವೇಶ್ವರ ॥೧॥

ಮುಳಿದು ಮನ್ಮಥನ ವಿಕ್ರಮವನು ಜಯಿಸಿ ಮು-
ಪ್ಪೊಳಲದುರ್ಮುಖಿ ರಾಕ್ಷಸರನಿಕ್ಕಿ
ನಳಪಾರ್ಥಿವಾದಿ ಶ್ರೀಮುಖದ ಸೌಮ್ಯರಿಗೆ ಮಂ
ಜುಳಕರಾನಂದವೀವನುಪಮ ॥೨॥

ಭಾವಿಸೆ ಪ್ರಭವಾದಿ ಕ್ಷಯ ಕಡೆಯಾದವರ
ಭಾವ ವಿಕಾರತ್ವ ವಿರಹಿತ
ಜೀವದುಃಖಾರ್ಣವೋತ್ತರಣ ಪ್ಲವ ಮಹಿ
ಮಾವಿಭವದ ಶಂಭುಲಿಂಗವೆ ॥೩॥

ಪದ ೨೬ ರಾಗ: ಸೌರಾಷ್ಟ್ರ

ತಂದು ತೋರೆ ಪಳಿವಾತು ಪೊಡೆಯನ್ನೈಪೊಗದ ಸಾ
ಲಂದವನು ಸರಿಮಾಡಿದನಿಂದುವದನೆ ॥ಪಲ್ಲ॥

ನೆಲದಾಳಿಗಳ ರಾಯನ ಕುವರಿಗೊಲಿದು ನೆಲ
ಕಲಸೆನಿಸದೆ ನೆಲದೊಲವಿತ್ತು ನೆಲನ
ಪಲವೆಡೆ ನೆಲೆಯೊಳಾಂತನ ಪಚ್ಚವನೆ ತೊಟ್ಟು
ನೆಲಗಣ್ಣನಣುಗನನಿಕ್ಕಿ ಮಿಕ್ಕವನ ॥೧॥

ಮುಗಿಲ ಪಗೆಯನುಂಬವನ ಪಗೆಗಳಿಯನ
ಪಗೆಯಾಗಿ ಮುಗಿಲೇರಿದನ ಮಗನೊಡನೆ
ಪಗೆಯಂತೆ ಸೆಣಸಿ ಮುಗಿಲಪಾದಿಗಟ್ಟಿಗಂ
ಮುಗಿಲ ಹೂವನೆ ಸೂಡಿ ಬಗೆಗೊಳಿಸುವವನ ॥೨॥

ತಾವರೆಯಾಗದ ತಾವರೆಗಳನೊಮ್ಮೆ
ತಾವರೆಯುಲರಿ ತಾವರೆ ಮುಟ್ಟಿ ತನ್ನ
ತಾವರೆ ವನೆಯಳೆರಿಯನು ತಾವರೆಯುಳ್ಳ
ತಾವರೆಗೀಯಲೊಲಿದ ಶಂಭುಲಿಂಗನ ॥೩॥

೧ ಯ (ಉ,ಅ,ಇ)

ಪದ ೨೭ ರಾಗ : ಸಾಳಂಗ

ಕಮಲ ಕಮಲ ಕುಮುದಾಶ್ರಯ ಮಸ್ತನೆ ಶಂಭಲಿಂಗ
ಕುಮುದ ಕಮಲ ತರುಣಾನ್ವಿತ ಹಸ್ತನೆ ಶಂಭುಲಿಂಗ ॥ಪಲ್ಲ॥

ಹರಿಹರಿಗನ ಹರಿಸಖನೊಳು ಸುಟ್ಟನೆ ಶಂಭುಲಿಂಗ
ಹರಿಯ ರೂಪಿನ ಹರಿಯನು ಕೊಂದದಿಟ್ಟನೆ ಶಂಭುಲಿಂಗ
ಹರಿ೧ದೇಹವ೧ ಹರಿಶೂಲದೊಳಿಟ್ಟನೆ ಶಂಭುಲಿಂಗ
ಹರಿನತಪದಯುಗ ಹರಿರೂಪುದೊಟ್ಟನೆ ಶಂಭುಲಿಂಗ ॥೧॥

ಸೋಮವಾಮಾಂಗನೆ ಸೋಮಸುತೇಜನೆ ಶಂಭುಲಿಂಗ
ಸೋಮಸಖನೆ ಸೋಮಜನಸುರಭೂಜನೆ ಶಂಭುಲಿಂಗ
ಸೋಮನಾಮನೆ ವಿಶ್ವಸೋಮಸ್ವಭಾವನೆ ಶಂಭುಲಿಂಗ
ಸೋಮಕಲಾತೀತ ಸೋಮಪ್ರಯೋಜನೆ ಶಂಧುಲಿಂಗ ॥೨॥

ಸುರಭಿಯ ಸುರಭಿ ಮಾಲಾರ್ಪಿತ ಸೂತ್ರನೆ ಶಂಭುಲಿಂಗ
ಸುರಭಿಯ ಸುರಭಿ ಭವಾಬ್ಧಿಗೆ ಛೈತ್ರ ಶಂಭುಲಿಂಗ
ಸುರಭಿಯರಸನ ಸುಗಭಿನುತಿಪಾತ್ರನೇ ಶಂಭಲಿಂಗ
ಸುರಭಿಗೆ ಸುರಭಿದನವನಸುಚೈತ್ರನೇ ಶಂಭುಲಿಂಗ ॥೩॥

---

೧ ಯದೆಯನು (ಅ.ಊ,ಈ)

ಪದ ೨೮. ರಾಗ : ಸೌರಾಷ್ಟ್ರ

ಕೋಗಿಲೆ ಚೆಲ್ವ ಕೋಗಿಲೆ ಮುದ್ದು
ಕೋಗಿಲೆ ಜಾಣ ಕೋಗಿಲೆ ॥ಪಲ್ಲ॥

ಹಿಂದೆ ತಪದೊಳೀಶನೊಂದಿರುತಿರಲೆಚ್ಚು
ಬೆಂದ ಕಾಮನ ಬಿಟ್ಟು ಕೋಗಿಲೆ
ಬಂದು ಬೇಗದೊಳು ಬಾಲೇಂದುಧರನ ಕೂಡಿ
ಕುಂದದೆ ನೀ ಬಾಳು ಕೋಗಿಲೆ ॥೧॥

ಮನು ಮುನಿಗಳ ನೀತಿಯನು ಕೆಡಿಸುವ ದುಷ್ಟ
ಮನಸಿಜನನು ಮೀರಿ ಕೋಗಿಲೆ
ಘನಪದವನು ತನ್ನ ನೆನೆವರಿಗೊಲಿದೀವ
ಧನದಮಿತ್ರನ ಸಾರು ಕೋಗಿಲೆ ॥೨॥

ನಲ್ಲರನಗಲಿದ ಮೆಲ್ಲೆದೆಯರ ಕೊಲ್ವ
ಫುಲ್ಲಶರನ ಹಿಂಗಿ ಕೋಗಿಲೆ
ಎಲ್ಲ ಜೀವರಿಗೆರವಿಲ್ಲದೊಲವನೀವ
ಬಲ್ಲಭವನೊಳಿರು ಕೋಗಿಲೆ ॥೩॥

ಮಂಗಳರವದೊಳನಂಗನ ಬಣ್ಣಿಸೆ
ಭಂಗವಲ್ಲವೆ ನೋಡು ಕೋಗಿಲೆ
ಕಂಗೊಳಿಸುವ ಸರ್ವ ಮಂಗಳೆಯರಸನ
ಹಿಂಗದೆ ನೀ ಪಾಡು ಕೋಗಿಲೆ ॥೪॥

ಮುರುಳ ಕಂತುಪಿನೊಡನಿರೆ ಲೋಕದೊಳು ನಿನ್ನ
ಪರಪುಟ್ಟನೆಂಬರು ಕೋಗಿಲೆ
ಧರೆಗೆ ಜನಕನಾದ ಗುರು ಶಂಭುಲಿಂಗದ
ಚರಣಪಲ್ಲವ ಪಿಡಿ ಕೋಗಿಲೆ ॥೫॥

ಶ್ರೀ ನಿಜಗುಣದಿವ್ಯಶಿವಯೋಗಿವಿರಚಿತವಾದ ಕೈವಲ್ಯಪದ್ಧತಿಯೆಂಬ ಪ್ರಕರಣದಲ್ಲಿ ಶಿವಕಾರುಣ್ಯಸ್ಥಲಕ್ಕೆ ಸೇರಿದ ಪದಂಗಳು ೨೮ ವಚನಂಗಳು ೧೦೬ಕ್ಕಂ ಮಂಗಳ ಮಹಾ

ಶ್ರೀ ಶ್ರೀ ಶ್ರೀ

ಶ್ರೀ ಗುರು ಬಸವಲಿಂಗಾಯ ನಮಃ

ಜೀವಸಂಬೋಧನಸ್ಥಲ

★

ಪದ ೧. ರಾಗ: ಧನ್ಯಾಸಿ

ನೆನೆವುದನುದಿನದುದಯಕಾಲದೆಚ್ಚರಿಕೆಯೊಳು
ವಿನುತ ಗುರುಮೂರ್ತಿಯನುಮೇಶಸಂಪ್ರಿಯನು ನಿ
ನ್ನನು ಬಳಿಕ ಸುವಿಚಾರದಿಂದೆ ನೇಮಕವಾಗಿ
ಮನುಜ ನಿನಗಹುದು ಮುಕ್ತಿ ।।ಪಲ್ಲ।।

ಹೆಣ್ಣುಮಕ್ಕಳು ಗೂಡಿ ನಿನ್ನ ಜಾಗರವಿರ್ದು
ಕಣ್ಣೆವೆಯನಿಕ್ಕಿದನಿತರೊಳು ಕನಸಾಗಿ ಪಲ
ವಣ್ಣದಾಕೃತಿಗಳನು ತಾನೆ ತಳೆದವನುಳಿದು
ತಿಣ್ಣವಹ ಸುಪ್ತಿಯಲ್ಲಿ
ಯಣ್ಣೆಬತ್ತಿಗಳರತ ಸೊಡರಂತೆ ಕೆಟ್ಟಿಂತು
ಪಣ್ಣೆಕೊಂಡೈದಿಹೆನೆ ಪೊಡಲಂತೆ ಬಾಳುವಿಗೆ
ಬಣ್ಣಿಗೆಯ ಬಹು ಕೆಲಸಗಳನು ನಿಜವೆಂಬಂತೆ
ಬಣ್ಣಿಸಲ್ಕರಿದಿದೆಂದು ॥೧॥

ತನುವಿದೇನನ್ನೊಳೊಂದಿತೇತಕೆ ನಾನಾರು
ಜನನ ಮರಣಕ್ಕಾರೆ ನನ್ನೀ ಶರೀರದೊಳು
ನೆನೆವಾಲಿಸುವ ನೋಂಕುವರಿವುಣುವ ವಾಸಿಸುವತನವಾರದೀ ನುಡಿಗಳು
ಜನಿಪವೆಲ್ಲಿಂದಸುಗಳೇನನೆಮ್ಮಿಹವೆನ್ನ
ನನುಗೊಳಿಸಿ ನಡಸುವವರಾರೇತರಿಂದೆ ಜಗ
ವಿನಿತು ಭೇದಾಕಾರದಿಂದುದಿಸಿತೆಂಬ ಭಾವಂಗಳನುಭಾವವಿಡಿದು ॥೨॥

ತಾಯಿಗರ್ಭದೊಳು ನಾನಿರ್ದ ವೇಳೆಯೊಳಲ್ಲಿ
ಹೇಯುದತಿ ಬಾಧೆಗೆ ಕರಂ ನೊಂದು ಮಿಗೆ ಪೇಸುತಿಹ
ಪೇಯುವನು ಬಿಟ್ಟೀತಕಿಂತು ಪೊರವಂಟ್ಟಿರುವೆ
ನಾಯುಷ್ಯಮಿಹುದರೊಳಗೆ
ಕಾಯಜವಿರೋಧಿ ಗುರು ಶಂಭು ಲಿಂಗವನೊಲಿಸಿ
ಮಾಯೆಯನು ಮೀರಿ ಭವವನು ಗೆಲುವೆನೆಂಬ ಸಮು
ಪಾಯುದಧಿಕಾರವೆನ್ನದು ಮರೆದೆನದಕಿನ್ನು
ಪಾಯುವೇ ಧರ್ಮವೆಂದು ॥೩॥

ಪದ : ೨. ರಾಗ : ಶಂಕರಾಭರಣ

ಸುಮ್ಮನೆ ಕಾಲವನು ಕಳೆದು ಸಾವುದುಚಿತವೆ
ನೆಮ್ಮಿ ನಿಜವನು ಮುಕ್ತಿಪಡೆಯದೆ ಮನುಜ ॥ಪಲ್ಲ॥

ಧರೆಯನೆಲ್ಲವನು ಸಣ್ಣಿಸಿ ದೂಳಿ ಮಾಡಲಾ
ಪರಮಾಣುಗಳವೆನಿತೆನಿತು ದೇಹವನು
ಧರಿಸಿತೊಂದೊಂದು ದೇಹದ ಬಸುರೊಳು ಬಂದು
ಮರಳಿ ನೀನಿತ್ತ ತಿರುಗದಂತೆ ರಚಿಸದೆ ॥೧॥

ಜನನ ಮರಣರುಜೆ ಭಯ ಶೋಕ ಜರೆ ಬಡ
ತನ ಪರಸೇವೆ ಹಾನಿ ಹಳಿವು
ಮುನಿಸು ವಿಷಯರತಿ ವಿರಹಸಂತಾಪ ಚಿಂ
ತನೆಗಳು ನಿನಗಾಗದಿಹ ಬುದ್ಧಿ ಗಲಿಯದೆ ॥೨॥

ಹವಣಿಸಬಾರದ ಹಲವು ದುಃಖಂಗಳ-
ನವಿರತವನುಭವಿಸುವ ನಿನಗಿನ್ನು
ಸವೆಯದಾನಂದವಹುದು ಶಂಭುಲಿಂಗದ
ಸುವಿಚಾರ ಭಜನೆ ಭಕ್ತಿಯೊಳಿಂಬುವರಿಯದೆ ॥೩॥

ಪದ ೩.ರಾಗ ; ಶಂಕರಾಭರಣ

ನಿದ್ರೆಬಾರದಿದೆನ್ನ ಪರಿಭವ ದುಃಖ ಸ
ಮುದ್ರವೆನಿಸುವ ಸಾಯುಸುವ ನೆನೆನೆನೆದು ॥ಪಲ್ಲ॥

ಪಾಪಾನುಗುಣದಿಂದೆ ಗಿಡ ಮರ ಕ್ರಿಮಿಗಳ
ರೂಪಾಗಿ ಕೀಟಪತಂಗಾದಿಯಾಗಿ
ಆ ಪಕ್ಷಿಕುಲವಾಗಿ ಮೃಗಜಾತಿಯಾಗಿ ಮೇ
ಲಾ ಪಶುರೂಪಾಗಿ ಬಹುಬಾಧೆಂಗೇಳಿಂ ॥೧॥

ಭೂತಪಂಚಕದ ರೂಪಾಗಿಯೋಷಧಿಯಾಗಿ
ಧಾತು ಸಪ್ತಕದ ರೂಪಾಗಿ ತಂದೆಯೊಳು
ಮಾತೃಸೂತಕ ರುಧಿರ ರೂಪಾಗಿ ಮು
ತ್ತೀ ತನುವಾಗುವಾಶ್ಚರ್ಯವನು ಕಂಡು ॥೨॥

ಬಾಲಕ ತರುಣ ಜರಾಜೀರ್ಣ ರೂಪಾಗಿ
ಮೇಲೆ ನರಕಿಯಾಗಿ ಬಳಿಕೀ ಕ್ರಮದೊಳು
ತಾಳಲಾರೆನು ತನುವನು ಶಂಭುಲಿಂಗವೆ
ಪಾಲಿಸೆಂದೆರಗಿ ಬಿನ್ನೈಪೆ ಭೀತಿಯೊಳು ॥೩॥

---

೭ ಗಲಸಿ (ಅ)

ಪದ ೮ ರಾಗ : ಕನ್ನಡ ಕಾಂಬೋಧಿ

ಆರು ತರಪರಿಸಬಹುದದಿಗದಿಗೆ ತೋರುವತಿ
ಘೋರ ಸಂಸಾರದನುತಾಪಸಂತತಿಯ ॥ಪ॥

ಮಾತೆಯುದರದೊಳು ಮೊಗವಿಡದ ಮುಸ್ನುಸುವಳಿವ
ಪೂತಿಗಂಧದ ಹೇಯುವನು ಸಿಡಿಲಸಮದಾ-
ಘಾತಿ ಮಿಗೆ ಪೊಡೆದು ೧ಕೆಡಿ೧ಸುವ ಸೂತಿವಾಯುವನು
ಯಾತನೆಯ ನಡುಗಡಲದೆನಿಪ ಜನನವನು ॥೧॥

ನಿರಯದೋಕುಳಿಯನಾಡುವ ಪರಿಯ ಬಾಲ್ಯವನು
ದುರುಳತೆಯೊಳೇನನರಿಯದ ಶಿಶುತ್ವವನು
ಮರುಳುಗೊಳಿಸುವ ಕಂತುವಿನ ಕಾಟ ಮೊದಲಾದ
ದುರಿತ ಕುಲಬಂಧುವೆನಿಸುವ ಯೌವನವನು ॥೨॥

ನುಡಿಯಬಾರದ ಲಜ್ಜೆಗೊಡುವ ಜರೆಯನು ತನ್ನ
ಜಡಸಿ ತೀರದ ಬಾಧೆಗೊಳಿಪ ಮರಣವನು
ನಡಿವ ಯಮಭಟರ ಕೋಪವನಿಂತು ಭವಭವದೊ
ಳಿಡೆವಿಡದೆ ಶಂಭುಲಿಂಗವೆ ಬಿಡಿಸು ನೀನಿದನು ॥೩॥

---

೨. ದಶ (ಅ.ಅ.)

ಪದ ೫. ರಾಗ : ಮಧುಮಾಧವಿ

ಪಡೆವೆ ನೀನೆಂದಿಗೆ ಪರಮುಕ್ತಿಸುಖವನು
ಕೆಡುವ ಕಾಯದ ಮೋಹವನು ಮಾಣೆ ಮನುಜ ॥ಪಲ್ಲ॥

ಮಲಮೂತ್ರವಣುವಿರ್ದ ನೆಲೆಯೊಳು ನಿಲೆನೆಂಬೆ
ಪಲವಪೇಯದ ತಾಣವೆನಿಸುವಂಗದೊಳು
ನೆಲಸಿ ವಿಷಯಸುಖವನು ಭೋಗಿಸುವೆನೆಂದು
ಸಲೆ ಮನವೆಳಸಿಹುದನು ಬಿಡೆ ಮನುಜ ॥೧॥

ಜಡ ದೃಶ್ಯಮಿತಿ ಪರಿಣತೆ ಭೂತಕಾರ್ಯತೆ
ವಿಡಿದು ಕನಸು ನಿದ್ರೆಯೊಳಗಿಲ್ಲವಾಗಿ
ಕೊಡನಂತೆ ಬೇರೆನಿಸಿಹುದು ತಾನಲ್ಲವೀ
ಯೊಡಲೆಂಬ ಸುವಿವೇಕವನು ಮಾಡೆ ಮನುಜ ॥೨॥

ಅನಿಮಿತ್ತವರಿಗಳೆನಿಸುವ ಕಾಮಾದಿಗಳಿಗೆ
ತನುವನೇಕವನಿತ್ತೆ ಭವಭವಂಗಳಲಿ
ನಿನಗೊಂದು ದೇಹವಿದನು ತೊಟ್ಟು ತಪವಾಂತು
ಘನಶಂಭುಲಿಂಗವಾಗಿರಲೊಲ್ಲೆ ಮನುಜ ॥೩॥

ಪದ ೬ ರಾಗ : ವಸಂತ

ಅಜ್ಞಾನಿಯಲ್ಲವೆ ನೀನು ಜೀವನೆ
ಸುಜ್ಞಾನಿಯೆಂದು ನುಡಿವರೆ ॥ಪಲ್ಲ॥

ಚೈತನ್ಯರೂಪನಾಗಿರ್ದು ಜಡಪಂಚ
ಭೂತದೇಹವನು ನೀನೆಂಬೆ
ಪೂತ ನಿರ್ಮಲ ನಿಜತತ್ವಮಯನಾಗಿ
ಸೂತ್ರಕಾದಿ ವಿಧಿ ವಿಡಿದಿರ್ಪೆ ॥೧॥

ಮೂರವಸ್ಥೆಗಳೊಂದರೊಳಗೊಂದಿಲ್ಲ
ಮೂರವಸ್ಥೆಯನರಿವುತ
ಬೇರೆ ಸಾಕ್ಷಿಕನಾಗಿರ್ದು ಸಂಸೃತಿ
ದೂರಿಗೀಡಾಗಿ ಬಳಲುವೆ ॥೨॥

ಚಿತ್ತೊಂದೆಯದು ಗುರುಶಂಭುಲಿಂಗವೆಂ
ದುತ್ತಮ ಶ್ರುತಿ ಸಾರುತಿರೆ
ಮತ್ತೆ ನೀನೋರ್ವನೆಂದು ಬರಿದೆ ಮೋಹಿ
ಸುತಿರ್ಪೆ ನಾಮರೂಪವನು ॥೯॥

ಪದ ೭ ರಾಗ : ಶಂಕರಾಭರಣ

ಕಂಡು ಕೇಳಿ ಮತ್ತೆ ಮೋಹಿಪರೆ ಬಲ್ಲವರು ಭೂ
ಮಂಡಲದ ಭೋಗಪೂಗವನತ್ರಿಗಳಿಯದೆ ||ಪಲ್ಲ||

ಪಡೆದವರೊಡನಾಡಿಗಳು ಬಗೆಗೊಳಿಸುವ
ಮಡದಿಯರೊಲವೀವ ತನುಜರೊಂದಿನಿಸು
ಬಿಡಲರಿದೆನಿಪ ಬಂಧುಗಳಚ್ಚ ಸುಖಿಗಳು
ಕಡುಜಾಣರುಗಳು ತಮ್ಮಿದಿರೊಳಳಿವುದನು ||೧||

ಬಲಿ ವಾಲಿ ಕರ್ಣ ಕೌರವ ರಾಮ ರಾವಣ
ನಳ ನಹುಷ ರಘು ಭೀಮ ಬಲಭದ್ರ ಸಗರ
ಕಲಿ ಪಾರ್ಥ ಕೀಚಕ ಶಿಶುಪಾಲ ದಶರಥ
ರೊಳಗಾದನೇಕರೆಲ್ಲರ ಹಾನಿಕಥೆಯನು ||೨||

ಸೊಡರಿನ ಸುಡುವತನವನರಿಯದೆ ಬಂದು
ಕೆಡುವ ಪುಳುವಿನವೋಲಖಿಳ ವಸ್ತುಗಳ
ಕೆಡುವ ದೋಷವನು ವಿಚಾರಿಸಿ ವಿಬುಧರು
ಬಿಡದಿಹುದನುಚಿತವೆಲೆ ಶಂಭುಲಿಂಗವೆ ||೩||

ಪದ ೮. ರಾಗ : ಸುವ್ವಾಲೆ*

ಮಾಡಲುಚಿತವೆ ಮನುಜ ಮಾಡಲುಚಿತವೆ
ಕೂಡೆ ಬಾಧೆ ಬಹಳವಿಹುದು ನೋಡಿ ಧನದ ಲೋಭವಿದನು ॥ಪಲ್ಲ॥

ಧನವ ಗಳಿಸುವಲ್ಲಿ ಮೊದಲು
ತನುವಿಗತಿ ಬಳಲ್ಕೆ ನಡುವೆ
ಮನಕೆ ದಿಗಿಲು ಮಿಗಿಲು ಮರೆಸಿ
ಜನರು ನೋವುವೆಡೆಯೊಳಿಂತು
ಜನಿಪುದಳಲು ಮತಿಗೆ ಮೆಚ್ಚ
ವಿನಿತನೆಸಗೆ ಕೆಡಲು ಕಡೆಗೆ
ತನಗೆ ಕಂಟಕಂಗಳಾವ
ದಿನದೊಳೊದಗಿ ಬಪ್ಪವಾಗಿ ॥೧॥

ಉಗರ ವಹ್ನಿಮರಳು ಮೋಸ
ವರಸು ಕಳ್ಳರನುಜರು ಜಗು
ಳಿರಿಸೆ ನೆಲದಿವೆಲ್ಲವಳುಪಿ
ಸರಿದು ತಾನೆ ಪೋಪುದಾಗಿ
ಪಿರಿದು ಧನವ ನೆರಪುವಂಗೆ
ದುರಿತಕೋಟಿ ಪುದಿದ ಫಲವು
ಪರಿಯನೋವನಿಹಪರದೊಳು
ತಿರುಗುವಂತೆ ಮಾಳ್ಪುದಾಗಿ ॥೨॥

---

* ಸೌರಾಷ್ಟ್ರ (ಅ)

ಇಂತು ವಿಷಸಮೇತ ಮಧುವಿ
ನಂತೆ ಸೊಗಸುದೋರಿ ನಿಖಿಳ
ಚಿಂತೆಗೊಡುವ ಧನದ ಕಾಂಕ್ಷೆ
ಯಂ ತೊರೆದು ಸುಜಾಣನಾಗಿ
ಮುಂತೆ ಶಂಭುಲಿಂಗದೊಲವ
ನಿಂತು ಪಡೆಯೆ ಶರಣತತಿಗೆ
ಸಂತಸದೊಳು ಸವೆವುದುಂಬು
ದೆಂತು ತನುವಿದಳಿವುದಾಗಿ ॥೩॥

ಪದ ೯ ರಾಗ : ಬಹುಳಿ

ಮನುಜ ನೀನಖಿಳ ಭೋಗಾಶ್ರಯಂಗಳ ಮಿಗಲ
ನನುಕರಿಸಿ ನೋಡಿ ಮುಕ್ತೀ ನೆಲದೊಳು
ಘನದುರಾಸೆಯನು ಮಾಡಿದೊಡೆ ನಿನ್ನಂತೆ ಜಡ
ರೆನಿಸುವವರುಂಟೆ ಭಾವಿಸಿ ನೋಡಲು ॥ಪಲ್ಲ॥

ಶಿವ ಶಕ್ತಿ ವರಸದಾಶಿವನೀಶ್ವರನು ವಿದ್ಯೆ೧
ತವೆ ಕಾಲ ಕಲೆ ನಿಯತಿಯವಿದ್ಯೆಯು
ನವೆಯದನುರಾಗ ಪುರುಷ ಪ್ರಕೃತಿ ಗುಣ ಬುದ್ಧಿ
ಕವಿದ ಹಂಮು ಚಿತ್ತು ವಿಜ್ಞಾನೇಂದ್ರಿಯ
ವಿವಿಧ ಕರ್ಮೇಂದ್ರಿಯ ರವಾದಿ ತನ್ಮಾತ್ರ ನಭ
ಪವಮಾನ ಶಿಖಿ ವಾರಿ ವಿಶ್ವಂಭರ
ಅವರ ಪಂಚೀಕರಣ ಪಂಚವಿಂಶತಿ ತತ್ವ
ನಿವಹದೊಬ್ಬುಳಿಯವರ ಕಾರ್ಯದೊಳಗ ॥೧॥

ಪಲವಜಾಂಡಂಗಳವರೊಳಗಿದೊಂದಂಡ ವಿದ
ರೊಳಗೆ ಪದಿನಾಲ್ಕು ಲೋಕವವರೊಳಗಿ
ದಿಳೆಯೊಂದು ಬಳಿಕೇಳು ದ್ವೀಪಂಗಳವರೊಳಗೆ
ಕಳೆದಾರನೊಂದು ಜಂಬೂದ್ವೀಪವು
ತಿಳಿಯೆ ನವಖಂಡವವರೊಳಗೆಂಟನುಳಿದೊಂದು
ಬಳಿಕದೈವತ್ತಾರು ದೇಶಗಳವ
ರೊಳಗೊಂದನೇಕ ಪುರವವರೊಳೊಂದೊಂದದರೊಳಗೆ
ನಿಳಯ ಕೋಟಿಗಳವರ ಗೋಟಿನಲ್ಲಿ ॥೨॥

---

೧ ಮಂತ್ರ (ಅ)

ನಿನಗೊಂದು ಮನೆಯುದಕೆ ಬಲುದಾಯಿಗರ ಭಾಗ
ವನುವಾಗಿ ಮಿಕ್ಕುದೊಂದಲ್ಪವೆನಿಪ
ಮನೆಯುದರೊಳಗೆ ಮಕ್ಕಳಳಿಯರೆಡೆ ವನೆಗಳೆದು
ವನಿತಾದಿಗೂಡಿ ನೀನಿರುವ ನೆಲನು
ವಿನಿತಲ್ಲದುಂಟೆ ಪರಿಕಿಪೊಡದಕ್ಕಾಗಿ ಕೆಂ
ಮನೆ ಸಾವ ಬಲುಗೇಡನಿದನು ಮರೆದು
ತನುಮಂಗಳನು ನೊಯಿಸದೆ ಶಂಭುಲಿಂಗದ
ಘನ ಸುಖ ಪದವನೊಲಿಸು ನೀ ಬಲ್ಲಡೆ ॥೩॥

ಪದ ೧೦ ರಾಗ : ಮಧು ಮಾಧವಿ

ಮನುಜ ನೀನೆಡವಿಡದನುದಿನವೆಳಸುವ
ವನಿತೆಯೊಳೆಣಿಸಲೊಂದಿನಿಸು ಲೇಸಿಹುದೆ ॥ಪ॥

ಮೊಲೆಯ ಮಾಂಸವನು ಮುಡಿಯ ನವಿರನು ದೇಹ
ದೆಲುವನು ಮುಸುಕಿದ ಹಸಿಯ ತೊವಲನು
ಪಲವೆಡೆಯಣ ನರವನು ಬೇರೆ ಬೇರೆ ನೀ
ನಲಸದರಸಿ ನೋಡು ಲಲನೆಮೋಹನವೆ ॥೧॥

ಕರಣದೊಳಿಳಿವ ಮಲವನು ಕಾಂತಿಯೊಳು ಮುಂ
ಬರಿವ ಶೋಣಿತವನು ಪೊಸ ಜವ್ವನವನು
ಪರಿಣಾಮವನು ಚಿತ್ತದೊಳು ಕಪಟವನು ಬಿ-
ತ್ತರಿಸಿ ಭಾವಿಸಿ[೧] ನೋಡು[೨] ನಿನಗೆ ಶೋಭನವೆ ॥೨॥

ಪಡೆವ ಸಾಯುಸವನು ನಡುವಲ್ಪ ಸುಖವನು
ಕಡೆಯ ನಿರಸವನು ಕೆಡುವ ತನುವನು
ಜಡದೆ ಬರಿಯ ರಂಜನೆಯ ಸತಿರತಿಗಾಗಿ
ಕೆಡನಿರೆಲವೊ ಶಂಭುಲಿಂಗವನುಳಿದು ॥೩॥

---

೧ ಸಿ (ಅ) ನಾರಿ (ಆ)

ಪದ ೧೧ ರಾಗ: ತೆಲುಗು ಕಾಂಬೋಧಿ

ವನಿತೆಯರೊಲವಾವ ನೆಲೆಯೆಂದು ಮೋಹ
ವನು ಮಾಡುವರು ಮುಕ್ತಿ ಪಡೆಯದೆ ನರರು ॥ಪ॥

ಕಲೆಯನರಿದು ಕೂಡಿ ಬಯಸಿದುಚಿತವಿತ್ತು
ಚಲುವನೆನಿಸಿ ನಿರತವನಾಂತು
ಒಲಿಸಿದನೊಡನಿರುತಿರಲನ್ಯರತಿಗೆ ಹಂ
ಬಲಿಸುವರಂಬುಜಾಕ್ಷಿಯರೆಡೆವಿಡದೆ ॥೧॥

ಸವಿನುಡಿ ಸೊಬಗು ಬಿನ್ನಣವನುಕೂಲತೆ
ನವರೂಪು ಜವ್ವನದಿಂಪ್ರದೋರಿ
ತವಕಗುಂದದೆ ತಾವು ಮೆಚ್ಚಿದನ ಹಿಂ-
ಗುವರು ಹೆಂಗಳು ಬೇರೆ ಮನದೊಳಗೆಳಸಿ ॥೨॥

ಸುಳಿಗಾಳಿ ಸುರಚಾಪ ಕನಸು ನೀರಿನಲಿಪಿ
ಪೊಳೆವ ಮಿಂಚಿವನೊಪ್ಪು ನಿಜವೆನಿಸಿ
ಕೊಳಲಹುದರಿವಬಲೆಯರತಿಯಿದರಿಂದ
ಸಲೆ ಶಂಭುಲಿಂಗದರ್ಚನೆ ಗೈಯುತಿರದೆ ॥೩॥

ಪದ ೧೨ ರಾಗ : ಭೈರವಿ

ಸೋಲದಾತನೆ ವಿರತನು ಮನದೊಳಗೆ
ಬಾಲೆಯರ ಸಿಂಗರವನೆ ಕಂಡು ॥ಪ॥

ತಳಿರಡಿಯ ಸುಣ್ದೊಡೆಗಳ ಚೆಲುವಿನೊ
ಬ್ಬುಳಿಯಹ ನಿತಂಬ ಭರದ । ನಡೆಗೆ
ಬಳುಕುವತಿ ಬಡ ನಡುವಿನ । ತೆಳುವಸರ
ಸಳಿತೋಳ ನಲ್ಲಳನುವ ಕಂಡು ॥೧॥

ನಸುದೋರ್ಪ ಬಲ್ಮೊಲೆಗಳ । ಲಾವಣ್ಯ
ರಸವೊಸರ್ವ ಮುದ್ದು ಮೊಗದ । ಕಾಂತೆ
ಪಸರಿಸುವ ನಿಡುಗಂಗಳ । ಜವ್ವನದ
ಮಿಸುಪಿವಣ್ಣದ ಮೈಯಳ । ಕಂಡು ॥೨॥

ಚೊಲ್ಲೆಯದ ಬಳಲು ಮುಡಿಯ । ತೊಳಪ ಕೆಂ-
ಬಲ್ಲು ಕಂಬು ಗ್ರೀವದ । ಸೊಗಸ
ನುಳ್ಳ ಚೆಂದುಟಿಯ ಮೊಗರ । ನಗುವ ತೆಳು
ಗಲ್ಲದಸಿಯಳ ರೀತಿಯ । ಕಂಡು ॥೩॥

ಮುರಿದು ನೋಡುವ ನೋಟದ । ಮುಗುಳ್ನಗೆಯ
ಸರಸದಿನಿಗಲೆಯ ನುಡಿಯ । ಸನ್ನೆ
ವೆರಸಿ ತೋರುವ ಭಾವದ । ಮೊಹಮುಂ-
ಬರಿವ ಸೊಬಗಿನ ಸುದತಿಯ । ಕಂಡು ॥೪॥

ಮನವನಳ್ಕಿರುವುದೊಂದು । ಭಯವಿಲ್ಲ
ದನುಕೂಲ ನೀರೆ ತನ್ನ । ನೆಳಸಿ
ವಿನಯವಾಂತಿರಲಳುಪದೆ । ನಿಜಧೈರ್ಯ
ವನು ಶಂಭುಲಿಂಗದಿಂದ । ಪಡೆದು ॥೫॥

ಪದ ೧೩ ರಾಗ : ತೆಲುಗ ಕಾಂಬೋಧಿ

ಸುತನ ಸೊಗಸು ಮಿಗಿಲೆನ್ನದೆ ಚಿಂತೆಗಳ
ಮತಿವಂತರರಿದು ಮೋಹವನುಳಿದಿಹುದು ॥ಪ॥

ಮೊದಲು ಪುತ್ರನ ಹಾಂಛೆಯೊಳು ಚಿಂತೆ ಗರ್ಭವಾಗ
ಲದು ಕೆಡದಿರಲೆಂಬ ಕಡು ಚಿಂತೆ । ಪಡೆವಾ
ಪದಸುರುತರ ಚಿಂತೆ । ಗ್ರಹರೋಗದುಪಹತಿ
ಯೊದಗುವ ಚಿಂತೆ ಪೊರೆಯುವ ಚಿಂತೆ ಪಿರಿದು ।೧॥

ಬಾಲನ ದುರುಳತನದ ಚಿಂತೆ ಯೌವನದ
ಕಾಲದೊಳ್ಕಂತು ಕಂಗೆಡಿಪ ಚಿಂತೆಯುದರ
ಮೇಲೆ ವಿವಾಹವೆಸಗುವ ಚಿಂತೆ ಬಾಳುವಿಗೆ
ಪೇಳಿ ಬುದ್ಧಿಯನು ಕಲಿಸುವ ಚಿಂತೆ ಬಲುಹು ॥೨॥

ಬಳಿಕ ದೈವಾಧೀನದಿಂದಳಿಯಲತಿ ಚಿಂತೆ
ತಿಳಿಯಲಾತ್ಮಜರಿಂದೆ ಬಹು ಚಿಂತೆಗಳನು
ತಳೆವುದೀ ಪರಿ ತಥ್ಯವಹುದಾಗಿ । ಶಂಭುಲಿಂಗ
ದೊಳು ಪ್ರೀತರೆನಿಸಿ ಚಿಂತಿಸರು ಬಲ್ಲವರು ॥೩॥

ಪದ ೧೪ ರಾಗ : ಸೌರಾಷ್ಟ್ರ

ಬಿಡಬೇಕು ಬಲುಹಿಂದೆ ಬರಿದೆ ತನ್ನಿರವನು
ಕೆಡಿಸುವ ಕಾಮವಿದನು ಕಂಡ ಯೋಗಿ ॥ಪ॥

ಸುಗುಣಸಂತತಿಯನು ನಿಗಮಾದಿ ವಿಧಿಯನು
ಮಿಗೆ ತಪವನು ತನಗಹ ಸಿದ್ಧಿಗಳನು
ಜಗದ ಪೂಜ್ಯತೆಯನು ಸೊಗಸುವೀ ತನುವನು
ಬಗೆಯೆ ಕಾಮವೆ ಬಣ್ಣವಳಿವುದರಿಂದ ॥೧॥

ಹಿರಿಯರೊಲವನು ರಾಜರ ಮನ್ನಣೆಯನು ಸ
ತ್ಪುರುಷರ ಭಯ ಭಕ್ತಿಯನು ಲೋಕದವರ
ವರ ಮನ್ನಣೆಯನು ತನ್ನುರುತೇಜವನು ಕಷ್ಟ
ತರದ ಕಾಮವೆ ಕಡೆಗಾಣಿಪುದರಿಂದ ॥೨॥

ತನಗೆ ಮುಂದೊದಗುವ ಮುನಿದೇವ ಗಣಪದ
ವನು ರುದ್ರೇಶ್ವರ ಸದಾಶಿವ ಭಾವನೆಯನು
ಘನಶಂಭುಲಿಂಗವಾಗಿಹ ಮುಕ್ತಿಸುಖವನು
ಜನಿಸಿದೀ ಕಾಮವಿಲ್ಲೆನಿಪುದರಿಂದ ॥೩॥

ಪದ ೧೫ ರಾಗ : ಲಹರಿ

ಬೇಡಬೇಡೆಲೆ ಮನವೆ ವಿಷಯದಾಸೆ
ಮಾಡಿ ಕೆಡದಿರು ಸಾರಿದೆ ॥ಪಲ್ಲ॥

ಅಳಿ ಮೀನು ಗಜ ಪತಂಗ ಮೃಗವೆಂಬಿ
ವಳಿವವೊಂದೊಂದರೊಳು
ಬಳಸಿದ್ದೈದಿಂದ್ರಿಯದ ಗುಣದೊಳು
ಸುಳಿಯಲೆಂತುಳಿವೆ ನೀನು ॥೧॥

ಕಾಸಿದ ಪೊಂದೊಡಿಗೆ ನಂಜಿನ
ಬೀಸು ಹೂರಿಗೆ ಜಾರೆಯ
ಲೇಸಿವನನುಕರಿಸೆ ಕಡೆಯೊಳು
ಘಾಸಿಯಾಗುವೆ ತಪ್ಪದು ॥೨॥

ಪೊಲ್ಲವೆನಿಪ ಮಾಯಾಮಯಭೋಗ
ದಲ್ಲಿ ದುಃಖವೆ ನೋಡಲು
ಬಲ್ಲೊಡೆ ಶಂಭುಲಿಂಗವನೆ ಭಜಿ
ಸೆಲ್ಲ ಸುಖವನ್ನೈದುವೆ ॥೩॥

ಪದ ೧೬ ರಾಗ : ನಾದನಾಮ ಕ್ರಿಯೆ

ಯಾಕೆ ವಿರತಿಯನುಳಿದು ಹೀನವಿಷಯವನೊಲಿವೆ
ಕಾಕುಮಾನಸವೆ ನಿನಗದರೊಳೇನುಂಟು ? ॥ಪಲ್ಲ॥

ಚೆಲುಪಾಲು ಚೆಲ್ಲಿ ಸುರೆಗುಡಿವಂತೆ ಮಧುರಾನ್ನ
ದೊಲವರತು ಪಳಿಮಾಂಸವನು ಭಕ್ಷಿಪಂತೆ
ಗೆಲವು ಬರಲೊಲ್ಲದೆ ಮಹಾರುಜೆಯ ಸುಂಬಂತೆ
ಸಲೆತತ್ತ್ವಮತಿಗೆಡಿಸಿ ಮರವೆಯೊಳು ಸುಳಿವೆ ॥೧॥

ದಾರಕ್ಕೆ ಹಾರಮಣಿಗಳನು ತೆಗೆದಿಡುವಂತೆ
ಸಾರಕಸ್ತೂರಿದೊಳಿದು ಕೆಸರದೊಡೆವಂತೆ
ಮೇರುವನು ಬಿಟ್ಟು ಗದುಗನು ಪಡೆದು ಬಾಳ್ವ
ಚಾರು ಪರಮಾರ್ಥವನು ಪಿಂಗಿಪುಸಿವಿಡಿವೆ ॥೨॥

ಶ್ರುತಿಯ ಸುವಿಚಾರವನು ಮರೆದು ತರ್ಕಿಸುವಂತೆ
ವ್ರತನಿಷ್ಠೆಗಳೆಂದು ನೋಣನಗಿದು ತಿಂಬಂತೆ
ಗತಿಯೊಳುತ್ತಮ ಶಂಭುಲಿಂಗವಾಗಿಹ ಮುಕ್ತಿ
ಯುತಿಶಯವನುಳಿದು ಲೌಕಿಕದೊಳೊಡವೆ ॥೩॥

ಸುಳಿ (ಶಳ)

ಪದ ೧೬ ರಾಗ : ಕುಂತವರಾಳಿ

ಬೇಡ ಬೇಡ ಭೋಗದೊಡನಾಟ
ನೋಡು ನಂಜುವೆರಸಿದ ಸವಿಯೂಟ
ಕೇಡು ಕಡೆಯೊಳಿಪುದದು ಮಾಯೆಯ ಕೈಮಾಟ ॥ಪಲ್ಲ॥

ಮೊದಲು ಸಾಹಸದೊಳತಿ ಸುಃಖವನನುಭವಿಸಿ
ಮುದವಣು ಮಾತ್ರವನಿತ್ತು ನಡುವಿಹುದು ತವಿಸಿ
ಒದವಿ ಕಾಣಿಪ್ರದದು ಕಡೆಯೊಳು ಹೇಸಿಕೆಯವಗಡಿಸಿ
ಹದನಿದು ವಿಷಯವನೆಳಸಲಹುದೆ ಲವಲವಿಸಿ ॥೧॥

ಕನಸು ಬಿಸಿಲುದೊರೆ ಸುರಪನ ಧನು ಸುಳಿಗಾಳಿ
ಘನತತಿ ಮಿಂಚಿನ ಪರಿಯಂತಿರೆ ವಿಷಯಾಳಿ
ಜನಿಸಿ ಕೆಡುತಿಹ[1]ದಿದನಿಳೆಯೊಳು ಕಂಡು ಕೇಳಿ
ಮನವಿಡೆ ಫಲವೆ ಭಸಿತದೊಳು ೧ಹವಿಯನು ಬೇಳೆ ॥೨॥

ಈ ತೆರದಿಂದಖಿಳದ ನಿರಸನವನು ತಿಳಿದು
ಭೀತಿಸದವರಳಿಯಾಸೆಗಳನು ಮಿಗೆ ಪಳಿದು
ಖ್ಯಾತಿ ಮಿಗಿಲು ಶಂಭುಲಿಂಗದ ನಿಜವಾಗುಳಿದು
ನೀ[2]ತಿಗಳೆಯದಾನಂದದೋಳಿರು ಮೋಹವಳಿದು ॥೩॥

---

೧ ಹೋಮುವನು (ಅ) ೨ ನೆಲೆ

ಪದ ೧೮ ರಾಗ : ದೇಶಿ

ಆಡುತ್ತೈದಾಳೆ ಮಾಯೆಯೆಂಬ ಕಾಮಿನಿ ಬಿಡದೆ
ನೋಡಿ ಬಲ್ಲವರು ಸಂಸಾರ ನಾಟಕವ ॥ಪಲ್ಲ॥

ಶಿವಭಕ್ತಿಯೆಂಬ ರಂಗದೊಳು ನರನಾಗೆ ದಾ
ನವದೇವತಾದಿ ಪೆಸರಿನ ತನುಗಳೆಂಬ
ವಿವಿಧ ರೂಪಿನ ಬೊಂಬೆಗಳಿಗಾತ್ಮರೆಂಬ ಸೂ
ತ್ರವನು ಹವಣಿಸಿ ಮೋಹದೊಡನೆ ಮೇಳೈಸಿ ॥೧॥

ಮೂರವಸ್ಥೆಯ ಮರೆಯೊಳಿರ್ದು ತಾನಲ್ಲಲ್ಲಿ
ಆರು ವಿಕೃತಿಗಳು ನವಗುಣತತಿಗಳೆಂಬ
ಬೇರುವಡೆದಿಹ ಭಾವರಸ ಚಿತ್ರರಚನೆ ಕೆಲ
ಜಾರದಂತಭಿನೈಸಿ ತೋರಿ ನಿಯತಿಯೊಳು ॥೨॥

ಪರಮುಕ್ತರೆಂಬ ಕೋವಿದರೊಂದುಗೂಡಿ ಪರ
ತರ ಶಂಭುಲಿಂಗವೆಂಬತುಳ ಭೂಭುಜನು
ಪರಿವಿಡಿದು ತನ್ನ ಸನ್ನಿಧಿಯೊಳಿಂತೆಸೆವವರ
ಪರಿಯುಪಕಾರದಿಂದೀಕ್ಷಿಸುತ್ತಿರಲು ॥೩॥

೧-೧ ನೋನ್ನತಿಯೆ (ಅ)

ಪದ ೧೯ ರಾಗ : ಕಾಂಬೋಧಿ

ಕಂಡು ಸಂಸ್ಕೃತಿಯನಿದಿಂದ್ರಜಾಲವೆ ನೆಲೆ
ಗೊಂಡುದೆಂದರಿಂತುಕೋ ನಿಂನೊಳಗೆ ॥ಪಲ್ಲ॥

ಪುರುಳಿಲ್ಲದಿಹ ಬಿಂದುವೀ ಗರ್ಭದೊಳು ಸಂದೀ
ಪರಿಯ ಶರೀರವೆನಿಸಿ ಬಂದು ಬೆಳೆದು
ಪರಿವಿಡಿದುಂಡು ನುಡಿದು ನೋಡಿ ಕೇಳಿ ಪ
ತ್ತಿರದಡಗುವ ವಿಸ್ಮಯವಿದನು ॥೧॥

ತೊಗಲ ತಿತ್ತಿಗೆ ಸಮನಾದ ಕಾಯದೊಳು ಕಂ
ಡಿಗಳು ತೆಗೆದಿರೆ ಪಲವವರೊಳಗೆ
ಸಂಗತಿಯನುಳ್ಳ ಮಾರುತನಿರ್ದು ತೊಲಗದೆ
ಸೊಗಸುದೋರುವ ಸೋಜಿಗವನು ಕಂಡು ॥೨॥

ಧರೆ ವಾರಿ ಶಿಖಿ ವಾಯು ನಭವೆಲ್ಲವನು ಮೀರಿ
ಪರಿಪೂರ್ಣವೆನಿಸುವಾತ್ಮನಿಗಿಂತು
ಕರಣಸಂಕ್ರಮಣವಾದೊಡನೆ ಖಂಡಿತವೃತ್ತಿ
ದೊರಕೊಂಡ ನವ ವಿಚಿತ್ರವನು ॥೩॥

ಬೇರೆಬೇರೆನಿಸಿ ನಾನಾ ವಿಷಯದೊಳೊಂದಿ
ತೋರಿ ಮೋಹಿಸಿ ಕೂಡೆ ಕೆಡುತಿರುವ
ಮೂರವಸ್ಥೆಯನೊಂದು ದಿನದೊಳ್ಳೈದುವ ಹಂಸ
ನಾರಡಿತನದಚ್ಚರಿಯನು ಕಂಡು ॥೪॥

ಭವದುಃಖಿ ಜೀವನುತ್ತಮ ಗುರುಕೃಪೆಯನೊ
ಪ್ಪುವ ಪುಣ್ಯಫಲದಿಂದೆ ಪಡೆದು
ಹವಣಿಸದಾನಂದಮಯನಾದ ಶಂಭುಲಿಂ
ಗವೆ ತಾನೆನಿಸುವ ಚೋದ್ಯವಿದನು ॥೫॥

ದೆಸೆ (೪)

ಪದ ೨೦ ರಾಗ : ಪಹಡಿ

ಕೇಡನುಳ್ಳದೆಂದು ವಿಶ್ವವಿಷಯದೊಳು
ಮಾಡಲುದಾಸೀನಸವನದೀಗಳೆ ಮಹಾವಿರತಿ ॥ಪಲ್ಲ॥

ಧರೆಗೋವಿನಡಿ ಮೇರುಗಿರಿಯೊಂದು ಪೊರಡೇಳು
ಶರಧಿ ವಚ್ಚರೆ ದಶದಿಕ್ಕು ದೇಹಳಿ
ನೆರೆದ ಜನವೆ ಚಿತ್ರದಿರವಜಾಂಡವೆ ಚಂಡು
ಸುರತರುವೆ ಸಿಂಬಭೂಜಮಾಗೆ ವಿರತಿ ॥೧॥

ಜಗವಿದು ತೃಣವಜಹರಿಸುರಪದವಣು
ವಗಣಿತ ಸಿದ್ಧಿ ನಾಟಕರಚನೆಂ
ಬಗೆದೊಡೀ ತನು ಭಿನ್ನಘಟವಂಗನಾದಿಭೋಗ
ದೊಗುಮಿಗೆ ನಿರಸವೆನಿಸೆ ವಿರತಿ ॥೨॥

ನಿರುಪಮಾದ್ವಯ ನಿತ್ಯಸುಖಬೋಧ ರೂಪನಾದ
ಗುರುಶಂಭುಲಿಂಗವೇ ತಾನಾಗಿ ಮಿಕ್ಕಿನ
ಪರಗತಿಗಳೆಲ್ಲವನು ಹೇಯವೆಂಬ ಮತಿ
ದೊರೆದಚಲಿತವಾಗಲದೇ ವಿರತಿ ॥೩॥

ರಂಜನೆ (ಅ)

ಪದ ೨೧ ರಾಗ : ಸೌರಾಷ್ಟ್ರ

ಗಣಿತವಿದನು ಕೂಡಿ ಕಳೆಯ ಬಲ್ಲಾತನೆ
ತ್ರಿಣಯನೆನಿಪನು ಲೆಕ್ಕಿಗರ ಮಧ್ಯದೊಳು ||ಪಲ್ಲ||

ಒಂದನು ಮೂರಾಗಿ ಪೆಚ್ಚಿಸುತದರೊಳ
ಗೊಂದೊಂದರೊಳಗೆರಡೈದು ಈರೈದು
ಒಂದರೊಳೊಂದು ನಾಲ್ಕನೂಂಮಾಡುತಂವನು ವು
ತ್ತೊಂದೊಂದ ನೆರಡು ಮೂರೆಸಲೊಂದಾಗೆ ||೧||

ವೊಂದರೊಳೆಂಟಾರು ದೋರಲವರ ನಡು
ವೊಂದರೊಳೆರಡಾರು ಗೊಂಡೇಳೆನಿಸೆ
ಮುಂದೆರಡೊಂದಾಗಲೊಂದೊಂಬತ್ತಾಗು
ತ್ತೊಂದು ಮೂರಾರುಳ್ಳದ್ದಾಗೆ ಕಡೆಯೊಳು ||೨||

ಒಂದು ತಾನಾದ ಶಂಭುಲಿಂಗ ವದೊಂದರೊ
ಳೊಂದಾಗುತ್ತೈದು ಸೇರುವೆದಳೆದಿದನು
ಒಂದು ಸೂತ್ರದೊಳುಪಾಧ್ಯರು ಗೂಡಿ ಗುಣಿಸಿದೊ
ಡೊಂದುಳಿದಿದ ಸೊನ್ನೆಯಿಲ್ಲ ಬೇರೊಂದು ||೩||

೧-೧ ಕೊಡುತದ (ಅ)

ಪದ ೨೨ ರಾಗ : ಸಾಡಿ

ಆ ಪದ ತಪ್ಪಿದರಿಂತು ತಪ್ಪುವವಿವು
ದೇಹಿಗಳಿಗೆ ನೋಡು ರಮಣಿ ರನ್ನೆ ||ಪಲ್ಲ||

ಮದುವೆ ಕಾಲೋಚಿತದಿನಿವಾತು ಕನಸಿನೊ
ಳುದಿಸಿದ ಸಿರಿ ಸುದತಿಯ ಸ್ಕಲೆ
ಒದವಿದ ಯವ್ವನದಿಂಪು ವಿಷಯಸುಖ
ವದು ನೇಮದೇರು ಮಾರುಗಳೆಂಬಿವು ||೧||

ಬೆಳೆವ ಭೂಮಿಯ ಬೆದೆ ಲಂಚದೆಡೆಯ ಪೊನ್ನು
ಪೊಳೆವ ಮಿಂಚಿನೊಳು ತೋರುವ ಭಾವನೆ
ಸುಳಿವೆಲರೊಳು ಬಂದ ಸೌರಭಸಂವುದು
ಪಳುವಿನ ಪೊಸಲ ಕಾಲುವೆಯೆಂಬಿವು ||೨||

ಪರಸಿ ನೇಮದೊಳೊಂದು ವೇಳೆ ಮಾಡುವ ದಾನ
ವರಸಿನ ಸೇವೆ ಪರೋಪಕಾರ
ಕರಗಿದೆರಕವದು ರಸಪಾಕ ಪರಿಣತೆ
ಗುರುಶಂಭುಲಿಂಗದೊಲುಮೆಯೆಂಬಿವು ||೩||

ಇಂತು ನಿಜಗುಣ ಶಿವಯೋಗಿ ವಿರಚಿತವಾದ ಕೈವಲ್ಯ ಪದ್ಧತಿಯೆಂಬ ಪ್ರಕರಣದಲ್ಲಿ ಜೀವನಸಂಬೋಧನಸ್ಥಲಕ್ಕೆ ಸೇರಿದ ವಚನಂಗಳ ಜೋಡು ೨೨ಕ್ಕಂ ಬಿಚ್ಚಿದ ಪದಂಗಳು ೭೦ಕ್ಕೆ ಮಂಗಳ ಮಹಾ ಶ್ರೀ ಶ್ರೀ ಶ್ರೀ

ಶ್ರೀ ಗುರುಬಸವಲಿಂಗಾಯ ನಮಃ

ನೀತಿ ಕ್ರಿಯಾಚರ್ಯ ಸ್ಥಲ

ಪದ ೧ ರಾಗ : ರೇಗುಪ್ತಿ

ಶ್ರೀಗುರುವಚನದಿಂದಧಿಕ ಸುಧೆಯುಂಟೆ
ರಾಗದಿಂ೧ದಲಿ ಬೇರೆ೧ ಭವಬೀಜವುಂಟೆ ॥ಪಲ್ಲ॥

ನರಜನ್ಮದಿಂದಿಹದೊಳು ಮಿಗಿಲುಂಟೆ
ಕರಣ ವಿಜಯದಿಂದೆ ಕಲಿತನಮುಂಟೆ
ಧರೆಗೆ ಯಾಚನೆಯಿಂದ ಲಘುತರಮುಂಟೆ
ಪರಬೊಮ್ಮದರಿವಿನಿಂದುರೆ ಜಾಣ್ಮೆಯುಂಟೆ ॥೧॥

೧-ಬೇರಿನ್ನು (ಅ)

ಕಡುಲೋಭದಿಂದೆ ದುರ್ಗುಣವುನ್ಯವುಂಟೆ
ಪಡೆದಪವಾದದಿಂ ಮರಣವೊಂದುಂಟೆ
ಎಡೆಬಿಡದಿಹ ಸತ್ಯದಿಂದ ತಪಮುಂಟೆ
ಕೆಡಿಸದಿಪ್ಪಭಿಮಾನದಿಂದ ಧನಮುಂಟೆ ॥೨॥

ತನುವಿದಸುಳಿದಿಂದ್ರ ಜಾಲವೊಂದುಂಟೆ
ನೆನೆಗೋಲಿನಿಂದೆ ನೋಯಿಸುವಲಗುಂಟೆ
ವಿನಮಿತವಹುದರಿಂದುಪಚಾರ ಮುಂಟೆ
ತನಗಿಂದ ಪ್ರಿಯವಾದ ವಿಷಯವೊಂದುಂಟೆ ॥೩॥

ಶಮೆಯಿಂದ ಮುಕುತಿಸಂಪದ ಪೆರೆತುಂಟೆ
ವಿಮಲ ಮಾನಸದಿಂದೆ ಶುಭತೀರ್ಥಮುಂಟೆ
ಕ್ರಮತಪ್ಪಿ ನಡೆವುದರಿಂ ಕಷ್ಟಮುಂಟೆ
ಮಮಕಾರದಿಂದೆ ಮಿಕ್ಕಿನ ಬಂಧಮುಂಟೆ ॥೪॥

ಕರುಣದಿಂದತಿಶಯವಹ ಧರ್ಮವುಂಟೆ
ವಿರತಿಯಿಂದಿತರ ಸಂಪದಸುಖಮುಂಟೆ
ವರಭಕ್ತಿಯಿಂದ ಸಚ್ಚರಿತವೊಂದುದುಂಟೆ
ಗುರು ಶಂಭುಲಿಂಗದಿಂ ಪರದೈವಮುಂಟೆ

೧- ಸಾಧನ (ಅ)

ಪದ ೨ ರಾಗ : ಕಾಂಬೋಧಿ

ಎಂತೊಲಿವನೊ ತನಗೆಂತೊಲಿವನೊ
ಎಂತೊಲಿವನೊ ಕರಣತ್ರಯದ ದೋಷವಿರೆ
ಕಂತು ಕಾಲಪುರದ ವೈರಿ ಗುರುಶಂಭುಲಿಂಗ ॥ಪಲ್ಲ॥

ಪರವಧುವಿನ ಕೂಟವಸ್ವರ ವಿತ್ತಾಪ
ಹರಣಭಕ್ಷ ಸೇವನೆ ಹಿಂಸೆ
ಪರಿವಿಡಿದೀ ನಾಲ್ಕು ಪಾತಕಂಗಳು ಪಾ-
ಮರಜನ್ಮವೀಯ್ಯೆ ಕಾಯದೊಳೊಂದಿರೆ ತನಗೆಂತೊಲಿವನೊ ॥೧॥

ಪುಸಿಯನುಚಿತ ನಿಷ್ಠುರತ್ವ ಪೈಶುನ್ಯತೆ
ಮುಸುಕಿದೀ ನಾಲ್ಕು ದೋಷಂಗಳು
ಪಶುಪಕ್ಷಿ ಮೃಗಯೋನಿಯೊಳಗೆಳದೊಯ್ದು ಪು-
ಟ್ಟಿಸುವ ವಚನದೊಳೆಡೆವಿಡದಿರೆ ತನಗೆಂತೊಲಿವನೊ ॥೨॥

ಜನರೊಲಿಯದ ಕಾರ್ಯದೆರಕವನಿಷ್ಟಚಿಂತನೆ
ಯನ್ಯಧನ ಸತಿಯರ ಕಾಂಕ್ಷೆ
ಯೆನಿಸುವೀ ನಾಲ್ಕು ದುರಿತ ಜನನವೀಯೆ
ಮನದೊಳೊಂದಿರೆ ಗುರುಶಂಭುಲಿಂಗ ತನಗೆಂತೊಲಿವನೊ ॥೩॥

ಪದ ೩ ರಾಗ : ನಾದನಾಮಕ್ರೀ

ಆವ ಬಲವಿಡಿದಳುಕದಖಿಳ ದುರಿತವನೆಸಗಿ
ಜೀವಿಸುವೆ ಮಾಜದುಸುರೆಲೆ ಮಾನವ ॥ಪಲ್ಲ॥

ನಿರಯವಿಲ್ಲವೆ ಜವನ ಸೀಮೆದೆಗೆದುದೆ ಮೃತ್ಯು
ಪರಮಧರ್ಮವನೆ ಪಿಡಿದುದೆ ಯಮ ಭಟರು
ಕರುಣರಸಮಯರೆ ಮರಪೆಯೆ ಚಿತ್ರಗುಪ್ತರಿಗೆ
ಚರಿಸನಿಂದುದ ಕಾಲವದು ಪರೀಕ್ಷಿಸಲು ॥೧॥

ಕೇಡು ಕಡೆಗಂಡು ನಿಂದುದೆ ರುಜೆಗಳಿಪವನುಳಿ
ದೋಡಿದವೆ ಜರೆಯನೊಡಲೊಡಗೂಡದಂತೆ
ಮಾಡಿದರೆ ಶಿಕ್ಷೆಯನು ಭವಮರಣವಲಸಿದವೆ
ಕೋಡಿಹೋದುದೆ ವಯೋಗತಿ ವಿಚಾರಿಸಲು ॥೨॥

ಚಿಂತೆ ಬಂದಡಿಗಡಿಗೆ ಮುಸುಕದತಿ ಸುಖವನೋ
ರಂತೆ ನೇಮಿಸಲು ಕಲಿತುದೇ ವಿಧಿ ವಿಕಾರ
ಸಂತತಿಯನಗಲಿದವೆ ಸಕಲ ವಿಷಯಾಳಿ ನಿನ
ಗಿಂತು ಗುರು ಶಂಭುಲಿಂಗವನೊಲಿಸದಿರಲು ॥೩॥

೧–೪೩ (ಅ)

ಪದ ೪ ರಾಗ : ಕಾಂಬೋಧಿ

ಒಂದರಿಂದನರ್ಥಕೋಟಿ ಬಂದು ಬಂದಡಸುತಿಪು
ದೆಂದೊಡೀ ಗುಣಾವಳಿಗಳೊಂದಿರಲಿನ್ನೇನಹುದೋ ॥ಪಲ್ಲ॥

ಮದ ಲೋಭ ಮಾನ ಮೋಹ ಕದನ ಕರ್ಕಶ ಯವ್ವ-
ನದ ಸೊಂಪು ಸೊಬಗು ಸಂಪದ ಸತ್ಕುಲೋದಯ
ಪುದಿದ ಲಾವಣ್ಯ ರೂಪು ಮದನವಿಕಾರ ಸಿದ್ಧಿ
ಸಿದ ವಾದ ವಶ್ಯ ವರ್ಣದೊದವ ನೀತಿಗಳೊಳು ॥೧॥

ಅವಿವೇಕ ಹಿಂಸೆ ಪರಯುವತಿಯರೊಲುಮೆ ಸಂ
ಭವಿಸಿದ ಕೋಪ ಕಡು ತವಕ ಮಾತ್ಸರ್ಯ
ವಿವಿಧ ಕರಣವೃತ್ತಿ ಕವಿದ ಮಾಯಾವಿಲಾಸ
ಹವಣಿಸದಾಸೆ ಕರ್ಮನಿವಹವಿಂತಿವರೊಳು ॥೨॥

ಕುಮತಶಾಸ್ತ್ರಾನುಗತಿ ವಿಮತಿ ದೇಹದೊಳತಿ
ಮಮತೆ ಸಂಸ್ಕೃತಿಯು ಸಂಭ್ರಮ ದುರಾತ್ಮಕರ
ಸಮರತಿ ಶಂಭುಲಿಂಗದಮಳ ಚರಣಭಕ್ತಿ
ವಿಮುಖತೆ ಪರವೇದಾಗಮ ದೂಷಣಂಗಳೊಳು ॥೩॥

ಪದ ೫ ರಾಗ : ಶಂಕರಾಭರಣ

ತನ್ನೊಳು ಸುಖದುಃಖ ಮೋಹಾದಿಗಳು ತೋರ
ಲುನ್ನಿಪುದವನೆಲ್ಲ[1] ಗುಣಮಯಮೆಂದು ॥ಪಲ್ಲ॥

ಒಡಲು ತಾನೆಂದರಿವುದೇ[3] ಮಂದಮತಿ ಮೋಸ
ಜಡಭಾವ ನಿದ್ರೆ ನಿಷೇಧ ಕರ್ಮಾಳಿ
ಬಿಡದಲಸತೆ ಚಪಲತ್ವವಿಡಿದು ವೃಥಾ
ಕೆಡುವ ತನ[3]ವನೆ ಕೂಡಿಹುದು ತಾಮಸಗುಣ ॥೧॥

ಮದಲೋಭ ಮೋಹ ಮಾತ್ಸರ್ಯ ನಿಷ್ಠುರ ಕರ್ಮ
ಸುದತಿಯ[2]ರಾಶೆ ಕಪಟರೀತಿ ಕೋಪ
ಕದನ ಕರ್ಕಶವೃತ್ತಿ ಕಡುಶೋಕ ನಿರ್ದಯೆ
ಮೊದಲಾದ ಕಲುಷವಿವನರಿಯೆ ರಾಜಸಗುಣ ॥೨॥

ಕರುಣ ವಿನಯ ತಪೋ ವಿರತಿ ವಿವೇಕ ವಿ
ತರಣ ನಿರ್ಧಾರಣ ದಮ ಧರ್ಮ ಧೈರ್ಯ
ನಿರಭಿಮಾನತೆ ಸತ್ಯ ವರವಿದ್ಯೆಯೆಂಬಿವೆ
ಗುರುಶಂಭುಲಿಂಗದೊಲುಮೆಯ ಸಾತ್ವಿಕಗಣ ॥೩॥

೧ ವನು (ಅ) ೨ ದುಬರಿಯ (ಆ ೨೫೪) ೩ ನ (ಅ)

ಪದ ೬ ರಾಗ : ಭಹುಳಿ

ತಡೆವುದಾಗದು ತನಗಗಣಿತ ವಿಷಯ-ದೊ
ಳಿಡೆಯಾಡುವತಿ ಚಪಲತೆಯ ಚಿತ್ತವನು ॥ಪಲ್ಲ॥

ಧರೆಯನಜಿನದಂತೆ ಸುರುಳಲಹುದು ಮೇರು
ಗಿರಿಯನಂಗುಲಿಯ ಕೊನೆಯೊಳಾನಲಹುದು
ಶರಧಿಯನೊಮ್ಮೆ ಪಾನವ ಮಾಡಲಹುದು ಸೈ
ತಿರಬಾರದು ನಿಮಿಷಾರ್ಧವೀ ಮನವ ॥೧॥

ಮೊಲನ ತಲೆಯೊಳು ಕೋಡನು ಕಾಣಲಹುದಭ್ರ
ದೊಳು ಸೌರಭದ ವಾರಿಜವನೆತ್ತಲಹುದು
ಬಳಸಲಹುದು ರವಿಕಿರಣೋದಕವನಸ
ದಳವರೆ ಘಳಿಗೆ ನಿಲ್ಲಿಸಲು ಮಾನಸವ ॥೨॥

ಮಾರವಿರೋಧಿ ಮಾಯಾ ಮೋಹರಹಿತನ-
ಪಾರ ಮಹಿಮ ಶಂಭುಲಿಂಗದೊಲವನು
ಭೂರಿಪುಣ್ಯದ ಫಲದಿಂದೆ ಪಡೆಯದೆ ಸಂ
ಸಾರಿ ಸುಮ್ಮನೆ ಗೆಲಲರಿದು ಹೃದಯವ ॥೩॥

ಪದ ೭ ರಾಗ : ಹಿಂದೂಳ ವಸಂತ

ನೋಡಿ ಬಲ್ಲವರು ಸುಖಭೋಗದಳಿಯಾಸೆಯೊಡ
ಗೂಡಿ ಕೆಡದಿರಿ ಭಾಗ್ಯವಿಲ್ಲದಾಗದು ಬಿಡದೆ
ಮಾಡಿಯದರಿಂದೆ ಶಿವಧರ್ಮ ರತಿಯನೆ
ಬೇರೆ ಬೇಡ ಬಹು ಕೋಟಲೆಗಳು ॥ಪಲ್ಲ॥

ಕುಲಜಾತಿ ರೂಪು ಯೌವ್ವನ ಗಾಡಿ ಗರುವತನ
ಬಲು ಪರಾಕ್ರಮ ಬಂಧು ಜನರೊಲಿಮೆ ನಿಪುಣತ್ವ
ಛಲ ನೀತಿ ವಿದ್ಯೆ ವಿನಯಾಲಾಪಶಾಸ್ತ್ರ ಕವಿತಾ ರಚನೆ
ಕುಶಲಂಗಳು
ಸಲೆ ಶೌಚ ಕೃಷಿ ಸೇವೆ ಯಾಚನೆಯಲಂಕಾರ
ಗೆಲವಮಳಗುಣವಾದ ವಶ್ಯ ಮಣಿಮಂತ್ರತತಿ
ಫಲಸಲರಿಯವು ಪುಣ್ಯದನುಕೂಲವಿಲ್ಲದಿರೆ
ತನಗೆ ಮನವೆಳಸಿದಂತೆ ॥೧॥

ದಿಪಿದುರ್ಗವಮರಸಂಕುಳಸೇನೆ ಗುರು ಮಂತ್ರಿ
ಪದವಿಯೆ ಪಿಡಿವಾಯುಧವಜಾಚ್ಯುತರ ಬಲುಮು ಋಷಿ
ನಿವಹದಾರ್ಕೈರಾವತವೆಯಾನ ಸಂಜೀವನವೆ
ಮಂತ್ರಸಿದ್ಧಿ
ಸವೆಯದಮೃತಾಹಾರವಿನಿತು ಮೊದಲಿರ್ದವಾ
ಸವನಾಜಿಯೊಳು ಮುರಿದನಸುರರಿಗೆ ಭೀತಿಯಿಂ-
ದವಿರತಂ ದೈವಬಲಮೊಂದಿಲ್ಲದಿರೆ ಹಾನಿಯಹು-
ದಾವನಾದೊಡಿಂತು ॥೨॥

ಗಿರಿಯ ಶಿಖರದೊಳು ಕಾಂತಾರದೊಳು ನಡುಗಡಲೊ
ಳುರಿಯ ಮಧ್ಯದೊಳು ರಣಭೂಮಿಯೊಳು ಶತ್ರುಗಳ
ನೆರವಿಯೊಳು ಚೋರವಿಷ ಭೂತಾದಿ ಭೀತಿಯೊಳು
ಪರದೇಶದಂಡಲೆಯೊಳು
ದೊರೆ ಮುನಿದ ವೇಳೆಯೊಳು ಬಲು ಕಂಟಕಂಗಳೊಳು
ಮರಣವಳಿವಿನೊಳು ನಿದ್ರಾಲಸ್ಯ ಮರವೆ ತನ
ಗಿರೆ ಸಾಹಸವನುಳಿದ ಕಾಲದೊಳು ಕೂಡೆ ಪೊರೆವುದು
ಪೂರ್ವಸುಕೃತಮಿರಲು ॥೩॥

ಗಾಲಿಯೊಂದರ ರಥವಹಿತ ಪನ್ನಗನ ಹೊರಜೆ
ಯೇಳು ವಾಜಿಗಳ ಸಾರಥಿ ಹೆಳವನಾದರುಣ
ನಾಲಂಬರಹಿತವಹ ಮಾರ್ಗವತಿ ಬಲದ ಮುಂದೇ
ಹರಗಳೊಡನಾಹವ
ಮೇಲಿ ತಾನೋರ್ವನೇ ಪೊಗಲೊಂದರೊಳು ರವಿ ವಿ
ಶಾಲಭ್ರದ ಕಡೆಗೆ ದಾಂಟುವನು ದೈವಾನು
ಕೂಲಮಿರೆ ಪಿಸಮುಸಾಧನದಿಂದೆ ತನಗಹುದು
ಲೋಕಹಿತವಾದ ಕೀರ್ತಿ ॥೪॥

ಇದನರಿದು ವನಿತಾದಿ ವಿಷಯದೊಳು ಕೊರತೆ ಪಡೆ
ಯದೆ ಸಕಲ ಸಂಪದವನಿಹ ಪರದಿ ಬಯಸುವರು
ಪದುಳದಿಂದನ್ಯರಿಗೆ ಹಿತವಾಗಲೆಂಬವರು ನಿಜ
ಮೋಕ್ಷವೆಳಸುವವರು
ಮುದವಲರಿ ಗುರುಶಂಭುಲಿಂಗದ ಪಾದಪಂಕಜವ
ನೊದವಿ ಸಲೆ ಕಾಮ ವರ ನಿಷ್ಕಾಮವೆಂಬುಭಯ
ವಿಧಿವಿಡಿದು ಭಜಿಸೆ ಬಾಹ್ಯಾಭ್ಯಂತರದೊಳು
ಪರಮಾನಂದ ಸಿದ್ಧಿಯಹುದು ॥೫॥

ಪದ ೮ ರಾಗ : ಸಿಂತಭೈರವಿ

ಚಿಂತಿಸದಿರು ಸುಖದುಃಖದೆಡೆಯೊಳು ನೀ
ನಿಂತು ತಿಳಿದ ಬಳಿಕೆಲೆ ಜೀವನೆ ॥ಪಲ್ಲ॥

ರೋಗಾದಿಗಳ ಬಾಧೆಗಳು ಬಂದು ತಾವೆ ನೀ
ನಾಗಿಯೆಳಸದಿರಲುಣಿಸುವಂತೆ
ರಾಗವಿಲ್ಲದೊಡೆ ಪೋಗದು ನಿನಗಹ ಸುಖ
ಪೂಗವಿಂತಿದು ನಿಜವಹುದರಿಂದ ॥೧॥

ಬರಲುಳ್ಳ ದುಃಖವನನುಭವಿಸದೆ ಬೇರೆ
ಪರಿಹಾರವದಕಿಲ್ಲ ವಿಹುದೆಂದೊಡೆ
ಪಿರಿದು ಸಾಹಸಿಗಳೆನಿಪ ರಾಮ ನಳ ಪಾಂಡ
ವರು ನೋಯಲೇಕೆ ನೀನದನರಿದು ॥೨॥

ಜನನ ಮರಣದಾಗುಹೋಗಿನೊಳೊಡೆತನ
ವಿನಿತಿಲ್ಲವಾಗಿ ನಿನ್ನೊಳು ತೋರ್ಪವು
ತನುಭೋಗನಿಕರವಂತಹುದು ಸೈತಿರು ನೀನು
ಘನಶಂಭುಲಿಂಗದಾಧೀನನಾಗಿ ॥೩॥

ಪದ ೯ ರಾಗ : ಸೌರಾಷ್ಟ್ರ

ಮನುಜ ನಿನಗಾದ ನೋವಿಗೆ ಚಿಂತಿಸುವರೆ ।ಮುಂ
ನಿನ್ನವರಿಗಾದ ಬಾಧೆಯ ನೋಡಲು ॥ಪಲ್ಲ॥

ಹರಗಾದ ಹಾನಿಯನು ಅಜನಿಗಾದೆಡರನು
ಸುರಪತಿಗಾದ ಲಜ್ಜೆಯನು ಪಂಚ
ಶರನಿಗಾದುರಿಯ ನಿಂದುವಿಗಾದ ಕೊರತೆಯ
ವರುಣನಿಗಾದೂಣೆಯನು ನೋಡಲು ॥೧॥

ಮುನಿವಶಿಷ್ಠನಿಗಾದ ಶೋಕವನಾರಾಮ
ಜನಕನಿಗಾದ ಸುಭಂಗವನು
ಸನಕಾನುಜನಿಗಾದ ಜಡಜೀವತೆಯನು ವ್ಯಾ
ಸನಿಗಾದ ಬಾಹು ಬಂಧವ ನೋಡಲು ॥೨॥

ರವಿಗಾದ ಭವಣೆಯನಹಿಪತಿಗಾದ ಭಾ
ರವ ದಕ್ಷನಿಗಾದ ಕೊರತೆಯನು
ಹವ್ಯವಾಹನಿಗಾದ ನುಡಿಗೇಡಂತಕನೆನಿ
ಸುವನಿಗಾದುರ ಬಾಧೆಯ ನೋಡಲು ॥೩॥

ಬಲಿ ಹರಿಶ್ಚಂದ್ರರಿಗಾದ ಪಾಡನು ನಹುಷ
ನಳಗಾದುಪಹತಿಯನು ಸಗರ
ಕುಲಕಾರ್ತವೀರ್ಯರಿಗಾದ ನಾಶವನತಿ
ಬಲ ಪಾಂಡುವರಿಗಾದಳಲು ನೋಡಲು ॥೪॥

ಈ ಪರಿಯೊಳವರಿವರೆನ್ನದೊಡಲು ಗೊಂ
ಡಾ ಪುರುಷರಿಗಾದ ದುಃಖವನು
ರೂಪಿಸಲರಿದಾಗಿ ಗುರು ಶಂಭುಲಿಂಗದ
ಶ್ರೀಪಾದವನು ನೆನೆ ಸುಖವಪುದು ॥೫॥

ಪದ ೧೦ ರಾಗ : ನಾದನಾಮಕ್ರಿಯೆ

ಭಾಪು ವಿಧಿ ನಿನಗೆ ಬಲ್ಲಿದರಾರು ಬೇರುಂಟೆ
ರೂಪುಗೆಡಿಸಿದೆ ಮಹಾ-ಮಹಿಮರೆಲ್ಲರನು ॥ಪಲ್ಲ॥

ಹರಿಯನೀರ್ಸೈದು ಪರಿಭವದೊಳು ಬಳಲಿಸಿದೆ
ಸರಸಿಜೋದ್ಭವನ ನಡುದಲೆ ಒಂದನಳಿದೆ
ಸುರುಚಿರ ಸುಧಾಕರನ ತನುಗುಂದಿಸಿದೆ ದೇವ
ವರನ ಮೈಯೊಳು ಲಜ್ಜೆವನೆಯನೊಂದಿಸಿದೆ ॥೧॥

ವೇದವನು ವಾಜಿಯೆನಿಸಿದೆ ಬಾದರಾಯಣನ
ಪಾದದೊಳು ತೋಳನಿಳುಹಿದೆ ದಿನಾಧಿಪನ
ಬಾಧೆ ಬಡಿಸಿದೆ ರಾಹುವಿಂದೆ ಫಣಿ ಗಜ ಪಕ್ಷಿ
ಗಾದ ಸಾಹಸವಗೆಡಿಸಿ ಸೆರೆಯೊಳೊಂದಿಸಿದೆ . ॥೨॥

ಏಳು ಧರಣಿಯನಾಳುವರಸನಂ ಹೊಲೆಯನಿಗೆ
ಆಳು ಮಾಡಿದೆ ಪಂಚ ಸಾರ್ವಭೌಮರಿಗೆ
ಬಾಳದರಿಕೆಯನಿತ್ತೆ ಶಂಭುಲಿಂಗೈಕ್ಯರೊಳು
ಕೀಲಿಸಿದೆ ಪ್ರಾರಬ್ಧಭೋಗ ನೀತಿಯನು ॥೩॥

ಪದ ೧೧ ರಾಗ : ಭೈರವಿ

ಕಾಲ ಕರ್ಮ ಮಾಯೆಯೆಂಬಿವನು ಗೆಲಲಹುದು ವಿ
ಶಾಲಮತಿಗಳು ಶಿವಭಕ್ತಿಯುಕ್ತರಾಗಿರೆ ॥ಪಲ್ಲ॥

ಪದಿನಾರು ವರುಷದಾಯುಷ್ಯವದು ತನಗೆ ತೀ
ರಿದ ವೇಳೆಯರಿದು ಮಾರ್ಕಂಡೇಯ ಮುನೀಶ್ವರನು
ಮದನವೈರಿಯ ಮರೆಯ ಹೊಕ್ಕು ಮೇಲಂತಕನುಗ್ರ
ಕದನವನಿರದೆ ಜಯಿಸಿ ನಿತ್ಯನಾದನಾಗಿ ॥೧॥

ಸುಡಿಯುಬಾರದ ದೋಷಿಯೆನಿಸುವ ವಿದಳನು
ಕೆಡೆದು ಸಾವೆಡೆಯೊಳಾಹಾರವೆಂದು ತನಗೆ
ಬಿಡದುಂಬ ನರಕದುಃಖವನು ಸೋಂಕದೆ ಮುಕ್ತಿ
ಪಡೆದಿಳೆ ಪೊಗಳೆ ಸುಖದೊಳಿರಲದರಿಂದ ॥೨॥

ಮಾಯೆ ನೀನು ನಿನಗೆ ವಂದಿಸೆನು ನಾನೆನಲು ಕಾ
ತ್ಯಾಯನಿ ತನ್ನಂಶವನು ಬೇಡೆ ಭೃಂಗಿ ಬಿಸುಟು
ಕಾಯಜಾರಿ ಶಂಭುಲಿಂಗದಿಂದೆ ಬೇರೊಂದಂಘ್ರಿಯನು
ಸಾಯುಸವಿಲ್ಲದೆ ನಿಜದೊಳು ಪಡೆದಿರಲು ॥೩॥

ಪದ ೧೨ ರಾಗ : ಭೈರವಿ

ದೇಶ ಕಾಲ ವಸ್ತುಗಳಿಂದೀಶನೊಲಿವನು- ಕರ್ಮ
ಪಾಶವಳಿದು ನಿಜವಹುದಿಂತು ನೋಡಿಂರೆ ||ಪಲ್ಲ||

ಕಾಶಿಯಲ್ಲಿ ಜಾರವಿಪ್ರನು ಸತಿಯೋರ್ವಳ ನೀಚ
ವಾಸದ ಸುರೆಯ ಭಾಂಡದೊಳು ಸಾಯಲವನು
ಪೋಸವಿಲ್ಲದಾ ಪೆಸರಿನಿಂದೆ ಲಿಂಗವೆನಿಸಿ ವಿ
ಲಾಸವಚ್ಚಳಿಯದೆ ಪೂಜ್ಯತೆವಡೆದಿರಲು ||೧||

ನೀತಿಗೆಟ್ಟು ಹೀನ ಮಾನಿಸಿಗೆ ಮೆಚ್ಚಿ ತನಗೆ ಸಂ
ಜಾತ ಸುತೆಯುರನೆ ರಮಿಸಿ ಸುಕುಮಾರನು
ಪೂತ ಶಿವರಾತ್ರಿಯೊಳು ನೋಡಿ ಲಿಂಗದಂಘ್ರಿಯನು
ಖ್ಯಾತ ಗಣನಾಯಕನಾಗಿ ಸುಖಿಮಿರುತಿರಲು ||೨||

ಅಡವಿಯೊಳಗೆ ಬಿದ್ದ ಕಡುಪಾಪಿ ಶಬರನ
ಸುಡುಗಾಡ ಬೂದಿಗಾಲ ಶುನಿ ಪಣೆದುಳಿಯೆ
ತಡೆಯುದವನು ಶಂಭುಲಿಂಗದ ಕರುಣದಿಂದ
ಪಡೆದು ಬಿಡದೆ ಮುಕ್ತಿವನಿತೆಗೂಡಿರಲು ||೩||

---

೧ ದ (ಅ)

ಪದ ೧೩ ರಾಗ : ತೋಡಿ

ಸದರವಲ್ಲವೆ- ತಿಳಿಯೆ ಸದರವಲ್ಲವೆ
ಮದನವೈರಿ ತನ್ನವರ್ಗೆ ಮುದುಳದಿಂದ ಕೊಡುವ ಮುಕ್ತಿ ||ಪಲ್ಲ||

ಕಳವಿಗೆಂದು ಬಂದು ತನ್ನ ನಿಳಯದೊಳಗೆ ಕೆಡುವ ಸೊಡರ
ಬೆಳಗಲವನಿಗಮಳತೆಯನು ತಳುವದೀಶನಿತ್ತನಾಗಿ ||೧||

ಮರಣಕಾಲದಲ್ಲಿ ಪೊಲನ ಹರಗಣನುತ ಕಳವಳಿಸಿದ
ನರನಿಗಭವನೊಲಿದು ಸಾರತರದ ಸೊಗಸು ಗೈದನಾಗಿ ||೨||

ನೆಲಕೆ ಬಿದ್ದದೊಂದಲರನು ಸಲಲಿ ತನಗೆನಲ್ಕೆ ಶೂಲಿ
ನಲಿದು ಶ್ರೇಷ್ಠನಿಗೆ ವಿಲಾಸವಲರೆ ಮನ್ನಿಸಿದನಾಗಿ ||೩||

ಕಲ್ಲಿಲಿಟ್ಟು ಕಾಲಿಲೊದೆಯು ಬಿಲ್ಲಿನಲ್ಲಿ ಪೊಯ್ದು ಬಿಟ್ಟ
ಯಲ್ಲಿ ನಡಸಿದವರನಂದದಲ್ಲಿ ಹರನಿರಿಸಿದನಾಗಿ ||೪||

ಶಲಭ ಜಾಯಿಲಾನೆ ಪಂದಿ ಮೊಲನಿರುಂಪೆ ಹದ್ದು ಹಕ್ಕಿ
ಗಳನು ಶಂಭುಲಿಂಗವಮರಕುಲಕೆ ಮಿಗಿಲೆನಿಸಿದನಾಗಿ ||೫||

ಪದ ೧೪ ರಾಗ : ಶಂಕರಾಭರಣ

ಸಂಗತವಾಗಿ[೧]ಬೋಧಿಸಿ[೧] ಪೇಳಿದುತ್ತರ
ದಿಂಗಿತವರಿತು ನಡೆವನೆ ಬಲ್ಲವನು ॥ಪಲ್ಲ॥

ದುರಿತದೊಳಧಿಕವಾವುದು ನಿಂದೆ ಜೀವನ
ವೆರಸಿದ ಮರಣವಾವುದು ಚಿಂತೆ ಕೆಡುವ
ಶರೀರದ ಸಫಲವಾವುದು ಪರಹಿತ ಕಿಂ-
ಕರವೃತ್ತಿಯಾವುದು ತನಗಳಿಯಾಸೆ ॥೧॥

ಅಸುವಿನೋರಗೆ ಯಾವುದೆಂದೆಡಂದಭಿಮಾನ
ವೆಸೆವ ಜಾಗರಣವಾವುದು ಸದ್ವಿವೇಕ
ಶಶಿಯ ಶೀತಳದಂದವಾವುದು ಶಮೆ ಸುಧಾ
ರಸ ಧಾರೆಯಾವುದು ಮಿಗೆ ಮೃದುವಚನ ॥೨॥

ಸಲುವದೆ ಮಾಳ್ಪುದಾವುದು ಭವಹರಣವ
ಗ್ಗಳಿಕೆ ಯಾವುದು ಸುಚರಿತ್ರವೀ ಮನುಜ-
ಕುಲಜನನದ ಲಾಘವಾವುದಾಸಾರೆಂದು
ತಿಳಿವುದು ವೀರವಾವುದು ಕಂತುವಿಜಯ ॥೩॥

೧-೧ ಕೈ೦ಪ್ರತಿ (ಅ)

ಗುರುತನವಾವುದಿಳೆಯೊಳಯಾಚನೆ ಪರ-
ತರ ಸುಖವಾವುದಖಿಳಭೋಗವಿರತಿ
ವರಗುಣವಾವುದುದಾರವಚ್ಚಳಿಯುದಾ
ಭರಣವಾವುದು ಬಗೆಗೊಳಿಸುವ ವಿದ್ಯೆ ॥೬॥

ಮತಿಗೆ ಮಂಗಳವೀವುದಾವುದುತ್ತಮ ಸಂಗ
ವತಿ ನಿಷ್ಠೆ ಪಿಡಿವುದಾವುದು ಹರಸಮಯ
ಹಿತವಾವುದಿಹಪರದೊಳು ಧರ್ಮರತಿ ಸದು-
ಗತಿ ಯಾವುದೆನೆ ಶಂಭುಲಿಂಗವಾಗಿಹುದು

ಪದ ೧೫ ರಾಗ : ನಾದನಾಮಕ್ರಿಯೆ

ಎಲ್ಲರೊಡನೆ ವೈರವಿಲ್ಲದೆ ಕೂರ್ಪುದೆ ಚಂದ ಮಾ ಮಾ
ತಲ್ಲಣಿಸದೆ ನೀತಿಯಲ್ಲಿರಲಾರ್ಪುದೆ ಚಂದ ಮಾ ಮಾ ॥ಪಲ್ಲ॥

ಹಿತವಿದಹಿತವೆಂದತಿಶಯಿಸಿ ತಿಳಿವುದೆ ಚಂದ ಮಾ ಮಾ
ಶ್ರುತಿವಿರಹಿತವಾದ ಮತವ ತಾನುಳಿವುದೆ ಚಂದ ಮಾ ಮಾ
ಮತಿಯೊಳೊಗೆದ ದುರ್ವಿಕೃತಿಯನಟ್ಟಳಿವುದೆ ಚಂದ ಮಾ ಮಾ
ಸತಿಸುತಾದಿಗಳನಿತ್ಯತೆಯೆಂದು ಪಳಿವುದೆ ಚಂದ ಮಾ ಮಾ ॥೧॥

ಕೊರತೆಯನುನಿಸದೆಚ್ಚರೊಳೊಂದಿ ಚರಿಪುದೆ ಚಂದ ಮಾ ಮಾ
ಪರರ ದುರ್ಗುಣಗಳ ಮರೆವುತಾದರಿಪುದೆ ಚಂದ ಮಾ ಮಾ
ಮರುಗದಾಪತ್ತಿನೊಳುರೆ ತರಹರಿಪುದೆ ಚಂದ ಮಾ ಮಾ
ತೊರೆದುಪರಲ್ಲಿ ಮತ್ತೆಗದುತ್ತರಿಪುದೆ ಚಂದ ಮಾ ಮಾ ॥೨॥

ದುರಿತಪಳ್ಳಿಸಿತನಾದರು ನೀತಿಗಳಿವುದೆ ಚಂದ ಮಾ ಮಾ
ದೊರಕಲೀನವರೊಳು ಪರಿಣತೆದಳಿವುದೆ ಚಂದ ಮಾ ಮಾ
ಕರಣವನಖಿಳಸಂಸರಣದಿಂ ಸೆಳೆವುದೆ ಚಂದ ಮಾ ಮಾ
ಪರಪೂರ್ಣಲತೆಯನಾವರಿಪಂತೆ ಬೆಳೆಪುದೆ ಚಂದ ಮಾ ಮಾ ॥೩॥

ಭವರಿಪು ಮರಳದಂದವನೊಂದಿ ಗೆಲುವುದೆ ಚಂದ ಮಾ ಮಾ
ಜವನ ದಾಳಿಯ ನೋಡಿಸುವ ಭಕ್ತಿಗೊಲಿವುದೆ ಚಂದ ಮಾ ಮಾ
ಶಿವಪದಧ್ಯಾನ ಲಕ್ಷ್ಯವ ನೋಡಿ ನಲಿವುದೆ ಚಂದ ಮಾ ಮಾ
ತವೆ ತನ್ನ ನಿಜವನರಿವ ಯುಕ್ತಿಗಲಿವುದೆ ಚಂದ ಮಾ ಮಾ ||೪||

ದುರುಳ ಕಂತುವಿನ ಕಾತರವನೆ ತಡೆವುದೆ ಚಂದ ಮಾ ಮಾ
ವಿರತಿವಜ್ರದಿ ಮೋಹಗಿರಿಯ ನುಗ್ಗೊಡೆವುದೆ ಚಂದ ಮಾ ಮಾ
ಶರಣರಂಘ್ರಿಯೊಳಹಂಕರಿಸದೆ ಕೆಡೆವುದೆ ಚಂದ ಮಾ ಮಾ
ಗುರು ಶಂಭುಲಿಂಗದಿಂದುರೆ ಮುಕ್ತಿ ಪಡೆವುದೆ ಚಂದ ಮಾ ಮಾ

೧-೧ ಕೆಡಿ (ಅ)

ಪದ ೧೬ ರಾಗ : ಶಂಕರಾಭರಣ

ಜಾಣನು ಲೌಕಿಕ-ಪರಮಾರ್ಥವೆರಡನು
ಮಾಣದೆ ಕೂಡಿ ನಡಿಸುತಿಹನಿಂತು ಪಲ್ಲ

ತರುಣಿಯ ಮೊಲೆಯೊಂದನುಣ:ತಲಣುಗನನ್ಯ
ಕರದೊಳುಳಿದ ಕುಚಾಗ್ರವನೋವುವಂತೆ
ನರಜನ್ಮವಿಡಿದಿಹ ಭೋಗಾನುಭವದೊಳು
ಪರಲೋಕಗತಿಯ ಸಾಧನದೊಳೊಂದಿಹನು ॥೧॥

ಕೊಳನ ಹೊಕ್ಕರೆಯೊಡಲಿನ ತಂಪು ಬಿಸಿಲಿನ
ಜಳವನು ವಿ:ಕ್ಕ ಮೈಯೊಳು ಕಾಣ್ಬಸಂತೆ
ತಿಳಿವಿನ ಸುಖವನು ವಿಷಯಭಾಧೆಯೆನು ಸಂ
ಗೊಳಿಸುತ ಸಮಯ-ವೊಂದರೋಳ್ಮೈದುತಿಹನು ॥೨॥

ಪರನ ಸಂಗದ ಸೊಗಸನು ಮರೆಯದೆ ನಿಜ
ಪುರುಷನೊಳೊಂದುವ ಪುಂಶ್ಚಲಿಯಂತೆ
ಗುರುಶಂಭುಲಿಂಗದ ನೆನೆಹು ನೆಲಸಿ ಬಾಹ್ಯ
ಪರಿಕರವಭಿರ:ತಿಯನು ಪಿಂಗದಿಹನು ॥೩॥

ಪದ ೧೭ ರಾಗ: ಸಾಳಂಗ

ಮುಕ್ತಿಕಾಂತೆಯ ರತಿ ಸುಮ್ಮನಾಂಗದು । ಗುರು
ಭಕ್ತರ ನಡೆನುಡಿಗಲಿಯದೆ ॥ಪಲ್ಲ॥

ಶ್ರುತಿ ಗುರು ಸಖರನುಕೂಲವಿಲ್ಲದೆ ಮಾಯಾ
ಸತಿಯ ಮುನ್ನಿನ ಮೋಹವಳಿಯದೆ
ಮತಿಲಯದೇಕಾಂತದೆಡೆ ಸಮನಿಸದೆ ಸಂ
ಸೃತಿ ದುಃಖದಾತಂಕವಡಗದೆ ॥೧॥

ವರಗುಣದೊಳಗಾಡಿ ಮೆರೆಯದೆ ಸುಕೃತದೆ
ಕರಚಲುವೆಸೆಯವ ಮನುಗಳ
ಸರಸ ಸಲ್ಲಾಪವಿಲ್ಲದೆ ವಿವೇಕದ ಸನ್ನೆ
ವೆರಸಿ ನೋಡದೆ ನೇಮವಿಡಿಯದೆ ॥೨॥

ಮುದವಲರುವ ಭಾವವರಿದನುಭವಿಸದೆ
ಯೊದವಿ ಕರಣಬಂಧವೆಸಗದೆ
ಸದಮಲ ಶಂಭುಲಿಂಗದ ಕೃಪೆವಡೆಯದೆ
ಹೃದಯವಗಲದೊಂದುಗೂಡದೆ ॥೩॥

೧ ಸಾಗಿಪುದೆ ಪರ । ಯುಕ್ತಿಯರಿದು ಕೂಡುವರಿಗಲ್ಲದಿಂತು (ಅ)
ಸಾಗದು ಪರತರ ಯುಕ್ತಿಯನರಿದು ಕೂಡುವನಿಗಲ್ಲದಿಂತು (ಆ)

ಪದ ೧೮ ರಾಗ : ಪಹಡಿ

ಸುಮ್ಮನಾಗದರಿವಿನಿಂದವೆ ಮುಕುತಿ
ನೆಮ್ಮಲೇಂಸೆನಿಸುವ ಗುಣಗಣವಿಲ್ಲದವನಿಗೆ ॥ಪಲ್ಲ॥

ಗುರುಪಾದಸೇವೆ ಶರಣರ ಸಂಗ ಹರಪೂಜೆ
ಕರುಣ ವಿನಯ ನಿಜ ಸಮಯ ನಿಷ್ಠೆ
ವಿರತಿ ವಿವೇಕ ವಿದ್ಯೆ ಶಮೆ ದಮೆ ಸತ್ಯಧರ್ಮ
ವರಭಕ್ತಿ ನೀತಿಗಳ ಬಲವಿಲ್ಲದವನಿಗೆ ॥೧॥

ನಿಗಮಾಗಮದೊಳು ನಂಬುಗೆ ನಿತ್ಯವಿಧಿಗಳ
ನಗಲದೆಚ್ಚರು ದೇಹದೊಳು ವಿಮೋಹ
ಜಗದಪವಾದದೆಡೆಯೊಳು ಭೀತಿ ಸುಜನರ
ಬಗೆಗೊಳಿಸುವ ನಡೆನುಡಿಯಿಲ್ಲದವನಿಗೆ ॥೨॥

ಕಾವನಲರಂಬಿಗೆದೆಗೊಡದ ಬಲುಮೆ ಜೀವ
ಭಾವವೆಳ್ಳನಿತು ದೋರದಮಲ ಯೋಗ
ಶೀವಿದನುಭವ ಸುಖರೂಪನಾದ ಶಂಭುಲಿಂಗ
ವಾವರಿಸಿ ಕೀಟಭೃಂಗನಾ ಯವಿಲ್ಲದವನಿಗೆ ॥೩॥

---

೧ ಸನೀವ (ಅ)

ಪದ ೧೯ ರಾಗ : ಶಂಕರಾಭರಣ

ಬೇಡುವೆನಭವ ನಿಮ್ಮನು ಭವ ಭವದೊಳು
ಮಾಡೆನಗೊಲಿದ, ಸುಗುಣಸಂತತಿಯನಿಂತು ॥ಪಲ್ಲ॥

ಎಡರಡಸಿದ ವೇಳೆಯೊಳು ಧೈರ್ಯವನು ಸಿರಿ
ವಡೆದು ಜೀವಿಸುವೆಡೆಯೊಳು ವಿನಯವನು
ಕಡು ಜವ್ವನದೊಳು ವಿಕೃತಿದೋರದಿಹುದನು
ಪಿಡಿದ ನೇಮವ ನೆಡೆವಿಡದತಿ ಛಲವನು ॥೧॥

ಅಸುವಳಿಯಲು ದೇಹಿಯೆನಲೊಲ್ಲದಧಟನು
ಪ್ರಸಿಯನೆಲ್ಲಿಯು ನುಡಿಯದ ಸತ್ಯವಿದನು
ಮಸುಳಿಸದಿಹ ಪುಣ್ಯಮಯ ಕೀರ್ತಿಯನು ಶಾಂತೆ೧
ರೊಸೆಹುದೆಂದು ಬಣ್ಣಿಸುವ ವರ್ತನೆಯನು ॥೨॥

ವಿತರಣದೊಡನೆ ಭೋಗಿಸುವರ್ಥದೊದವನು
ಹಿತವಚನವೆ ತೊಡವೆನಿಪ ದಾನವನು
ಶ್ರುತಿಬೋಧನೆಯೊಳು ಪರತಿಯಿಲ್ಲ೨ದರಿವನು
ನುತಿವೆತ್ತು ಕೈಸಾರುತಿಹ ಮನೋರಥವನು ॥೩॥

---

೧ ಸಂತ (ಅ) ೨ ದಿಹುದ (ಅ)

ಕೋಪವಂಟದ ತಾಪವನು ಪರವಧುವಿನ
ರೂಪುಗಂಡೆಳಸದ ಕರಣವಿಜಯವನು
ತಾಪವಡರಿ ಕೆಡಿಸದ ಸಾರಸುಖವನು
ಕಾಪಟ್ಯವಿಲ್ಲದಾಶ್ರಮಧರ್ಮರತಿಯನು ॥೪॥

ಧರೆಯೊಳತ್ಯಧಿಕವೆನಿಪ ಶಾಂತಿಮತವನು
ಕರುಣ ವಿದ್ಯೆಗಳುಳ್ಳ ಗುರುಭಜನೆಯನು
ಪರತರ ಮುಕುತಿದೋರುವ ಶಾಸ್ತ್ರವನು ಕಂತು
ಹರ ಶಂಭುಲಿಂಗನಿಮ್ಮಡಿಯ ಭಕ್ತಿಯನು ॥೫॥

ಪದ ೨೦ ರಾಗ : ಸೌರಾಷ್ಟ್ರ

ಕರುಣಿಸು ನೀನೆನ್ನ ಕರಣನಿಕರದೊಳು
ವರಪುಣ್ಯವಗಲದಂತೆಲೆ ದೇವ
ಶರಣ ಸಹಜಭಾವ ಗಿರಿಜೆಯ ಸುಖಿಜೀವ ಬೇಗ ಕರುಣಿಸು ॥ಪಲ್ಲ॥

ಸತಿಮೊದಲಾದ ಸಂಪದವನೆಳಸಿ ಮಂದ
ಮತಿಕಂಡ ಕೆಲಸವನಲಸದೆ
ಕ್ಷಿತಿಯೊಳೆಸಗುವಂತೆ ಗುರುಸೇವೆಯೊಳಗಭಿ
ರತಿಯನೆನ್ನೊಡಲೀಗೀಯಖಿಳೇಶ
ನುತ ಗುಣನಿಧಿಕೋಶ
ಜಿತವಿಧಪಾಶ ಬೇಗ ಕರುಣಿಸು ॥೧॥

ಜನರೊಲಿವಭಿಮಾನದೊಳು ವಾದಿ ಬಹುತರ್ಕ
ವನೆ ಬಿಡದೋದಿ ಬಳಲುವಂತೆ
ಮನುಗಳ ಜಪವೆನ್ನ ಮೆಲ್ನುಡಿಯೊಳಗನು
ದಿನವಿರೆ ಮಾಡು ಪಾವನಶೀಲ
ಮುನಿಕುಲ ನುತಿಲೋಲ
ವಿನಮಿತ ಸುರಜಾಲ ಬೇಗ ಕರುಣಿಸು ॥೨॥

ಸಲೆ ಸಮರತಿಯೊಳೊಲಿಸಿ ಮೆಚ್ಚಿಸಿದನೊಮ್ಮೆ
ತೊಲಗಿದಿನಿಯಳು ಧ್ಯಾನಿಸುವಂತೆ
ನೆಲಸಿ ತತ್ವಾನುಭಾವನೆಯೆನ್ನ ಮನದೊಳು
ಚಲಿಸದಂತಿರಿಸು ಭಾವಜಭಂಗ
ವಿಲಸಿತ ವಿಮಲಾಂಗ
ಸುಲಭನೆ ಶಂಭುಲಿಂಗ ಬೇಗ ಕರುಣಿಸು

ಪದ ೨೧ ರಾಗ : ಸುವ್ವಾಲೆ

ಮಾಡಲಿಲ್ಲವೆ ತಪವ ಮಾಡಲಿಲ್ಲವೆ
ಕೂಡಿ ಸುಗುಣದೊಡನೆ ತಿಳಿದು
ನೋಡಿ ತ್ರಿವಿಧ ಕರಣದ೧ಲ್ಲಿ ॥ಪಲ್ಲ॥

ಗುರುಭಜನೆ ಸುಕರ್ಮವೃತ್ತಿ
ಹರನ ಪೂಜೆ ಶರಣಸೇವೆ
ಪರಮ ಸಾತ್ವಿಕಂಗಳಿನಿತು
ನೆರೆದು ನೆಲಸಿ ತನುವಿನಲ್ಲಿ ॥೧॥

ವಿನಯವನ್ಯ ಹಿತವತರ್ಕ
ವನಪಶಬ್ದ ವಚಲಿತಾರ್ಥ
ವನಘ ಮಂತ್ರವಾಗಮಂಗ
ಳಿನಿತು ವಿಡಿದು ವಚನದಲ್ಲಿ ॥೨॥

ಶಮೆ ವಿವೇಕವಾತ್ಮ ವಿದ್ಯೆ
ದಮೆದಯಾ ವಿರಕ್ತಿಯೋಗ
ವಮಳರೂಪ ಶಂಭುಲಿಂಗ
ವಮರ್ದ ತೋರೆ ಸುಮನದಲ್ಲಿ

---

೧ ದಿಂಶ (ಅ)

ಪದ ೨೨ ರಾಗ : ದೇಶಿ

ಕರುಣಿಸೆನಗಿದನೆ ಬೇಡುವೆನಭವ ಬೇರೊಂದು
ವರವನೊಲ್ಲೆನು ಮುಕ್ತಿದೊರೆವ ಸಾಧನವ ॥ಪಲ್ಲ॥

ಆವ ಕಾಲದೊಳು ಬಳಿಕಾವ ದೇಶದೊಳು ಬೇ
ರಾವ ವಸ್ತುವಿನೊಳೊಡವೆರೆಯದತಿ ಮಮತೆ
ಆವ ಪರಿಯೊಳು ತನ್ನ ಮೇಲಿರ್ಪುದಂತೆ ಗುರು
ದೇವತೆಯೊಳನುರಾಗವಿಹುದೆ ನಿಜಭಕ್ತಿ ॥೧॥

ಆದಿದೆನ್ನದಖಿಳ ತತ್ವವನೇತಿಗಳೆದುಳಿದ
ಸದಮಲ ಚಿದಾನಂದ ಪೂರ್ಣ ತಾನೆಂದು
ಹೃದಯದೊಳು ನಂಬಿ ಬಹುಮತವನೆಣಿಸದೆ ಮತ್ತೆ
ಪದುಳದಿಂದಿರಲದೆ ಸಹಜ ಸುಜ್ಞಾನ ॥೨॥

ಅರಿತು ವನಿತಾದಿ ವಿಷಯದೊಳುಳ್ಳ ದೋಷವನು
ತೊರೆದವನು ಮರಳಿ ಮೋಹಿಸದೆ ಛಲಿಯಾಗಿ
ಕೊರೆತೆಯಿಲ್ಲದ ಶಂಭುಲಿಂಗದಂತಿರೆ ಭೋಗ
ದೆರಕವಿಲ್ಲದುದೀಗ ಪರಮ ವೈರಾಗ್ಯ ॥೩॥

ಪದ ೨೩ ರಾಗ : ಶಂಕರಾಭರಣ

ಮಂದಮತಿಗೆ ವಿಚಾರಿಗೆ ದೈವಪರನಿಗೆ
ಚಂದವೆನಿಪ ಕಾಂಡಗಳನಿಂತು ತಿಳಿಪುದು ||ಪಲ್ಲ||

ದೇಹಾಭಿಮಾನವೆರಸಿ ಕೃತ್ಯನಿಚಯುವ
ನೂಹಿಸಿ ಮಾಡಿಯುವರ ಫಲಗಳನು
ಸಾಹಸಿಯಾಗಿ ಭೋಗಿಪ ಕರ್ತೃ ತಾನೆಂದು
ಮೋಹವೆ ಭವಬೀಜವಪುದಿದು ಕರ್ಮಕಾಂಡ ||೧||

ಕರಣಾದಿಗಳು ತಮ್ಮ ವಿಷಯಂಗಳಲ್ಲಿ ಸಂ
ಚರಿಸಿ ಕೋಟಲೆಗೊಳುತಿಹವಲ್ಲದೆ
ಪರಿಭಾವಿಸಿದೊಡೆ ತಾನವಕೆ ಸಾಕ್ಷಿಕನೆಂಬ
ವರ ವಿವೇಕವೆ ಬಂಧರಹಿತ ಸುಜ್ಞಾನಕಾಂಡ ||೨||

ತಾನು ತನ್ನಸು ತನುಗುಣ ಕರ್ಮ ವಿಷಯಃಸು
ತಾನ ಕರಣಭೋಗ ಭಂವನಾದಿಗಳನು
ಸಾನುರಾಗದೆ ಶಂಭುಲಿಂಗವೆಂದರಿದಭಿ
ಮಾನವಿಲ್ಲದುದೆ ಮುಕ್ತಿಯನೀವ ಭಕ್ತಿಕಾಂಡ ||೩||

---
೧ ಭು (೪)

ಪದ ೨೪ ರಾಗ : ದೇಶಿ

ಶರಣಸತಿಯ ಮದುವೆಯ ಸಂಭ್ರಮವನು ನೋಡಿರಮ್ಮ
ಪರಮಾನಂದ ಪಯೋನಿಧಿಯೊಳಗೋಲಾಡಿರಮ್ಮ ॥ಪಲ್ಲ॥

ಸಿಂಗರಿಸಿದ ಶುಭಮಂದಿರದಂದದ ಹಂದರವಮ್ಮ
ಮಂಗಳಚೌಕದ ಹಸೆಯ ಜಗುಲಿ ಹಸನಾದುದಮ್ಮ
ಕಂಗೊಳಿಸುವ ಕಲಶಂಗಳಿಂದೈರಣೆ ತುಂಬಿತಮ್ಮ
ಹಿಂಗದವರೊಳೊಪ್ಪುವ ತಳಿರೆಡೆವರವೆನಿಸಿತಮ್ಮ ॥೧॥

ಕಲಶೋದಕದೊಳು ಮಿಂದು ಸುಚರಿತೆಯುಳವಟ್ಟುದಮ್ಮ
ತಿಳಿವಿನ ಬೆಳುವಟ್ಟೆಯನುಡಿದಡೆ ಚಲುವೆತ್ತುದಮ್ಮ
ತಿಲಕ ವಿಭೂತಿ ರುದ್ರಾಕ್ಷಿ ಮಣಿದೊಡವಾದುದಮ್ಮ
ವಿಳಸಿತ ಶಿವಹಸ್ತಾಬ್ಜದ ತೊಂಡಿಲುಗಟ್ಟಿತಮ್ಮ ॥೨॥

ನೆರೆದ ಗಣಂಗಳೊಸಗೆಯ ಸುವಾಸನಿಯರುಗಳಮ್ಮ
ಪರಿವಿಡಿದೊರೆವಾಗಮ ವಿಧಿವಾದ್ಯದ ರಭಸವಮ್ಮ
ಪರಮಂತ್ರದ ಶೋಭನವಿಂಬಾಗಿರೆ ಪಾಡಿತಮ್ಮ
ಸರಿದುದು ಮಾಯಾಮಲ ಕರ್ಮದ ತೆರೆ ವರತುದಮ್ಮ ॥೩॥

---

೧ ಸಮಯವಾಯಿತನ್ನು (ಅ)

ಭಜನೆ ಭಕುತಿಗಳಿವೆ ಜೀರಿಗೆ ಬೆಲ್ಲವಾದವಮ್ಮ
ನಿಜದೀಕ್ಷಾಸಮಯದ ಸುಮೂಹರ್ತ ಸಮನಿಸಿತಮ್ಮ
ಸುಜನ ಜನದ ಕೈವಾರವೆ ಮಂಗಳಪಾತವಮ್ಮ
ತ್ರಿಜಗನ್ನುತ ಗುರು ಕರುಣರಸದ ಕೈ ಧಾರೆಯಮ್ಮ ||೪||

ಮೆರೆವ ಮಸ್ತಕದರಮನೆಯು ನಿಬ್ಬಣವೈತಂದುದಮ್ಮ
ಕೊರತೆಯೊಂದಿಲ್ಲದ ಶಂಭುಲಿಂಗನೆ ಮದವಣಿಗನಮ್ಮ
ಮೆರೆದಿನಿಸಗಲದೆ ನೇಹವೆರಸಿ ಕೈವಿಡಿದನಮ್ಮ
ನೆರೆದಿಹ ಮುತ್ತೈದೆ ಶರಣವಧು ನಿಜಕಾಣೆರಮ್ಮ ||೫||

ಪದ ೨೫ ರಾಗ : ತೆಲುಂಗು ಕಾಂಬೋಧಿ

ಆವಪುಣ್ಯವೊ ಲಿಂಗಪೂಜಾ ವಿಧಿಯನು
ಭಾವವಹುದು ನರಜನ್ಮದೊಳು
ಸಾವಿರ ಮುಖದೊಳರಸಿ ನೋಡಿ ನಿಗ
ಮಾವಳಿಗಾಣದಸಾಧ್ಯವಿದು ॥ಪಲ್ಲ॥

ಮೊದಲು ಲಿಂಗದ ಕಲೆಯನು ಭಾವಿಸುವ ರತಿ
ಹೃದಯದೊಳೊಡಗೂಡಿ ನೆನೆವ ರತಿ
ಸದಮಳ ಲೋಚನದೊಳು ನಿಟ್ಟಿಸುವ ರತಿ
ಯೊದವಿ ಕರದೊಳಿಂಬಿಡುವ ರತಿ ॥೧॥

ಹರುಷ ರಸದೊಳು ಮಜ್ಜನವೆರೆವಿಂಪು
ಪರಮವಸ್ತ್ರ ಗಂಧಾಕ್ಷತೆಗೊಡುವಿಂಪು
ಪರಿಮಳಪಸೆವಲರನು ಸಿಂಗರಿಸುವಿಂಪು
ವರಧೂಪಾರತಿಗಳನೆತ್ತುವಿಂಪು ॥೨॥

ರಸ ಮೊಸರುವ ಸವಿಗಳನೂಡುವನುರಾಗ
ವೆಸೆವ ತಾಂಬೂಲವ ನೀಡುವನುರಾಗ
ಮಿಸುನಿಯ ಛತ್ರ ಚಾಮರವಿಕ್ಕುವನುರಾಗ
ಪೊಸೆದು ದರ್ಪಣವನು ಪಿಡಿವನುರಾಗ ॥೩॥

ಕೂಡೆ ಬೀಸಣಿಗೆಯನೋವಿ ಬೀಸುವ ಲೇಸು
ನಾಡೆ ನಮಿಸಿ ಲಲ್ಲೆಗರೆವ ಲೇಸು
ಮೂಡುವ ತನುಪ್ರಳಕದೊಳು ಪಾಡುವ ಲೇಸು
ನೋಡುತಾನಂದಾಶ್ರು ಸುರಿವ ಲೇಸು ॥೪॥

ಹಿಂಗದೆ ಪುಷ್ಪಾಂಜಲಿಗೆಯ್ದು ಸುಖವತಿ
ಸಿಂಗರವೆನಿಸಿ ಬಣ್ಣಿಸುವ ಸುಖ
ಮಂಗಳಮಯ ಶಂಭುಲಿಂಗವೆನಿಸಿ ರಾಜಿಸುವಿಷ್ಟ
ಲಿಂಗಪೂಜಾಸಂಭ್ರಮದ ಸುಖ ॥೫॥

ಪದ ೨೬ ರಾಗ : ನಾದನಾಮಕ್ರೀ

ಬೇರೊಂದು ಪದವಿಯನು ಪಡೆವೆನೆಂಬಳಿಯಾಸೆ
ದೋರದೆನ್ನೊಳು ಗುರುವಿನೊಲುಮೆ ದೊರಕೊಳಲು ‖ಪಲ್ಲ‖

ಶ್ರೀಗುರುಪದಾಬ್ಜ ರೇಣುಭಸಿತದೊಳೆನ್ನ
ನಾಗಲೆಡೆವಿಡದ ಮಾಯಾಗ್ರಹಂ ತೊಲಗೆ
ನೀಗಿ ಜನನಾದಿ ವಿಕೃತಿಯನು ನಿಜಬೋಧ ರೂ
ಪಾಗಿ ಸಂತಸದೊಳಾನಿಹುದನತಿಗೆಳೆದು ‖೧‖

ತಿಳಿಯಲೆನ್ನಯ ಸುಕೃತದುದಯಗಿರಿಯಗ್ರದೊಳು
ಬೆಳಗಿ ದೋರಲು ಗುರುದಯಾದಿ
ಥಳಿಲನಜ್ಞಾನತಮವಿರದಡಗೆ ಪರಮಾತ್ಮ
ನುಳುಮೆಯಪರೋಕ್ಷವಾದತಿಶಯವನುಳಿದು ‖೨‖

ಎನ್ನ ಮತಿಯೆಂಬ ಸಸಿ ವಣಗೆ ಗುರುನಿರೀಕ್ಷಣದ
ಜೊನ್ನದೊಡವರೆದು ಸುವಿವೇಕರಸವಾಂತು
ಚೆನ್ನೆಸವ ಕಾಂತಿಮಯವಾಗಲದರಲ್ಲಿ ಸಲೆ
ಸನ್ನಿಹಿತ ಸಹಜಾನುಭಾವವನಿಲ್ಲೆಂದು ‖೩‖

ಶಿವಹಸ್ತವೆಂಬ ಪರುಷವನೆನ್ನ ಶಿರದೊಳೊ
ಪ್ಪುವ ತೆರೆದೊಳಿರಿಸೆ ಗುರುವರನು ದುರ್ಗುಣದ
ಆವಲೋಹವನು ತೊಲಗಿಸಿ ತನುಕರಣ ಮಾನಸತತ್ವ
ನಿವಹವತಿ ಶುದ್ಧವೆನಿಸಿದುದನಪಲಪಿಸಿ ‖೪‖

ಗುರುವರನ ಬೋಧೆಯೆಂಬಮೃತವಾರಿಯೊಳಿನ್ನ
ದುರಿತ ಸಂತಾಪ ಸಮುದಾಯವಡಗಿ
ಪರಮಾನುರಾಗವೆಡೆಗೊಂಡು ತೆಕ್ಕನೆ ತೀವಿ
ಗುರುಶಂಭುಲಿಂಗವಾದುದನೊಡಂಬಡದೆ ॥೩॥

ಇಂತು ನಿಜಗುಣಶಿವಯೋಗಿವಿರಚಿತವಾದ ಕೈವಲ್ಯ ಪದ್ಧತಿಯೆಂಬ ಪ್ರಕರಣದಲ್ಲಿ ನೀತಿಕ್ರಿಯಾಚರ್ಯಸ್ಥಲಕ್ಕೆ ಸೇರಿದ ವಚನಜೋಡು ೨೬ಕ್ಕಂ ಬಿಚ್ಚುಗಣನೆ ೯೮ಕ್ಕಂ ಮಂಗಳ ಮಹಾ

ಶ್ರೀ ಶ್ರೀ ಶ್ರೀ

ಯೋಗಪ್ರತಿಪಾದನ ಸ್ಥಲ

ಮಂತ್ರಯೋಗ

ಪದ ೧ ರಾಗ : ಪೂರ್ವಿ

ಶ್ರೀಗುರುವೆ ನಿನಗೆ ಶರಣಾಗುವೆನು[1] ನಿಜಸುಖದ
ಸಾಗರನೆ ಸಕಲ ವಿದ್ಯಾಗುಣನಿವಾಸ ॥ಪಲ್ಲ॥

ಮಲದೆ ಮರವೆಯನು ಮಾಯಾಮೋಹವನು ಕರ್ಮ
ಕುಲದ ಸುಖದುಃಖವನು ವಚನ ಬಂಧವನು
ಸಲೆ ತಿರೋಹತಿಯು ಸಾಹಸವೆಂಬುದನು ಬಿಡಿಸಿ
ನಲಿದೆನಗೆ ಬೋಧರೂಪವನೆ ಬೋಧಿಸಿದ ॥೧॥

ಸುರನರೋರಗದನುಜ ಮನು ಮುನೀಶ್ವರ ತರ್ಕ
ಪರಮಂತ್ರಶಾಸ್ತ್ರ ನಿಗಮಾಗಮ ಪುರಾಣ
ದರುಶನ ಮತಾದಿಗಳು ಕಾಣದರಸುವ ತತ್ವ
ದಿರವಿದೆಂದೆನಗೆ ಕಣ್ಣಾರ ಕಾಣಿಸಿದ ॥೨॥

ತಿಳಿಯಲ್ಕೈದಧ್ವವನುಮೀರಿದ ಕಲೆಯ ಮೇಲೆ
ಬೆಳಗುವಾಗಸದಗ್ರದಮಳ ಶಕ್ತಿಯನು
ಕಳಿದೆಸೆವ ಶಂಭುಲಿಂಗದ ಯೋಗವಿತ್ತೆನ್ನ
ನುಳುಹಿದ ನಿರಾಭಾರಿ ದೇಶಿಕವರೇಣ್ಯ ॥೩॥

---

೧ ನೀನೆ ಶರಣಾಗೆನಗೆ (ಅ) ೨ ಒ (ಅ)

ಪದ ೨ ರಾಗ : ಮಾಳವ

ಯೋಗಿಗೆ ಸಕಲ ಸಂಸಾರವದಿಲ್ಲ
ವಾಗಿ ತಿಳಿವಡಂದು ಪುಸಿ ನೋಡು ರಮಣಿ ||ಪಲ್ಲ||

ವರವಿದ್ಯೆಯೆಂಬ ಕುಲವನಿತೆಯುಂಟಗಲದ
ಪರಿತೋಷವೆಂಬ ಮೋಹದಣುಗನುಂಟು
ವಿರತಿಯೆಂಬನುಕೂಲ ಜನಮುಂಟು ಕ್ಷಮೆಯೆಂಬ
ಚರನುಂಟು ಶಾಂತಿಯೆಂಬ ಸಖನ ಸರಸಮುಂಟು ||೧||

ಸುತ ಭಕ್ತಿಯೆಂಬ ಮಾತೆಯುಂಟು ಸುಚ-
ರಿತವೆಂಬ ಪಿತನುಂಟು ಸತ್ಯವೆಂಬ ಕುವರಿಯುಂಟು
ಹಿತವಾದ ನಂಬುಗೆಯೆಂಬಾಪ್ತ ಜನರ ಸೇವೆಯುಂಟು
ಮತಿಯೆಂಬ ಗೇಹಮುಂಟಾಚಾರವೆಂಬ ಕ್ಷೇತ್ರಮುಂಟು ||೨||

ದಾಸಿಯುಂಟಹಿಂಸೆಯೆಂಬ ದಾಸನುಂಟಸ್ತೇಯವೆಂಬ
ಲೇಸನೀವ ಧರ್ಮವೆಂಬ ವಾಹನಮುಂಟು
ಭಾಸುಂ ಮೈತ್ರ್ಯಾದಿಯೆಂಬ ಪೌತ್ರರುಂಟು ಮುಕ್ತಿಯೆಂಬ
ದೇಶವುಂಟು ಶಂಭುಲಿಂಗವೆಂಬ ದೇವರುಂಟು ||೩||

ಪದ ೯ ರಾಗ : ಲಹರಿ

ಜಗದೊಳುನ್ನತವಾದ ಯೋಗಸಾಧಕ
ರುಗಳ ನಾಲ್ವರನಿಲ್ಲಿ ವರ್ಣಿಸುವೆನು ||ಪಲ್ಲ||

ಬಲಹೀನ ನರನಾಗಿ ಮಂದಮತಿ ಸಸು
ಗೆಲಸವಿಡಿದವನನ್ಯವಶವರ್ತಿ
ಸಲೆ ರೋಗಿ ಗೃಹಕೃತ್ಯದೆಡೆಯೊಳು ಮತಿ
ನೆಲಸಿದಾತನೆ ಮೃದುವೆನಿಸುವನು ||೧||

ಸಮಭಾವಿ ಸುಜನರ ಸಂಗ ಸುಖಿ ಕಾರ್ಯ
ಸಮುದಾಯದೊಳು ಸಾಕ್ಷಿ ದೃಢ ದೇಹಿ
ವಿಮಲನಿಂದ್ರಿಯವೃತ್ತಿಶಾಂತನಭ್ಯಾಸಿ
ಸಮತೆಯುಳ್ಳವನೆ ಮಧ್ಯಮನೆನಿಸುವನು ||೨||

ವರಸೀತಿ ಕ್ಷಮೆ ಧೈರ್ಯ ಸತ್ಯವಚನ ನಿ
ರ್ಧರಣ ನಿರ್ಮಲ ಚಿತ್ತ ಸಾರ ಶೌರ್ಯ
ಪರಿತೋಷ ವಿನಯಾದಿ ಸರ್ವಗುಣವಾ
ವರಿಸಿ ತೋರ್ಪವನತಿಮಾತ್ರನಹನು ||೩||

ಬಹುಶಾಸ್ತ್ರಪರಿಣಿತನಿಪಪರಭೋಗವಿ
ರಹಿತನಖಿಳ ಕರ್ಮದೂರನಧಿಕ
ವ್ರಹ ಶೂರನವಿಕಾರಿ ತತ್ವಭಾವ ಸಂ
ನಹಿತನೆನಿಪನತಿಮಾತ್ರತರನು ||೪||

ಇನಿಬರೊಲಿದು ಮಂತ್ರ ಲಯ ಹಠ ರಾಜ
ವೆನಿಪ ಯೋಗದೊಳೊಂದನೊಂದನೆಯ್ದಿ
ಘನ ಗುರುಶಂಭುಲಿಂಗದಿಂದೆ ನಿಜಸುಖ
ವನು ಪಡೆಂವರು ಮೇಲೆ ಕ್ರಮವಿಡಿದು ||೫||

---

೧ ವುದು (ಅ)

ಪದ ೪ ರಾಗ : ಚೌಪದಿ (ತೋಡಿ)

ಕೇಳಿ ತಿಳಿದು ಪಂಚಯೋಗವಿದನು ಮಾಡ
ಲಾಳಲಹುದು ಮುಕ್ತಿಪದವನು ॥ಪಲ್ಲ॥

ಒಂದೆರಡಾರೆಂಟುವರ್ಣದ ಮನುಗಳ
ಛಂದವನರಿದೆಳಸಿದುದನು
ಕುಂದದೆ ಜಪಿಸುತಿರಲು ಮಂತ್ರಯೋಗವಿ-
ದೆಂದು ಪೇಳುವರು ಸಂಯಮಿಗಳು ॥೧॥

ನಾದದ ನಿಜದೊಳಾಗಲಿ ಬಿಂದುವಿನ ರಮ್ಯ
ವಾದ ರೂಪಿನೊಳಾಗಲಸುಗೂಡಿ
ಭೇದವಳಿದು ಮನವಿರೆ ಲಯಯೋಗವೆಂ
ದೋದಿ ಸೂರಿಗಳು ಸೂಚಿಸುವರು ॥೨॥

ಪವಣಿಸಿದಷ್ಟಾಂಗದಿಂದೆ ಕರಣಮುದ್ರಾ
ನಿವಹದಿಂ ಬರಿಯ ಕುಂಭಕದಿಂದೆ
ಪವನ ವಿಜಯವೆ ಮೂರನೆಯಸುಯೋಗವೆಂ-
ದವಿಚಲ ಮತಿಗಳೂಹಿಸುವರು ॥೩॥

ಅರಿವಿನಿಂದೊಳ ಹೊರಗಣಮೂರು ಲಕ್ಷ್ಯದಿಂ
ದರಿದು ತತ್ವವನು ಮಾನಸವೃತ್ತಿ
ಕರಿಗೊಂಡು ನಿಂದೊಡದನೆ ರಾಜಯೋಗವೆಂ
ದರುಹಿ ತೋರುವರಚ್ಚ ಸುಖಿಗಳು ॥೪॥

ಗುರು:ಶಂಭುಲಿಂಗದರ್ಶನೆಯನುಸಂಧಾನ
ಪರಭಕ್ತಿ ವಿದ್ಯೆ ಸುವ್ರತವೈದು
ನಿರುತದಿಂದಳವಟ್ಟುದನೆ ಶಿವಯೋಗವೆಂ
ದೊರೆವರೊಲಿದು ವೇದವಿದುಗಳು ॥೫॥

ಪದ ೫ ರಾಗ : ನಾದನಾಮಕ್ರಿ

ಬೇರೆ ಬಹುವಿದ್ಯೆಯೊಳು ಬಳಲುವರು ತಮ್ಮೊಳಗೆ
ತೋರುವ ಮಹಾ ಮಂತ್ರವನು ಜಪಿಸದೆ ॥ಪಲ್ಲ॥

ಪವನಗತಿಯೆನಿಸುವರುಣೇಂದು ವೀಥಿಗಳೊಳಗೆ
ಸವಿಸರ್ಗ ಬಿಂದು ಸಹ ಶಕ್ತಿ ವರ್ಣ
ಶಿವಬೀಜವೆಂಬೆರಡು ಚರಿಸುತೆಲ್ಲರೊಳು ತೋ
ರುವ ಮಂತ್ರವಾತ್ಮ ಪ್ರಸಾದವಹುದು ॥೧॥

ಆರುನೂರು ಮಿಕ್ಕ ಮೂರೇಳು ಸಾಸಿರ ಜಪದೊ-
ಳುರಿವ ಫಲವಹುದು ದಿನವೊಂದೊಂದಕೆ
ನೆರೆ ನಿರಾಯಾಸವವರಿಂದುದಯ ಸಮಯದೊಳು
ಮರೆಯದಾಮಂತ್ರವನೆ ಜಪಿಸುತಿಹುದು ॥೨॥

ಬಳಿಕಲಾ ಮಂತ್ರಾಕ್ಷರದ್ವಯದ ನಡುವೇ ಮನ
ವಳಿದು ಕೂಡಿದ ಸಂಗಮಃಸ್ಥಾನದೊಳಗೆ
ಬಳಕೆಗೊಳಗಾಗದಿಹ ವರನಾದವದು ತಾನೆ
ತಿಳಿಯೆ ಪರಮ ಪ್ರಣವ ಮಂತ್ರವಹುದು ॥೩॥

ಮತ್ತಾರು ಚಕ್ರದ ಸರೋಜದೆಸಳೆನಿಸಿದ್ದೈ
ವತ್ತು ಶುದ್ಧಗೆ ಮಾತೃಕಾಮನುವದು
ಬಿತ್ತರದ ಕರ್ಣಿಕೆಗಳಾಗಿಹ ನಕಾರಾದಿ
ಮೊತ್ತವೆಸೆವುದೆ ಮೂಲ ಮಂತ್ರವಹುದು ॥೪॥

ನೋಡಲಿಂತಮಳ ಮಂತ್ರಾಳಿ ವಾಚಕವನನು
ಕೂಡಿರ್ಪ ಶಂಭುಲಿಂಗವೆ ವಾಚ್ಯವು
ರೂಢಿಸೆತ್ತೀಪರಿಯೊಳಿಹುದನಾರೈದೆಳಸಿ
ಮಾಡೆ ಜಪವನು ಮುಕ್ತಿ ಸಿದ್ಧಿಯಹುದು ||೫||

ಇಂತು ನಿಜಗುಣ ಶಿವಯೋಗಿವಿರಚಿತವಾದ ಕೈವಲ್ಯ ಪದ್ಧತಿಯೆಂಬ
ಪ್ರಕರಣದಲ್ಲಿ ಮಂತ್ರಯೋಗಸ್ಥಲಕ್ಕೆ ಸೇರಿದ
ವಚನಜೋಡು ೫ದಕ್ಕಂ ಬಿಚ್ಚ ಗಣನೆ ೨೧ ಕ್ಕ ಮಂಗಳ ಮಹಾ
ಶ್ರೀ ಶ್ರೀ ಶ್ರೀ

ಲಯಯೋಗ

ಪದ ೬ ರಾಗ : ಸೌರಾಷ್ಟ್ರ

ಪಡೆದು ಜಪಿಸಿ ನೋಡಿ ಕೇಳಿ ನೆನೆದು ನಿಜ
ದೊಡಗೂಡಿ ಸುಖಿಸಬಲ್ಲಡೆ ಮುಕ್ತನವನು ॥ಪಲ್ಲ॥

ಮದ ಮೋಹ ನಿದ್ರೆಯೊಳಳಿಯೆ ಬೋಧಿಸಿ ವಿಷ
ಯದೊಳು ಸಂಚರಿಸಲೊಯ್ಯನೆ ಬರಸೆಳೆದು
ಪುದಿದು ಬಾರದೊಡೀಶನ ನೆನಪು ಗಲಿಸಿ ನಿಜ
ಹೃದಯವನಿಂತು ಸ್ಥಿತಿಡುವ ರೀತಿಯನು ॥೧॥

ಮಹದಾದಿ ಮರೆಯ ತೊಲಗಿಸಿ ಮಾಯಾತೀತ
ವಹ ನಿಜವರುಪಲು ಮನನ ಸುತ್ರಾಣ
ಸಹಜ ಸಂಘಾತ್ಮಪ ಸಲಹಿ ತೋರಲು ಮಂತ್ರ
ವಹುದೆಂಬ ಮಹಿಮೆವಡೆದ ಮಸುಗಳನು ॥೨॥

ಪವಳದ ಬಳ್ಳಿ ಮಿಂಚಿನ ಮಾಲೆ ಮಿಸುನಿಯು
ರವೆ ರನ್ನದೀವಿಗೆ ತಾರಕಾಜಾಲ
ರವಿ ಸೋಮ ಶಿಖಿಯ ನೆರವಿಯಂತೆ ಪಲವು ಬಂ
ಣವ ತೋರುತಿಪ ಬಿಂದುವ ತ್ರಿಕೂಟದೊಳು ॥೩॥

ಶರಧಿ ನಿರ್ಝರಭೇರಿ ಮೇಘಾದಿ ಬಹುರವ
ಮುರುಜೆ ಕಹಳೆ ಶಂಖ ಘಂಟಾನಿನಾದ
ವರ ವಾಸುಕಿ ವೇಣಿ ಕಿಂಕಿಣಿ ಭ್ರಮರಾದಿ ಸು
ಸ್ವರ ಪರಿವಿಡಿದನಾಹತದ ನಾನವನು ॥೪॥

ಬೆಳಗು ಕತ್ತಲೆ ರವಿ ಶಶಿ ತಾರೆ ಭುವನಾದಿ
ವಿಲಯವೈದಿಹುವ ಮಹಾಶೂನ್ಯದಾಗಸವ
ಕಳೆದಚಲಿತ ಸಚ್ಚಿದಾನಂದ ನಿತ್ಯ ನಿ
ರ್ಮಲ ಶಂಭುಲಿಂಗ ತಾನಾದ ಸಂತಸವ ॥೫॥

ಪದ ೭ ರಾಗ : ಮಾಳವ

ನಿರ್ವಿಕಲ್ಪಗಲಿ ನಿಮ್ಮ ನೆನಹು ನಿಂದೊಡೆ ಮುಕ್ತಿ
ಸಮನಿಸದಿಹುದೆ ಶಂಕರಯೋಗಿ ಜನವಂದ್ಯ ॥ಪಲ್ಲ॥

ಮೂರು ಪೊಳೆಗಳ ಸಂಗಮ ತಾಣದೊಳು ಮಿಂದು
ಮೂರುಪಾಧಿಯ¹ಮಲವನು ತೊಳೆದು
ಮೂರು ಗುಣವನೆ ಮೀರಿ ತೋರುವ ಸುತೇಜದೊಳು
ಮೂರು ಮನೋ ವಾಯು ದೃಷ್ಟಿಗಳು ಕರಿಗೊಂಡು ॥೧॥

ಅಸುಗತಿಯೊಡನೆ ಸುಳಿವ ವರ್ಣವೆರಡರ
ಪೆಸರಳಿದೆಡೆಯೊಳೇಕಾಕ್ಷರಿಯ
ದಶವಿಧವೆನಿಪ ನಾದವನಾಲಿಸುವ ಸುಖ
ರಸದ ಸೊಗಸು ಮಿಗೆ ಮತಿಮರೆದನ್ಯವನು ॥೨॥

ಸುರಭಿನಿಸ್ವನದ ಹಾದಿಗಳ ನಾಲ್ಕರ ನಡು
ಮರಿದನಿಸುವ ಪರಂಜ್ಯೋತಿಯನು
ಬೆರಸಿ ತೋರುವ ಸಚ್ಚಿದಾನಂದಮಯನಾದ
ಗುರುಶಂಭುಲಿಂಗದೊಳವಿರಳ ಭಾವದಿಂದ ॥೩॥

---

೧ ಶಾಪದಾದಿ (ಅ)

ಪದ ೮ ರಾಗ : ಶಂಕರಾಭರಣ (ಸೌರಾಷ್ಟ್ರ)

ಮನವೆಂಬ ಗಿಳಿಯನೋಯ್ಯಾರದಿಂದೋವಿ ಮೆ
ಲ್ಲನೆ ಮುದ್ದು ನುಡಿಗಲಿಸೆಲೆ ಮಾನಿನಿ ||ಪಲ್ಲ||

ಆರು ಜಾಳಂಧರಂದೊಳೆಂಸೆವಾಜ್ಞೆಯೆಂಬ ಮಿಂ
ಚೇರಿದ ರನ್ನಪಂಜರದೊಳಗೆ
ಮೂರು ವರ್ಣದ ಕೋಲಿನ ಮೇಲಿರಿಸಿ ಕಾಲ್ಗೆ
ಪಾರದಂತಸುಸರಪಳಿಯ ಹರಡಿ ||೧||

ನಯನವಟ್ಟಲೊಳು ಚಿನ್ಮಯದಿನಿಗೆನೆ ಯೂಡಿ
ಸ್ವಯ ಸುನಾದದ ತನಿವಣ್ಣನಿತ್ತು
ಭಯಭ್ರಮರಿಪ್ರವೆಂಬ ಚೀಲಿಯನೆಬ್ಬಟ್ಟಿ
ಪ್ರಿಯದಿ ಮೈದಡವಿ ಭಾವದ ಕೈಯೊಳು ||೨||

ನಾಮವಿದೂರ ನಿಸ್ಸೀಮ ನಿತ್ಯಾನಂದ
ಧಾಮ ಬೋಧಾದ್ವಯಾನಂತ ರೂಪ
ನೇಮರಹಿತ ಶಂಭುಲಿಂಗವೆನಿಸುವಾತ್ಮಾ
ರಾಮನೆ ಶಿವ ಶಿವನೆಂದೋದಿಸಿ ||೩||

೧ ಪೆ (ಅ) ೨ ವೀ (ಅ)

ಪದ ೯ ರಾಗ : ಭೈರವಿ

ಏನನೆಂಬೆನತಿ ವಿಚಿತ್ರದೋರಲೆನ್ನೊಳು । ಕಂಡು
ಮೌನದಿಂದೆ ಬೆರಗುಗೊಂಡೆನೆಲೆಲೆ ಮಾನಿನಿ ॥ಪಲ್ಲ॥

ಅಂಗಕರಣದುರವಣೆಗಳ ಪಿಂಗಿ ಮೊದಲೊಳು । ನೋಳ್ಪ
ಕಂಗಳೊಳಗುಂವರಿದು ನಿಟಿಲತಟದಿ ಕೀಲಿಸೆ
ಪೊಂಗಿ ಮೂಲ ಮರುತನಡರಿ ನಿಲೆ ತ್ರಿಕೂಟದಿ । ಮನವು
ಮಂಗಳ ಪ್ರಭಾವದೊಡನೆ ಕೂಡಿ ಕೊನರಿತು ॥೧॥

ನಸುವಿರಿದ ಪರಾಗದಲರ ನರಿದು ಮೋಹಿಸಿ । ಬಿಡದೆ
ಪಸಿದ ತುಂಬಿ ಝೇಂಕೃತಿಯೊಳು ಜಿನುಗುವಂದದಿ
ಅಸುವಿನೊಳಗೆ ಮೂಲ ಮಂತ್ರನಾದವೆಸೆಯಲು । ಜೀವ
ದೊಸಗೆಯಾಗಲೊಡನೆ ದಿವ್ಯಕಾಂತಿ ತೀವಿತು ॥೨॥

ಬಚ್ಚಬರಿಯ ಚಿತ್ಸುಧಾರಸಾಂಬುನಿಧಿಯೊಳು । ಮುಳುಗಿ
ಎಚ್ಚರಿಲ್ಲದಮಳ ಸುಖದಸುಗ್ಗಿ[1] । ವಡೆವುತ
ಬಿಚ್ಚಿ ಬೇರೆಮೋರದಂತೆ ಶಂಭುಲಿಂಗವ । ನಪ್ಪಿ
ಎಚ್ಚರಡಗದಚ್ಚ ಪರವಶದೊಳು ಸಿಂದೆನು ॥೩॥

---

೧ ಗೆಯು (ಅ)

ಪದ ೧೦ ರಾಗ : ಕಾಂಬೋಧಿ

ದನಿದೋರು ಕರ್ಮವೆನಿಸುವ ಮಾಗೆ ಪೋದುದಿ
ನ್ನನುನಯದಿ ಗುರುಕರುಣವೆಂಬ । ಕೋಗಿಲೆ
ಘನವಸಂತವಿದನಗೆ ಸೊಗಸುಮಿಗೆ ಪ್ರಣವರೂ
ಪಿನ ಚಿತ್ರತರವಾದ ಕೋಗಿಲೆ ॥ಪಲ್ಲ॥

ದಳನಾಲ್ಕು ದಳವಾರು ದಳಹತ್ತು ಹನ್ನೆರಡು
ದಳ ಷೋಡಶ ದ್ವಿದಳವನಾಂತ । ಕೋಗಿಲೆ
ನಳಿನ ಕುಲದಿಂದಸೆವ ಚಕ್ರವೆಂಬಾರು ತಿಳಿ
ಗೊಳನ ಕೆಲದಲ್ಲಿ ಭೋರೆಂದು । ಕೋಗಿಲೆ
ಸುಳಿವ ಸರಸ್ವತಿ ಗಂಗೆ ಯಮುನೆಯೆಂದೆಂಬ ನದಿ
ಗಳ ನಡುವೆ ಚೌಕ ಮಧ್ಯದೊಳು । ಕೋಗಿಲೆ
ನಳನಳಿಸಿ ಬೆಳೆದು ಬೆಳಗುವ ಬಿಂದುವೆಂಬಿನಿದು
ದಳೆದ ಮಾಮರದ ಮೇಲಿರ್ದು । ಕೋಗಿಲೆ ॥೧॥

ಶರಧಿಯ ಮೊರಹಿನಂತೆ ಘನಘೋಷದಂತೆ ನಿ
ರ್ಝರರವದಂತೆ । ದುಂದುಭಿ ಸ್ವನದಂತೆ । ಕೋಗಿಲೆ
ವರನಾದದಂತೆ ಘಂಟಾನಿನದದಂತೆ ಬಂ
ಧುರದ ಶಂಖಧ್ವಾನದಂತೆ । ಕೋಗಿಲೆ
ಮುರಜೆಯ ಸ್ವರದಂತೆ ವಾಸವ ಧ್ವನಿಯಂತೆ
ಮೊರೆವಳಿಯ ಝೇಂಕಾರದಂತೆ । ಕೋಗಿಲೆ
ನೆರೆದ ಕಿಂಕಿಣಿಯ ಮೇಲುಲಿಯಂತೆ ವೀಣೆಯಿಂ-
ಚರದಂತೆ ಪೊಸ ಪರಿಗಳಿಂದ । ಕೋಗಿಲೆ ॥೨॥

ಯೋಗಿಗಳಿಗಣಿಮಾದಿ ಸಿದ್ಧಿಗಳು ವಾದಿಗಳಿ
ಗಾಗಮಂಗಳು ಚಂದನಾದಿ । ಕೋಗಿಲೆ
ಭೋಗಿಗಳಿಗೊಲವೀವ ಸವಿಗಲೆಯೊಳಿಹ ಪರ ವಿ-
ರಾಗಿಗಳಿಗಹ ಸುಖಾಳಿಗಳು । ಕೋಗಿಲೆ
ಬೇಗದೊಳು ನಿನ್ನ ಧ್ವನಿಗೇಳಿ ಕೈಸಾರುತಿಪ
ವಾಗಿ ಗುರು ಶಂಭುಲಿಂಗವನು । ಕೋಗಿಲೆ
ಕೂಗಿ ಕರೆದೆನಗೆ ತೋರಿಸಿದೆ ನಿನ್ನಂತೆ ಸಖ
ರಾಗಿ ಮತ್ತಾರುಂಟು । ಕೋಗಿಲೆ ||೩||

ಪದ ೧೧ ರಾಗ : ಮಾಳವ

ಯೋಗಿ ನಿಜಾನಂದದೊಳು ನುಡಿಸುವ ವೀಣೆ
ರಾಗ ರಸದ ತರಂಗಿಣಿ ನೋಡು ರಮಣಿ ॥ಪಲ್ಲ॥

ತನುವೆಂಬ ಹೊಳಹಿಗೆರಡು ದಿಟ್ಟಿಯೆಂಬ ಕಾಯ
ನನುವರಿದಲುಗದಂತಿರೆ ಕೀಲಿಸಿ
ಸನುಮತವಾದ ಷೋಡಶಾಧಾರವೆಂಬ ರವ್ಯ
ಮೆನಿಸುವ ಮೆಟ್ಟುಗಳ ನೆಲೆಯನಾರೈದು ನೋಡಿ ॥೧॥

ತೀಿದೇಳು ಮುಖ್ಯ ನಾಡಿಯೆಂಬ ತಂತಿಗಳನು ನಿ
ರ್ಮಲ ಮತಿಮನವಸುವಿಂದ್ರಿಯಂಗಳ
ಕುಲವೆಂಬ ತಿರಪುಗಂಭದೊಳು ಬಂಧಿಸಿ ಮೂಲ
ದೊಳಗಣ ತಾರೆಯೆಂಬ ಕಲೆಯ ಶ್ರುತಿಯನೆತ್ತಿ ॥೨॥

ವರ ಶಂಕರಾಭರಣವನು ಮೇಳೈಸಿ ಯೋಗ
ಕರಣವೆಂಬಂಗುಲಿಯನಿಟ್ಟು ಬಾಜಿಸಿ
ಪರನಾದವೆಂಬ ಗೀತವನು ಗುರುಶಂಭುಲಿಂಗ
ವರಿದೆಂದು ಮೆಚ್ಚಿ ಮುಕ್ತಿಪದವೀಯೆ ಕೇಳಿಸುವ ॥೩॥

ಇತಿ ಲಯಯೋಗ ಸಮಾಪ್ತ.

ಹಠಯೋಗ

ಪದ ೧೨ ರಾಗ : ಸಾರಶಿ

ಯೋಗದಂಗವೆಂಟು ಭೇದವಾಗಿ ತೋರ್ಪವವನು ತಿಳಿವು
ದಾಗಮ ಪ್ರಮಾಣದಿಂದೆ ಮುಕುತಿಗೆಳಸುವಧಿಕರು ॥ಪಲ್ಲ॥

ವಿದಿತಯಮವಹಿಂಸತಾದಿ ದಶವಿಭಾಗವಹುದು ನಿಯಮ
ವದು ತಪೋವಿಧಾನವಾದಿ ಪಂಚ ಯುಗಸಮೇತವು
ಪದುಳದಾಸನವೆ ಮಹೋತ್ಪಲಾದಿ ನಿಖಿಳ ಮುಖವೆನಿಪ್ಪ
ದೊವವಿರೇಚಕಾದಿ ಸಪ್ತರೂಪವಸು ನಿರೋಧನ ॥೧॥

ಚರಿಸುವಿಂದ್ರಿಯವನುಪಾಯದಿಂದೆ ಸೆಳೆವುದೊಳಗೆ ಪ್ರತ್ಯಾ
ಹರಣವದು ೧ಶಿವಾಂಶ್ರಯದೊಳು ಚಿತ್ತವಿಹುದೆ ಧಾರಣ
ಹರಪದಾನುಚಿಂತೆ ಧ್ಯಾನವೆನಿಪುದಾಸ್ವರೂಪದಲ್ಲಿ
ಮರಳವಚಲಭಾವವಾಗೆ ಪರಸಮಾಧಿ ನಿಜವದು ॥೨॥

ತಿಳಿಯೆ ಮೊದಲು ನಾಲ್ಕು ಬಾಹ್ಯವೆನಿಸಿ ಕಾಮ ಕೋಪ ರೋಗ
ಕಲುಷಸಂತತಿಯನು ಕೆಡಿಪವಂತರಂಗವೆನಿಸುತ
ಉಳಿದ ನಾಲ್ಕು ವಿಷಯ ಮೋಹ ವಿಮತಿ ಮರವೆಗಳನೆ ನೀತಿ
ಗಳೆದು ಶಂಭುಲಿಂಗದಂಘ್ರಿಸಂಗಸುಖವ ನೀವವು ॥೩॥

ಇತಿ ಸಗುಣಾಷ್ಟಾಂಗ

---

೧ ಸುಖಾ (ಅ)

ಪದ ೧೩ ರಾಗ : ನಾದನಾಮಕ್ರಿಯೆ

ಪರಿವಿಡಿದು ನಿರ್ಗುಣಾಷ್ಟಾಂಗ ಯೋಗವನರಿವೆ
ವರಯೋಗಿಗಾನಂದಮಯ ಮುಕ್ತಿಯಹುದು ॥ಪಲ್ಲ॥

ತನುಕರಣ ವಿಷಯೇಂದ್ರಿಯವಿಸರವೆಲ್ಲರೊಳು ವಿರತಿ
ಜನಿಸಿಹುದೆ ಯಮವಾತ್ಮ ನಿಜದೊಲುಮೆ ನಿಯಮ
ವನಿತಾದಿ ವಿಷಯದೊಳುದಾಸೀನವಾಸನವು
ಕನಸೆಂದು ಬಾಹ್ಯವನು ಬಿಡುವದಸುನಿಯಮ ॥೧॥

ಬಗೆಯನೊಳದೆಗೆ ೧ವನುವೆ ಪ್ರತ್ಯಾಹರಣವಾ ಮನ
ಬಗೆದರಿವಿನೊಳು ನಿಲೆ ಧಾರಣವೆನಿಪುದು
ಮೀಗೆ ಶುದ್ಧ ಚೈತನ್ಯವಾನೆಂಬುದೆ ಧ್ಯಾನ
ವಗಲದಿರಲಾ ಬುದ್ಧಿಯದು ಸಮಾಧಿ ॥೨॥

ಪೇಳಿದಿವರೊಳು ಮೊದಲಿನೈದಂಗದಿಂದಹಿತ
ಜಾಲವಳಿದಮಲತೆಯ ಚಿತ್ತವನು
ಮೇಲಣಂಗತ್ರಯದಿ ಗುರುಶಂಭುಲಿಂಗದೊಳು
ಮೇಳೈಸಲದೆ ಯೋಗಿ ಲಕ್ಷಣಮಹುದಾಗಿ ॥೩॥

ಇತಿ ನಿರ್ಗುಣಾಷ್ಟಾಂಗ

---

೧ ವುದೆ (ಅ)

ಪದ ೧೪ ರಾಗ : ಸುವ್ವಾಲೆ (ಸಾಳಂಗ)

ಆಸನಸ್ಥಿರನಾಗಿ ಮನವಸು ನೆರೆದಕ್ಷಿ
ನಾಸಾಗ್ರದಲ್ಲಿ ನಿಂದೊಡೆ ಮುಕ್ತಿ ॥ಪಲ್ಲ॥

ಎಡದ ಹಿಮ್ಮಡದಿನಾಧಾರದೆಡೆಯನೊತ್ತು-
ತೊಡನೆ ದಕ್ಷಿಣದ ಹಿಮ್ಮಡವನು
ಮಡಗಿ ಮೇಹನದ ಮೇಲ್ಗಡೆಯೊಳು ರುಜುವೆನಿ
ಪೊಡಲಿಂದಮಿರೆ ಸಿದ್ಧಾಸವನದು ॥೧॥

ತೊಡೆ ಕಿರುದೊಡೆಗಳ ನಡುವೆರಡಂಘ್ರಿಗ
ಳಡಗಿರ್ದು ಸಸಿನವಾದೊಡಲಿಂದ
ಬಿಡದೆ ಕುಳ್ಳಿರೆ ಸ್ವಸ್ತಿಕಾಸನವಹುದೆಂದು
ತಡೆಯದಿದನು ನೋಡಿ ತಿಳಿವುದು ॥೨॥

ತೊಡೆಗಳೆರಡರ ಮೇಲಡರಿ ಮಡಂಗಳು
ಬಿಡದೆ ಕೂಡಿರಲೆಡಬಲವಾಗಿ
ಕಡು ನೇರಿತ್ತಾದೊಡಲಿಂದ ಕುಳ್ಳಿರ್ದಾ
ದೊಡೆ ಪದ್ಮಾಸನವೆನಿಪುದು ॥೩॥

ಎಡದ ಪಾದದ ಮಡವಡಿಯಾಗಿ ನಿಲೆ ಬಲ
ದಡಿ ಮಡದೆಡದ ತೊಡೆಯ ಮೇಲೆ
ಮಡಗಿರೆ ರುಜುಕಾಯದಿಂದ ಕುಳ್ಳಿರ್ದಡೆ
ನುಡಿವರದನು ವೀರಾಸನವೆಂದು ॥೪॥

ತನಗಾವ ತೆರನಿಂದೆ ಜನಿಪುದು ಧೈರ್ಯವಂ
ತನುವಾಗಿ ಕುಳ್ಳಿರ್ದು ಚಲಿಸದೆ
ಮನವಸುಗಳನು ನಿರೋಧಿಸಿವಡೆ ಸುಖಾ
ಸನವದು ಗುರುಶಂಭುಲಿಂಗವೆ ॥೫॥

ಇತಿ ಆಸನ ಭೇದಃ

ಯೋಗಪ್ರತಿಪಾದನ ಸ್ಥಲ

ಪದ ೧೫ ರಾಗ : ಮಧುಮಾಧವಿ

ಮೂರು ಬಂಧದ ಲಕ್ಷಣವನರಿದೊಡೆ ಬಂಧ
ಮೂರಳಿದಿಹುದು ಸಕಲ ಸಿದ್ಧಿ ॥ಪಲ್ಲ॥

ಅನಿಲನಿರೋಧನದಿಂದಾಧಾರವಾದಪಾನ
ದಿನಪತಿಯನು ಹೃದಯದಿ ಶಶಿ
ಯೆನಿಸುವ ಪ್ರಾಣದೊಡನೆ ಕೂಡಿ ನಡುನಾಡಿ
ಗನುಗೂಡಲದೆ ಮೂಲ ಬಂಧವು ॥೧॥

ಪರನಾಡಿ ಕಂದದೆಡೆಯ ನಾಭಿ ಚಕ್ರದು
ಪರಿ ಕೆಳಗೆಂಬೆರಡೆಡೆಯನು
ಹಿರಿದು ಬಂಧಿಪ್ಪುದುಡ್ಡಿಯಾಣಬಂಧವಹುದದು
ಜರೆ ಮರಣವನು ಜಯಿಸುತಿರ್ಕು ॥೨॥

ಗಳ ಸಂಕೋಚವನೆಸಗಿ ತನ್ನ ಚುಬುಕವ
ನಿಳುಹಿ ಹೃದಯ ಠಾಣದೊಳಗಿಟ್ಟು
ಚಲಿಸದಿರಲು ಜಾಳಂಧರ ಬಂಧವಿದರಿಂದು
ಜ್ವಲಿಪಮೃತವೆ ಶಂಭುಲಿಂಗವು ॥೩॥

ಇತಿ ಬಂಧತ್ರಯ

ಪದ ೧೬ ರಾಗ : ಭೈರವಿ

ಯೋಗಿ ಯೆಂದೆನಿಸೆನ್ನನು ವಿಷಯಸುಖ
ಭೋಗಿಯೆನಿಸದೆ ಜಗದೊಳು । ಶಿವನೆ ॥ಪಲ್ಲ॥

ಪರಚೌಕ ಮಧ್ಯದೊಳಗೆ । ರಾಜಿಸುವ
ಪರನಾದವನೆ ಬೋಧಿಸಿ । ಪೊರಗೆ
ತರುಣಿಯನುಭವದ ನುಡಿಯ । ಕೇಳುವಾ
ತುರವಿದನು ಬಗೆಗೊಳಿಸದೆ । ಶಿವನೆ ॥೧॥

ಚಲಿಸದಾಸನ ಮುದ್ರೆಯ । ಮೊದಲಲ್ಲಿ
ಸಲೆ ಸಾಂಗವೆನಿಸಿ ನಿಲಿಸಿ । ಬಳಿಕ
ಲಲನೆಯಾಲಿಂಗವನು । ಮಾಡು ವಿನಿ
ಗಲಿಯ ಮೋಹನವೆಸಗದೆ । ಶಿವನೆ ॥೨॥

ಮಂಡಲತ್ರಯದ ಮೇಲೆ । ದೀಪಿಸುವ-
ಖಂಡತೇಜವನೆ ತೋರಿ । ಬೇರೆ
ಪುಂಡರೀಕಾಕ್ಷಿಯಧಿಕ । ರೂಪನೆಡೆ
ಗೊಂಡು ಭಾವಿಸಲೀಯದೆ । ಶಿವನೆ ॥೩॥

ನಡುನಾಡಿಯುಗ್ರದಲ್ಲಿ । ಸಾರ ಸುಖ
ದೆಡೆಯಮೃತರಸವಗೂಡಿ । ಕೂಡೆ
ಕಡು ಚೆಲುವೆಯಧರಸುಧೆಯ । ಸೇವನೆಯ
ಸವಗರದೊಳೊಡವೆರಸದೆ । ಶಿವನೆ ॥೪॥

ನವ ಹೃದಯು ಕಮಲವಲರೆ । ಬಿಡದೆ ತೀ
ಡುವ ಸುಗಂಧವನೆ ತೀವಿ । ಮಿಕ್ಕಾ
ಯುವತಿಯುಸುರೊಳು । ಗಂಪನು ವಾಸಿಸುವ
ಸವಿಗುಡದೆ ಶಂಭುಲಿಂಗ । ಶಿವನೆ ॥೫॥

ಪದ ೧೮ ರಾಗ : ಧನ್ಯಾಸಿ

ಮೋಹ ಮಲಪಾಶವಿಲ್ಲದ ನಿನಗೆ ನಿದ್ರೆಯೆಂ
ದೂಪಿಸಿದೆನೆನ್ನ ಮರವೆಯ ತಿಳಿಯುವೆನಗಾವ
ಸಾಹಸವೆ ಯುದಯ ಸುಮಯಾರೋಪವಿಂತಾಗೆ
ದೇವನೀನುಪ್ಪವಡಿಸಾ ॥ಪಲ್ಲ॥

ಪರನಾದವೆಂಬ ಮುಂಗೋಳಿ ಮಿಗೆ ಕೂಗುತಿದೆ
ಪರಬಿಂದುವೆಂಬ ಮೂಡಣ ಕೆಂಪು ಮುಸುಕುತಿದೆ
ಚಿರಕಾಲದಿಂದಡಸಿದಜ್ಞಾನವೆಂಬ ತಮವಿರಲಂಜಿ ಪರೆವುತಿದೆ
ಭರದಿ ಕುಂಡಲಿಯೆಂಬ ತರಣಿ ತಲೆದೋರುತಿದೆ
ನೆರೆದುಲಿವುತಿವೆ ವಿಧಿಗಳೆಂಬ ಖಗರಾಜಿ ಬಹು
ತರ ಹೃದಯವೆಂಬ ವಾರಿಜವಲರುತಿದೆ ತಳುವದನಘನೀನುಪ್ಪವಡಿಸಾ ॥೧॥

ಮನದ ವಿಕೃತಿಗಳೆಂಬ ಕುಮುದತತಿ ಕೊರಗುತಿದೆ
ಮುನಿವ ಮಮಕಾರಗಳೆಂಬ ಚೋರರ ಭೀತಿ
ಯನುಗೆಡುತ್ತಿದೆ ಯಷ್ಟ ಮದಗಳೆಂಬ ರಕ್ಕಸರ ಸುಳುಹು ಮೈಗಾಣಿಸದಿದೇ
ಜಿನುಗುವಿಂದ್ರಿಯವೆಂಬ ಜೊನ್ನವಕ್ಕಿಗಳು ಮು
ನ್ನಿನವಿಲಾಸವ ದೊರವುತಿವೆ ಸುಕೃತವೆಂಬಖಿಳ
ಜನರುಚಿತಕರ್ಮವೆಸಗಲು ಬಯಸುತಿವೆ ನಿರಾವರಣ ನೀನುಪ್ಪವಡಿಸಾ ॥೨॥

ದುರಿತ ಬಲವೆಂಬ ಕೌಶಿಕನು ಕಂಗೆಡುತಲಿದೆ
ಹರವರಿಯ ಸಂಸಾರವೆಂಬ ಕನಸಳಿವುತಿದೆ
ಪರಿವಿಡಿದು ಪಾರಬ್ಧವೆಂಬ ವಿಷಯಾಳಿ ಗೋಚರಿಸುತಿದೆ ಮತಿ ದೃಷ್ಟಿಗೆ
ಪರಿವ ಗಂಗಾಯಮುನೆಯೆಂಬ ಕೋಕಂಗಳೊಡೆ
ವೆರವುತಿದೆ ಭಾವನೆಗಳೆಂಬ ತಾರೆಗಳು ಮೈ
ಗರವುತಿದೆ ಪಮ್ರನಿರವೆಂಬ ಶಶಿ ಮಾಜುತಿದೆ ವರದ ನೀನುಪ್ಪವಡಿಸಾ ॥೩॥

ಹವಣಿಸದ ಕರಣ ಮುದ್ರೆಗಳೆಂಬ ಛಜಕರೊ
ಪ್ಪುವಯೋಗವೆಂಬ ಪೂಜೋಪಚಾರಂಗೊಡಲು
ಸವಿನಯದೊಳವಧರಿಸಿ ಚೌಕ ಮಧ್ಯದ ರತ್ನಸಿಂಹಾಸನಾಗ್ರದಲ್ಲಿ
ತವೆ ರಾಜ ವಿಭವದೊಳು ರಂಜಿಸುತ್ತಿರೆ ಲಕ್ಷ್ಯ
ನಿವಹವೆಂಬತುಳ ಭೂಪಾಲರೋಲಗವೀಯೆ
ಕವಿವ ದಶವಿಘ್ನಂಗಳೆಂಬರಿಗಳೋಡುವರು ನಿತ್ಯ ನೀನುಪ್ಪವಡಿಸಾ ॥೪॥

ಆ ಸಮಯದನುಭಾವವೆಂಬ ಪರಿಚಾರಕನ
ಲೇಸೆನಿಪ ನಿಜ ಮಂತ್ರವೆಂಬ ವಿಜ್ಞಾಪವನವ
ನೋಸರಿಸದಾಲಿಸಿ ಪರಾಕುಮಾಡದೆ ನೋಡಿ ಸನ್ನಿಧಿಯೊಳಿರ್ದೆನ್ನನು
ಮೋಸವಾಗದಿರಣುಗ ನಿನಗಿನ್ನು ಭವಬಂಧ
ವಾಸರಿಲ್ಲೆಂದಭಯವಿತ್ತು ತವ ಪದಕಮಲ
ವಾಸದೊಳಗಿಂಬಿಟ್ಟು ಸಲಹು ಶಂಭುಲಿಂಗವೆ ಘಳಿಲನೆನುಪ್ಪವಡಿಸಾ ॥೫॥

ಹಠಯೋಗ ಸಮಾಪ್ತ

ರಾಜಯೋಗ

ಪದ ೧೮ ರಾಗ : ಶ್ರೀರಾಗ

ಯೋಗಿಗಲ್ಲದೆ ದೊರೆವುದೆ ಪರತರ ಮುಕುತಿ ॥ಪ॥

ಚಿರಸುಖಾಸನತೆ ಶರೀರದ ಸಸಿನತೆ
ಕರಣನಿಕರದ ನಿಶ್ಚಲತೆ
ಮರುತಮನ ದಿಟ್ಟಿಗಳೊಂದುಗೂಡುತೆ
ವರ ಹೃದಯಾನುಸಂಧಾನತೆ ॥೧॥

ಮಂಡಲತ್ರಯದ ತಾರಾಗ್ರದ ನಭದೊಳ
ಖಂಡ ಚಂದ್ರೋದಯವಾಗಲು
ಕಂಡು ತದೀಯ ಸುಧೆಯನು ದಣ್ಣನೆ ದಣೆ
ದುಂಡು ನಿಜಾನಂದಲೀನತೆ ॥೨॥

ಮೂರು ಹೊಳೆಯ ನಡುವಣ ನಾದವನು ಕೇಳಿ
ಮಾರುತದನು ವಾಗೀಶ್ವರಿಯೊಳು
ಬೇರಾಗದೊಂದೆನಿಸಿದ ಚಿತ್ತನೊಡನೊಂದಿ
ತೋರುವ ಶಂಭುಲಿಂಗೈಕ್ಯತೆ ॥೩॥

ಪದ 1೯ ರಾಗ : ದೇಶಿ

ಪರತತ್ವವದು ತನಗೆ ತಾನೆ ಗೋಚರವಹುದು
ವಿರಚಿಸಿದ ವೀಮೂರು ಲಕ್ಷ್ಯವರಿದಂದು ||ಪಲ್ಲ||

ತನುಮಧ್ಯವಿಡಿದಖಿಳ ಚಕ್ರಭೇದಿನಿಯಾಗಿ
ಮಿನುಗುತಿಹ ನಡುನಾಡಿಯಂತರಾಳದೊಳು
ವನಜಸೂತ್ರದ ಹವಣೆನೆಳೆ ಮಿಂಚುಗಳಿಗಧಿಕ
ವೆನಿಪ ತೇಜವನು ಮನದೊಳಗೆ ಭಾವಿಸಲು ||೧||

ಕರಿದು ಪೊಗೆ ಕೆಂಪು ಸಿತ ಪೀತ ವರ್ಣಂಗಳನೆ
ಪರಿವಿಡಿದು ನಾಸಾಗ್ರದಲ್ಲಿ ಪನ್ನೆರಡು
ವರದಶಕವೆಂಟಾರು ಚತುರಂಗುಲದ ಮಿತಿಯೊ
ಳಿರಿಸಿ ದೃಷ್ಟಿಯನು ಚಲಿಸದೆ ನಿರೀಕ್ಷಿಸಲು ||೨||

ಪಲವು ಶಶಿ ರವಿ ತಾರೆ ಶಿಖಿ ರನ್ನವೆಳಗುಗಳ
ನೊಳಕೊಂಡು ನೇಮ ಸೀಮೆಯನುಳಿದು ಮೆರೆವ
ಸುಲಭ ಗುರುಶಂಭುಲಿಂಗದ ಪಾದಪಂಕಜ
ನಲಸದನುಸಂಧಾನಿಸುತ್ತೆ ಸುಖಮಿರಲು ||೩||

ಪದ ೨೦ ರಾಗ : ಸೌರಾಷ್ಟ್ರ

ತಾರತ್ರಯದ ವಿಚಾರವೆಲ್ಲರನು ಸಂ
ಸಾರಸಾಗರವನುತ್ತರಿಸದಿಹುದೆ ॥ಪಲ್ಲ॥

ಭೂತಪಂಚಕದ ಪಂಚೀಕರಣದಿಂ ಪುಟ್ಟಿ
ದಾ ತತ್ವಪಂಚವಿಂಶತಿಯುವನರಿದು
ನೇತಿಗಳೆದು ನಿಜಪದವೆ ತಾನೆಂಬ ಪು
ನೀತ ಭಾವನೆಯೆ ಸಾಂಖ್ಯವಿದು ಪೂರ್ವತಾರೆ ॥೧॥

ಧರಣಿಯ ತಾಣವೆರಡರೊಳು ಶಿಖಿಯು ಮಂ
ದಿರಯುಗದೊಳು ನಭದೆಡೆಯುಗಳದೊಳು
ಕರ ಶಾಖೆ ಋತುಗೂಡಿ ಬಲಿದು ನೋಡುತೆ ಕೇಳು
ತಿರೆ ಮಧ್ಯ ತಾರೆ ತಾನಿದು ಬಾಹ್ಯಮುದ್ರೆ ॥೨॥

ಪೊರಗಣ ವಿಷಯ ವಿಭ್ರಮತೆ ಗಾಣಿಸದೆವೆ
ದೆರದಕ್ಷಿತುಂಬಿ ಸೂಸದೆ ನಿಂದ ವಾಯು
ಕರಿಗೊಂಡು ಶಂಭುಲಿಂಗದೊಳಿಹ ಮನವಿದ
ನರಿಯಲಂತರ ಮುದ್ರೆಯುದಮನಸ್ಕತಾರೆ ॥೩॥

ಪದ ೨೧ ರಾಗ : ಶಂಕರಾಭರಣ

ಕಣ್ಣ ಮುಂದೆ ಕಾಣಿಸುತಿದೆ ಪರವಸ್ತುವಿದ
ಸಣ್ಣಗಳರಸಿ ಬೇರೆ ಬಳಲುವರದೇಕೆ ॥ಪಲ್ಲ॥

ಕರಿಯ ಬಿಳಿಯ ಕೆಂಪಿನರುಣೇಂದು ಶಿಖಿಯ ಸು
ಸ್ಥಿರವಾದ ಮಂಡಲತ್ರಯದ ಮಧ್ಯದೊಳು
ನೆರೆದು ತೋರುವ ನಾನಾಪರಿಯ ಬಿಂದುವಿನ ಬಂ
ಧುರ ಕಾಂತಿ ಕೋಟಾನುಕೋಟಿಯ ನಡುವೆ ॥೧॥

ಮುಕುಳತಮಾಗಿ ಮಿಡುಕದಾಲಿ ರೇ
ಚಕ ಪೂರಕವಿಲ್ಲದಿಹ ಗಂಧವಹನನ್ಯ ವಿಷಯ
ವಿಕೃತಿ ಸೋಂಕದೆ ನಿಂದ ಮನವಚ್ಚಳಿಯದೊಪ್ಪು
ವಕಳಂಕಮತಿ ಮರೆಯದೆ ನಿರೀಕ್ಷಿಸಲು

ಇದಿರಿಟ್ಟು ಸಕಲವೆಲ್ಲವನು ನೋಡುವ ದಿವ್ಯ
ಹೃದಯಕಮಲಕರ್ನಿಕಾಪೀಠದೊಳಗೆ
ಸದಮಳ ಶಂಭುಲಿಂಗವೆ ಸಚ್ಚಿದಾನಂದ
ಪದವೆನಿಸಿಹುದಾಗಿ ಪರಿಭಾವಿಸಿದೊಡೆ ॥೩॥

ಪದ ೨೨ ರಾಗ : ಮಧು ಮಾಧವಿ (ಶಂಕರಾಭರಣ)

ಪರತತ್ವದಿರವನು ಕರತಳಾಮಳಕದ
ಪರಿಯಂತೆ ಕಾಣಿಸುವೆಡೆಯಾವುದೆನಲು ॥ಪಲ್ಲ॥

ಕಪ್ಪುರವೆರೆದಗ್ರದೊಳು ತನ್ನಿರವನು
ಕಪ್ಪುರವಿಡಿದೊಪ್ಪುಗೆಡಿಸುವನೊಳಗೆ
ಕಪ್ಪುರದೊಳಗಪ್ಪಿಗೆಣೆಯು ಮುಗಿಲ ಮಿಂಚಿ
ನೊಪ್ಪವೆ ನಿಜವೆಂದು ತಿಳಿವೆಡೆ ತಾನೆ ॥೧॥

ಪೊರಗೆ ತೋರುವ ಸತಿ ಪತಿಗಳ ಮೇಲಣ
ಮೆರೆವಾತುಮನೆಯ ಸುಪ್ಪುರದಂಬರದೊಳು
ನೆರೆ ನೀವಾರ ಕಂಟಕದ ತನುವಿನ ಪೊನ್ನ
ತೆರನದು ತತ್ವವೆಂದರಿವೆಡೆ ತಾನೆ ॥೨॥

ಜಲದ ಮೇಲಾಡುವ ರಾಜಹಂಸನ ಗೂಡ
ಕೆಲದ ಸಾಸಿರ ಸುವರ್ಣದ ಮಧ್ಯದಲಿ
ಸುಲಲಿತ ಶಂಭುಲಿಂಗವೆ ಕಂಜದೆಳೆಯಂತೆ
ಬೆಳಗುಂತಿರ್ಪುದನು ಭಾವಿಸುವೆಡೆ ತಾನೆ ॥೩॥

ಪದ ೨೩ ರಾಗೆ : ಸೌರಾಷ್ಟ್ರ (ವಸಂತ)

ಯೋಚಿಸಿ ಪೇಳಿದವನಿಗುಂಟು ಮೂರು ಕಣ್ಣಿ-
ನಾ ಚತುರತೆಯುಳ್ಳದಿದೇನೆಂಬುದನು ॥ಪಲ್ಲ

ಮೊದಲೊಂದರೊಳು ಮೂವರಬಲೆಯರೆನಿಸಿ-
ಹುದು ಪುಣ್ಯ ಫಲವನು ಪಡೆವುದೊಂದರೊಳು
ಸದಮಳರು ಪುಟ್ಟುಗೆಡಿಪುದೊಂದರೊಳು
ನದಿಗಳನೇಕದ ಜನನಿಯೊಂದರೊಳು ॥೧॥

ಒಂದರೊಳು ಬೆಸಗೊಂಬುದೊಂದರೊಳು ಪೊರೆವು
ದೊಂದರೊಳೆರಡನು ತಾನೊಂದುತಿಹುದು
ಒಂದರೊಳು ಬೆಳಗುಗತ್ತಲೆಗಳುಕದ ಪೆರ
ತೊಂದರೊಳು ಬಂದು ತನ್ನ ಮುಂದುಗೊಂಡಿಹುದು ॥೨॥

ಹೆಣ್ಣು ಮಕ್ಕಳುಗಳೊಂದಾಟ ಮುಳಿದು ಪೊಗೆ
ವಣ್ಣದೊಂದೆರಡು ಬಟ್ಟೆಗಳನುಟ್ಟಿಹುದು
ತಣ್ಣನೆವುತಜ್ಞೆಯೆನಿಪುದಾಸುರವೃತ್ತಿ
ಬಣ್ಣಿಸಿಕೊಂಬುವದದೊಂದೆರೆಡೆಯೊಳು ॥೩॥

ತಿರುಗುತಿಹುದು ನಿಲ್ಲದೊಂದರೊಳದು ನಿಂದು
ಪರಿವುದೊಂದರೊಳೆರಡೆಂಟೆಂಬರವನು
ನೆರೆವಳತೆ ಬಂದುದೊಂದೆಡೆಯೊಳು ತೆರೆ
ದೆರೆ ತನಗದು ಭೋಗನೀವುದೊಂದರೊಳು ॥೪॥

ಕುಂದದಾನಂದವನೀವುದದೊಂದದತಿಬಲ್ಲಿದರ
ಸಂದು ಕಳಿವಡೆದಿಹುದದೊಂದೆಡೆಯೊಳು
ಮುಂದನಾಡಿತೋರ್ಪುದೊಂದರೊಳಾಡದಿಹುದದು
ಸಂದು ಶಂಭುಲಿಂಗದೊಲವಿತ್ತುದೊಂದರೊಳು ॥೫॥

೭೪ ರಾಗ : ಸೌರಾಷ್ಟ್ರ

ಕೊಳನಿದೊಂದತಿ ಕೌತುಕದೊಳು ಕಾಣಿಸುತಿದೆ
ಕಳಹಂಸ ನಿಳಯವೆನಿಸಿ ನೀರೆ ನೋಡೆ ॥ಪಲ್ಲ॥

ಸರಸಿಜದೊಳಗೆ ತಾನಿದೆ ತನ್ನೆಡೆಯಣಿಂಬು
ಪರಿವುದು ಪೊರಸೂಸಿ ಬಿಸಿ ತಣ್ಣ ತಾಗಿ
ಎರಡೆನಿಸಿಹುದೇಕವಹುದು ಕಾಲಾದಿ ಸಂ
ಚರಣದಿ ಪುರುಷರೂಪವನು ತಾಳಿದೆಕೊ ॥೧॥

ಅಳಿಮಿನು ಮಿಂಚು ಕೈರವ ಕಂತು ಶರವ್ಯಗ
ನಳಿನ ಮಯೂರ ಚಕೋರೇಂದು ಕಿರಣ
ತೊಳಗುವ ತಾರೆ ಮಲ್ಲಿಗೆ ಬಗೆಗೊಂಡು ತ
ನ್ನೊಳು ವಿಶ್ವವಿಷಯ ಸಂಪದ ಸಿದ್ಧಿವಡೆದು ॥೨॥

ಬಿಸಿಲುರಿ ಜೊನ್ನದವರ ಗುಣ ಮೂಲಿಗ
ರಸುರಾಂಗ ಜಂಬಾರಫಣಿ ವಾಯುವರ್ಣ
ವಿಸರವಿಡಿದು ಶಂಭುಲಿಂಗದ ನಿಜವಾಗಿ
ದೆಸೆದೋರ್ಕೆವಡೆದು ದ್ವಾರಾವತಿಯೆನಿಸಿ ॥೩॥

ಪದ ೨೫ ರಾಗ : ದೇಶಿ

ನೀನರಿದು ನೀರೆ ಪೇಳೆನಗೆ ಕಸ್ವರಪಾಗಿ
ನಾನೀಗಳೊಂದೊಂದನೊಲಿದು ಕೇಳುವೆನು ॥ಪಲ್ಲ॥

ಕರಣಾದಿ ಕಾಲಾಟವೇನೇತರಿಂದಹುದು
ಪರನ ತನುವೆಂಟಗಲದೆಲ್ಲಿ ಕೂಡಿಹವು
ಎರಡನೆಯ ಮಾತು ಪ್ರೈಪೆತ್ತಿರ್ಪದಾವ ನೆಲೆ
ಕರುಣರಸವಾವುದರ ಕಡೆಯಿಂದಲಹುದು ॥೧॥

ಶಿವನು ಶಕ್ತಿಗಳೆರಡುಂ ಕಾಣಿಸುತ್ತಿಹವೆಲ್ಲಿ೧
ಶಿವನ ಚಿತ್ತದವನರುಪುವ ಮಾರ್ಗವೇನು
ಶಿವಯೋಗ ಮುದ್ರಾನುಭವದ ಬೀಡಾವುದು
ಶಿವಲಿಂಗದೆಡೆಯನೇನೆಂದು ೨ಸೂಚಿಪರು೨ ॥೨॥

ಶರೀರವಿಡಿದರ ವಿಷಯಭೋಗಾಶ್ರಯವೇನು
ಕರಪೀಠದಿಷ್ಟವೆನಿಸುವ ಶಂಭುಲಿಂಗವು
ಗುರುವಕ್ತ್ರದೊಳಾವದೆಸೆಯಿಂದ ಬಂದುದು ಮನದ
ಪರಿಣಾಮ ಪರವಶಪದೆಲ್ಲಿ ಪೇಳುವರು ॥೩॥

---

೧ ಕೂಡಿಪ್ಪುದಾವ ನೆಲೆ (ಅ) ೨ ಪೇಳುವರು (ಅ)

ಪದ ೨೬ ರಾಗ : ಸೌರಾಷ್ಟ್ರ (ಸಾವೇರಿ)

ನಿನ್ನ ಕಣ್ಣಿಂದ ಕಾಣಲವೊ ನೀನರಿವೆಂಬ
ಸನ್ನೆಯನನ್ಯಭಾವನೆಯುಳಿದು ॥ಪಲ್ಲ॥

ಮೂರು ಬಣ್ಣಗಳು ಗುಣಾಕ್ಷರ ದೇವತೆ
ಮೂರು ಕಾಲವಸ್ಥೆ ತನು ಜೀವರು
ಮೂರು ವೇದಾತ್ಮಾದಿಗಳು ದೃಶ್ಯವಾಗಿಂತು
ತೋರುತಿರ್ಪವು ನೀನೆ ದೃಶಿಯೆಂಬುದ ॥೧॥

ರವಿ ಸೋಮ ಶಿಖಿ ಮೂಡಲದ ಕಾಂತಿಯಿಂದೆ ತೋ-
ರುವವೆಂತು ಘಟಪಟಾದಿಗಳಂತುಟು
ವಿವಿಧ ತತ್ವಂಗಳು ನಿನ್ನ ಬೆಳಗಿನಿಂ
ದವೆ ರಂಜಿಸುವದಿದು ನಿಜವೆಂಬುದ ॥೨॥

ಸಕಲಜ್ಞನಖಿಳೇಂದ್ರಿಯಾದ್ಯನಮಳಯೋಗಿ
ನಿಕರಹೃದಯವಾರಿಜ ಹಂಸನು
ಸಕಲಾರ್ಥ ಸಾಧಕನಹ ಶಂಭುಲಿಂಗವೆ
ಸಕಲಾನುಭಾವದಿ ನೀನಹುದೆಂಬುದ ॥೩॥

ಪದ ೨೭ ರಾಗ : ವಡ್ಡಿ (ಭೈರವಿ)

ಬಹುಕೃತ್ಯವಳಿದಾತ್ಮಯೋಗನಿದ್ರೆಯೊ
ಳಿಹ ಮುಕ್ತಸಿರವ ನೋಡು ರಮಣಿ ॥ಪಲ್ಲ॥

ಪರ ವಜ್ರಾಸನದಿಂದೆ ಸಮನೆನಿಪ ಸು
ಸ್ಥಿರವಾದ ತನುವೆಂಬ ಸಜ್ಜೆವನೆಯು
ಕರಣನಿಕರವೆಂಬ ಬಾಗಿಲನೆಲ್ಲವ
ನಿರದೆ ಷಣ್ಮುಖಿಯೆಂಬ ಕದವಸಿಕ್ಕಿ ॥೧॥

ನಡುನಾಡಿ ಗಂಭದೊಳು ಮೂಲ ಶಿಖಿಯೆಂಬ
ಸೊಡರ ಬೆಳಗನೆತ್ತಿ ಬ್ರಹ್ಮರಂಧ್ರ
ದೆಡೆಯುಣಂಬುಜವೆಂಬ ಸಿರಿಮಂಚವ
ನಡರಿ ಪರಮಶಾಂತರೊಡನೊರಗಿ ॥೨॥

ಬಳಿಕ ಶಾಂಭವಿ ಮುದ್ರೆಯಿಂದೆ ಲೋಪನಚಂ
ಗಳನೊಯ್ಯನೆರೆ ಮುಚ್ಚಿ ಮೇಲೆ ಕವಿವ
ಬೆಳಗಿನುನ್ಮನಿಯೆಂಬ ಸುಖಸುಪ್ತಿಯ
ಜ್ವಳಿಯುದೆ ಗುರುಶಂಭುಲಿಂಗವೆನಿಸಿ ॥೩॥

ಇತಿ ತಾರಕತ್ರಯ

ಪದ ೨೮ ರಾಗ : ಜಾಪದಿ (ಸಾಳಂಗ)

ಪರಿಭಾವಿಸಲು ನಾಲ್ಕುತೆರದೊಳೀ ಮನವೆ ಸಂ
ಚರಿಸುತಿರ್ಪುದು ಪೇಳ್ವೆನದೆನಿಂತು ॥ಪಲ್ಲ॥

ಪದುಳವಿರದೆ ಕಾಲತ್ರಯದೊಳು ವಿಷಯ ಸಂ
ಪದವನೆಳಸಿ ಚಿಂತೆಗೊಳಗಾದ
ಒದವಿ ತಾಮಸ ಹೃದಯದ ಹೀನವೃತ್ತಿಯೆಂ
ಬುದು ತಾನೆ ವಿಕ್ಷಿಪ್ತವೆನಿಸುವದು ॥೧॥

ಯೋಗದೊಳಂತರಂಗದೊಳೊಮ್ಮೆ ಬಾಹ್ಯದ
ಭೋಗ ಸಂತಾನ ವಿಧಿಯೊಳೊಮ್ಮೆ
ರಾಗಿಪ ರಾಜಸವಾದ ಚಿದ್ವೃತಿಯೆ ಗ
ತಾಗತವಿದು ಮಧ್ಯವೆನಿಸುವದು ॥೨॥

ಪೆರೆತೊಂದು ವಿಷಯಮೊಳೆರಗದಂತರವಾಗಿ
ಮರೆವ ತತ್ವದೊಳೆಡೆಯುಡಗದೆ
ಕರಿಗೊಂಡು ಸತ್ವದುತ್ತಮ ಬುದ್ಧಿಸಿಲಲದ
ನರಿಯಲು ಸಂಶ್ಲಿಷ್ಟವೆನಿಪುದು ॥೩॥

ನಾನು ನೀನದಿದೆಂಬುದೇನು ತೋರದೆ ಸಚ್ಚಿ
ದಾನಂದ ಬೋಧಾನುಭವದೊಳು
ಮಾನಸವಡಗಿ ಸುಷುಪ್ತಸಂತಿರಲು ಸ್ವ
ಲೀನವತ್ಯಧಿಕ ನಿರ್ಗುಣವಿದು ॥೪॥

ಇವರೊಳುತ್ತಮವೆನಿಸುವ ಮೂರನೆಯದಾಗಿ
ಹವಣಿಸಿ ನಿಂದ ಚೇತನವನು
ತವೆ ತುರಿಯಾತ್ಮಕವನೆ ಮಾಡಿ ಶಂಭುಲಿಂ
ಗವೆ ತಾನಾದಿರವದು ನಿಜಮುಕ್ತಿ ॥೫॥

ಪದ ೪೯ ರಾಗ ಸೌರಾಷ್ಟ್ರ

ತೊಲಗಿಸಿ ತನ್ನೊಡನಾಡಿಗಳನು ಮುಕ್ತಿ
ಲಲನೆಯನೊಡಗೂಡಿದನ ನೋಡೆ ರಮಣಿ ॥ಪಲ್ಲ॥

ತನುವೆಂಬ ಸಜ್ಜೆಮನೆಯ ಚೌಕ ಮಧ್ಯವೆಂ
ದೆನಿಸುವ ಸಿರಿಮಂಚವಡರಿ ಮುಂದೆಸೆವ
ಮನವೆಂಬ ಸಖನಿಂದ್ರಿಯವೆಂಬ ಭೋಗ ಸಾ
ಧನವನೀವರಸುವೆಂಬ ಪರಿಚಾರನು ॥೧॥

ನೆಲಸಿದಾರಧ್ವವೆಂಬನುಕೂಲ ಜನವನು
ಜ್ವಲನಾದಬಿಂದುಗಳೆಂಬ ಗಾನರನು
ನಲಿವ ಶಕ್ತಿಗಳೆಂಬ ಸಖಿಯರನಧಿದೈವ
ಕುಲವೆಂಬ ಸಕಳಕೋವಿದರ ಮೇಳವನು ॥೨॥

ಇನಿತೆಲ್ಲರನು ಪೊರಮಡಿಸಿ ರಮಿಸುವೆನೆಂ
ಬನಿತರೊಳಾದುವಚ್ಚರಿಯುದ ಮುಕ್ತಿ
ವನಿತೆಯನೊಲಿಮೆಯನುಳ್ಳ ತನ್ನನು ಕಾಣ
ದನುಪಮ ಶಂಭುಲಿಂಗವೆಯಾದನಮ್ಮ ॥೩॥

ಇತಿ ರಾಜಯೋಗಃ

ಶಿವಯೋಗ

ಪದ ೩೦ ರಾಗ : ಕಾಂಬೋಧಿ (ಭೈರವಿ)

ಪರತರ ಶಿವಲಿಂಗವೆಳಸಿ ನಿನಗಾಗಿ
ಕರ ಕಂಜದೊಳು ಕಾಣಿಸಿತು ಯೋಗಿ ಯಜಿಸು ॥ಪಲ್ಲ॥

ಮೊದಲ ಪೀಠವೆ ಬಿಂದುವಾಗಿ ಮೇಲೆ ನಿಂದೆ
ಸೆದ ಪೀಠವದು ನಾದವಾಗಿ ಗೋಮುಖವೆ
ಸದಮಳ ಕಳೆಯಾಗಿ ಸಕಲಾತೀತನೆ ಲಿಂ
ಗದ ನಿಜವಾಗಿರಲದರೊಳುಜ್ವಲಿಪ ॥೧॥

ತರುವಿಸ್ತಾರವನೊಳಕೊಂಡು ಬೀಜದ
ಪರಿಯಂತರಾರಧ್ವಗಳಿಂಬು-ವಡೆದ
ಪರಬೊಮ್ಮಕಾಶ್ರಯವಾಗಿಹ ನಿಜಶಕ್ತಿ
ಪೆರಸಿ ತನಗೆ ತಾನಾಧಾರವಾಗಿರ್ಪ ॥೨॥

ಮೂರು ಮಂಡಲವನುಚ್ಚಳಿಸಿ ಗುಣವರ್ಣ
ಮೂರನು ಮೀರಿ ಬೋಧಾಮೃತ ಮಾತ್ರವಾಗಿ
ತೋರುವ ಗುರುಶಂಭುಲಿಂಗವದು ತಾನು ನಿಜವಾಗಿ
ಬೇರೆನಿಸದೆ ನಿನ್ನ ಕಣ್ಣ ಮುಂದಿಹುದು ॥೩॥

ಪದ ೩೧ ರಾಗ : ಸೌರಾಷ್ಟ್ರ

ದಿನದಿನದುಚಿತವೇಳೆಯೊಳುಪಚರಿಪುದು
ನಿನಗೆ ಕುಳವೆಲೆ ಯೋಗಿ ನೀನೆ ಬಿಡದಿದನು ॥ಪಲ್ಲ॥

ಶಿವನ ಮೈವೆಳಗು ತಾನಾದ ಭಸಿತವನು
ಶಿವನ ಮುಖವಾದಕ್ಷ ಮಾಲೆಯನು
ಶಿವನ ಪೆಸರಾದ ಪಂಚಾಕ್ಷರ ಜಪವನು
ಶಿವನ ತದ್ರೂಪವಾದಿಷ್ಟವನ್ನು ॥೧॥

ಶಿವನ ಕರುಣಾತ್ಮಕವಹ ಸುಪ್ರಸಾದವನು
ಶಿವನ ಸುಖಮಯ ಪಾದತೀರ್ಥವನು
ಶಿವನ ಸೌಭಾಗ್ಯ ಸಾಕಾರವಾದುಮೆಯನು
ಶಿವನ ಪಲದಿರವಿನ ಪ್ರಮಥರನು ॥೨॥

ಶಿವನಾಪ್ತ ಸಖಿಯಾದ ಶಕ್ತಿದೇವತೆಯನು
ಶಿವನ ಕೀರ್ತಿಯ ಮೂರ್ತಿವೇದವನು
ಶಿವನ ಚಿತ್ಕಲೆಯಾದ ತನ್ನನು ಶಂಭುಲಿಂ
ಗವನರುಪಿದ ಗುರುಚರಣವನು ॥೩॥

ಪದ ೩೨ ರಾಗ : ಫಾರಶಿ

ಪ್ರಾಣಲಿಂಗವಿದನು ಗುರುವಿನಾಣತಿಯೊಳು ಕೇಳಿ ನೋಡಿ
ಮಾಣದೇಕಚಿತ್ತದಿಂದ ಧ್ಯಾನಿಪನೆ ಕೃತಾರ್ಥನು

ಆಸುವೆ ರವಿಯುಪಾನಮಿಂದುವೆನಿಪುದಿವರೊಳಗಲದೊಂದಿ
ಮಿಸುಪಷಾಂತಸಾಂತಮಾದ ಶೈವಶಕ್ತಿ ಬೀಜದ
ಬೆಸುಗೆಯಾದ ತಾಣದೇಕವರ್ಣದಖಿಳ ವೃತ್ತಿಮಯದ
ಪೆಸರು ದಳೆದು ಶ್ರವಣವಿಷಯಮಾದ ಪರಮನಾದವೆ ॥೧॥

ಮೂಲ ಲಿಂಗ ನಾಭಿ ಹೃದಯ ಕಂಠ ಕೂರ್ಚ ಗೋತ್ರ ಮೊತ್ತ
ಜಾಲದಂಬುಜಾಕ್ಷರಾದಿ ದೈವಮಂತ್ರ ಶಕ್ತಿಯ
ಮೇಳದೊಡನೆ ಕೆಂಪು ಮಿಂಚು ರನ್ನ ಚಿನ್ನ ಸೊಡರು ಚಂಚ
ಲಾಲತಾಗ್ನಿ ದೀಪ್ತಿರೂಪದೋರ್ಪ ದಿವ್ಯಬಿಂದವೆ ॥೨॥

ಪಲವು ಪಿವರವಾಂತ ಕುಂಭದೊಳಗಣಚಲ ದೀಪದೊಂದು
ಬೆಳಗು ಮಸಗುವಂತೆ ದೇಹ ಕರಣನಿಕರ ಮುಖದೊಳು
ಪೊಳೆದು ವಿಶ್ವದೃಶ್ಯವೀಧಿಗಳನು ಬೇರೆ ಬೇರೆ ತೋರ್ಕೆ
ಗೊಳಿಪ ಚಾರು ಚಿತ್ಕಲಾಪ್ರಪೂರ್ಣ ಶಂಭುಲಿಂಗವೆ ॥೩॥

ಪದ ೩೩ ರಾಗ : ಫಾರಶಿ (ದೇಶಿ)

ಭಾವಲಿಂಗವನೆ ಬಿಡದೆ ನೀನು । ಪರಿ
ಭಾವಿಸು ಭೇದವಿಲ್ಲದೆ ಯೋಗಿ ॥ಪಲ್ಲ॥

ಗುರುಮಂತ್ರ ಶಕ್ತಿಯಿಂದುದಿಸದೆ ಯೋಗ
ಕಣರಮಥನದೊಳುಜ್ವಲಿಸದೆ
ಕರಹೃದಯದ ಹವಣೆನಿಸದೆ ಪುರತರ೧
ಪರಿಪೂರ್ಣಾನಂದವಚ್ಚಳಿಯದೆ ॥೧॥

ದೀಪವಾದೀಪದ ಕಿರಣವ । ತಾನೆ
ವ್ಯಾಪಿಸಿ ತೋರುವ ಪ್ರಭೆಯಂತೆ
ರೂಪಿಸಿ ಬೆಳಗುವ ಇಷ್ಟಪ್ರಾಣ । ಲಿಂಗಾ
ರೋ೨ಪವಿಲ್ಲದ ನಿರುಪಾಧಿಯ ॥೨॥

ಸುಕರದರ್ಜನೆ ಧ್ಯಾನವೆಸಗಲು । ತೋರ್ಪ
ಸಕಲಾಸಕಲ ನಿಷ್ಕಲಂಗಳ
ನಿಕರ ವಿಷಯ ವಿಕಲ್ಪನೆಗೂಡ । ದೊಪ್ಪ
ವಕಳಂಕ ನಿತ್ಯನಿ೩ಷ್ಕಳವಾದ ॥೩॥

೧ ನಿತ್ಯ (ಅ) ೨ ರೂ (ಅ) ೩ ನಿರ್ಮಲ (ಅ)

ಪೊರಗೊಳಗಣ ನೇತ್ರ ಮಾನಸ । ದಿಂದೆ
ಕುರುಹುವಡೆದು ಬಣ್ಣ ಬಗೆಯಾಗಿ
ಬರಿ ಬಳಕೆಯೊಳೊಂದವವಿರಳ । ದೀಪ್ತಿ
ಕರಿಗೊಂಡು ವಿಕೃತಿಯೊಂದಿಲ್ಲದ ॥೪॥

ಸ್ಥೂಲ ತತ್ತ್ವಾತ್ಮಕ ಜೀವನ । ವೃತ್ತಿ
ಜಾಲವಂಟದ ಸೂಕ್ಷ್ಮಾಂತರದೊಳು
ಮೇಳವಿಸದ ಸದಮಳ ಪರ । ಮಾನು
ಕೂಲದಿಂದಖಿಳ ಸಾಕ್ಷಿಕವಾದ ॥೫॥

ನೋಟದ ಸಮರತಿ ಕೂಟದ ಮೇಲೆ
ಮೀಟೆನಿಸುವ ಪರವಶನಂತೆ
ನಾಟಿಸುತಿಹ ರೂಪ್ರರುಚಿಗಳ ಮೀರಿ
ಸಾಟಿದೋರದ ತೃಪ್ತಿಮಯವಾದ ॥೬॥

ತನುಕರ್ಮಮನುವಾಯು ಜಯವನು ಹಾರಿ
ದನುಭವ ಮಾತ್ರದೊಳಪರೋಕ್ಷ
ವೆನಿಸುವ ಗುರುಶಂಭುಲಿಂಗದಾ ನಿಜ
ದನುವಿನ ಚಿನ್ಮಾತ್ರವೆನಿಸುವ ॥೭॥

ಪದ ೩೪ ರಾಗ : ದೇಶಿ (ಪೂರ್ವಿ)

ಆವ ಮತದವರರಿವರಾಗವನುಳಿದು ಪರಿ
ಭಾವಿಸಲು ಸಕಲ ಜಗದಾದಿ ಲಿಂಗವನು ಪಲ್ಲ॥

ಕಲೆ ವರ್ಣ ಪದ ಮಂತ್ರ ಭುವನ ನಿರ್ಮಳ ತತ್ವ
ಕುಲನೆನಿಸಿ ಲಯಭೋಗವಧಿಕಾರವೆಂಬ
ಪಲವವಸ್ಥೆಯನೈದಿ ಪರಮ ಪತಿಗಾ ಪೆಸರು
ಗಳನುಂಟು ಮಾಡುವತಿಶಯದ ಬಿಂದುವನು ॥೧॥

ಪರನ ಬಹುಕೃತ್ಯದೆಡೆಯೊಳು ಪರಿಗ್ರಹಶಕ್ತಿ
ಪರಲಿಂಗ ಪೀಠವಮಳಕ್ರಿಯಾರೂಪು
ಪರೆವೊದಲೆನಿಪ ನಾಲ್ಕುನುಡಿವಳಿಯೊಳೂಲವಿತ್ತು
ಪರಿಪೂರ್ಣವೇಕವೆನಿಸುವ ಕುಂಡಲಿಯನು ॥೨॥

ಮಾಯೆಯನು ಮೀರಿ ಕರ್ಮವನು ಸೋಂಕದೆ ಮಲದ
ಸಾಯುಸವನುಳಿದ ವಿಜ್ಞಾನ ಕೇವಲರ
ವಾಯದ ವಿವರ್ತಪರಿಣತೆಯುಳಿದು ಕಾರ್ಯಸಮು
ದಾಯವನು ವೃತ್ತಿಯೊಳು ಪಡೆವಂಬರವನು ॥೩॥

ತನಗಭವನೋರ್ವನಲ್ಲದೆ ಮಿಕ್ಕಿನಣುಕರ್ತೃ
ತನವಿಲ್ಲದಖಿಳ ದೀಕ್ಷಾಪ್ರತಿಷ್ಠೆಯೊಳು
ವಿನುತ ಸಿದ್ಧಿಗಳ ಸಾಧನದೆಡೆಯೊಳಧಿಕರಣ
ವೆನಿಸಿ ತಾನವನುಭವಿಸುವ ಬ್ರಹ್ಮವಿದನು ॥೪॥

ತಿಳಿದು ತಂತ್ರಾಂತರವನೆಳಸಿ ದೀಕ್ಷಿತರಾಗಿ
ಕಳೆದು ಮಾಯಾಕರ್ಮಪಾಶಯುಗಳವನು
ಬಳಿಕ ಮುಕ್ತಿಯನೈದಿದವರೆಲ್ಲರನು ತನ್ನ
ಕುಳವ ಭೋಗಿಗಳೆನಿಸಿ ತಡೆವ ಕುಟಿಲೆಯನು ॥೫॥

ನವಚಕ್ರದೊಳು ಮಂಡಲತ್ರಯದ ಮಧ್ಯದೊಳು
ಹವಣಿಸಿದ ಬೆಳಗು ಬಹುವಿಧನಾದವೆಂಬ
ಸವಿದೋರಿ ಯೋಗಿಗಳಿಗಾನಂದವನು ಮಾಳ್ಪ
ಶಿವನ ತನುವೆನಿಪ ನಿಜವಾಗೀಶ್ವರಿಯನು ॥೬॥

ನಿರುಪಮ ನಿರಾಲಂಬ ನಿರುಪಾಧಿಯೆಂದೆನಿಪ
ಗುರುಶಂಭುಲಿಂಗವನು ತನ್ನನೆಡೆವಿಡದ
ವರ ಯೋಗಿಗಳ ಮನೋ ಭಾವ ದೃಷ್ಟಿಗಳಲ್ಲಿ
ಕರತಳಾಮಳಕವೆನೆ ತೋರ್ಪವಿದ್ಯೆಯನು ॥೭॥

---

೧ ಫಲಿ (ಅ)

ಪದ ೩೫ ರಾಗ : ಸೌರಾಷ್ಟ್ರ

ನೆನೆವುದ[೧]ನುದಿನ ಮೊದಲು ಹೃದಯನಳಿನವನಲ್ಲಿ
ಚಿನುಮಯಲಿಂಗದರ್ಶನೆ ಗೈಯ್ಯೊ ಯೋಗಿ ॥ಪಲ್ಲ॥

ಪರಧರ್ಮಕಂದದ ಸುಜ್ಞಾನನಾಳಿದ
ಸುರುಚಿರೈಶ್ವರ್ಯವೆನಿಪ ದಳಾಷ್ಟಕದ
ಪರಮವೈರಾಗ್ಯ ಕರ್ಣಿಕೆಯ ರುದ್ರಾದಿ ವಿ
ಸ್ತರಕೇಸರದ ಶಶಿನಿಭದ ಹೃದಯವ ॥೧॥

ಗುಣ ಮಂಡಲದ ವರ್ಣವಿಸರ ಮಂಡಲದಭ್ರ
ಮಣಿ ಸೋಮ ಶಿಖಿ ಮಂಡಲದ ಬಿಂದು ನಾದ
ಗಣ ಮಂಡಲದ ಪರಮ ಕುಂಡಲಿ ಭುಜಂಗನ
ಫಣದ ಬೆಳಗಿನ ಮಂಡಲದ ಹೃದಯವ ॥೨॥

ಬಿಸಜತಂತು ನಿವಾರಶೂಕ ಸದೃಶಮಾದ
ಮಿಸುಪ ಮಿಂಚಿನ ತನಿವಣ್ಣದಾಕೃತಿಯ
ದೆಸೆಗಳೆಲ್ಲವನುಜ್ವಲಿಪ ಶಂಭುಲಿಂಗವ
ಜಸವೆತ್ತು ತನ್ನೊಳೊಂದಿರ್ಪ ಹೃದಯವ ॥೩॥

---

೧ ದು (ಅ)

ಪದ ೩೬ ರಾಗ : ನಾದನಾಮಕ್ರಿಯೆ

ಮಾಡಿ ಶಿವಲಿಂಗ ಪೂಜೆಯನಂತರಂಗದೊಳು
ನೋಡಿ ಸುಖಮಯಸಾಧನಗಳಿಂದೊಲಿದು ॥ಪಲ್ಲ॥

ಪರನೆ ಸಕಲಾಧಾರನೆಂಬುದಾಸನವಖಿಳ
ಭರಿತನೀಶ್ವರನೆಂದು ೧ತಿಳಿವುದಾಹ್ವಾನ
ಪರಮಶಿವಪದವೆ ಜಗವೆಂಬುದೆ ಪಾದ್ಯವದು
ಹರುಷವಾರಿಧಿಯಭವನಹುದೆಂಬುದರ್ಘ್ಯ ॥೧॥

ಪಾವನಾತ್ಮಕನೀಶನೆಂಬುದಾಚಮನೀಯ
ವಾ ವಿಮಳ ಶಮೆಯೆಂಬ ಸಲಿಲದಭಿಷೇಕ
ಭಾವ ಪರಿಪೂರ್ಣವಾದುದೆ ವಸ್ತ್ರವಹಿತಕುಲ
ವಾವರಿಸದಿಹ ವಿದ್ಯೆಯದು ಯಜ್ಞಸೂತ್ರ ॥೨॥

ಮಿಗೆ ಮಂಗಳೋದಯವಲಂಕಾರವನುಭವದ
ಸೊಗಸೇ ಲೇಪನಗಂಧವಧಿಕ ಕರುಣವಕ್ಷತೆಯು
ಬಗೆಯಲರು ವಿಷಯವಾಸನೆಯ ವಿಲಯವೆ ಧೂಪ-
ವಗಲದ ಪರಂಜ್ಯೋತಿಯದು ದೀಪವಹುದು ॥೩॥

ಭೇದವಡಗಿದ ಮತಿಯೆ ನೈವೇದ್ಯವಸಮರೂ
ಪಾದ ಸತ್ವಾದಿ ಗುಣ ವೃತ್ತಿತಾಂಬೂಲ
ವಾದನವೆ ಪರನಾದವಹುದು ಸೋಹಂಭಾವ-
ದಾದರಣೆಯಳಿಯದಿರಲದೆ ಪ್ರದಕ್ಷಿಣವು ॥೪॥

---

೧ ನೆನೆ (ಈ)

ಬಹುತತ್ವವನು ಮೀರಿದಿರವದು ನಮಸ್ಕಾರ
ವಹುದು ಗುರುಶಂಭುಲಿಂಗದೊಳು ತನ್ನ ವಸು
ವಿಹಿತವೆನಿಸುವ ಯೋಗಮಾರ್ಗದಿಂದೊಡವೆರಸಿ
ಸಹಜ ಕೈವಲ್ಯ ಪಡೆವುದೆ ವಿಸರ್ಜನವು ॥೫॥

ಪದ ೩೭ ರಾಗ : ನಾದನಾಮಕ್ರಿಯೆ

ಲೇಸೆನಿಸುವ ಶಿವಯೋಗವೈದನಭ್ಯಾಸಮಂ ಮಾಡಲು
ದೋಸವಳಿದು ತನಗಚಲಿತ ಸುಖವೆ ನಿವಾಸವಾಗಿಹುದು ॥ಪಲ್ಲ॥

ಕಲೆ, ಛಂದ ಋಷಿ, ಶಕ್ತಿ, ಬೀಜ ಸುಸ್ವರ ತತ್ವ ಕುಲದೇವತಾಕ್ಷರ
ಸಲುವರ್ಥವಿವನುಳ್ಳ ಮನುಗಳೊಳ್ಸುಗತಿಗಳನೊಂದಿ ತೋರುವ
ಸುಲಭವೊಂದೆರಡಾರುವರ್ಣದ ಮನುಗಳನೆ ಸಲೆ ಸಾಂಗವೆನಿಸಿ
ನಲಿದು ಬಿಡದೆ ಜಪಿಸುತೆ ಪರದೊಳು ಚಿತ್ತವಳಿಯೆ ಮಂತ್ರಯೋಗ ॥೧॥

ಆರುಚಕ್ರದೊಳಾರು ತೆರದೊಳೊಪ್ಪುವ ಕಂಜವಾರನಿಂಬುಗೊಂಡು
ತೋರುವ ಮನವಸು ಮನುಗಳೊಡನೆ ಕೂಡಿ ಜಾರದೊಂದೆಡೆಗೆ
ಮೀರಿ ಮೂಲಾಗ್ನಿ ಪೆರಸಿ ನಡುನಾಡಿಯೊಳೇರಿ ಚಿಜ್ಜ್ಯೋತಿಯ
ಜೇರಾಗದೊಂದಿರೆ ಸ್ಪರ್ಶಯೋಗವಿದೆಂದು ಸಾರಿಪೇಳುವರು ॥೨॥

ಮೊದಲು ವಸ್ತ್ರಾಭರಣಾಯುಧಾದಿಗಳೊಳು ಪುದಿದೀಶರೂಪವನು
ಪದುಳದಿಂ ನೆನೆವದರವಯವಪನೊಂದೊಂದನೊದವಿ ಬಿಟ್ಟುಳಿದ
ಸದಮಳಾನಂದ ಚಿದ್ಘನವೆನಿಸಿದ ಪರಪದವನೈದಿ ತನ್ನ
ಹೃದಯ ಲಯವಾದೊಡದು ಭಾವಯೋಗವೆಂಬುದು ವಿಚಾರಿಸಲು ॥೩॥

ಕರಣ ಗೋಚರವಲ್ಲವಖಿಳ ಮನಂಗಳಾವರಿಸಿ ಲಕ್ಷಿಸದ
ಧರೆಮೊದಲಾದ ತತ್ವಾದಿಗಳೊಡನೆ ಸಂಕರವಾಗದೊಪ್ಪುವ
ಪರಿಕಲ್ಪನೆಗೆ ಬಾರದಸುಪಮಾದ್ವಯ ನಿತ್ಯ ನಿರವಧಿ ನಿರ್ಗುಣ
ಪರಮಾತ್ಮನೊಳು ಮತಿಯಡಗಲಭಾವವೆಂಬ ಯೋಗವಹುದು ॥೪॥

ಮರೆದೆನೆಂಬರಿದೆನೆಂಬುಭಯ ಬುದ್ಧಿಗೆ ಸಾಕ್ಷಿ ಬರಿಯರಿವೆನಿಪ
ಕರುಹಿನ ಜಗವಾದೊಡಳಿದೊಡೆ ನಿಜರೂಪು ದೊರೆದೇಕವಾದ
ಕೊರತೆಯಿಲ್ಲದ ಶಂಭುಲಿಂಗದೊಡನೆ ಮಸವೆರಕವಾಗಿ ನಿಂದು
ಕರಿಗೊಂಡಿರಲು ಮಹಾಯೋಗವಾದೊಡೆ ನೆರೆ ಮುಕ್ತಿಯಪ್ಪುದು ||೫||

ಇತಿ ಯೋಗಪಂಚಕಂ

ಪದ ೩೮ ರಾಗ : ದೇಶಿ (ಪೂರ್ವಿ)

ಸತಿಪತಿಗಳಿವರ ಸಮರತಿಸುಖದ ಬಾಳುವೆಗೆ
ಪ್ರತಿಯುಂಟೆ ಲೋಕದೊಳು ನೋಡೆ ಲಲಿತಾಂಗಿ ॥ಪಲ್ಲ॥

ಕಂಗಳ ನೇರಿನ ಸೋಮಸೂರ್ಯರ ವೀಥಿಯ ನಡುವೆ
ಶಿಂಗರದ ನೀಲದರಮನೆಯ ಮಧ್ಯದೊಳು
ರಂಗುವೆಳಗೆಸೆವ ಸಜ್ಜೆಯ ಶಕುನಿ ಮಂಚದೆಡೆ
ಗಂಗವಿಸಿ ಬಂದು ಭರದೊಳು ಜವಳಿಗೊಂಡು

ನಿರಿಸಡಿಲುತಿರೆ ತಾನೆ ತೊಟ್ಟ ಕಂಚುಕಗಳೆಯೆ
ನೆರೆ ತವಕವದರಿಂದೆ ಮುಂದುವರಿಯೆ
ಮುರಿದೊಡೆ ಲಜ್ಜೆ ಗಾಢಾಲಿಂಗನದ ಸೊಗಸು
ದೊರೆಯೊಳಾಳುತ್ತ ಸವಿಗಲೆಯೊಳೇಳುತ್ತೆ ॥೨॥

ಬೆರೆಸಿ ಬೇರೆನಿಸದೆರಡಾಲಿಕಲ್ಲುಗಳೇಕ
ಸುರಸವಾದಂತೆ ಪತಿಶಂಭುಲಿಂಗ
ಶರಣ ಸತಿಯು ಕೂಡಿ ಪರತರಾನಂದದೊಳು
ಪರವಶವನೈದಿಹುದನುಪಮಿಸಲು ಬಹುದೆ ॥೩॥

ಪದ ೩೯ ರಾಗ : ಸಾಳಂಗ (ದೇಶಿ)

ಯೋಗಿಗೆ ಪಂಚಾವಸ್ಥೆಗಳುಂಟು ಬೇರಂತವನರಿ
ದಾಗಳೆ ಕೈಗೊಡುವಳೊಲಿದಾ ಮುಕುತಿ ವನಿತೆ ॥ಪಲ್ಲ॥

ಇಹ ಪರ ಲೋಕದ ಭೋಗವನೆಳಸದೆ ನಿಜಮೋಕ್ಷವೆಂ
ತಹುದು ತನಗೆಂದು ಶ್ರುತಿಗುರುಗಳನಾರೈದು
ಸಹಜ ಶಮೆ ಸತ್ಯ ಬುಧಜನಸಂಗತಿ ಮೊದಲಾದ
ಬಹು ಸುಗುಣದೊಳೆಚ್ಚರು ದಳೆದುದೆ ಜಾಗರಾವಸ್ಥೆ ॥೧॥

ಬಿಸಿಲುದೊರೆ ಸುರಪನಧನು ಶರಭ್ರದಂತೆ ಮೋ
ಹಿಸಿ ತೋರುವ ಭೂತ ಭುವನಾದಿ ವಸ್ತುಗಳು
ಪುಸಿಯೆಂದು ತಿಳಿದಾತ್ಮನುಳುಮೆಯುನೆಡೆವಿಡದೆ ಭಾ
ವಿಸುತಿರಲದು ತಾನೆ ಕನಸೆಂದೆನಿಸುವವಸ್ಥೆ ॥೨॥

ಭೇದವಳಿದವಿರಳ ಸುಖ ಬೋಧವಳವಟ್ಟು ಬಳಿ
ಕಾದ ಪ್ರಾರಬ್ಧ ಭೋಗದೊಳು ವಿಕೃತಿಗಳ
ಹೋದ ಹೊಲಬಿಲ್ಲದಚಲಿತ ಚಿತ್ತದಿರವೆ ತನ
ಗಾದೊಡದು ಸುಷುಪ್ತಿಯೆನಿಸುತಿಹವಸ್ಥೆ ॥೩॥

ಬಯಲಬರಿಗೊಡದಂತೊಳ ಹೊರಗಣ ಭಾವನೆಯು ಸಂ
ಶಯವಿಲ್ಲದಂಬುಧಿಯೊಳು ಮುಳುಗಿದ ಘಟದಂತೆ
ಸ್ವಯವೆನಿಸುವ ಪರಿಪೂರ್ಣತೆ ಕರಿಗೊಂಡಚ್ಚಳಿಯದೆ ನಿ
ಶ್ಚಯವಾಗಲದೀಗಳೆ ನಿರ್ಮಲ ತುರೀಯಾವಸ್ಥೆ ॥೪॥

ಶರೀರವಿಡಿದಾವುದರೊಡನಭಿಮಾನತೆಯುಣುವಿಲ್ಲದೆ
ನಿರುಪನು ಸಾಕ್ಷಿಕ ಶಂಭುಲಿಂಗವಾಗುಳಿದು
ದರುಶನ ಮತವಾದಿಗಳೆಲ್ಲರು ತನುತಮಗೊಂದೊಂದು
ಪರಿಯೊಳು ಪೊಗಳ್ದಿರವದು ತುರಿಯಾತೀತಾವಸ್ಥೆ ||೫||

ಇಂತು ನಿಜಗುಣ ಶಿವಯೋಗಿವಿರಚಿತವಾದ ಕೈವಲ್ಯ ಪದ್ಧತಿಯೆಂಬ ಪ್ರಕರಣದಲ್ಲಿ ಯೋಗಪ್ರತಿಪಾದನಸ್ಥಲಕ್ಕೆ ಸೇರಿದ ವಚನಜೋಡು ೩೯ಕ್ಕಂ ಬಿಚ್ಚಿದ ಪದಂಗಳು ೧೪೯ಕ್ಕಂ ಮಂಗಳ ಮಹಾ

ಶ್ರೀ ಶ್ರೀ ಶ್ರೀ

ಜ್ಞಾನಪ್ರತಿಪಾದನ ಸ್ಥಲ

ಪದ ೧ ರಾಗ : ಸಾಳಂಗ ನಾಟ

ಆರು ತೆರನಾದ ಭಾವಕರಿಗನುಗುಣವಾಗಿ
ತೋರುವ ಗುರುಕುಲದಿರವನು ಪೇಳುವೆನಿಂತೊಲಿದು ॥ಪಲ್ಲ॥

ಆಕರುಷಣ ವಶ್ಯಾದಿಗಳಿಂದಿಹ ಸುಖವನು ಮೇಲೆ
ಶೋಕವನೈದಿಸುವವನೆ ನಿಷೇಧಗುರುವಹನು
ಬೇಕೆನಿಸುವ ಸಂಪದವನು ತನಗಿಲ್ಲಿ ಮುಂದೆ ಪರ
ಲೋಕದ ಲೇಸನು ಕೊಡುವನೆ ಕಾಮ್ಯಗುರುವಹನು ॥೧॥

ಭೇದಗತಿಗಳು ಹೇಯವೆಂದು ಶಮ ದಾಂತ್ಯಾದಿ
ಸಾಧನವನು ಕುರುಹಿಡುವನೆ ಸೂಚಕ ಗುರುವಹನು
ವೇದಸನುಮತವೆನಿಸಿದ ತತ್ವಸಂಪ್ರೀತಿಯನೆ
ಬೋಧಿಸಿ ತಿಳುಹುವ ಕುಶಲನೆ ವಾಚಕ ಗುರುವಹನು ॥೨॥

ಜೀವ ಪರಮತುರಿಯ ಪರವಸ್ತುಗಳೇಕತ್ವದನು
ಭಾವವನರುಹಿಸುವಾತನೆ ಕಾರಕಗುರುವಹನು
ಪಾವನಾತ್ಮಕ ಶಂಭುಲಿಂಗವೆ ತಾನಾದ ನಿಜ
ಕೈವಲ್ಯಪದವೀವನೆ ವಿಹಿತ ಗುರುವಹನು ॥೩॥

ಪದ ೨ ರಾಗ : ಶ್ರೀರಾಗ

ಸುಮ್ಮನಾಗದು ವಿಧಿಯೊಳೊಂದನೆ ಮುಕ್ತಿ ॥ಪಲ್ಲ॥

ಇದು ನಿತ್ಯವಿದನಿತ್ಯವೆಂಬುದನರಿಯದೆ
ಹೃದಯದ ಭೋಗೇಚ್ಛೆ ದೊರೆಯದೆ
ಪದವಿ ಸಮಾಧಿ ಸಾಧನವಾರು ಬೆರೆಯದೆ
ಸದುಗತಿಯಾಸೆಯೊಳುರಿಯದೆ ॥೧॥

ಗುರುಪಾದ ಸೇವೆಯನೊಲವಿಂದೆ ಮಾಡದೆ
ವರನಿಗಮವ ನೋಡಿ ಪಾಡದೆ
ಶರೀರ ಮುಂತಾದುಪಾಧಿಗಳನೀಡ್ಯಾಡದೆ
ಪರಮಜೀವರನೊಂದುಗೂಡದೆ ॥೨॥

ಸ್ವಪರವೆಂಬುಭಯ ಭಾವನೆದೋರ್ಕೆಯಡಗದೆ
ವಿಪರೀತ ಭಾವನೆಯಳಿಯದೆ
ಉಪಮೆಗೈಯದ ಶಂಭುಲಿಂಗವಾಗುಳಿಯದೆ
ಸುಪಥವೀತೆರನೆಂದು ತಿಳಿಯದೆ ॥೩॥

ಪದ ೩ ರಾಗ : ಮಧುಮಾಧವಿ

ಜ್ಞಾನ ವೈರಾಗ್ಯೋಪರತಿಗಳೆಂಬವನೆ ಸಂ
ಧಾನಿಸುತ್ತಿರೆ ಭೋಗಮೋಕ್ಷವಾಂಛಿತರು ॥ಪಲ್ಲ॥

ಶ್ರವಣಾದಿಗಳು ಬೀಜವಾತ್ಮಪಂಕ್ತಿಗಳ
ವಿವರಣವದು ರೂಪು ಮರಳಿ ಸಂಸೃತಿಯು
ನಿವಹ ಸಾಕ್ಷಿಕತ್ವವೇ ಕಾರ್ಯವಹುದೆಂದು ಬ
ಲ್ಲವರು ಭಾವಿಸುವುದರುವಿಂಗೆ ನಿಜವೆಂದು ॥೧॥

ವನಿತಾದಿ ದೋಷದರುಶನವೆ ನಿಮಿತ್ತವಾ
ವನುವಿಂದವನು ಬಿಡುವದು ರೂಪು ಬಳಿಕ
ಮನವತ್ತವೆರಗದ ನಿಷ್ಠೆಯದು ಕಾರ್ಯವೆಂ
ದೆನುತೆ ಬಗೆವುದು ವಿರಾಗತಿಗೆ ನೆಲೆಯೆಂದು ॥೨॥

ಯಮಮಾದಿ ಯೋಗವೆ ಕಾರಣವಹುದು ವಿ
ಶ್ರಮಿಸಿ ನಿಲೆ ಚಿತ್ತವದು ರೂಪು ಬಾಹ್ಯದೊಳು
ಭ್ರಮಿಸುವ ಕರ್ಮವಳಿದಿಪ್ಪುದೆ ಕಾರ್ಯವೀ
ಕ್ರಮದಿಂದ ತಿಳಿವುದುಪರತಿಗೆ ಮತವೆಂದು ॥೩॥

ಇವರೊಳರಿವಲ್ಲದುಳಿದೆರಡು ಕೂಡಿರೆ ಮುಕ್ತಿ
ಸಮನಿಸದುತ್ತರಲೋಕಗತಿಯಹುದು
ಪವಣದರಿವಿರ್ದು ಮಿಕ್ಕೆರಡಿಲ್ಲದಿರೆ ಮೋಕ್ಷ
ಸಮನಿಪ್ಪುದು ಪ್ರಾರಬ್ಧ ದುಃಖವದು ಬಿಡದು ॥೪॥

ವಿರತಿಗೆಲ್ಲವನು ತೃಣವೆಂದುಪರತಿಗೆ ತ
ತ್ಪರವಶವಾಗಿಹುದಮಳ ಜ್ಞಾನವದು
ಗುರುಶಂಭುಲಿಂಗವೆ ತಾನೆಂಬ ದೃಢಬುದ್ಧಿ
ಶರೀರದಭಿಮಾನದಂದದೋರ್ಹುದವಧಿ ॥೫॥

ಇತಿ ಜ್ಞಾನವೈರಾಗ್ಯೋಪರತಿ ಲಕ್ಷಣಂ

ಪದ ೪ ರಾಗ : ವಸಂತ (ದೇಶಿ)

ಕೈವಲ್ಯವರಿವಿಂದಪುದೆಂದೊಡಾತ್ಮ
ಕೋವಿದರಿಂತು ಮಾಳ್ಪುದು ॥ಪಲ್ಲ॥

ಹಿಂಗದೆ ನಿತ್ಯಕರ್ಮವ ಮಾಡಲು
ತುಂಗಧರ್ಮ ವಿವರ್ಧನ
ಮಂಗಳಮಯ ಧರ್ಮದಿಂ ದುಷ್ಕೃತ
ಭಂಗವಂತಾಗೆ ಮೋಹಿಪ ॥೧॥

ಚಿತ್ತನಿರ್ಮಲವದರಿಂದೆ ಸಂಸ್ಕೃತಿ
ಪೊತ್ತದ ದೋಷನಾಶ
ಮತ್ತಹರಿಂದ ವೈರಾಗ್ಯವದು ತಾನೆ
ಮುಕ್ತಿಯೊಲವೀವುದು ॥೨॥

ಕೂಡೆ ಕರ್ಮೋಪರತಿಯದು ಕೈಸಾರೆ
ಮಾಡುವಾಪೇಕ್ಷೆಯೋಗವ
ನೋಡಲಂತದರಿಂದೆ ಶಂಭುಲಿಂಗವಾ
ರೂಢ ಸುಜ್ಞಾನವಪ್ಪುದು ॥೩॥

ಪದ ೫ ರಾಗ : ಕಾಂಬೋಧಿ

ನಂಬು ಜ್ಞಾನವನೆ ಕರ್ಮವೆಂಬ ಜಾಲದೊಳು ಸಿಲ್ಕಿ
ಹಂಬಲಿಸದಿರು ಮುಕ್ತಿಯಂ ಬಯಸಿ ಮನುಜ ನೀ ‖ಪಲ್ಲ‖

ಆಗಮ ಪುರಾಣ ವೇದಪೂಗದೊಳು ವಿಧಿಸುವ
ಯಾಗ ದಾನ ಜಪ ನೀತಿ ಯೋಗ ಪೂಜಾದಿಗಳು
ಈಗ ಜ್ಞಾನೋದಯ ಮಾತ್ರವಾಗಲದರೊಳು ಕೋಟಿ
ಭಾಗದೊಳೊಂದಕ್ಕೆ ಸಮವಾಗಲದರಿಂದ ‖೧‖

ತನುವ ದುಡಿಸಬ್ಯಾಡ ಮನವನಿಲ್ಲಿಸಬ್ಯಾಡ
ಧನವ ನೀಗಲಿಬ್ಯಾಡ ಮನೆಮಾರದೊರೆದು
ವನವಾಸಬ್ಯಾಡ ನಿನಗಿನಿತು ತತ್ವಜ್ಞಾನ ಸಂ
ಜನಿಸಲಾದಫಲವೆಲ್ಲವನು ಕೆಡಿಪುದರಿಂದೆ ‖೨‖

ಜ್ಞಾನವೇ ಮುಕ್ತಿಗೆ ಮಾರ್ಗವೇನು ಬೇರೊಂದಿಲ್ಲವೆಂದು
ಮಾನಸಿಧಿಯಾದ ಶ್ರುತಿ ನಾನ್ಯಃಪಂಥಾಯೆನಲು
ನೀನಿದನು ಬಿಡದಿರನೂನ ಶಂಭುಲಿಂಗದ
ಸುಜ್ಞಾನದೃಢಮಾಗೆ ಪರಮಾನಂದವಹುದದರಿಂದ ‖೩‖

ಪದ ೬ ರಾಗ : ಕಾಂಬೋಧಿ

ತಿಳಿವುದೀ ಪರಿಯೊಳು ಮುಕುತಿದೊರೆವುದೆಂದೆಳೆಸಿ
ನಿಗಮನಿಷ್ಠರೆನಿಪ ಯೋಗಿಗಳು ॥ಪಲ್ಲ॥

ಜ್ಞಾನದಿಂ ಮರವೆಯಳಿವುದು ಮರೆಯ
ಹಾನಿಯಿಂದ ಭೇದಬುದ್ಧಿ ಕೆಡವುದು ಕೆಡಲು
ಹಾನೋಪದಾನವನುಳ್ಳ ವಿಷಯಾವದಿ
ದೆಂಬ ಮಾನಸ ವಿಕೃತಿ ಪೋಪುದು ಪೊಗಲೊಡನೆ ॥೧॥

ರಾಗ ವೈರಾಗ್ಯದಿರವು ತೊಲಗೆ ಮಾಡಲಹುದ
ದಾಗದೆಂಬ ವಿಧಿನಾಶವದು ನಾಶವೆನಿಸಿ
ಬೇಗಪುಣ್ಯ ಪಾಪಕರ್ಮ ವಿಲಯವದು ಹಿಂಗ
ಲಾಗಿ ದೇಹಭಾವ ನಷ್ಟವದರ ನಷ್ಟದೊಳು ॥೨॥

ಮತ್ತೆ ಸಂಸೃತಿಗೆ ನಿರಾಕರಣವಹುದು ಮೇ
ಲುತ್ತಮ ಸಹಜವೆನಿಪಾವಸ್ಥೆ ಬಳಿಕಾ
ಬಿತ್ತರಿಸಲರಿದಾದ ನಿಜಸುಖವೆ ಸಲೆ ನೆಲ
ಸಿತ್ತದೀಗ ಶಂಭುಲಿಂಗವಾಗಿ ತಾನಿರ್ಪಿರವದು ॥೩॥

ಪದ ೭ ರಾಗ: ಶಂಕರಾಭರಣ

ಸನ್ನುತ ತನಗೆ ಸಂಪಂನವಾದರಿವಿದು
ನನ್ನಿಯೆಂದು ನಂಬು ಯೋಗಿ ನಿನ್ನ
ಮುನ್ನಿನ ಜಡಭಾವಮಂ ನೀಗಿ ನಲಿದಿದು
ನನ್ನಿಯೆಂದು ನಂಬು ಯೋಗಿ ನಿನ್ನ ||ಪಲ್ಲ||

ದುರಿತಕಾನನವಹ್ನಿ ಪರಿಭವ ಘನಚಂಡ
ಮರುತಸಜ್ಞಾನತಿಮಿರ
ತರಣಿ ಮಾನಸ ಕುಲಗಿರಿ ವಜ್ರವನು ತಾಪ
ಸರಸಿಜ ಹಿಮವಿದೆಂಬ ಆಹಾ ಸರಸಿಜ ಹಿಮವಿದೆಂಬ ||೧||

ಸಾರಸುಖದ ಸುಧಾವಾರಿಧಿ ಸುಕೃತದ
ಮೇರು ಮುಕ್ತಿಯ ಜನ್ಮಭೂಮಿ
ಚಾರುಸಿದ್ಧಿಗಳ ಮಂದಾರವಿಪಿನದ ಮೂಲ
ಕಾರಣದಿರವಿದೆಂಬ ಕಾರಣದಿರವಿದೆಂಬ ||೨||

ನಿಗಮವರಸುವ ಮುನಿಗಳು ಜಾನಿಪ ಸುರೋ
ರಗ ನರರ ಜಾಣುಮೆ ಗಾಣದ
ಜಗದಾಗು ಹೋಗಿನೊಳ್ಪುಗದಿಹ ಶಂಭುಲಿಂಗ
ದಗಣಿತ ನಿಜವಿದೆಂಬ ಆಹಾ ಅಗಣಿತ ನಿಜವಿದೆಂಬ ||೩||

ಇತಿ ಜ್ಞಾನೋತ್ಕರ್ಷ.

ಪದ ೮ ರಾಗ : ಪಹಡಿ (ದೇಶಿ)

ಬೊಮ್ಮವಸರಿವೆಂದು ಬಳಲುವರು
ತಮ್ಮನತಿಗಳೆದನ್ಯವನೆ ನೋಡಿ ಮನುಜರು ॥ಪಲ್ಲ॥

ತಿಳಿದು ಮೊದಲು ತತ್ವಕುಳವೆಲ್ಲವನು ನೇತಿ
ಗಳೆದನಾತ್ಮಕನೆಂದು ಬಳಿಕವರ
ವಳಗಧಿಕರಣವೆನಿಪ ನಿರ್ವಿಕಾರ ಸವಿ
ದುಳುವೆ ತಾವೆಂಬ ವಿವೇಕವ ಬಳಿವಿಡಿಯಿದೆ ॥೧॥

ಜಾಗರಣದೊಳು ಕನಸಿನೊಳು ನಿದ್ರೆಯೊಳು ಬೇ
ರಾಗಿ ಬಾಧೆ ಪಡುವ ವಿಶ್ವಾದಿ ಜೀವರು
ಆಗಿಹೋಗಿನೊಳಗಲ್ಲದನುಪಮಾನಂದ ಸುಧಾ
ಸಾಗರವೆ ತಮ್ಮ ನಿಜವೆಂದು ಬಗೆಯದೆ ॥೨॥

ಸ್ವಗತ ಸಜಾತಿ ವಿಜಾತಿಗಳೆಂಬ ಭೇದಭಾವ
ನೆಗಳು ಸಹಜಮಾಗಿ ತಮಗಿಲ್ಲದೆ
ಗಗನದಂತವಿರಳವಹ ಶಂಭುಲಿಂಗದೊಡ
ನಗಲಿಕೆ ತಮಗಿಲ್ಲದನುಭೂತಿ ಜನಿಸದೆ ॥೩॥

ಇತಿ ಬಾಹ್ಯವೃತ್ತಿ ನಿರಾಕರಣಂ

ಪದ ೯ ರಾಗ : ಕಹಡಿ

ನಿನ್ನ ನಿಜವಿದನೆ ತಿಳಿ ಬೇ । ರೆನ್ನದೆಲೆ ಮನುಜ ॥ಪಲ್ಲ॥

ಇದುವೆನಿಸಿಹುದಾ । ವುದದಕೆ ತಾನಾಶ್ರಯ
ಪದವಾಗಿ ಬಾಧೆಯೊಂದದೆ ತೋರುತಿಹ ಸತ್ತೆ ॥೧॥

ಮೂರವಸ್ಥೆಗಳೊಳು ತೋರುವಖಿಳವನು
ಬೇರಿಟ್ಟರಿವುದಾಗಿ । ವಿಾರಬಾರದ ಚಿತ್ತೆ ॥೨॥

ಎಲ್ಲವನಾರೈದು ನೋಡಲಿಲ್ಲೆನಿಸಿದ ನೇಹ
ವೆಲ್ಲಿ ನೆಲಸಿಹುದು ತ । ನ್ನಲ್ಲಿಯದರಿಂದೆ ಸುಖ ॥೩॥

ಪ್ರಾಗಭಾವ ಮೊದಲಾದವೀ ಘಟಾಳಿಗಳಿಗಲ್ಲ
ದೇಗೈದು ತನ್ನೊಳಗಿಲ್ಲ । ವಾಗಿ ವಿಚಾರಿಸೆ ನಿತ್ಯ ॥೪॥

ಗಗನಾದಿಗಳು ತನ್ನೊ ॥ ಳೊಗೆದ ಕಾರಣದಿಂದೆ
ಮಿಗೆ ಪೂರ್ಣಪದವಿಂತು ಬಗೆ ಶಂಭುಲಿಂಗವೆ ॥೫॥

ಇತಿ ವಸ್ತು ನಿರ್ದೇಶಂ

ಪದ ೧೦ ರಾಗ : ಸೌರಾಷ್ಟ್ರ

ಸ್ವಗತಾದಿ ಭೇದವಾತ್ಮನೊಳಿಲ್ಲವೆಂತೆನೆ
ಗಗನದಂತಿರೆ ನಿರವಯವನಾಗಿ ॥ಪಲ್ಲ॥

ತರುವಿಗೆ ಶಾಖಾದಿ ಸ್ವಗತ ಭೇದವದನ್ಯ
ತರುವೆ ಸ್ವಜಾತೀಯವಹ ಭೇದವು
ಗಿರಿಮುಖ್ಯವಹುದು ವಿಜಾತೀಯ ಭೇದವೀ
ಪರಿ ಭೇದವಿಲ್ಲವಾ ಪರದೊಳೆಂದು ॥೧॥

ಏಕಮೇವಾದ್ವಿತೀಯಂ ಬ್ರಹ್ಮವೆಂಬ ವ
ಚೋಕ್ರಮದೊಳು ವಿಶೇಷಣ ಪದದಿಂ ನಿ
ರಾಕರಿಪುದು ಭೇದತ್ರಯವನದಾಗಿ ಚಿ
ತ್ರೇಕವೀ ಜಗದುದಯಕೆ ಮೊದಲು ॥೨॥

ಉಳುಮೆಗೆ ಪೆರತಾಗಿ ಪರಮಾರ್ಥವೆನಿಸಿ ಕೊಂ
ಡುಳುಮೆಯೊಂದಿಲ್ಲಮೆಲ್ಲಿಯು ನೋಡಲು
ಉಳುಮೆಯಾದವಿರಳ ಶಂಭುಲಿಂಗದ ನಿಜ
ದುಳುಮೆಯೆ ತಾನ್ಯೆಸೆ ಬೇರಾವುದುಂಟು ॥೩॥

ಪದ ೧೧ ರಾಗ : ಸೌರಾಷ್ಟ್ರ

ನಿನ್ನೊಳಿಹುದು ನಿತ್ಯಪದವದನುಭವ
ದಿಂ ನೋಡು ಮನುಜ ನೀನಹೆ ಮುಕ್ತನು ॥ಪಲ್ಲ॥

ಮೊದಲಜನ್ಮದ ದೇಹವೀ ದೇಹವಿನ್ನು ಮುಂ
ದೊದಗುವ ದೇಹವೆ ಬೇರೆ ಬೇರೆ
ಪುದಿದು ನೀನೋರ್ವನವರೊಳಗಲ್ಲದೆ ಕರ್ಮ
ದುದಯದಿಂ ದೇಹಿಯಾಗಿಹುದರಿಂದ ॥೧॥

ನೆನಹಿನೊಳಗೆ ನಿದ್ರೆ ಕನಸುಗಳಿಲ್ಲವಾ
ಕನಸಿನೊಳಿಲ್ಲವಾ ನೆನಸು ನಿದ್ರೆ
ತನಿನಿದ್ರೆಯೊಳು ಮತ್ತೆ ಕನಸು ನೆನಸುಗಳಿಲ್ಲ-
ವನಿತನನನುಭವಿಪ ನೀನಹುದರಿಂದ ॥೨॥

ತಿಳಿಯಲೀಪರಿ ಬಾಲ್ಯ ಯೌವನ ವಾರ್ಧಕಂ
ಗಳು ತಮ್ಮೊಳಗೆ ವಿಲಕ್ಷಣಮುಳ್ಳವು
ತಳೆದು ನಿನೇಕರೂಪನು ಬಿಡದಂತವ
ರೊಳಗನುಸಂಧಾತೃವಹುದರಿಂದ ॥೩॥

ದಿನ ಪಕ್ಷ ಮಾಸ ವರುಷ ಯುಗ ಕಲ್ಪಾದಿ
ಯೆನಿಸುವಿವೊಂದರೊಳಿಲ್ಲವೊಂದು
ಅನಿತೆಲ್ಲರಾಗುಹೋಗನು ವಿಚಾರಿಸಿ ಕಾಣ್ಬ
ನಿನಗೆ ವಿಕೃತಿ ದೋರದಿಹುದರಿಂದ ॥೪॥

ಅರಿಯದಜ್ಞಾನವರಿವ ವಿವೇಕವ
ನರಿವ ವಿದ್ಯೆಯನದ್ವಿತೀಯವಾಗಿ
ಅರಿವ ಗುರುಶಂಭುಲಿಂಗದೊಳನ್ಯವಿಲ್ಲದೆ
ಮೆರೆವ ಸದ್ರೂಪು ನೀನಹುದರಿಂದ ||೫||

ಪದ ೧೨ ರಾಗ : ನಾದನಾಮಕ್ರಿಯೆ

ನೋಡು ನೋಡು ನೀನೆ ಪರವೆಂದು ತತ್ವ
ಗೂಡದೆ ವಿಲಕ್ಷಣನಾಗಿ ನಿಂದು ||ಪಲ್ಲ||

ಅದಿವೆನ್ನದಿದಿರಿಟ್ಟುದಳಿದು
ಪೋಪುದಿದಸತ್ಯವೆಂದು ನೇತಿಗಳೆದು
ಮೊದಲ ವಾಸನೆಯು ಹಮ್ಮಳಿದು
ನಿಜ ಪದವಖಂಡಿತವೆಂದು ತಿಳಿದು ||೧||

ನೆನಸಿನಖಿಳ ಜಗವೆಲ್ಲ ಪುಸಿ
ಕನಸಿನಂದದಿ ನಿತ್ಯವಲ್ಲ
ಜನನಾದಿ ವಿಕೃತಿಯೊಂದಿಲ್ಲ ನಿನ
ಗೆನುತಿವೆ ಶ್ರುತಿಕುಲವೆಲ್ಲ ||೨||

ಧರೆಮೊದಲಾದ ಮೂಲ ಬಿಂದು ತಡೆ
ಚರವಚರಾದಿಯೊಳಗೆಂದು
ಬೆರಸದಾಶ್ರಯವಾಗಿ ನಿಂದು ತೋರ್ಪ
ಗುರುಶಂಭುಲಿಂಗವೆ ನೀನೆಂದು ||೩||

ಪದ ೧೩ ರಾಗ : ತೋಡಿ

ಭವಮಾಲೆಗೊಳಗಾದೆನೆಂಬುದೆ ಪುಸಿ ನಿನ್ನ
ವಿವರಿಸಿ ನೋಡು ನೋಡೆಲೆ ಜೀವನೆ ॥ಪಲ್ಲ॥

ಪೊರಚಿಂತೆಯಳಿದನಾಹತ ನಾದದೊಳು ಬುದ್ಧಿ
ಕರಿಗೊಂಡು ಪರಮಶಾಂತಿಯನೈದಲು
ಮಿರುಗುವ ಬೆಳಗಿನ ಬಳಗವನೊಳಕೊಂಡು
ಮೆರೆವ ಶಿವಾತ್ಮ ನೀನಾಗುತಿಂತು ॥೧॥

ನೀತಿಗಳೆದು ಕಾಯ ಕರಣ ಕಾರ್ಯಂಗಳ
ಭೂತಕಾರಣ ಪಂಚಕವನುಳಿದು
ನೀತಿ ಭೀತಿಯ ಮೀರಿ ನಿಂದು ನೋಡಲು ಪರಂ
ಜ್ಯೋತಿ ಸ್ವರೂಪ ನೀನಾಗುತಿಂತು ॥೨॥

ಅನಘನದ್ವಯ ನಿತ್ಯಮುಕ್ತ ಸತ್ಯಾನಂದ
ಜನನಾದಿ ರಹಿತ ಮಾಯಾವಿದೂರ
ನೆನಿಪ ತತ್ವಮಸೀತಿಯೆನೆ ವೇದವಚನವು
ಘನಶಂಭುಲಿಂಗ ನೀನಾಗುತಿಂತು ॥೩॥

ಇತಿ ಸದ್ರೂಪಾನುಸಂಧಾನಂ

ಪದ ೧೪ ರಾಗ : ತೆನಗು ಕಾಂಬೋಧಿ

ಅರಿವೆ ಬರಿಯರಿವೆ ನೀನು
ಮರೆಯನೊಮ್ಮೆಯು ಜಗದಿರವನಿಂತರಿವೆ ॥ಪಲ್ಲ॥

ಜಾಗರಣದ ಜಡಪ್ರಾಗವಿದನು ವಿಶ್ವ
ನಾಗಿ ನೇತ್ರಾದಿಕ ಯೋಗದಿಂದರಿವೆ ॥೧॥

ಕನಸಿನ ಕಲ್ಪನೆಯನು ಮನವೆಂಬ ಸಾ
ಧನದಿಂದೆ ತೈಜಸನೆನಿಸಿ ನೀನರಿವೆ ॥೨॥

ಪರಸುಖವನು ನಿದ್ರೆವೆರಸಿ ಮಾಯಾವೃತ್ತಿ
ಕರಣದಿ ಪ್ರಾಜ್ಞಪೆಸರುದಳೆದರಿವೆ ॥೩॥

ಮರಪನರಿವೆ ಮೊದಲರಿವನರಿವೆ ಬಳಿ
ಕರಿವು ಮರವೆ ಸೋಂಕದಿರವ ನೀನರಿವೆ ॥೪॥

ಅರಿವು ತಾನೆ ಪರತರ ಶಂಭುಲಿಂಗದ
ಕುರುಹಿನ ಭಾವನೆ-ದೊರೆದುನರಿನೀವೆ ॥೫॥

ಪದ ೧೫ ರಾಗ : ನಾದನಾಮಕ್ರಿಯೆ

ಅರಿವು ನೀನೆಂದು ಸದ್ಗುರು ಪೇಳೆ ತಿಳಿವೆನೆ ಜಾಣರದೇವ
ಅರಿವಿನೊಳನ್ಯ ಕಲ್ಪನೆಗಳನುಳಿವನೆ ಜಾಣರದೇವ ॥ಪಲ್ಲ॥

ಅರಿವೆ ಪರಬ್ರಹ್ಮವೆಂದು ಭಾವಿಸುವನೆ ಜಾಣರದೇವ
ಅರಿವನೆ ನಿತ್ಯ ನಿರ್ಮಳವೆಂದು ನೆನೆವನೆ ಜಾಣರದೇವ
ಅರಿವೆ ನಿರ್ಗುಣ ನಿರ್ವಿಕೃತಿಯೆಂದು ಬಗೆವನೆ ಜಾಣರದೇವ
ಅರಿವಿಲ್ಲದುದೆ ಜಡವಹುದೆಂದು ಬಿಡುವನೆ ಜಾಣರದೇವ ॥೧॥

ಅರಿವೆ ಸದಾನಂದವೆಂದೆನುಭವಿಪನೆ ಜಾಣರದೇವ
ಅರಿವೆ ಸ್ವಯಂಜ್ಯೋತಿಯೆಂದರುಹಿಸುವನೆ ಜಾಣರದೇವ
ಅರಿವಿನೊಳಿಲ್ಲೊಮ್ಮೆ ಮರಹೆಂದು ಬಲ್ಲನೆ ಜಾಣರದೇವ ॥೨॥
ಅರಿವವಸ್ಥೆಗಳಿಗೆ ಪೆರತೆಂದು ಕಾಣ್ಬನೆ ಜಾಣರದೇವ

ಅರಿವೆ ವಿಶ್ವಾಶ್ರಯವೆಂದನುಕರಿಪನೆ ಜಾಣರದೇವ
ಅರಿವಿಲ್ಲದಾಗದೆಂಬುದನೂಹಿಸುವನೆ ಜಾಣರದೇವ
ಅರಿವರುಹಿಸಿಕೊಳ್ಳದೆಂದನುಮಿಸುವನೆ ಜಾಣರದೇವ
ಅರಿವೆ ಸಕಲಶಾಸ್ತ್ರಮತವೆಂದು ತೋರ್ಪನೆ ಜಾಣರದೇವ ॥೩॥

ಅರಿವೆ ತ್ರಿಪುಟಿಗಾದಿಯೆಂದು ಲಕ್ಷಿಸುವನೆ ಜಾಣರದೇವ
ಅರಿವನು ತನ್ನ ಕಣ್ಣೊಳು ಕುರುಹಿಡುವನೆ ಜಾಣರದೇವ
ಅರಿವೆ ವಿಷಯಪಲರೂಪೆಂದು ನೊಳ್ಪನೆ ಜಾಣರದೇವ
ಅರಿವೆ ಸತ್ಕ್ರಿಯೆಗಳಿಗಸುವೆಂದು ಬಿಡದನೆ ಜಾಣರದೇವ ॥೪॥

ಅರಿವೆ ವಿದ್ಯಾದೈವ ಗುರುವೆಂದು ಭಜಿಪನೆ ಜಾಣರದೇವ
ಅರಿವನೆ ಪರಮೋಕ್ಷದಿರವೆಂದು ಕೂರ್ಪನೆ ಜಾಣರದೇವ
ಅರಿವೆ ತಾನೆಂದು ಸಂದೇಹವಿಲ್ಲದಾತನೆ ಜಾಣರದೇವ
ಅರಿವಿದು ನಿಜಶಂಭುಲಿಂಗವೆಂದಿರ್ಪನೆ ಜಾಣರದೇವ ॥೫॥

ಪದ ೧೬ ರಾಗ : ತೆನಗು ಕಾಂಬೋಧಿ

ಅರಿವೆಯಿಲೆ ಅರಿವೆ ನಿನ್ನ ತೆರ
ಸಯಿಸು ಮುಕ್ತಿಯಹು ನಿಶ್ಚಯವಂತೆ ||ಪಲ್ಲ||

ಪೂರಗಣ ರೂಪಾದಿ ವಿಷಯವೆಲ್ಲವನು ಕಂ
ಣ್ಣಿರಪಾಗಿ ಸಲೆ ಬೇರೆ ಬೇರೆ ಗೋಚರಿಸುವ ||೧||

ಒಂದರೊಳೊಂದಿಲ್ಲದಿಹ ಮೂರವಸ್ಥೆಯ
ನೊಂದೆದೆ ನಿತ್ಯ ಸಾಕ್ಷಿಕವಾಗಿ ಬೆಳಗುವ ||೨||

ನಾನಾ ತನು ಭಿನ್ನವಾಗಲಪರಕೂಡ
ಹಾನಿ ಚಲನೆ ಭೇದವಿನಿತಿಲ್ಲದೊಪ್ಪುವ ||೩||

ದಿನ ಪಕ್ಷ ಮಾಸಾದಿ ಬೂತಾದಿ ಸರ್ಗಾದಿ
ಯೆನಿಪ ಕಾಲದೊಳು ಖಂಡಿತವಾಗದೊಪ್ಪುವ ||೪||

ನಯನ ಮಾನಸ ಜೀವ ತುರ್ಯನೀಶ ಬ್ರಹ್ಮ
ಮಯವಾದ ಶಂಭುಲಿಂಗದ ನಿಜವೆನಿಸುವ ||೫||

ಪದ ೧೭ ರಾಗ : ಸಾವಂತ

ಅರಿವೆ ತಾನೆಂದು ನಂಬಿ ನಿಂದೊಡೆ ಮುಕ್ತಿ
ಪೆರತಿಲ್ಲವೆಂದುದು ನಿಗಮೋಕ್ತಿ ॥ಪಲ್ಲ॥

ತನುಮಿಂದ್ರಿಯಾಣಿಯಸು ವರ್ಗವನು ಬಿಟ್ಟು
ಮನಬುದ್ಧಿ ಹಂತೆಯನು ಸುಟ್ಟು
ಜನಿತ ಭೂತವಿಷಯವನೆ ಬೇರಿಟ್ಟು
ಘನನಿರ್ಗುಣಾತ್ಮತೆಯೊಳವಟ್ಟು ॥೧॥

ವಿಕೃತಿರೂಪ ವಿಶ್ವತುಷವೆಲ್ಲವನು ತೂರಿ
ಪ್ರಕೃತಿ ಮಾಯೆಗಳನು ಮೀರಿ
ಸುಕೃತಾದಿ ಕರ್ಮವಾಸನಾ ರಸವಾರಿ
ಪ್ರಕಟಬಿಂದು ಶಿಖರಿಯನೇರಿ ॥೨॥

ಭಾವಕಲ್ಪನೆ ಭೇದಬಣ್ಣವಳಿದು ಪೋಗಿ
ಜೀವತ್ವವನು ನೆರೆ ನೀಗಿ
ಶೀವಿ ಶಂಭುಲಿಂಗದೊಳುಪಮೆಯಿಜ್ಜರವಾಗಿ
ಕೈವಲ್ಯ ಪಡೆದವನೆ ಯೋಗಿ ॥೩॥

ಪದ ೧೮ ರಾಗ : ದೇಶಿ

ಆವ ಪುಣ್ಯದ ಫಲವಿದೆಂದು ಕುರುಹಿಡಲಪುದು
ಜೀವಭಾವವನುಳಿದ ನಿಜನಿಷ್ಠೆಯ ॥ಪಲ್ಲ॥

ಅರಸು ನರ್ತಕಿ ತಾಳಧಾರಿ ಸೂರಿಗಳನಾ
ವರಿಸಿ ಬೆಳಗುವ ರಂಗದೆಡೆಯ ಸೊಡರಂತೆ
ನೆರದಹಮು ಬುದ್ಧೀಂದ್ರಿಯಾದಿ ವಿಷಯಂಗಳ
ಚರಣಸಾಕ್ಷಿಕ ಚಿತ್ತು ತಾನೆಂಬ ಸುಖವ ॥೧॥

ಮನೆಯ ಕಂಡಿಯೊಳ್ಬೆದಿ ದಿನಕಿರಣದಲ್ಲಿ ಕರ
ವನು ಚಲಿಸೆ ನೇಸರು ಚಲಿಸಿತೆಂಬಂತೆ
ಜನನಾದಿ ವಿಕೃತಿ ಜೀವಂಗೆ ತೋರಿದೊಡದನು
ತನಗೆ ನಿಜವಲ್ಲವೆಂದರಿದ ಪರಿಣಾಮವ ॥೨॥

ಬೆಳಗು ಕತ್ತಲೆಗಳಂ ತಳೆದೊಡಾಗಸದ ನಿ
ರ್ಮಳವಳಿಯದಂತೊಪ್ಪವರಿವು ಮರವೆಗಳ
ಬಳಕೆಗಾಶ್ರಯವೆನಿಸುತವರೊಡನೆ ಬೆರಸದವಿ
ರಳ ಶಂಭುಲಿಂಗ ತಾನಾದ ಸಂಪದವ ॥೩॥

ಪದ ೧೯ ರಾಗ : ಧನ್ಯಾಸಿ

ಮೂರು ತನುವಿಡಿದು ತೋರುವ ಮೂರವಸ್ಥೆಯೊಳು
ಮೂರು ಗುಣವೃತ್ತಿಗೊಳಗಾದ ಜೀವತ್ರಯದ
ದೂರು ವಡೆಯದ ಪ್ರತ್ಯಗಾತ್ಮತಾನೆಂದರಿದಮೇಲೆ ಭವಮಾಲೆಯುಂಟೆ ॥ಪಲ್ಲ॥

ಕರಣವೈದಿಂದ್ರಿಯದಶಕವೈದು ಭೂತಾದಿ
ಮರುತವೈದಿಂತೆಸೆವ ಪಂಚವಿಂಶತಿತತ್ವ
ಪರಿಕರದೊಳೊಂದಿಹುದು ತೋರತನುವಲ್ಲಿ ಸಾತ್ವಿಕ ಗುಣವಕಾರಾಕ್ಷರ
ವರಲೋಚನ ಸ್ಥಾನವಷ್ಟದಳ ಕುಳದ ಗತಿ
ವೆರಸಿ ವಿಶ್ವಾನರರು ವನಿತಾದಿ
ಪರಿವಿಡಿದು ಭೋಗವನು ಸಕಲ ಸಾಮಗ್ರಿಯಿಂದುಣುತಿಹುದೆ ಜಾಗರಣವು ॥೧॥

ಪೇಳಿದಿಪ್ಪತ್ತೈದು ತತ್ವದೊಳು ಮತಿ ಚಿತ್ತ
ಮೇಲೆ ಜ್ಞಾತೃಭೂತಂಗಳ ನುಳಿದು ಮಿಕ್ಕ ಹದಿ
ನೇಳು ಮತ್ತೊಂದು ತತ್ವವೆ ಲಿಂಗತನು ರಜೋಗುಣ ಕಂಠದೆಡೆಯುಕಾರ
ಮೇಳದೊಳು ತೈಜಸ ಹಿರಣ್ಯಗರ್ಭರು ಕೂಡಿ
ಲೋಲಗತಿ ಕರ್ಣಿಕೆಯೊಳಗೆ ವಾಸನೆಯ ವಿಷ
ಯಾಳಿಯನು ಮನವೆಂಬ ಕರಣದಿಂದನುಭವಿಸುತಿಹುದೆ ಸ್ವಪ್ನಾವಸ್ಥೆಯು ॥೨॥

ಮೊದಲ ತನುವೆರಡರೊಳಗೊರೆದಖಿಳ ತತ್ವ ಸಂ
ಪದವಡಗಿ ಸಂಸ್ಕಾರದಳುಮೆಯಾಗಿಹ ಪ್ರಕೃತಿ
ಯದು ಕಾರಣಾಂಗವದರಲ್ಲಿ ತಾಮಸಗುಣ ಮಕಾರ ನೆಲೆ ಹೃದಯಸದ್ಮವೆ
ಪದುಳದಿಂ ನಿಂದ ಗತಿಗಳನೊಂದಿ ಪ್ರಾಜ್ಞೇಶ
ರೊದವಿ ಮಾಯಾವೃತ್ತಿಯೆಂಬ ಸಾಧನದಿಂದ
ಸದಮಳಾನಂದ ವಿಷಯವನು ಸೇವಿಸುತಿಹುದೆ ಸುಪ್ತಿಯೆಂಬವಸ್ಥೆ ॥೩॥

ಆ ಜಾಗರಣದೊಳೆಡೆಯಾಡಿ ಬಳಲುವ ಮನವ
ನೋಜೆಯಿಂ ನಿಲಿಸಿ ಬೇರೊಂದನೆಣಿಸದೆ ಮಹಾ
ತೇಜೋಮಯದ ಮೂಲಮಂತ್ರದ ಸುನಾದವನೆ ಕೇಳುತಿರ್ಪುದೆ ತೂರ್ಯವು
ರಾಜಿಸುವ ನಾದಾನುಸಂಧಾನದಾರ್ಕ್ಯಕೆ
ವಾಜಿ ಸ್ಮೈತಿರಲು ತುರ್ಯಾತೀತವೀ ಯೆರಡ
ನೀ ಜಗದೊಳಭ್ಯಾಸಮಂ ಮಾಡಿದೊಡೆ ನಿತ್ಯಮುಕ್ತಿಪದಸಿದ್ಧಿಯಹುದು ॥೪॥

ಈಪರಿಯವಸ್ಥೆಯೈದರೊಳಾಳುತೇಳುತ್ತನು
ತಾಪ ಮಮಕಾರ ಮೋಹ ಜನನಾದಿ ವಿಕೃತಿಯಿಂ
ದಾಪತ್ತುಗೊಳುತಿರ್ಪ ಜೀವನೊಡ ವೆರಸವಾಶ್ರಯವಾದ ಸಾಕ್ಷಿ ತುರ್ಯ
ರೂಪಚಿನ್ಮಾತ್ರ ಕೂಟಸ್ಥನೆಂದೆನಿಪ ತಾ
ನಾ ಪರಬ್ರಹ್ಮ ಪರಮಾತ್ಮ ಪರತತ್ತ್ವ ನಿ
ರ್ಲೇಪ ನಿತ್ಯಾನಂದ ಘನಶಂಭುಲಿಂಗದಿರವಾಗಿ ತನಗಿಲ್ಲವಸ್ಥೆ ॥೫॥

ಇತಿ ಪಂಚಾವಸ್ಥಾಃ

ಪದ ೨೦ ರಾಗ : ಕಾಂಬೋಧಿ

ಜೀವನಿಗವಸ್ಥೆಗಳೇಳವನು ಪರಿ
ಭಾವಿಸಿ ನೋಡಿರೆ ಬಂಧರಹಿತರಪ್ಪವರು ||ಪಲ್ಲ||

ತನ್ನ ನಿಜವನು ಪರೀಕ್ಷಿಸದೆ ಹೇಯ
ವೆನ್ನದೆ ವಿಕೃತಿಯುಳ್ಳ ತನುವೆ ತಾನೆಂದು
ಭಿನ್ನ ವಿಷಯದ ವಿಶ್ವವಿದನು ಕಂಡು
ಸನ್ನಿಯೆಂಬ ಬಗೆ ಬಿಡದಿರಲದಜ್ಞಾನ ||೧||

ವೇದವಿಚಾರವನೊಲ್ಲದುಳಿದ ಶುಷ್ಕ
ವಾದದಿಂದೆ ಸಲೆ ಸಾಕ್ಷಿ ತುರೀಯ ಕೂಟಸ್ಥ
ಬೋಧವಿಲ್ಲವದು ತೋರದೆಂಬ ಮೋಸದಾದಿ
ಯಾದುದು ಘನರೂಪವೆನಿಸುವಾವರಣ ||೨||

ಕರ್ಮವತು ಮಾಡಿ ತತ್ಫಲವನು ತನ್ನ
ಧರ್ಮವೆನಿಸಿದ ಹಮ್ಮಿನೊಳಗೆರವಳಿದು
ಮರ್ಮವರಿಯದ ಚಿದಾಭಾಸನೆಂದು
ನಿರ್ಮಿತವಾಗೆ ಸಹಜವಹುದು ವಿಕ್ಷೇಪ ||೩||

ಮತ್ತೆ ಶ್ರುತಿ ಗುರುಪದದಪಿಡಿದು ಸಾಕ್ಷಿ
ಚಿತ್ತು ಬೇರುಂಟದು ಸ್ವರ್ಗದಂತೆ ಸತ್ಯವೆಂದು
ಚಿತ್ತದೊಳು ನಂಬಲಾಗಿ ಮೊದಲು ಪೇಳ್ವ
ವೃತ್ತಿನಾಶವದು ಪರೋಕ್ಷಾತ್ಮಕಜ್ಞಾನ ||೪||

ಚಾರು ತತ್ವಮಸಿವಾಕ್ಯಾರ್ಥವನು ಸುವಿ
ಚಾರಿಪುದರಿಂದೆ ಪ್ರತ್ಯಗಾತ್ಮನೆ ತಾನೆಂಬ
ಸಾರನಿಷ್ಠೆಯಿಂದುಳಿದಾವರಣ ಪೋಪು
ದಾರಯ್ಯಲದಪರೋಕ್ಷಜ್ಞಾನವೆನಿಪುದು ॥೫॥

ಕೂಡೆ ಕರ್ತೃತ್ವ ಭೋಕ್ತೃತ್ವವದರ ಬಾಧೆ
ಗೂಡಿ ಮೋಹಿಸುವ ಬಹುವಿಧದ ಸಂಸೃತಿಗೆ
ನಾಡೆ ನಾಶವಾಗಲದನರಿದು ಸಂತ
ರಾಡುವರು ದುಃಖನಿವೃತ್ತಿಯು ತಾನೆಂದು ॥೬॥

ಜ್ಞಾನದಿಂದ ಶೋಕವಿಂತು ತೊಲಗೆ ಪರ
ಮಾನಂದ ವಾರಧಿ ನಿತ್ಯಮುಕ್ತ ಶಂಭುಲಿಂಗವೆ
ತಾನಾಗಿ ಸೈತಿರೆ ತತ್ವವಿದರನುಮಾನಿಸದ
ನೂನ ತೃಪ್ತಿಯೆಂಬರದನೊಲಿದು ॥೭॥

ಪದ ೨೧ ರಾಗ : ಬಹುಳಿ

ಆರು ನಾನೆಂದು ವಿಚಾರಿಸಿ ತಿಳಿಯೆ ಸಂ
ಸಾರ ಸಾಗರವನುತ್ತರಿಪುದರಿದೆ ॥ಪಲ್ಲ॥

ತನುವಿದಾನಲ್ಲವಿಂದ್ರಿಯವಾನಲ್ಲವಸುವರ್ಗ
ವೆನಿಪವಾನಲ್ಲಹಮು ಚಿತ್ತ ಬುದ್ಧಿ
ಮನವವನಲ್ಲಿಳೆ ವಾರಿ ಶಿಖಿ ವಾಯು ನಭವೆಂಬಿ
ವಿನಿತು ನಾನಲ್ಲವೆನಗೆ ವೇದ್ಯವಾಗಿ ॥೧॥

ಗುಣಹಂತೆ ಮಹದವಿದ್ಯಾ ಮಾಯಾ ಶಕ್ತಿಗ
ಳೆಣಿಸಲಾನಲ್ಲವರ ಧರ್ಮಕರ್ಮ
ಗುಣವೊಂದು ನಾನಲ್ಲವಿದಮಹಮೆಂದು
ಗಣಿಸಲಾನಲ್ಲೆನಗದು ದೃಶ್ಯಮಾಗಿ ॥೨॥

ಪರಮ ಜೀವಾಂತರ ವಿಶ್ವ ತೈಜಸ ಪ್ರಾಜ್ಞ
ತುರಿಯಾದಿ ವಿಷಯದೃಕ್ಕುಗಳಿವಾನಲ್ಲ
ಪರತರಾನಂದೈಕ ರಸರೂಪ ದೃಶಿ ಮಾತ್ರ
ಗುರುಶಂಭುಲಿಂಗದ ನಿಜವೆ ತಾನಾಗಿ ॥೩॥

ಪದ ೨೨ ರಾಗ : ದೇಶಿ

ನಾವರಿದೆವರಿದೆವೆಂಬಿರಿ ನಿಜವಸದು ನಿಮ್ಮ
ಭಾವನೆಗೆ ಬಂದ ಪರಿಯನು ಪೇಳಿರಿ ||ಪಲ್ಲ||

ದೇಹದರಿವಿನೊಳು ಸೋಜಿಗವೆನಿಸಿಹುದು ನಿಜವೊ
ದೇಹದೊಳಗಾಡಿ ನೋಡುವದು ನಿಜವೊ
ದೇಹ ಕರಣಾದಿಗಳಿಗಾಧಾರವಾದಸು ನಿಜವೊ
ದೇಹಾಭಿಮಾನಿಯಹ ಮನವೆ ನಿಜವೊ ||೧||

ನಾನೆಂಬುದೆಡೆಬಿಡದೆ ಹೊರಗನರಿವುದೆ ನಿಜವೊ
ನಾನೆಂಬುದಡಗಿದಾನಂದ ನಿಜವೊ
ಆನಂದವನು ತೋರ್ಪುದೇನು ಪಿಡಿದುದು ನಿಜವೊ
ಆನಂದವೆಂಬುದಡಗಿದ ನಿಲವೆ ನಿಜವೊ ||೨||

ಸಗುಣರೂಪವೆ ತನ್ನ ಸಹಜವಾದುದು ನಿಜವೊ
ಸಗುಣ ನಿರ್ಗುಣ ತತ್ವ ತಾನೆ ನಿಜವೊ
ಸಗುಣ ನಿರ್ಗುಣವನಟ್ಟಳಿದ ಪದವದು ನಿಜವೊ
ಸಗುಣಾದಿಗಳ ಸೋಂಕಳಿಹುದೆ ನಿಜವೊ ||೩||

ಬಗೆಯು ಕರುಹಿನ ಕಲಾ ಬಿಂದು ನಾದವೆ ನಿಜವೊ
ಬಗೆಯು ಬಣ್ಣಕೆ ಬಾರದಿಹುದೆ ನಿಜವೊ
ಜಗದ ನಾನಾತತ್ವದೊಡಗಲದಿರ್ಪವೆ ನಿಜವೊ
ಮಿಗಿಳಿಯಾ ಜಗಕನ್ಯವಹುದು ನಿಜವೊ ||೪||

ಪಲವು ಮತಭೇದವಾದವನುಳಿದು ಸಂಶಯದ
ಹೊಲಬಿಲ್ಲದಾನು ನೀನೆಂಬುದಳಿದು
ಸಲೆ ನೇಮ ಸೀಮೆದೋರದ ಶಂಭುಲಿಂಗವಾ
ದುಳುಮೆ ಚಿನ್ಮಾತ್ರವದು ನಿಜ ಕಾಣಿರೈ ||೫||

ಇತಿ ಚಿದ್ರೂಪಾನುಸಂಧಾನಂ

ಪದ ೨೩ ರಾಗ : ತೆನುಗು ಕಾಂಬೋಧಿ

ಸುಖವೇ ನಿಜಸುಖವೆ ನೀನು
ನಿಖಿಲವೆನಿಸದೇಕ ಮುಖವಾಗಿರೆನ್ನೊಳು ಸುಖವೇ ॥ಪಲ್ಲ॥

ರಾಗ ವಿಷಯಸಿದ್ಧಿಯಾಗೆ ಸಾತ್ವಿಕ ಬುದ್ಧಿ
ಯೋಗದೊಡನೆ ಜೀವಭೋಗವೆನಿಸಿ ತೋರ್ಪ ॥೧॥

ಕಡುನಿದ್ರೆಯೊಳು ಮತಿಯಡಗೆ ಮಾಯಾವೃತ್ತಿ
ವಿಡಿದನಂತತೆಯನು ಪಡೆದು ರಾಜಿಪ ಶಿವ ॥೨॥

ತನಿನಿದ್ರೆಯುಳಿದನ್ಯ ನೆನಹು ಜನಿಸದೆ ಸು
ಮ್ಮನೆ ನಿಂದ ವೇಳೆಯೊಳಿನಿದು ಗಾಣಿಸುವಚ್ಚ ॥೩॥

ಪ್ರಿಯವಾದ ವಿಷಯ ಸಂಚಯದೆಡೆಯೊಳು ತಾನೆ
ಪ್ರಿಯತಮನೆಂದು ತಿಳಿಯೆ ತನಗವಿರಳ ॥೪॥

ಹಾನೋಪಾದಾನವೆಂಬೇನುವಿಲ್ಲದುಪೇಕ್ಷೆ
ಮಾನಸವೈದಲನೂನವಾದನುಪಮ ॥೫॥

ಕನಸಿನಂತಿರೆ ಜಗವನು ಪುಸಿಯೆಂದು ತ
ನ್ನನೆ ಭೇದರಹಿತನೆನುಂಬಭೂತಿಯೊಳು ಮಿಕ್ಕ ॥೬॥

ಮಾನಸದೊಳು ಬಾಹ್ಯವೇನು ತೋರದೆ ಪರ
ಮಾನುಸಂಧಾನ ಸಂತಾನದೊಳಪರೋಕ್ಷ ॥೭॥

ಪರಿಪೂರ್ಣ ಕಾಮತೆ ದೊರೆದ ಸಮಯದೊಳು
ಸರಿಯಾವುದಿಲ್ಲದೆ ಪರತರವಹ ಸತ್ಯ ॥೮॥

ಪದುಳದಿಂದೀ ಬಹುವಿಧದೆಡೆಯೊಳು ತೋರಿ
ಸದಮಳ ಶಂಭುಲಿಂಗದೊಳೇಕರಸವಾದ ॥೯॥

ಇತ್ಯಪ್ಟಾನಂದಃ

ಪದ ೨೪ ರಾಗ : ದೇಶಿ

ಆವ ಪರಿಯ ಸುಖವ ಭಾವಿಸಿ ಬೇರೆಣಿಸಿದೊಡೆ
ಜೀವ ಪರಮಯೋಗವ ನಿಜವರಿದನುಭವಿಯ ಸುಖಕೆ ಸರಿಗಾಣೆ ॥ಪಲ್ಲ॥

ಕವಿಜನರುಪಮೆಗೆ ಹವಣಿಸ ಬಾರದ
ನವಲಾವಣ್ಯದ ಜವ್ವನೆಯು
ತವಕದ ರತಿಗನುಕೂಲ ಸುಸಾಧನ
ನಿವಹವೆಸೆವ ಸುಖ ಮೊದಲಾದ ॥೧॥

ಮೇರು ಸಿಂಹಾಸನವಖಿಳ ದೇವ ಪರಿ
ಚಾರಕರಣಿಮಾದಿಗಳೊಡನೆ
ಭೂರಿ ಭಾವನವನಾಳುವ ತನವಿದು ಕೈ
ಸಾರಿರಲೊದಗುವ ಸುಖವಿಡಿದು ॥೨॥

ಸಾಕೆನಿಸದ ಸವೆಯದ ಬೇರೊಂದನು
ಬೇಕೆನಿಸದೆ ಕಡೆಯೊಳು ತನ್ನ
ಜೋಕೆಗುಂದದೆ ನಿರುಪಮ ಶಂಭುಲಿಂಗದೊ
ಳೇಕಮೆನಿಪ ಸುಖವೊಂದಲ್ಲದೆ ॥೩॥

ಪದ ೨೫ ರಾಗ : ಕಾಂಬೋಧಿ

ತೋರದಯ್ಯಾ ಸುಖ ತೋರದಯ್ಯಾ
ಬೇರೆಬೇರೆ ಭಾವಿಸಿ ಬ್ರಹ್ಮಜ್ಞಾನವೊಂದಿಲ್ಲದವಗೆ ॥ಪಲ್ಲ॥

ನಿಗಮಾಗಮವನೋದಿ ಸುಗುಣ ಸಂತತಿಗೂಡಿ
ಜಗದೊಲವಾಂತು ತನ್ನ ಬಗೆಯನಾರೈಯದಿರೆ ॥೧॥

ಕಪಟವಳಿದು ಕೋಟಿ ಜಪವನೆಸಗಿ ಬಲು
ತಪವನೇ ಮಾಡಿ ತತ್ವದುಪದೇಶವಡೆಯದೆ ॥೨॥

ಹಿಂಗದಣಿಮಾದಿ ಸಿದ್ಧಿಯಂಗಮಾಗಿ ಪೇರ್ಮೆಲೋಕ
ಡಂಗುರವೆನಿಸಿ ಶಂಭುಲಿಂಗದನುವರಿಯದಿರೆ ॥೩॥

ಪದ ೨೬ ರಾಗ : ಕಾಂಬೋಧಿ

ಮುಕುತಿಸುಖವನು ಪಡೆವೆನೆಂಬ ಬಲು
ಯುಕುತಿ ವಂತನ ಬಗೆಯನು ನೋಡು ರಮಣಿ ॥ಪಲ್ಲ॥

ಕನಸಿನ ಪುರುಷನು ಮಿಂಚಿನ ಹೆದೆಗಿಂದ್ರ
ಧನುವನೇರಿಸುತಾಲಿಕಲ್ಲಿನಂಬು
ಮೊನೆದುರದೆಚ್ಚು ಗಂಧರ್ವ ಪುರದ ರಿಪು
ವನು ಕೆಡಪಿದನಂತೆ ತನುಧರ್ಮವಳಿದು ॥೧॥

ಮೊಲನ ಕೋಡನು ಕಿತ್ತು ಗಗನ ಕುಸುಮವೆತ್ತಿ
ತಳುವದೇ ಕೂರ್ಮ ಕುಂತಳವಿಡಿದು
ಸುಳುಕಿ ಬಿಸಿಲು ದೊರೆಯನು ಬಂಜೆಯಣುಗನೆ
ಸಲುಗೆ ವಡೆದನಂತೆ ಗೆಲಿದು ಮಾಯೆಯನು ॥೨॥

ನರನು ತೆಂಕಲು ಪೋಗಿ ಸುರಗಿರಿಯನು ಕಂಡು
ತರುಣಿಯುರೊಲವನು ದಿಟವೆಂದು
ಉರುಪುವ ವಹ್ನಿಯನಧೋ-ಮುಖವಾಗಿ ನಲಿವನು
ತುರು ಶಂಭುಲಿಂಗವೆ ತನಗನ್ಯವೆಂದು ॥೩॥

ಪದ ೨೭ ರಾಗ : ಅಹರಿ

ಏನೆಂದು ಪೇಳುವೆನು ಪರಮಾನಂದ
ವೆನಗಾದ ಹದನಾನಿನ್ನು ॥ಪಲ್ಲ॥

ಘೋರಭವಮಾರಗಳುಕಿ ಮನದೊಳಿ
ದಾರಿಂದ ತೊಲಗುವದೆಂದು
ಚಾರು ಗುರುಪದವಿಡಿಯೆ ಮೊದಲ ಸಂ
ಸಾರವೆನಗಿಲ್ಲವಾದುದ ॥೧॥

ದೇಹಾದಿಗಳನೆ ತಾನೆಂಬ ಜಡಮಾಯಾ
ಮೋಹದಿಂದೆ ನೊಂದು ಬಳಿಕ
ಊಹಿಸಿ ತಿಳಿದೊಡಂತವನುಳಿದು ನಿ
ರ್ದೇಹಿಯಾನೆನಿಸಿದಿರವ ॥೨॥

ಆನೆಂಬುದದರರ್ಥದೇನೆಂದು ನಿಗ
ಮಾನುಮಾನ ಪಿಡಿದು ವಿಚಾರಿಸೆ
ಜ್ಞಾನನಿಧಿ ಶಂಭುಲಿಂಗದ ನಿಜರೂಪ
ವಾನಾಗಿ ಸುಖಿದೊಳಿಹುದು ॥೩॥

ಪದ ೨೮ ರಾಗ: ಬಹುಳಿ

ತನ್ನನೆ ಪರವೆಂದು ತಿಳಿವುದಲ್ಲದೆ ಬೇರೆ
ಭಿನ್ನವಿಟ್ಟರಸಲೇನುಂಟು ಕಾಣಿಸಲು ॥ಪಲ್ಲ॥

ಶ್ರುತಿಗುರುಗಳ ಬೋಧೆಯದು ತತ್ವಮಸಿಯೆಂದು
ನುತಿಸಲಾನಾರೆಂದು ಬೆಸಗೊಂಡ ಬಗೆಗೆ
ಗತಿಯಾವುದಿನ್ನು ತನ್ನುಳುಮೆ ತನ್ನೊಳಗಿಲ್ಲ
ದಿತರಂಗಳಲ್ಲಿ ಭೇದಿಸಲುಂಟೆ ಬರಿದೆ ॥೧॥

ತೋರುವಜಾಂಡ ಜಾಲಂಗಳನೊಳಕೊಂಡು
ಮೀರಿದಪ್ರತಿಮ ಬೋಧಾತ್ಮ ರೂಪಾಗಿ
ಬೇರಿದೆಂದರುಹಲಿಲ್ಲಾಗಿ ತನ್ನೊಳಗೊಂದು
ದೂರಿಲ್ಲದಾರೈಯಬೇಕನುಭವದಿ ॥೨॥

ತುಂಬಿ ತುಳುಕದಾನಂದ ಸುದಾಬ್ಧಿ ತಾ
ನೆಂಬುದೊಂದರಿವು ತನ್ನೊಳು ಲೀಯವಾಗೆ
ಶಂಭುಲಿಂಗದ ಕೂಟವದು ತಾನೆ ನಿಜಮುಕ್ತಿ
ಯೆಂಬುದೆ ನಂಬುಗೆ ಪೆರತಿಲ್ಲವೆಂದು ॥೩॥

ಪದ ೨೯ ರಾಗ : ಲಲಿತೆ

ಪೇಳೆನಗೀಗಲೆ ಮಾಜದೆ ರಾಜ-ಮ
ರಾಳಗತಿಯು ಮಾನಿನಿ ಭೋಗಂಗಳ
ಮೆಳಿಲ್ಲದೆ ಸವಿಯುವ ಸವಿಯಾವುದು ಕೇಳುವೆನಿದನೊಲಿದು ॥ಪಲ್ಲ॥

ಗುರುದೇವತೆ ನಿಗಮಾರ್ಚನೆ ಯೋಗಾ
ಚರಣೆ ಕುಲಾಶ್ರಮ ಹೋಮ ತಪೋವಿಧಿ
ವರವಧು ವಾಹನ ವಿತ್ತಾತ್ಮಜ ಸಖ ಧರೆ ಭುವನಾದಿಗಳ
ನೆರವಿಗಳೆಡೆಯೊಳು ಸಕಲರ ಮನದಾ
ದರವಾವುದನೆ ಕುರಿತು ನೆಲಸಿಹುದೀ
ಪರಿಯಿಂದತಿ ಮಮತೆಗೆ ಮೊವಲಾದುದಕಿರವಾವುದೆ ರಮಣಿ ॥೧॥

ಒಲ್ಲೆನಿಸದೆಯಾಗಂತುಕವಲ್ಲದ
ಪಲ್ಲಟಿಸದ ಗುಣವರಸದ ಹವಣೆಗೆ
ನಿಲ್ಲದೆ ಬಿಡಿಸಲು ಬೇರೊಂದತಿಶಯವೆಲ್ಲಿಯು ಕಾಣಿಸದ
ಸೊಲ್ಲಿಸಬಾರದ ಕಾರಣವಿಡಿದಿರ
ದೆಲ್ಲರ ಮತವಹ ಪರಮ ಪ್ರೀತಿಗೆ
ಬಲ್ಲವರಿಂದಿದು ವಿಷಯವೆನಿಸಿಕೊಳಬಲ್ಲವಿದಾವುದು ನೀ ॥೨॥

ಕುಂದದೆ ಹೆಚ್ಚದೆ ಕಡೆ ಮೊದಲಿಲ್ಲದೆ
ನಿಂದನೆಮಾದಿಗಳೆಂಬ ಮಣಿಗಳೊಡ
ನೊಂದಿ ಮಧುರತರವಾದ ಸುಖಾಮೃತ ಸಿಂಧುವೆನಿಸಿ ಮೆರೆವ
ಇಂದುಕಲಾಧರ ಗುರುಶಂಭುಲಿಂಗ
ವೆದೆನಿಸುವ ತಾನೇ ನೀನೆನ್ನನು
ಚಂದದಿ ಬೆಸಗೊಂಡ ಸುವಸ್ತುವ ನೋಡಂದದಬಲಿ ತಿಳಿದು ॥೩॥

ಇತ್ಯಾನಂದರೂಪಾವಿರ್ಭಾವಃ

ಪದ ೩೦ ರಾಗ : ಪಹಡಿ

ನಿನ್ನೊಳೊಡಗೂಡದ ಭಾವವನುನ್ನಿಸೆಲೆ ಜೀವನೆ ॥ಪಲ್ಲ॥

ಮುನ್ನವಿಲ್ಲದ ಭಾವಮುದಿಸಿಯುಳಿದ ಮೇಲೆ
ತನ್ನಿರವಿಲ್ಲೆನಿಸಿದಭಾವವು ॥೧॥

ಇದರೊಳಿದಿಲ್ಲೆನಿಸುವ ಭಾವವನುಡಿನ
ವದಕಿಲ್ಲ ತೋರ್ಕೆಯೆನಿಪ ಭಾವವು ॥೨॥

ಎಲ್ಲವನೊಳಕೊಂಡ ಭಾವಚತುಷ್ಟಯ
ವಿಲ್ಲಾಗಿ ಶಂಭುಲಿಂಗದ ನಿತ್ಯಪದವಾದ ॥೩॥

ಪದ ೩೧ ರಾಗ : ತೆನಗು ಕಾಂಬೋಧಿ

ಘಟವೆ ಪುಸಿಘಟವೆ ನೀನು
ದಿಟದಂತೆ ತೋರಿ ಮೋಹಿಪುವನೇನೆಂಬೆ ॥ಪಲ್ಲ॥

ಮೊದಲು ಮೃತ್ತಿಕೆಯ ಪಿಂಡದೊಳು ನೀನಿಲ್ಲ ಪು
ಟ್ಟಿದ ಬಳಿಕೊಡೆದು ಧೂಳಾಗೆ ನೀನಿಲ್ಲ
ವಿದಿತವಿದಾದ್ಯಂತದೊಳಗೆ ನೀನಿಲ್ಲ ಮ
ಧ್ಯದೊಳಾವ ರೂಪು ನಿನಗೆ ನಿಜವಹುದು ॥೧॥

ನರರ ಮುಖದ ನುಡಿ ಮಾತ್ರದಿರವಿನಿಂದೆ
ಪರಿಕಲ್ಪಿತಾಕಾರದಿಂದೆ ವಿವೇಕ
ವಿರಹಿತರಿಗೆ ಪರಮಾರ್ಥವೆನಿಸಿ ತೋರ್ಪೆ
ಪರಿಕಿಸಲೆಂದು ನಿನಗುಂಟೆ ತೋರ್ಕೆ ॥೨॥

ಇಲ್ಲಿ ನಿಸದೆ ತೋರದಡಗದ ಮೃತ್ತಿಕೆ
ಯಲ್ಲದೆ ನಿನ್ನನೆಲ್ಲಿಯು ಕಾಣೆನರಸಿ
ಉಳ್ಳ ಮೃತ್ತಿಕೆಯಂತೆ ಶಂಭುಲಿಂಗವೆ ಜಗ
ವೆಲ್ಲವು ನಿನ್ನಂದವಾದುದಿಂತರಿಯೆ ॥೩॥

ಇತಿ ನಿತ್ಯಪದನಿದರ್ಶನಂ

ಪದ ೩೨ ರಾಗ : ಶಂಕರಾಭರಣ

ತಾನೆ ತನ್ನೊಳು ತನ್ನ ನಿಜವ ನೋಡಲು ಪರ
ಮಾನಂದಮಯ ಚಿದಖಂಡರೂಪಹನು ॥ಪಲ್ಲ॥

ತನು ಬಾಹ್ಯವೆಲ್ಲವನರಿವುದರಿಂದೆ
ಮನ ವಾತುಗಳನು ಮೀರಿಹುದರಿಂದೆ
ಇನಿತನಿತೆಂನು ರೂಹಿಸಬಾರದಿಹುದರಿಂದ
ಲನುಪಮನಹುದರಿಂದವಿರಳನಹನು ॥೧॥

ಅಣುಪರಿಮಾಣ ಮಧ್ಯಮ ಪರಮಾಣಂಗ
ಳೆಣಿಕೆ ತನ್ನೊಡಗೂಡದಿಹುದರಿಂದೆ
ಗುಣ ಜಾತಿ ಕರ್ಮಾದಿರಹಿತತ್ವದಿಂದ ಕ
ರಣ ವಿಡಿಯುದುದರಿಂದದ್ವಯನಹನು ॥೨॥

ಸಕಲಾರ್ಥ ಸಾಧಕನಹುದರಿಂ ತಿಳಿಯಲಾ
ಸಕಲಾರ್ಥ ಸಂಬಂಧಿಯಹುದರಿಂದೆ
ಸಕಲಾರ್ಥ ದೂರನಹುದರಿಂದೆ ಬಳಿಕಲಾ
ಸಕಲಾರ್ಥನಹುದರಿಂದನವಧಿಯನು ॥೩॥

ಗಗನದಂದದಿ ನಿರವಯವನಹುದರಿಂದೆ
ಸ್ವಗತಾದಿ ಭೇದವಿಲ್ಲದ ಕಥದಿಂದೆ
ನಿಗಮವನಂತಮೆಂದೊರವುದರಿಂದಾವ
ಬಗೆದೋರದಿಹುದರಿಂದಗಣಿತನಹನು ॥೪॥

ಪವಣಿಸುತಿಹ ದೇಶ ಕಾಲ ವಸ್ತುಗಳೆಂಬ
ನಿವಹ ಕಲ್ಪನೆ ಮಿಥ್ಯೆಯಹುದರಿಂದೆ
ಭವದೂರನೆನಿಸುವ ಗುರುಶಂಭುಲಿಂಗದೊ
ಳವಿಭೇದನಹುದರಿಂದವೆ ಪೂರ್ಣನಹನು ॥೫॥

ಪದ ೩೩ ರಾಗ : ತೆನಗು ಕಾಂಬೋಧಿ

ಆರು ಬಲ್ಲರು ನಿಜಾನಂದ ಭೋಧಾಂಬುಧಿ
ಪೆರೆಯನೊಮ್ಮೆ ಕಳೆದು ಮಾಯೆಯ
ಭೂರಿ ವಿಕಾರವೆಲ್ಲವನೊಳಕೊಂಡು ಗಂ
ಭೀರಾದ್ವಯಾತ್ಮಕವಾಗಿಪುದ ॥ಪಲ್ಲ॥

ದೇಹವಲ್ಲದ ಕರಣೇಂದ್ರಿಯವಲ್ಲದ
ಮೋಹಿಸುವಹಮಾದಿಕವಲ್ಲದ
ಬಹಿರಂಗದ ಭೂತವಲ್ಲದಿನ್ನಾವುದ-
ನೂಹಸಲಂತಲ್ಲದ ವಸ್ತುವ ॥೧॥

ಪವಣಪ್ಪೆದದ ಪರಿಣಮಿಸದ ಪರಿತಾಪ
ನಿವಹವಂಟದ ನಿತ್ಯ ಮುಕ್ತವಾದ
ನವಗುಣವಡಸದ ನಾನಾತ್ವವಿಲ್ಲದ
ಭವದೂರವೆನಿಸುವ ತತ್ವವನು ॥೨॥

ಮರವೆ ಪೊದ್ದದ ಮೊದಲರಿವು ದೋರದ ಮತ್ತೆ
ಬರಿದಾಗದಿದಿರಿಟ್ಟು ಕಾಣಿಸದ
ಪೆರೆದೇಕ ರಸವಾದ ತನ್ನೊಳಗಿಂತೆಂಬ
ಕುರುಹಿಲ್ಲದ ಶಂಭುಲಿಂಗವನು

ಇತಿ ಪೂರ್ಣರೂಪಾನುಭವಃ

ಪದ ೩೪ ರಾಗ : ಸೌರಾಷ್ಟ್ರ

ನಿಜವನರಿದ ಯೋಗಿಗಾವ ಕರ್ಮದ ಕಾಟ
ಭಜನೆಯಿಂದಾವ ಪುಣ್ಯದೊಳೊಡಗೂಟ ॥ಪಲ್ಲ॥

ಕನಸಿನೊಳರಸಿಗೆ ಬಡತನವಾಗೆ ತ
ಜ್ಜನಿತ ದುಃಖವನೆಚ್ಚರೊಳು ನೀಗಿದಂತೆ
ತನಗೆ ಸಂಸೃತಿ ಮಾಯಾವಿಕೃತಿಯಿಂ ತೋರೆ ಮ
ತ್ತನುಭವದಿಂದರಿದೆಯೊಡೆ ಪುಸಿಯೆಂದು ॥೧॥

ಧರೆ ಮೊದಲಾದಖಿಳಾವರಣಾತೀತ
ಪರಮನೀ ದೇಹಾದಿಗಳಿಗನ್ಯ ಜೀವ
ಎರಡಾಗಿ ತೋರೆ ತದ್ಗತಗುಣನೇತಿಯಿಂ
ಪರಿಭಾವಿಸಿದೊಡೇಕ ಬೋಧರೂಪೆಂದು ॥೨॥

ರವಿಯಂತೆ ಕರ್ಮಸಾಕ್ಷಿಕನಾಗಿ ಬಂಧವಿ
ಲ್ಲವಿರಳನಾಗಿ ಚೇರ್ಕೈದಲಿಂಚಿಲ್ಲ
ಹವಣಿಸಲಿಲ್ಲ ಖಂಡಿತವಾಗಿ ತನಗೆ ಸಂ
ಭವವಿಲ್ಲ ಗುರುಶಂಭುಲಿಂಗ ತಾನಾಗಿ ॥೩॥

ಇತಿ ನಿರ್ಲೇಪಃ

ಪದ ೩೫ ರಾಗ : ಪಹಡಿ

ಜ್ಞಾನಿಯಿಂದವನರಿಯವೆಂಬರನು
ಮಾನವೇಕವನಂಗ ತಾನೆ ಸೂಚಿಸುತಿದೆ ||ಪಲ್ಲ||

ಹಿತವಿದಹಿತವೆಂಬ ತಿಳಿವಿಗೆ ವಿಷಯ ವಿ
ರತಿಯೆ ಸೂಚನೆ ವಿರತಿಗೆ ವಿಶ್ವದ
ನುತಿವೆತ್ತ ಶಮೆ ತಾನೆ ಸೂಚನೆ ಶಮೆಗೆ ಸ
ಮ್ಮತವಾದ ಪರಮುಕ್ತಿಪದದೊಲಮೆ ಸೂಚನೆ ||೧||

ಪರಮುಕ್ತಿಯೊಲುಮೆಗೆ ಗುರುಸೇವೆ ಸೂಚನೆ
ಗುರುಪಾದ ಸೇವೆಗೆ ವೇದಾರ್ಥ ಸೂಚನೆ
ವರವೇದಾರ್ಥಕೆ ಶರೀರಾದಿ ನೇತಿಯೆ ಸೂಚನೆ
ಶರೀರಾದಿ ನೇತಿಗೆ ತಾನಾರೆಂಬುದೆ ಸೂಚನೆ ||೨||

ಆರುನಾನೆಂಬುದಕೆ ಸೋಹಂಭಾವನೆ ಸೂಚನೆ ವಿ
ಚಾರಿತ ಸೋಹಂಭಾವನೆ ಹವಣಿಸದ
ಸಾರಸುಖ ಸೂಚನೆ ಸುಖಕೆ ನಿತ್ಯ ನಿಜ ನಿರ್ವಿ
ಕಾರ ಗುರುಶಂಭುಲಿಂಗವಾಗಿಪುದೆ ಸೂಚನೆ ||೩||

ಇತಿ ಜ್ಞಾನಿ ಚಿಹ್ನಂ

ಪದ ೩೬ ರಾಗ : ನಾಟಿ

ನೋಡಿ ತಿಳಿಯಲು ತತ್ವಮಸಿವಾಕ್ಯದರ್ಥವನೆ
ಕೂಡೆ ನಿಜ ಕೈವಲ್ಯವಹುದು ಗುರುವಿಡಿದು ॥ಪಲ್ಲ॥

ತನು ಕರಣ ಮೊದಲಾದವನಿತುವನೆ ತಾನೆಂದು
ಜನನಾದಿ ವಿಕೃತಿ ದಳೆದಪಮಿಸೊಡವೆರೆದು
ತನಗದರ ಬಗೆಪತ್ತಿ ಬಿಡದಿರ್ಪ ವಿಶ್ವಜೀ
ವನೆ ತ್ವಂ ಪದಕೆ ಮುಖ್ಯವಾದರ್ಥವೆಂದು ॥೧॥

ಮೊದಲೊರೆದ ಚೇತನಾಚೇತನಂಗಳಿಗಾದ
ಮುದವ ಸುಖಮೋಹಾದಿಗಳು ತನ್ನದೆಸೆಗೆ
ಪದವಿಡದ ಸಲೆ ಸಾಕ್ಷಿ ತುರ್ಯ ಕೂಟಸ್ಥನೆನಿ
ಸಿದ ತಾನೆ ಪದಕೆ ಲಕ್ಷ್ಯಾರ್ಥವೆಂದು ॥೨॥

ಪ್ರಕೃತಿಯುಪಹಿತನಾಗಿ ಸಕಲೇಶತಾದಿ ಗುಣ
ನಿಕರವಿಡಿದಖಿಳ ಕಾರಣನಾಗಿ ತನಗೆ
ವಿಕೃತಿಯೊಂದಿಲ್ಲದಾನಂದಮಯ ಪರಮಸೀ
ಸುಕರವಪ ತತ್ಪದಕೆ ಮುಖ್ಯಾರ್ಥವೆಂದು ॥೩॥

ನಿರುಪಮ ನಿರಾಲಂಬ ನಿತ್ಯ ನಿರ್ಮಳ ನಿರಾ
ವರಣ ನಿರುಪಾಧಿಕ ನಿರಂಜನ ನಿರೂಪ
ನಿರತಿಶಯ ನಿರಘ ನಿಸ್ತತ್ವ ಘರಬೊಮ್ಮವದು
ಪರಿಕಿಪೊಡೆ ತತ್ಪದಕೆ ಲಕ್ಷ್ಯಾರ್ಥವೆಂದು ॥೪॥

ಆತನಿವನೆಂಬಂತೆ ಭಾಗಲಕ್ಷಣದಿಂದೆ
ನೇತಿಗಳೆದುಭಯದೌಪಾಧಿಗಳನುಳಿದು
ಚೈತನ್ಯವೇಕ ರಸವೆಂಬುದಸಿ ಪದದರ್ಥ
ವೀ ತೆರದಿ ಗುರುಶಂಭುಲಿಂಗವೆ ತಾನೆಂದು ॥೫॥

ಇತಿ ಶ್ರವಣಂ

ಪದ ೩೭ ರಾಗ : ಸೌರಾಷ್ಟ್ರ

ಚಿತ್ತೊಂದೆ ಪರಮಾರ್ಥದಿಂದದು ಬಹುರೂಪು
ಪೆತ್ತುದುಪಾಧಿಯೆಂದರಿವುದಿಂತು ||ಪಲ್ಲ||

ಪಲವರೆನಿಸಿ ನಿತ್ಯ ಪೂರ್ಣರಾದಾತ್ಮರು
ನೆಲಸಿರಬೇಕೊಂದು ತನುವಿನೊಳು
ಬಳಿಕದರಿಂವಲ್ಲಿ ಭೋಗಪೀತನಿಗೆಂದು
ತಿಳಿದು ನೇಮಿಸಲರಿವಹುದರಿಂದ ||೧||

ಏಕಾತ್ಮನಾಗಲೋರ್ವನಿಗಾದ ಸುಖದುಃಖಾ
ನೇಕವೆಲ್ಲರಿಗಪ್ಪುದೆನಲಾಗದು
ಏಕ ರವಿ ಕಂಪಾದಿಜಲದೊಳು ಬೇರೆ ಬೇ
ರಾ ಕಲ್ಪನೆಯನೆ ತಾಳಿಹುದರಿಂದ ||೨||

ವಾದಿಸಲೇಕಿನ್ನು ಗುರುಶಂಭುಲಿಂಗದ
ಭೇದಭಾವನೆ ಸತ್ಯವಲ್ಲಪೆಂದು
ವೇದದ ನೇಹನಾನಾಸ್ತಿಯೆಂಬುದು ಮೊದ
ಲಾದ ವಾಕ್ಯದೊಳು ಪೇಳಿಹುದರಿಂದ ||೩||

ಪದ ೩೮ ರಾಗ : ಕಾಂಬೋಧಿ

ಸಂಬು ನೀನೆ ನಿತ್ಯಬೋಧನೆಂಬ ನಿಗಮವನಿನ್ನು
ಹಂಬಲಿಸದಿರು ಮುಕ್ತಿಯಂ ಬಯಸಿ ಬೇರೆ ಯೋಗಿ ॥ಪಲ್ಲ॥

ತಾನಲ್ಲದೆ ಭೃಂಗ ಭಾವನೆಯೊಳದರಂದವನು
ಮಾನವಿಲ್ಲದಾಮುದಂತೆ ಗಡ ಕೀಟನರಿವ
ನೀನಾದ ಪರಮಾತ್ಮ ತತ್ವವನು ನೀನೆಂದಿರಲಾವ
ಹಾನಿಯುಂಟು ತ್ವಂ ಬ್ರಹ್ಮಾಸ್ಮಿಯೆಂದು ಶಾಸ್ತ್ರವಿಹುದಾಗಿ ॥೧॥

ವೇದವಾಕ್ಯದಿಂದೆ ಜಾತಿ ಸೂತಕಾದಿಯಲ್ಲಿ ನಿಜ
ವಾದ ಬುದ್ಧಿ ಜನಿಸಬಹುದು ಕಂಡ್ಯ ನಿನ್ನನೆ
ಭೇದದೂರನೆನಿಸುವನಾದಿ ವಸ್ತುವೆಂದಿರು ವಿ
ವಾದವೇಕೆ ತ್ವಂ ತದಸಿ ವಚನವಿಹುದರಿಂದ ॥೨॥

ರಾಮಚಂದ್ರನಲ್ಲಿ ನರನೆಂಬುದಾಗೆ ನಾರದನ
ನೇಮದುಪದೇಶ ವಿಡಿದಾದುದಚ್ಯುತತ್ವವೆ
ಆ ಮತದಪರಿ ನಿನ್ನ ಜೀವಭಾವವಳಿದು ನಿ
ಸ್ಸೀಮ ಶಂಭುಲಿಂಗವಾಗಿರೇಕಮೇವೆನಲ್ ಶ್ರುತಿ ॥೩॥

ಪದ ೩೯ ರಾಗ : ತೋಡಿ

ಶ್ರೀಗುರು ವಚನವಾಗಳೆ ಮಾಳ್ಪ ರಚನೆ ನೋಡ
ಲಾಗಿ ಮೂವಿಧವಹುದು ಸಾಧಕರ ಪೂಗದಲ್ಲಿ ॥ಪಲ್ಲ॥

ಉಬ್ಬಿನೊಳು ಹೀನನಿಗೆ ಪೇಳಿದ ಬ್ರಹ್ಮಬೋಧೆ ಕಾದ
ಕಬ್ಬಿನದ ಮೇಲೆರೆದ ನೀರಂತಹುದು ಬರಿದೆ ॥೧॥

ನಲಿದು ಮಧ್ಯಮಗೆ ನಿರೂಪಿಸಿದಾತ್ಮವಿದ್ಯೆ ಕಂಜ
ದೆಲೆದಳದ ಜಲದಂತೆ ಮುಕ್ತಾಕೃತಿಯೊಳಿಪುದು ॥॥

ವರವಿಶಿಷ್ಟನೊಳೊರೆದ ಶಂಭುಲಿಂಗದರಿವು ಚಿಪ್ಪು
ಪರೆದು ಮುತ್ತಾದಂತೆ ವಾರಿಯುಹುದು ಸಫಲ ॥೩॥

ಪದ ೪೦ ರಾಗ: ಪಹಡಿ

ಜ್ಞಾನಿ ಮೋಹಿಪುದಂದವೆ ಪರಮ ತತ್ವ
ಜ್ಞಾನಿ ಮೋಹಿಪುದಂದವೆ
ತಾನೆ ನಿತ್ಯಾನಂದ ನಿಜರೂಪವೆನಿಪ ॥ಪಲ್ಲ॥

ತನು ಮೂರು ಕರಣಾಳಿ ಮನಸಾದಿಗಳನು
ತನಗೆ ವಿಲಕ್ಷಣವಹುದೆಂದು ತಿಳಿದ
ಜನನ ಮರಣವನಳಿದ ಜೀವತ್ವವನುಳಿದ ॥೧॥

ಕನಸು ಬಿಸಿಲುದೊರೆ ಸುರಚಾಪದಂತೆ
ಜನಿಸಿ ತೋರುವ ವಿಶ್ವವಿದು ನೆಲೆಯಲ್ಲ ಕಾ
ಮನೆಗನ್ಯವಿಲ್ಲವೆಂಬುದ ಮಿಗೆ ಬಲ್ಲ ॥೨॥

ಹರುಷವಾರಿಧಿ ಶಂಭುಲಿಂಗದೊಡವೆರೆದು
ಮರಳಿ ಸಂಸೃತಿಯ ವಾಸನೆಯ ನೆರೆ ಸುಟ್ಟ
ಪರಿಕಲ್ಪನೆಗೆಟ್ಟ ಸಹಜವಳವಟ್ಟ ॥೩॥

ಪದ ೪೧ ರಾಗ : ಸೌರಾಷ್ಟ್ರ

ಎಂದಿನಂತೆ ಜೀವ ಭಾವವಿರಲು ನಿಜನಿಗಮ ಗುರು
ಎಂದರಿದೊಡೇನು ಮುಕ್ತಿ ಸುಖಸಾಧ್ಯವಹುದೆ ॥ಪಲ್ಲ॥

ಎಂದಿನಂತೆ ಕಾಮವೆಂದಿನಂತೆ ಕೋಪವತಿ ಲೋಭ
ವೆಂದಿನಂತೆ ಮದ ಮೋಹ ಮತ್ಸರ ನಿಕರ
ಎಂದಿನಂತೆ ಭಯ ಶೋಕವೆಂದಿನಂತೆ ಮೂರವಸ್ಥೆ
ಯೆಂದಿನಂತೆ ತೋರ್ಪ ಪಸಿವು ತೃಷೆಗಳಿರುತಿರಲು ॥೧॥

ಎಂದಿನಂತೆದೇಶ ಕಾಲ ಗತಿ ದೇಹದಭಿಮಾನ
ವೆಂದಿನಂತೆ ಕುಲ ಜಾತಿ ನಾಮ ರೂಪಗಳು
ಎಂದಿನಂತೆ ಜಗವಾರು ವಿಕೃತಿ ಸಂಸರಣವಿ
ದೆಂದಿನಂತೆ ಕರ್ಮವಿಹ ಪರದೊಲವಿರಲು ॥೨॥

ಎಂದಿನಂತೆ ನವಗುಣವೆಂದಿನಂತೆ ಮಮಕಾರ
ವೆಂದಿನಂತೆ ನಿಂದೆ ವಂದನೆ ಕುಂದು ಕುಶಲ
ವೆಂದಿನಂತೆ ತೋರುವಿವರಿಂದೆ ವಿಲಕ್ಷಣವಾದಾ
ನಂದ ಬೋಧಾಂಬುಧಿ ಶಂಭುಲಿಂಗವಾಗಿರದೆ ॥೩॥

ಪದ ೪೨ ರಾಗ : ಪಣ್ಡಿಧನ್ಯಾಸಿ

ಎನ್ನೊಡನೆ ಸಮರಸವಿನ್ನು ಬೇಡೆಲೆ
ಮುನ್ನಿಂತೆ ತನುವೆ ನೀನನ್ಯವೆನಗೆ ॥ಪಲ್ಲ॥

ಪ್ರಸಿನೀನು ನಿಜವಾನು ಮಲವೆರಡರ
ಬೆಸುಗೆ ನೀನತಿ ಶುದ್ಧ ನಾನು ಕರ್ಮ
ವಿಸರದೇಳಿಗೆ ನೀನು ಸಾಕ್ಷಿಯಾನು ಭಾ
ವಿಸೆ ಬಂಧವದು ನೀನು ಮೋಕ್ಷವಾನು ॥೧॥

ಜಡವೆ ನೀನಜಡನೆ ನಾನು ಬಹುರೂಪು
ಪಡೆದಿಹೆ ನೀನೇಕರೂಪ ನಾನು
ಕೆಡುವೆ ನೀನೆಂದೆಂದು ನಾನು ನಿತ್ಯನು
ಕಡೆಗೆ ನೀನಹೆ ಮಣ್ಣು ನಾನೆ ವಸ್ತು ॥೨॥

ಒಂದವಸ್ಥೆಯೊಳಿರ್ಪೆ ನೀನಖಿಳಾವಸ್ಥೆ
ಯೊಂದಿರುತಿಹೆ ನಾನು ಭೂತ ವಿಕೃತಿ
ಅಂದವೆನಿಪ ನೀನು ನಿರ್ವಿಕೃತಿಯಾನು
ಕುಂದು ಹೆಚ್ಚು ನೀನು ಸಮವಾನು ॥೩॥

ಆರು ವಿಕಾರದ ಬಾಧೆ ಪಡುತಿಹೆ ನೀನು
ಬೇರೆ ನೋಡುವದಕೆ ನಾನು ದೃಶ್ಯವಾಗಿ
ತೋರುವೆ ನೀನಲ್ಲಿ ನಾನು ದೃಕ್ಕು ರುಜೆಗಳಪೆ ವಿ
ಚಾರಿಸೆ ನೀನು ಸುಖ ನಾನು ॥೪॥

ಪೇಯುವಹ್ನುದು ನೀನು ಕೇಳು ನಾನುಪಾ
ದೇಯಾತ್ಮಕನು ಮಿಥ್ಯೆ ಮಾಯೆ ನೀನು
ಮಾಯಾ ರಹಿತ ಶಂಭುಲಿಂಗವಾನಿಂತು
ಕಾರ್ಯವೆ ನೀನಾರು ನಾನಾರು ॥೫॥

ಪದ ೪೩ ರಾಗ : ಶ್ರೀರಾಗ

ಆಗದಾಗದು ವರವಿವೇಕಿಗೆ ಮುಕ್ತಿ ಆಗದಾಗದು ॥ಪಲ್ಲ॥

ವಿರತಿಯೊಳಖಿಳ ಸಂಸರಣವನಳಿದು ಶ್ರೀ
ಗುರುವಿನಿಂ ನಿಗಮಾರ್ಥವರಿಯಲು
ಪರವಪರೋಕ್ಷವಾಗದು ಮುನ್ನಿನಬಲಾದಿ ಸಂ
ಸ್ಮರಣವೆ ಮುಂಬರಿವುದರಿಂದ ॥೧॥

ಜಡಬುದ್ಧಿ ಜನಸಂಗ ರತಿ ವಿಷಯಾಸಕ್ತಿ
ಬಿಡದೆ ಮಾಡುವ ತರ್ಕವಭಿಮಾನ
ಕಡು ಚಪಲತೆಗೂಡಿ ಸುವಿಚಾರವಿರೆ ತತ್ವ
ದೆಡೆ ವೇದ್ಯವಾಗದಿಪ್ಪುದರಿಂದ ॥೨॥

ಮುಂದೆ ಕೆಲವು ಜನ್ಮವನು ಮಾಡುವಾರಬ್ಧ
ಹೊಂದಿದುತ್ತರ ಲೋಕ ಗತಿಯಾಸೆ
ಕುಂದದೆ ಮನನವಿರಲು ಕಾಣಿಸದು ನಿಜಾ
ನಂದ ವಾರಿಧಿ ಬೋಧವದರಿಂದ ॥೩॥

ಇಂತು ಮೂದೆರನೆನಿಸುವ ಬಂಧದಿರವನೋ
ರಂತರಿದವನು ತೊಲಗಿಸುವ
ಶಾಂತಿ ಮುಂತಾದ ಸುಗುಣವಿಲ್ಲದಿರೆ ಸಲ್ಲ
ನಂತ ಚಿನ್ನಿಧಿ ದೋರದುದರಿಂದ ॥೪॥

ಬಹು ವಿಧಿಗಳನುಳಿದಾರೈವುತಿರೆ ಪೇಳಿ
ದಹಿತವಾವೆಡೆಯೊಳಳಿವವಲ್ಲಿ
ಸಹಜರೂಪಿನ ಶಂಭುಲಿಂಗವೆ ಗೋಚರ
ವಹುದೆಂಬ ದೃಢವಾಗದುದರಿಂದ ॥೫॥

ಇತಿ ಪ್ರತಿಬಂಧಕತ್ರಯಃ

ಪದ ೪೪ ರಾಗ : ಆಹರಿ

ಕಾಥಲಿನ್ನೇನಭವ ನಿನ್ನ ಕೃಪೆಯಿಂದೆ
ನೋಡಿ ಮಿಗೆ ಮನ್ನಿಸೆನ್ನನು ॥ಪಲ್ಲ॥

ತನು ಮೂರನಗಲದಿರ್ಪ ರುಜೆಗಳ
ಜಿನುಗಿನುಮ್ಮಳವಿಡಿದು
ಜನಿಸುವಖಿಳ ಬಾಧೆಯನಿಹದೊಳು
ನೆನೆಯದಂತಿರಿಸೆನ್ನನು ॥೧॥

ಕಲುಷ ಕರ್ಮವನೆ ಮಾಡಿ ಸುಕೃತವ
ನುಳಿದೊದಗುವ ಚಿಂತೆಗೆ
ನೆಲೆಯಾದ ಪರಲೋಕ ದುಃಖವ
ತೊಲಗಿಸಿ ಸಲಹೆನ್ನನು ॥೨॥

ನರನು ತೊಡಗಿ ಬ್ರಹ್ಮನು ಕಡೆಯಾದ
ವರೊಳು ನೂರ್ಮಡಿಸಿ ಮಿಕ್ಕಾ
ಹರುಷಂಗಳನು ದಾಂಟಿದ ನಿಜಸುಖ
ಭರಿತನೆಂದೆನಿಸೆನ್ನನು ॥೩॥

ಪಲವು ಲೌಕಿಕ ವೈದಿಕವಹ ಕರ್ಮ
ಕುಲವನೆಸಗಿ ಮುನ್ನವೆ
ಬಳಿಕ ನಿನ್ನಿರವರಿಂದೆನಿನ್ನವ
ನೆಳಸಲೀಯದಿರಿಸೆನ್ನನು ॥೪॥

ಸದುಗತಿಗಳನು ಬೇರೆ ಬಯಸಲೀ
ಯದೆ ಪರತರ ಮುಕ್ತಿಗೆ
ಪದವಾದ ಶಂಭುಲಿಂಗ ನೀನಗ
ಲದೆ ಬೆರಸಿಹುದೆನ್ನನು ॥೫॥

ಇತಿ ಪ್ರತಿಬಂಧಕೋಪಶಮನಂ

ಪದ ೪೫ ರಾಗ : ಅಹರಿ

ಮನುಜರೊಳೈವರು ಸುಕೃತಿಗಳುಂಟು ಪೇ
ಳ್ವೆನವರನುತ್ತರೋತ್ತರ ಗುಣವಿಡಿದು ॥ಪಲ್ಲ॥

ಹಿತವಿದಹಿತವಿದೆಂದರಿಯದೆ ಲೌಕಿಕ
ಯುತನಾಗಿ ಜಾತಿ ಮಾತ್ರದ ವಿಧಿಗಳನೆ
ಪತಿಕರಿಸುತೆ ಭೋಗದಭಿಲಾಷೆಯೊಳು ಜನ
ಶತದಿಂದ ಮುಕ್ತನಹನೆ ಕರ್ಮಿಯಹನು ॥೧॥

ಜಗವಿದು ನಿಜವಿದರೊಳು ಬಾಹ್ಯಕರ್ಮವೆ
ಮಿಗಿಲೆಂದು ಚತುರಾಶ್ರಮವನೈದಿ ತನಗೆ
ಸುಗತಿಯನೆಳಸುವವನೆ ಮೂರು ಜನ್ಮದೊ
ಳಗೆ ಮುಕ್ತಿವಡೆವ ಮುಮುಕ್ಷುವೆನಿಸುವನು ॥೨॥

ಪುಸಿಯೆಂದು ವಿಶ್ವವನಾತ್ಮನೆ ನಿತ್ಯನೆಂ
ದುಸುರೆ ಸದ್ಗುರು ಕೇಳಿ ಪೊರ ಚಿಂತೆಯುಳಿದು
ಒಸೆದೊಳಗಾರೈವುತಿಹನೇ ಯಭ್ಯಾಸಿಯೆ
ನಿಸುವನೆರಡು ಜನ್ಮದೊಳು ಮುಕ್ತನಹನು ॥೩॥

ಲೋಕವೆಲ್ಲವನು ಮರೆದು ಪರತತ್ವಾವ
ಲೋಕನದಿಂದೊಳ ಹೊರಗಣ ಕೃತ್ಯಾ
ನೀಕವಿಲ್ಲದವನೆ ಯನುಭವಿಯೆನಿಸುವ
ನೇಕ ಜನ್ಮದೊಳು ಭಾವಿಸೆ ಮುಕ್ತನಹನು ॥೪॥

ಗುರುಶಂಭುಲಿಂಗವೆ ತಾನಾಗಿ ಮಿಕ್ಕಿನ
ಪರಿಕಲ್ಪನೆಗಳು ತೋರದೆ ನಿತ್ಯಸುಖದ
ಶರನಿಧಿಯೆನಿಸಿದನಿಪದೊಳು ಮುಕ್ತನಾ
ಗಿರುತಿರ್ಪನಾರೂಢನೆನಿಸುವನು ॥೫॥

ಇತಿ ಅಧಿಕಾರಿಪಂಚಕಂ

ಪದ ೪೬ ರಾಗ : ನಾಟ

ನಾವರಿಯೆವಿದನು ನಾನಾ ವಿಕೃತಿವಿಡಿದ ಮಾ
ಯಾವರಣವಿಲ್ಲದನುಭವದ ಸುಖಸುಧೆಯ
ಸೇವನೆಯ ಸೊಗಸು ತೀವಿರದೆ ಸುಮ್ಮನೆ ತನಗೆ
ಕೈವಲ್ಯವಾದುದೆಂಬವನ ಬಗೆ ಪ್ರೊಸತು ॥ಪಲ್ಲ॥

ಹಿತವಿದಹಿತವಿದೆಂಬ ತಿಳಿವಂತೆ ವಿಷಯಾಭಿ
ರತಿಯಂತೆ ಶಮೆಯಂತೆ ಮನಮರುಕವಂತೆ
ನುತ ಸುಕೃತವಂತೆ ಸದುಗತಿಗೆ ಮುಖವಿಡದಂತೆ
ಶ್ರುತಿಯೊಳೊಲವಂತೆ ಗುರುಮತ ರಹಿತವಂತೆ ॥೧॥

ಅರಿವಂತೆ ದೇಹಾದಿಗಳನು ಬೇರಿಡದಂತೆ
ನೆರೆ ಚಿದದ್ವಯವಂತೆ ಜೀವತ್ವವಂತೆ
ಮರವೆ ಪುಗದಂತೆ ಸಂಶಯವಳಿಯದಂತೆ ನಿಜ
ಕರಿಗೊಂಡುದಂತೆ ವಿಪರೀತ ಮತಿಯಂತೆ ॥೨॥

ನಿರಭಿಮಾನತೆಯಂತೆ ಮೀರದಿಹ ವಿಧಿಯಂತೆ
ಪರಿಪೂರ್ಣ ಕಾಮವಂತೆಣಿಕೆ ಗೆಡದಂತೆ
ಗುರುಶಂಭುಲಿಂಗವಾಗಿಹ ಮುಕ್ತಿಪದವಂತೆ
ಮರಳಿ ಭವಮರಣ ಸಂಸೃತಿಯ ಭಯವಂತೆ ॥೩॥

ಪದ ೪೭ ರಾಗ : ಲಲಿತೆ

ಪರತರವೆನಿಸುವ ಮುಕುತಿಯನೈದುವ
ಪರಿಯನರಸುವವನೀ ಶ್ರವಣಾದಿಗ
ಳಿರವನು ಪಗಲಿರುಳೆನ್ನದೊಲುಮೆಯೊಳು ಪರಿಭಾವಿಸುತಿಹುದು ॥ಪಲ್ಲ॥

ವಿವಿಧವೆನಿಸುವ ನಿಗಮ ವಾಕ್ಯಗಳಿಗೆ
ಹವಣಿಸಿದಾರು ತೆರೆದ ಲಿಂಗಂಗಳ
ನವಿರತವರಿಯಲು ಪರಮಾತ್ಮರಿಗೈಕ್ಯವೆ ತಾತ್ಪರ್ಯವಿದು
ಭುವನೋತ್ತರವೆಂದವಧರಿಪುದೆ ಸು
ಶ್ರವಣವಿದಸಾರೆಂಬುವದನೊಂದಿ
ಸುವಿಚಾರಿಸಲೀಯದ ಮೂಲಜ್ಞಾನವನೆ ಕೆಡಿಸುತಿಹುದು ॥೧॥

ತನ್ನನು ಪರದಿಂದನ್ಯವೆನಲು ತನ
ಗನ್ಯತೆಯಹುದು ಪರತೆಯದರಿಂ ಜಾ
ಡ್ಯಂ ನಿಜವೇ ಘಟದಂತೆಂಬನುಮಾನಂ ನೆರೆದುಪಮೆಗಳ
ಚೆನ್ನೆಸೆವಂತಾರೈವುದೆ ಮನನವಿ
ದುನ್ನತ ಪರವಾನೋ ಬಳಿಕಲ್ಲವೋ
ಯನ್ನುತಮಿಹ ಸಂಶಯವನು ತೊಲಗಿಸಿ ಮನ್ನಣೆಗೊಡತಿಹುದು ॥೨॥

ಮೊದಲೊರೆದಾ ಶ್ರವಣದಿಂದುರೆ ಮನನ
ವದರಿಂ ನಿರ್ಧರಿಸಿದ ಶಂಭುಲಿಂಗ
ಪದದಚಲಿತ ಭಾವನೆಯೆ ನಿಧಿಧ್ಯಾಸದ ನಿಜರೂಪವದು
ಪ್ರದಿದಹಮಾದಿಯೊಳಾತ್ಮತೆಯನು ಬಹು
ವಿಧದ ಜಗಕ್ಕೆ ಸದಾ ಸತ್ಯತ್ವವ
ನೊದವಿಸುತಿಹ ವಿಪರೀತವನಿರಲೀಯದೆ ಬೀಳ್ಕೊಡುತಿಹುದು ॥೩॥

ಇತಿ ಭಾವನಾತ್ರಯೋಪಶಮನಂ

ಇತಿ ಮನನಂ

ಪದ ೪೮ ರಾಗ : ದೇಶಿ

ನೋಡಿ ತಿಳಿದನುಗುಣ ಯೋಗಾನುಸಂಧಾನವನೆ
ಮಾಡುತಿರೆ ಮುಕ್ತಿ ಸುಖಸಿದ್ಧಿಯಹುದು ॥ಪಲ್ಲ॥

ಅಸಿಲ ಶಿಖಿ ಹೃದಯ ತನು ಗೃಹ ನಗರ ದೇಶ ಲೋ
ಕನಿಕಾಯದೊಡನೆ ಪರಿವಿಡಿದಡರಿ ಮೇಲೆ
ಘನ ಪರಂಜೋತಿಯೊಳು ಮನವಳಿದಿಹುದೇ ಸ್ಥೂಲ
ವೆನಿಪ್ಪುದದು ಪಲ್ಲಟವಾಗೆ ಸೂಕ್ಷ್ಮಯೋಗ ॥೧॥

ತಿಳಿವೆಂಬ ತೆರೆಮಸಗೆ ಮಾಯಾಪುಳಿನ ಸೇತು ।
ವಳಿಯೆ ಜೀವೇಶರೆಂಬುಭಯ ಭಾವನೆಯು
ಕಳೆದು ಬೋಧಾಂಬುನಿಧಿ ಪಡೆದೇಕ ರೂಪವನು
ಬಳಕೆಗೊಳಗಾಗದಿರುತಿರೆ ವಿನುತಯೋಗ ॥೨॥

ಪರಮಾತ್ಮವೆಂಬಮೃತಶರಧಿ ಸಪ್ತಾವರಣ
ದಿರವನುಳಿದಖಿಳ ಭುವನವನು ತನ್ನುವನು
ಬೆರಸಿ ಬೇರಿಲ್ಲದೊಳಕೊಂಡು ತೆಕ್ಕನೆ ತೀವಿ
ಪರಿಕಲ್ಪನೆಗೆ ಬಾರದಿರಲಧಿಕಯೋಗ ॥೩॥

ಬಳಿಕಾತ್ಮ ಬೋಧಾಂಬುರಾಶಿ ಕೋಶದಮೇರೆ
ಗಳೆದು ಪರತತ್ವವನು ಸಚರಾಚರವನು
ಒಳಕೊಂಡು ವಿಪರೀತ ಭಾವನಾ ವೀಚಿಗಳ
ನುಳಿದು ಸಲೆ ಸಹಜ ಸುಖವಿಹುದಮಳ ಯೋಗ ॥೪॥

ಶಿವ ಜೀವರೊಡನಿರ್ದ ಭೇದಾಪರೋಕ್ಷಮೆನಿ
ಸುವ ಜಾಡ್ಯ ಧರ್ಮಗಳು ನೀತಿಗಳೆದುಳಿದ
ಅವಿರಳ ಚಿದಾನಂದಮಯನಾದ ಶಂಭುಲಿಂ
ಗವೆ ತಾನೆನಿಸಿ ತೋರುತಿಹುದೆ ನಿಜಯೋಗ ॥೫॥

ಇತಿ ನಿಧಿಧ್ಯಾಸನ ಪಂಚಯೋಗಃ

ಪದ ೪೯ ರಾಗ : ಕಾಂಬೋಧಿ

ಪಡೆವುದಾಗದು ನಿಜಸುಖವ ತನ್ನ ತಾ
ನೆಡೆಬಿಡದಾರಯ್ಯಲರಿಯದಾತನಿಗೆ ॥ಪಲ್ಲ॥

ಪೊರಗೊಂದು ರೂಪ ನಿರೀಕ್ಷಿಸದೆ ಬೇರಾವ
ತೆರದ ಲಕ್ಷ್ಯವನೊಳಗರಿದು ಭಾವಿಸದೆ
ಮರೆಯದೆಚ್ಚರವನಚ್ಚಳಿಯದೆ ವಾಸನೆ
ಯುರಿಸದೇಕಾಗ್ರತೆ ಕರಿಗೊಂಡಂಗಲ್ಲದೆ ॥೧॥

ಇದಮೆನಿಸದೆಯಹಮೆನಿಸಿ ತೋರದಾ
ವುದನೊಡಗೂಡದನ್ಯತೆ ಯಾಗದುಳಿದ
ಪದವಿದೆಂಬುದನರಿಯದೆ ಮೋಸ ವಿ
ಲ್ಲದೆ ಸಮರಸ ಭಾವದೊಳು ನಿಂದಂಗಲ್ಲದೆ ॥೨॥

ಎರಡೆನ್ನದೊಂದೆಂಬ ಬಗೆಯುನಿರಿಸದೆ
ಪರವಶಮಿರದೆ ಚೇತರಿಸದೇನೊಂದು
ಪೊರಗಾಣಿಸದೆ ಶಂಭುಲಿಂಗವಾಗಿ ತಾ
ನಿರುತಿಪ ನಿಜಮುಕ್ತಿಯನು ಕಂಡಂಗಲ್ಲದೆ ॥೩॥

ಪದ ೫೦ ರಾಗ : ಭೂಪಾಳಿ

ಶ್ರೀಗುರುವೆ ಶರಣು ಶಿವಯೋಗ ಸಂಪದವನೆನ
ಗಾಗುಮಾಡಿದೆ ನಿಜವಿರಾಗಿ ಜನವಂದ್ಯ ॥ಪಲ್ಲ॥

ಪೊರಗಣ ಘಟಾದಿ ವಿಷಯವನು ಪಲರೂಪದಿಂ
ದರಿವುತಾಶ್ರೈಸಿದ ಚಿದಾಭಾಸದ
ಕುರುಹು ವಿಡಿದಂತಲ್ಲಿ ಸತ್ಯ ಸಂವಿತ್ತೆನಿಸಿ
ಮೆರೆವ ಪರತತ್ವವದು ನೀನೆಂದು ಪೇಳ್ದ ॥೧॥

ಒಳಗೆ ವಪ್ಪುರಸು ಮನೋವೃತಿ ನಿದ್ರೆಯೆಂದೆನಿಸಿ
ಕೊಳುತಿರ್ಪ್ಪವೈದು ಕೋಶವನು ಬೇರಿಟ್ಟು
ತಿಳಿವ ಕೂಟಸ್ಥ ನೀನಾ ವಿಶ್ವಸಾಕ್ಷಿಯಾ
ಗುಳಿದಿಹ ಪರಬ್ರಹ್ಮವೆಂದು ಬೋಧಿಸಿದ ॥೨॥

ಭೇದಾಪರೋಕ್ಷವೆಂಬೆರಡುಪಾಧಿಯನುಳಿದು
ವಾದಿಸದಖಂಡೈಕರಸರೂಪೆನಿಸಿದ
ಬೋಧಾಂಬುನಿಧಿ ಶಂಭುಲಿಂಗವಾಗಿಹ ಮುಕ್ತಿ
ಯಾದ ಪರಿ ನಿನಗಿದೆಂದೊಲಿದರುಪಿದ ॥೩॥

ಪದ ೫೧ ರಾಗ : ಕಲ್ಯಾಣಿ

ಬೇರೊಂದು ಯೋಗದೊಳು ಬಳಲದಾನಂದವನೆ
ಸೂರೆಗೊಡುವಾತ್ಮ ನಿಜನಿಷ್ಠರಾಗಿರಿರೋ ॥ಪಲ್ಲ॥

ಮನದೊಳಾರಬ್ಧ ಕರ್ಮಾಧೀನದಿಂದಿರದೆ
ಜನಿಸುವಂಗಜ ವಿಕಾರಾದಿ ಗುಣವೆಲ್ಲ
ತನಗೆ ವಿಷಯಂಗಳವನರಿವರಿವೆ ತಾನೆಂಬ
ನೆನಹು ಸಂತತವಳಿಯದಿಹುದೆ ಯೋಗ ॥೧॥

ಮಹದಾದಿ ವಿಕೃತಿಯೊಡಗೂಡದದ್ವಯ ನಿತ್ಯ
ವಹ ಸಚ್ಚಿದಾನಂದ ಪರಿಪೂರ್ಣವೆನಿಪ
ಸಹಜ ಪರಬೊಮ್ಮವನೆ ತಾನೆಂಬ ಮತಿ ಮರೆಯ
ದಿಹುದೆ ವೇದಾನುಮತವಾದ ಯೋಗ ॥೨॥

ಕರಣಾದಿ ಗುಣ ವಿಷಯತತಿಗೆ ಸಾಕ್ಷಿಕನೆಂಬ
ಗುರುಶಂಭುಲಿಂಗ ತಾನಾದೆನೆಂಬ
ಪರಿಕಲ್ಪನೆಯನುಳಿದು ತೆರೆಯುಡಗಿದಂಬುಧಿಯ
ಪರಿಯಂತೆ ಸಲೆ ಸುಮ್ಮನಿಹುದೆ ನಿಜಯೋಗ ॥೩॥

ಪದ ೫೨ ರಾಗ : ವಡ್ಡಿಧನ್ಯಾಸಿ

ಎಂದಿರ್ಪೆನೋ ನಿಜಸುಖದಲ್ಲಿ ಬಹು
ದಂದುಗವೆಲ್ಲವನಳಿದುಳಿದು ॥ಪಲ್ಲ॥

ಮಡದಿ ಮಕ್ಕಳು ಮಿತ್ರರನುಜರು ನೆಂಟ
ರೊಡಲೊಡವೆಗಳನೆ ಮೋಹಿಸಿ
ಬಿಡಲಾರದಿಹದೊಳಗಣ ಚಿಂತೆ ಪಿಂಗಿ
ಪಡೆದು ನಿತ್ಯಾನಂದ ಪದವನು ॥೧॥

ಭೋಗ ವಿಶೇಷದೊಡನೆ ಸ್ವರ್ಗ ಲೋಕ
ವಾಗಲೆಂದೆಳಸಿ ಜ್ಯೋತಿಷ್ಟೋಮ
ಯಾಗಾದಿಗಳನೊಂದಿ ರಚಿಸುವ ಬಾಧೆ
ಪೋಗಿ ಸಕಲಜಗನ್ಮಯನಾಗಿ ॥೨॥

ದುರಿತಕರ್ಮದ ಕಾಟವಿಲ್ಲದೆ ತತ್ಪರಿ
ಹಾರ ವಿಷಯವೆಂದೆನಿಸುವ
ಪರಿವಿಡಿದೊಳ ಹೊರಗಣ ಪೂಜಾ ನೇಮ
ದುರುವಣೆ ಸಿಂದು ನಿರ್ಮಲನಾಗಿ ॥೩॥

ಮರವೆ ಸಂಶಯ ವಿಪರೀತದ ಮೂರು
ಕುರುಹು ದೋರಲು ಬಳಿಕವರಿಂದ
ಮೆರೆವ ಸುಶ್ರವಣ ಮನನ ನಿಧಿ ಧ್ಯಾಸ
ದೆರಕವಿಲ್ಲದೆ ಸ್ವತಂತ್ರತೆಯೊಳು ॥೮॥

ಆವಮತದೊಳಾರು ವಿಧಿಸುವ ವಿಶ್ವ
ಭಾವನೆಗಳನೊಮ್ಮೆ ಬೆರಸದ
ಪಾವನಾತ್ಮಕ ಶಂಭುಲಿಂಗವ ಕೂಡಿ
ಜೀವನ್ಮುಕ್ತತೆ ಮಿಗೆ ನೆಲೆಗೊಂಡು ॥೯॥

ಪದ ೫೩ ರಾಗ : ನಾದನಾಮಕ್ರಿಯೆ

ತಿಳಿಯಲಹುದೊಲಿದು ಬಿಡಲಹುದು ಮೋಹಿಸದೆ ಭೂ
ತಳದೊಳಾನೆಂದಹಂಕರಿಸದಿಹುದರಿದು ||ಪಲ್ಲ||

ಪ್ರಕೃತಿ ಮಹದಹಮು ಚೇತನ ಕರಣವಸು ಭೂತ
ವಿಕೃತಿಗಳನಾ ವಿಶ್ವ ತೈಜಸ ಪ್ರಾಜ್ಞ
ಸಕಲೇಶ ಸೂತ್ರಿ ವೈಶ್ವಾನರರುಗಳನು ಸಾ
ಕ್ಷಿಕ ಪರಬ್ರಹ್ಮರನು ಶ್ರುತಿ ಗುರುಗಳಿಂದ ||೧||

ಧನ ಕನಕ ವಸ್ತ್ರ ಭೂಷಣ ಗಂಧಮಾಲ್ಯ ವಾ
ಹನ ರಮ್ಯವಾಸ ವನಿತಾದಿ ವಸ್ತುಗಳು
ಮನವಾರೆ ಮುಂದೆ ತೀವಿರೆ ಭೋಗಿಸುವ ಶಕ್ತಿ
ತನಗಿರ್ದೊಡಂತವೆಲ್ಲವನು ತೃಣವೆಂದು ||೨||

ಜ್ಞಾನಿ ತಥಹರಿ ಶಾಸ್ತ್ರಿ ಸುಗುಣಿ ವಿಜಿತೇಂದ್ರಿಯನ
ನೂನಮತಿ ಯೋಗಿ ಮುನಿ ವಿಮಲನತಿಮಹಿಮ
ದಾನಿಯೆಂದಿಳೆ ತನ್ನನೆಳಸಿ ಬಣ್ಣಿಸಿದೊಡಭಿ
ಮಾನಿಸದೆ ನಡೆವುದಚ್ಚರಿ ಶಂಭುಲಿಂಗ ||೩||

ಪದ ೫೪ ರಾಗ : ಫಾರ್ಸಿ

ಗುರುವೆ ನಿಮ್ಮಯ ಕರುಣದೊಳೆನ್ನ ತತ್ವ.
ದಿರವನರಿದು ನಿತ್ಯ ಸುಖಿಯಾದೆ ||ಪಲ್ಲ||

ನಾಮ ರೂಪವನಭಿಮಾನಿಸಿ ಕೊಂಡು
ತಾಮಸ ಮತಿಗೊಳಗಾಗಿರೆ
ಪ್ರೇಮಾಸ್ತಿ ಭಾತಿಯೆಂಬಿವೆ ನಿನ್ನ ನಿಜ
ಧಾಮವೆಂದೊಸೆದೆಚ್ಚರಿಸಲಾಗಿ ||೧||

ತನು ನೇತ್ರ ಮನವೆಂಬಿವೆಲ್ಲವು ನೋಡೆ
ನಿನಗೆ ವಿಷಯವಾದ ಕಥದಿಂದ ನಿನಗೆ
ಬಂಧಕವಿದೆಂದೆನಲುಂಟೆ ಸಾಕ್ಷಿಕನೆ
ನೀನೆಂದು ತಿಳುಹಲಾಗಿ ||೨||

ದೇಹಾದಿಗಳು ಲೋಹಕಾಂತವ ಪೊಂದಿ
ಲೋಹದಂತಿರದೆ ಚಲಿಸುವಂತೆ
ಊಹಿಸೆ ನಿನ್ನ ಸನ್ನಿಧಿಯಿಂದೆ ಚೇಷ್ಟಿ
ಪಾ ಹದನೆಂದು ಸೂಚಿಸಲಾಗಿ ||೩||

ಪಳಕುಪಾಧಿಯನೊಂದಿ ತದ್ರೂಪವೆಂಬ
ವೊಲು ನೀನಖಿಳ ತತ್ವಮಯನಾಗಿ
ಬೆಳಗಲಂತದು ನೈಜವಪ್ಪುದೆ ನಿ
ರ್ಮಳನು ನೀನೆಂದನುಗ್ರಹಿಸಲು ॥೪॥

ಪ್ರಾಣದೊಳಗೆ ಪ್ರಾಣಪದವಾಗಿ ತನ
ಗೂಣೆಯವಿನಿತಿಲ್ಲದಪರೋಕ್ಷ
ತಾಣವೆನಿಪ ಶಂಭುಲಿಂಗವ ಕೂಡಿ
ಜಾಣನಾಗೆಂದು ಬೋಧಿಸಲಾಗಿ ॥೫॥

ಪದ ೫೫ ರಾಗ : ಭೈರವಿ

ಬಾಧೆ ತನ್ನೊಳು ತೋರದ ಪರಮಾರ್ಥ
ಬೋಧೆ ನೆಲೆಗೊಂಡು ನಿಂದ ಮೇಲೆ ॥ಪಲ್ಲ॥

ಆನಂದಮಯನ ಜಗವ ರಚಿಸಿ
ವಿಜ್ಞಾನಮಯವೆನಿಸಿ ಕರ್ಮ ವಿಡಿದು
ಹಾನಿಗೊಳಗಹನಲ್ಲದೆ ಸಲೆ ಸಾಕ್ಷಿ
ತಾನೆಂಬ ನಿಜವನರಿದ ಮೇಲೆ ॥೧॥

ಪರಮ ಜೀವರುಗಳೆಂಬ ಚೈತನ್ಯ
ವೆರಡನತಿಗಳೆದು ಬೇರೆ ಬ್ರಹ್ಮ
ತುರಿಯ ವೆಂಬುಭಯವಳಿದ ಚಿನ್ಮಾತ್ರ
ದಿರವೆ ತಾನೆಂದು ತಿಳಿದ ಮೇಲೆ ॥೨॥

ಮರೆಮ ಮೊದಲರಿದ ಬಳಿಕ ಸಹಜದೊಳು
ಸಿರಿಗೆ ನೆಲೆಯಾದುದೆಂಬ ಮಾತಿಗೆ
ಪೆರತೆನಿಪ ಶಂಭುಲಿಂಗವಾಗಿ ತಾ
ನುರೆ ಮಾನವನು ಮೀರಿದ ಮೇಲೆ ॥೩॥

ಪದ ೫೬ ರಾಗ : ವಡ್ಡಿ ಧನ್ಯಾಸಿ

ಬಲ್ಲಡುಸಿರಿರಿ ಭಾವಕರು ನೀವೆಲ್ಲ
ರಿಲ್ಲಿ ಗುರುಶಿಷ್ಯರೊಳು ಮೊದಲಾವುದರಿವೆ ॥ಪಲ್ಲ॥

ಪೊರೆವೆನೀತನೆಂಬವನಿಚ್ಛೆ ಮೊದಲೊ
ವಿರತಿ ಚಿತ್ತದವನ ಪರಿಪಾಕ ಮೊದಲೊ
ಕರುಣಕಟಾಕ್ಷದವನ ನೋಟ ಮೊದಲೋ
ಶರಣು ಹೊಕ್ಕವನ ಕಿಂಕರಭಾವ ಮೊದಲೊ ॥೧॥

ಮೋಹ ಮುಂಬರಿವವನಾರೈಕೆ ಮೊದಲೊ
ಕೋಹಮೆಂಬವನ ಬಿನ್ನಪದೇಳ್ಗೆ ಮೊದಲೋ
ಸೋಹಮೆಂದರಿಯೆಂಬವನ ಬೋಧೆ ಮೊದಲೊ
ಊಹೆ ದೋರದವನ ನಿಜನಿಷ್ಠೆ ಮೊದಲೊ ॥೨॥

ಮೌನ ಮುದ್ರೆಗೆ ಸಂದವನ ಸನ್ನೆ ಮೊದಲೊ
ತಾನುತಾನಾದವನನುರಾಗ ಮೊದಲೊ
ಏನುಮಿಲ್ಲದ ಶಂಭುಲಿಂಗವೆ ಮೊದಲೊ
ಮಾನವಳಿದು ನಿಂದವನ ಮುಕ್ತಿ ಮೊದಲೊ ॥೩॥

ಇತಿ ನಿಧಿಧ್ಯಾಸನಂ

ಪದ ೫೭ ರಾಗ : ನಾದನಾಮಕ್ರಿಯೆ

ಆವ ಬಾಧೆಯನುಂಟು ಮಾಡಬಹುದಖಿಳ ಭೋ
ಗಾವಲಂಬನದೊಳಿರೆ ಶಿವಯೋಗಿಗೆ ||ಪಲ್ಲ||

ರವಿ ಸರ್ವಸಾರವನು ಸವಿದು ನಾನಾ ವಸ್ತು
ನಿವಹವನು ನಲಿದುಂಡು ವಾಯುಸಖನು
ಪವನವೆಲ್ಲವನು ಮೈ ಸೋಂಕಿ ಶುಚಿಯೆನಿಸಿದಂ
ತವಿಭೇದರೂಪ ತತ್ವಜ್ಞಾನಿಗೆ ||೧||

ಪಳುಕುಪಾಧಿಯನೊಂದಿ ನಳಿನದಳವಿರ್ದು ಜಲ
ದೊಳು ಮೇಘಜಾಲದೊಡವೆರಸಿ ಗಗನ
ಮಲಿನವಾಗದೆ ಲೇಪಿಸದೆ ನೆನೆದು ಕೆಡದಂತೆ
ತಿಳಿದಾತ್ಮ ನಿಷ್ಠೆನೆಲೆಗೊಂಡ ಯತಿಗೆ ||೨||

ಮರದೊಳಿಹುದುನಲನಾ ಮರವನಲನಲ್ಲಿರದ
ಪರಿಯಂತೆ ಸಕಲ ಸಂಸಾರದೊಳಗೆ
ಬೆರೆದಿಹನು ಗುರುಶಂಭುಲಿಂಗವೇ ತಾನಾದ
ಶರಣನಾ ಸಂಸಾರವಿಲ್ಲಾತಗೆ ||೩||

ಪದ ೫೮ ರಾಗ : ಸೌರಾಷ್ಟ್ರ

ಪ್ರಾರಬ್ಧ ಕರ್ಮ ವಾಸನೆಯೊಂದೆ ನಾಲ್ಕು ಪ್ರ
ಕಾರವಾಗಿಹುದು ಜೀವನ್ಮುಕ್ತರ ॥ಪಲ್ಲ॥

ಅರಿವಮೇಲೊಡಲು ವಿಡಿದು ಭೋಗದೊಳು ಮನ
ವೆರಕವೆಂದೆನಿಸಿ ಪಶುವಿನಂದದಿ
ಮೆರೆವಾತ್ಮನೊಳು ಪ್ರೀತಿಮಾತ್ರವೆ ಕರ್ಮದೊ
ಳುರಿವ ಸಂಸ್ಕಾರದ ತೀವ್ರವಿದು ॥೧॥

ಭೋಗಕ್ಕೆ ಮುಖ್ಯತೆದೋರೆ ತಾನಾತ್ಮವಶ
ನಾಗಿ ಬಾಲಕನಂತೆ ಭುವನದೊಳು
ರಾಗಿಯೆನಿಸಿ ನಲಿದಾಡುತಿರಲು ಕರ್ಮ
ವೇಗದೊಳಿದು ಮಧ್ಯದಿರವಹುದು ॥೨॥

ತೊಲಗಿ ಭೋಗವನು ಪರಮಾತ್ಮನೊಡನೆ ಮತಿ
ನೆಲಸಿ ಸುರತಸುಖಮಿಥುನದಂತೆ
ಸಲೆ ನಿಜಾನಂದದಿಂದಿರೆ ಕರ್ಮಗಂಧದ
ಬಲದಿಂದೆ ಮಂದವೆನುತಿಹರದನು ॥೩॥

ನಿರುಪಮಾದ್ವಯ ನಿತ್ಯ ಪರಿಪೂರ್ಣ ಸುಖಬೋಧ
ತುರಿಯಾತ್ಮನಾಗಿ ನಿಂದನುಗೆಡದೆ
ಪರಮುಃಕ್ತನಂತೆ ಪದುಳವಿುರೆ ಕರ್ಮದ
ವರಸುಪ್ತಭಾವನೆಯೆನಿಸುಪ್ರದು ॥೪॥

ಇಂತು ಕರ್ಮದ ವೇಗವೆಂತು ಫಲಿಸುತಿಹುದು
ದಂತೆ ಜ್ಞಾನಿಗಳಿರೆ ಪಲವಂದದಿ
ಸಂತಸದೊಳು ಶಂಭುಲಿಂಗವಾಗಿಹ ಮೋಕ್ಷ
ವಂತರಿಗೆ ಸಮಾನವೇಯಹುದು ॥೫॥

ಇತಿ ಜೀವನ್ಮುಕ್ತಸ್ಥಿತಿ ಪ್ರಕಾರಾಃ

ಪದ ೫೯ ರಾಗ : ನಾದನಾಮಕ್ರಿಯೆ

ಜ್ಯೋತಿ ಬೆಳಗುತಿದೆ ವಿಮಲ ಪರಂಜ್ಯೋತಿ ಬೆಳಗುತಿದೆ
ಮಾತು ಮನಂಗಳಿಂದತ್ತತ್ತ ಮೀರಿದ
ಸಾತಿಶಯದ ನಿರುಪಾಧಿಕ ನಿರ್ಮಲ ॥ಪಲ್ಲ॥

ಶಿವಧರ್ಮನಾಳವೆಂತೆಂಬ ಕಂಬದಮೇಲೆ
ಸುವಿವೇಕ ಹೃದಯಾಬ್ಜ ಪಣತೆಯೊಳು
ಸವೆಯದ ಸದ್ಭಕ್ತಿ ರಸತೈಲ ತೀವಿದ
ಪ್ರವಿಮಲ ಕಳೆಯೆಂಬ ಬತ್ತಿವಿಡಿದು ದಿವ್ಯ ॥೧॥

ಮುಸುಕಿದ ವಿಷಯಪತಂಗ ಬಿದ್ದುರುಳೆ ತಾ
ಮಸಬುದ್ಧಿಯೆಂಬ ಕತ್ತಲೆಯುಳಿಯೆ
ಮಸಗಿ ಸುಜ್ಞಾನವೆಂತೆಂಬ ಮಹಾಪ್ರಭೆ
ಪಸರಿಸಿ ಮಾಯಾಕಾಳಿಕೆ ಪೊರ್ದದನುಪಮ ॥೨॥

ಪ್ರಣವಾಕಾರದ ಗುಣಮೂರು ಮುಟ್ಟದ
ಗಣನೆಗತೀತಾರ್ಥವೆನೆ ತೋರುವ
ಅಣುಮಾತ್ರ ಚಲನೆಯಿಲ್ಲದ ಮೋಕ್ಷ ಚಿಂತಾ
ಮಣಿಯೆನಿಸುವ ಶಂಭುಲಿಂಗವೆ ತಾನಾದ ॥೩॥

ಇತಿ ಜ್ಞಾನಪ್ರತಿಪಾದನಸ್ಥಲಂ ಸಮಾಪ್ತಂ

ಇಂತು ನಿಜಗುಣ ಶಿವಯೋಗಿವಿರಚಿತವಾದ ಕೈವಲ್ಯಪದ್ಧತಿಯೆಂಬ
ಪ್ರಕರಣದಲ್ಲಿ ಜ್ಞಾನಪ್ರತಿಪಾದನಸ್ಥಲಕ್ಕೆ ಸೇರಿದ
ವಚನಜೋಡು ೫೯ಕ್ಕಂ ಬಿಚ್ಚಿದ ಪದಂಗಳ ೨೨೩ಕ್ಕಂ ಮಂಗಳ ಮಹಾ
ಶ್ರೀ ಶ್ರೀ ಶ್ರೀ

ಇಂತು ನಿಜಗುಣಶಿವಯೋಗೀಂದ್ರ ವಿರಚಿತವಾದ ಪಂಚಸ್ಥಲದಿಂದ
ಕೂಡಿದ ಕೈವಲ್ಯಪದ್ಧತಿ ಸಮಾಪ್ತವು
ಮಂಗಳಮಸ್ತು

ಕೈವಲ್ಯ ಪದ್ಧತಿಯ

ಭಾವಪ್ರಕಾಶ

❋

ಅವತರಣಿಕೆ

೧

ಸೃಷ್ಟಿಕರ್ತನಾದ ಪರಮಾತ್ಮನು ಮಾನವಪ್ರಾಣಿಗಳ ಸೃಷ್ಟಿಯಲ್ಲಿಯೇ ತನ್ನ ಸೃಷ್ಟಿರಚನಾಚಾತುರ್ಯವನ್ನೆಲ್ಲ ವೆಚ್ಚ ಮಾಡಿರುವನೆಂದು ಕಂಡುಬರುತ್ತದೆ. ಅಂತೆಯೇ ಆತನ ಸೃಷ್ಟಿಯಲ್ಲಿ ಮಾನವರಿಗಿರುವ ಸ್ಥಾನಮಾನಗಳು ಮತ್ತಾವ ಪ್ರಾಣಿಗಳಿಗೂ ಇರುವದಿಲ್ಲ. ಮಾನವರನ್ನು ಇತರ ಪ್ರಾಣಿಗಳಿಂದ ಬೇರ್ಪಡಿಸಿ ಅವರಿಗೆ ಸರ್ವಶ್ರೇಷ್ಠ ಸ್ಥಾನಮಾನಗಳನ್ನು ಕಲ್ಪಿಸಿಕೊಟ್ಟದ್ದು ಬಹಿರಂಗದ ಯಾವ ವೇಷ, ಭೂಷಣ, ಧನ, ಅಧಿಕಾರ ಮುಂತಾದವೂ ಅಲ್ಲ ; ಕೇವಲ ವಿವೇಕವೊಂದೇ ಒಂದು. ಅದೇ ಮಹಾದೇವನು ಮಾನವರಿಗೆ ಅನುಗ್ರಹಿಸಿದ ಮಹಾಪ್ರಸಾದ. ಅದೇ ಮಾನವತ್ವದ ಸುಂದರ ಲಕ್ಷಣ.

ವಿವೇಕಶೀಲರಾದ ಮಾನವರಲ್ಲಿ ನಾನಾರು ? ಬಂದದ್ದು ಎಲ್ಲಿಂದ ? ಇರುವದೆಲ್ಲಿ ? ಹೋಗುವದೆಲ್ಲಿಗೆ ? ಈ ಮರ್ತ್ಯಲೋಕದಲ್ಲಿ ಮಾಡ ಬೇಕಾದುದೇನು ? ಪಡೆಯಬೇಕಾದುದೇನು ? ಮುಂತಾದ ಪಲವಾರು

ಪ್ರಶ್ನೆಗಳು ಸ್ವಾಭಾವಿಕವಾಗಿಯೇ ತಲೆದೋರುವವು. ಅವುಗಳಿಗೆಲ್ಲ ಸರಿಯಾದ ಉತ್ತರಕೊಟ್ಟು ಬಾಳುವಲ್ಲಿಯೇ ಜೀವನದ ಕೃತಾರ್ಥತೆಯು ಹುದುಗಿ ಕೊಂಡಿರುವದು.

ಯಾರು ತಮ್ಮ ಜೀವನದ ಕೃತಾರ್ಥತೆಯ ಬಗೆಗೆ ಸರಿಯಾಗಿ ಲಕ್ಷಗೊಡುವರೋ ಅಂಥವರಿಗೆಲ್ಲ, ಸನ್ಮಾರ್ಗದರ್ಶನ ಮಾಡಬಲ್ಲ ಸದ್ಗುರುವನ್ನಾಶ್ರಯಿಸಿ ಆತನ ಸದುಪದೇಶವನ್ನು ಶ್ರದ್ಧೆಯಿಂದ ಆಲಿಸಿ ಪಾಲಿಸಬೇಕಾದುದು ಅನಿವಾರ್ಯವು. ಅಂತೆಯೇ ಅನಿಮಿತ್ತ ಬಂಧುಗಳಾದ ನಿಜಗುಣ ಶಿವಯೋಗಿಗಳು ಮುಮುಕ್ಷುಗಳಾದ ಅಧಿಕಾರಿ ಮಾನವರಿಗೆ ಮುಕ್ತಿಪಡೆಯುವ ಹಾದಿಯನ್ನು ತೋರಿಸಲು 'ಕೈವಲ್ಯ ಪದ್ಧತಿ' ಎಂಬ ಅರ್ಥಪೂರ್ಣವಾದ ಗ್ರಂಥವನ್ನು ಬರೆಯಲುದ್ಯುಕ್ತರಾಗಿರುವರು,

ಶಾಸ್ತ್ರದಲ್ಲಿ ಶಿವನಿಗೂ ಗುರುವಿಗೂ ಅಭೇದವನ್ನೇ ಹೇಳಲಾಗಿದೆ

"ಯೋ ಗುರುಃ ಸಃ ಶಿವಃ ಪ್ರೋಕ್ತೋ ಯಃ ಶಿವಃ ಸ ಗುರುಃ ಸ್ಮೃತಃ"

(ಶಿವಾಗಮ)

ತನ್ನ ಭಕ್ತರ ಕಲ್ಯಾಣಕ್ಕಾಗಿ ಅವ್ಯಕ್ತನಾಗಿದ್ದ ಶಿವನೇ ವ್ಯಕ್ತರೂಪವನ್ನು ಧರಿಸಿ ಗುರುವೆಂದು ಹೇಳಿಸಿಕೊಳ್ಳುವನು. ಗುರುವು ತನ್ನ ವ್ಯಕ್ತಸ್ಥಿತಿಯಿಂದ ಅವ್ಯಕ್ತಸ್ಥಿತಿಗೆ ಹೋದಾಗ ಶಿವನಾಗುವನು. ಮಾನವರ ಜೀವನ ವಿಕಾಸವು ಗುರುವಿನ ಅನುಗ್ರಹದಿಂದಲೇ ಪ್ರಾರಂಭವಾಗುವದು. 'ಶಿವಪಥವರಿವಡೆ ಗುರು ಪಥವೇ ಮೊದಲು' ಎಂದು ಮಹಾನುಭಾವಿ ಬಸವಣ್ಣನವರು ಅಪ್ಪಣೆ ಕೊಟ್ಟದ್ದು ತ್ರಿಕಾಲಾಬಾಧಿತವು. ಶಿವಾನುಗ್ರಹವು ಭಕ್ತರ ಮನದಲ್ಲಿ ಸದಿಚ್ಛೆಯ ರೂಪದಲ್ಲಿಯೇ ಉದಯಿಸುವದು. ಅದೇ ಮೋಕ್ಷದ ಮೊದಲನೆಯ ಸೋಪಾನವು. ಅದಕ್ಕಾಗಿಯೇ ನಿಜಗುಣರು ತಮ್ಮ ಕೈವಲ್ಯ ಪದ್ಧತಿಯೆಂಬ ಸತ್ಕೃತಿಯ ಪ್ರಾರಂಭವನ್ನು ಸದ್ಗುರುವಿನ ಉಪದೇಶದಿಂದಲೇ ಮಾಡಿರುವರು.

ಭಾರತೀಯ ಶಿಷ್ಟಸಂಪ್ರದಾಯದ ಪ್ರಕಾರ ಪ್ರತಿಯೊಂದು ಕಾರ್ಯದ ಪ್ರಾರಂಭದಲ್ಲಿ ಮಂಗಲಮಾಡುವದು ನಡೆದುಬಂದಿದೆ. 'ನಿರ್ವಿಘ್ನಕಾಮೋ ಮಂಗಲ ಮಾಚರೇತ್' ಸಮಾಪ್ತಿಕಾಮೋ ಮಂಗಲ ಮಾಚರೇತ್' ಎಂಬದೇ.

ಶಿಷ್ಟವಾಣಿ. ಹೀಗಿರುವಾಗ ಶಿಷ್ಟಮಾರ್ಗಾನುಯಾಯಿಗಳಾದ ನಿಜಗುಣರು ತಮ್ಮ 'ಕೈವಲ್ಯ ಪದ್ಧತಿ' ಗ್ರಂಥದ ಪ್ರಾರಂಭದಲ್ಲಿ ಮಂಗಲವನ್ನೇಕೆ ಮಾಡ ಲಿಲ್ಲ ? ಎಂದು ಕೆಲವರು ಶಂಕಿಸಬಹುದು. ವಿಚಾರಿಸಿ ನೋಡಿದಾಗ ಇಂತಹ ಶಂಕೆಗೆ ಇಲ್ಲಿ ಅವಕಾಶವೇ ಇರುವದಿಲ್ಲ. ಯಾಕೆಂದರೆ ಮಂಗಲವು ನಮಸ್ಕಾರ. ಆಶೀರ್ವಾದ, ವಸ್ತು ನಿರ್ದೇಶ ಎಂದು ಮೂರು ವಿಧವಾಗಿರುವದಷ್ಟೇ ! ಅಂತಹ ಮಂಗಲಗಳಲ್ಲಿ ಗ್ರಂಥ ಪ್ರಾರಂಭದಲ್ಲಿ 'ಶ್ರೀಗುರು' ಎಂಬ ಪದ ಪ್ರಯೋಗವು ವಸ್ತುನಿರ್ದೇಶಾತ್ಮಕ ಮಂಗಲವನ್ನು ಸೂಚಿಸುವದು. ಇದರಿಂದ ನಿಜಗುಣರು ಶಿಷ್ಟಸಂಪ್ರದಾಯವನ್ನು ಚಾಚೂ ತಪ್ಪದೆ ಅನುಸರಿಸಿರುವ ರೆಂಬುದು ಸ್ಪಷ್ಟವಾಗುವದು. ಇಷ್ಟೇ ಅಲ್ಲ, ಪಲ್ಲವಿಯಲ್ಲಿಯೇ ಇಡೀ ಗ್ರಂಥದ ತಾತ್ಪರ್ಯವನ್ನೆಲ್ಲ ತುಂಬಿರುವರು ಮತ್ತು ಪದ್ಯದ ಐದು ನುಡಿಗಳಲ್ಲಿ ಐದು ಸ್ಥಲಗಳ ತಾತ್ಪರ್ಯವನ್ನು ಸೂಚಿಸಿದ್ದಾರೆ. ಇದು ನಿಜಗುಣರಂತಹ ಆರ್ಷ ಕವಿಗಳಿಗೆ ಮಾತ್ರ ಸಾಧ್ಯ.

ತಾತ್ಪರ್ಯ

ಜ್ಞಾನೈಶ್ವರ್ಯ ಸಂಪನ್ನನಾದ ಸದ್ಗುರುವಿನ ಸದುಪದೇಶವನ್ನು ಕೇಳಿ ಅದರಂತೆ ನಡೆದಾಗಲೇ ನರರಿಗೆ ಮುಕ್ತಿಯುಂಟಾಗುವದು. (ಉಪದೇಶದ ರೀತಿಯು ಇಂತಿದೆ).

ಪಾಪಕಾರ್ಯಗಳಿಗೆ ಮನವ ಕೊಡಬೇಡ, ಪುಣ್ಯ ಕರ್ಮಗಳನ್ನೇ ಮಾಡು.ಪಾಪನಾಶಕ ಶಿವನನ್ನು ಭಜಿಸು. ಕೋಪತಾಪಗಳ ಸಂಸ್ಪರ್ಶವಿಲ್ಲದ ಶಾಂತಚಿತ್ತರ ಕೂಡ ಒಡನಾಡು, ಎಲ್ಲ ಪ್ರಾಣಿಗಳಲ್ಲಿಯೂ ದಯೆಯಿರಲಿ. ನೀತಿಯನ್ನು ಬಲ್ಲವನಾಗು. ಆಶ್ರಿತರನ್ನು ರಕ್ಷಿಸು. ಯಾರ ದುರ್ಗುಣಗಳನ್ನೂ ಎತ್ತಿ ಮಾತನಾಡದಿರು. ಮನಬಂದಂತೆ ನಡೆಯದಿರು. ಲೋಕದಲ್ಲಿ ಮಾಡ ಬಾರದ ಕೃತ್ಯಗಳನ್ನು ಮಾಡಿ ಕಲಂಕಿತನಾಗದಿರು, ಬಲವಂತರಾದ ಕಾಮಾದಿ ವೈರಿಗಳನ್ನು ಜಯಿಸು, ಜನ್ಮಜನ್ಮಾಂತರ ಪರಂಪರೆಯ ಪ್ರವಾಹದಲ್ಲಿ ಸಿಗದಿರು, ಐಶ್ವರ್ಯವಂತನಾದಾಗ ಮದಿಸದಿರು, ನಾಮರೂಪಾತ್ಮಕವಾದ ಜಗತ್ತಿನ ವ್ಯವಹಾರದಲ್ಲಿ ಎಲ್ಲವೂ ಒಂದೇ, ಎಲ್ಲರೂ ಒಂದೇ ಎಂದು ತಿಳಿದು ಜೊತೆಗೆ

ಅದ್ವೈತವನ್ನು ಬಳಸಬೇಡ. ಅದು ನಿನ್ನ ಅಂತರಂಗದಲ್ಲಿ ಮಾತ್ರ ಗಟ್ಟಿಯಾಗಿರಲಿ, ತಿಳಿದು ಧರ್ಮಾಚರಣೆಯಲ್ಲಿರು, ವೇದೋಕ್ತ ಭಕ್ತಿಗಳನ್ನು ಅಗಲದಿರು. ನಾನಾರು ಎಂಬುವನ್ನು ವಿಚಾರಿಸಿ ನೋಡು, ಸುಖದುಃಖಾತ್ಮಕವಾದ ಸಂಸಾರವನ್ನು ಸ್ವಪ್ನದಂತೆ ತಿಳಿ. ಕಾಮಾರಿಯಾದ ಶಿವನನ್ನು ಮೆಚ್ಚಿಸಿ ನೆಲೆಯಿಲ್ಲದ ಸುಖದಲ್ಲಿ ನೆಲೆಸು ಎಂದು ವೇದಾಗಮ ಪುರಾಣ ವಾಕ್ಯಗಳಿಂದ ಅನುಭವಗಮ್ಯವಾಗುವಂತೆ ತಿಳಿಸುವ ಶ್ರೀ ಗುರುವಿನ ಉಪದೇಶವನಾಲಿಸಿದಾಗ ಒಹುದು ನರರಿಗೆ ಮುಕುತಿ.

ವಿಶೇಷ

ಸದ್ಗುರುವನ್ನು ಆಶ್ರಯಿಸಿ ಶ್ರವಣ, ಮನನ ನಿಧಿಧ್ಯಾಸಗಳ ಮುಖಾಂತರ ಆತ್ಮಾನುಭವವನ್ನು ಸಾಧಿಸಿ ನಿತ್ಯ ಸುಖಿಯಾಗಲು ಮಾನವಜನ್ಮವೇ ಯೋಗ್ಯವಾಗಿರುವದು, ಅದಕ್ಕಾಗಿ ಇಲ್ಲಿ 'ನರರಿಗೆ' ಎಂದು ಹೇಳಿದ್ದು ಅತ್ಯಂತ ಸಮುಚಿತವಾಗಿರುತ್ತದೆ. ಪಶುಮಾನವರನ್ನು ದೇವಮಾನವರೂಪದಲ್ಲಿ ಪರಿವರ್ತಿಸಗೊಳಿಸುವದೇ ತತ್ತ್ವಾನುಭವದ ಪರಮ-ಚರಮ ಗುರಿಯು. ಅದಕ್ಕಾಗಿ ಮಾನವರನ್ನು ಮೊದಲು ವಿಕೃತಿಯಿಂದ ಪ್ರಕೃತಿಯತ್ತ, ಪ್ರಕೃತಿಯಿಂದ ಸಂಸ್ಕೃತಿಯತ್ತ ತೆಗೆದುಕೊಂಡು ಹೋಗುವ ನಿಜಾಚರಣೆಯ ಅವಶ್ಯಕತೆಯು ವಿಶೇಷವಾಗಿದೆ. ಅಂತಹ ಆಚರಣೆಯನ್ನು ಅತ್ಯಂತ ಸುಂದರವಾಗಿ ಬಂಧುರವಾಗಿ ನಿರೂಪಿಸಿದ್ದಾರೆ ನಿಜಗುಣ ಶಿವಯೋಗಿಗಳು. ಮತ್ತು

ಮುಕ್ತಿಪಥದಲ್ಲಿ ಹತ್ತುವ ಶಿವಕಾರುಣ್ಯಸ್ಥಲ, ಜೀವಸಂಬೋಧನ ಸ್ಥಲ ನೀತಿಕ್ರಿಯಾಚರ್ಯಾಸ್ಥಲ. ಯೋಗಸ್ಥಲ, ಜ್ಞಾನಸ್ಥಲ ಎಂಬ ಐದು ಸ್ಥಲಗಳ ಸಾರವನ್ನು ಪದ್ಯದ ಐದು ನುಡಿಗಳಲ್ಲಿ ಸೂಚಿಸಿದ್ದಾರೆ, ಇವುಗಳಲ್ಲಿ ಮೊದಲನೆಯ ಮೂರು ಸ್ಥಲಗಳು ಮಲದೋಷವನ್ನು, ಯೋಗಸ್ಥಲವು ವಿಕ್ಷೇಪದೋಷವನ್ನು, ಜ್ಞಾನಸ್ಥಲವು ಆವರಣದೋಷವನ್ನು ದೂರಮಾಡುವವು. ವೇದವು ಕೂಡ ಕರ್ಮ ಭಕ್ತಿ, ಜ್ಞಾನ ಎಂಬ ಮೂರು ಕಾಂಡಗಳುಳ್ಳದ್ದಾಗಿರುವದು, ಇದಕ್ಕಾಗಿಯೇ ಮೊದಲನೆಯ ಪದ್ಯವು ನಿಜಗುಣರ ನಿಜಜ್ಞಾನದ ನಿಲವಿನ ಸೂಚಕವೆಂದು ಧಾರಾಳವಾಗಿ ಹೇಳಬಹುದು.

೨

ಅವತರಣಿಕೆ

ಸಗುಣೋಪಾಸಕರಾದ ಶಿವಭಕ್ತರ ಸಂಪ್ರದಾಯದಲ್ಲಿ ದೇವರನ್ನು ಮಲಗಿರುವನೆಂದು ಕಲ್ಪಿಸಿ, ಆತನನ್ನು ಎಬ್ಬಿಸುವ ಪದ್ಧತಿಯುಂಟು. ಅಂತಹ ಸಗುಣೋಪಾಸನೆಯ ಪದ್ಧತಿಯನ್ನನುಸರಿಸಿಯೇ ನಿಜಗುಣಶಿವಯೋಗಿಗಳು ಈ ಪದ್ಯವನ್ನು ರಚಿಸಿರುವರು. ಇದರಮೇಲಿಂದ ಸಗುಣೋಪಾಸನೆಯು ಮುಖಾಂತರವೇ ನಿರ್ಗುಣೋಪಾಸನೆಯನ್ನು ಸಾಧಿಸಬೇಕಾಗುವದೆಂಬುದು ವ್ಯಕ್ತವಾಗುತ್ತದೆ.

ಪ್ರತಿದಿವಸ ಸೂರ್ಯೋದಯ ಕಾಲದಲ್ಲಿ ಸ, ರಿ, ಗ, ಮ, ಪ,ದ, ನಿ ಎಂಬ ಏಳು ಗಾನಾಭಿಮಾನಿ ದೇವತೆಗಳು ಒಂದು ಉದಯ ರಾಗ ಮಾಡಿ. ಅರಿವುಮರೆಹುಗಳ ಸಂಸ್ಪರ್ಶವಿಲ್ಲದ ಕೇವಲ ಜ್ಞಾನಸ್ವರೂಪಿಯಾದ ಹೇ ಪರಮಾತ್ಮನೇ ಏಳು ಎಂದು ಉಪಚರಿಸಿ ಚಿಚ್ಛಕ್ತಿವಲ್ಲಭನಾದ ಪರಮಾತ್ಮನನ್ನು ತಮ್ಮತ್ತ ಕೃಪಾಕಟಾಕ್ಷ ಚೆಲ್ಲುವಂತೆ ಮಾಡುತ್ತಿರುವರು.

ಅತಲಾದಿಯಾದ ಏಳು ಅಧೋಲೋಕಗಳು, ಭೂ ಮೊದಲಾದ ಏಳು ಊರ್ಧ್ವಲೋಕಗಳು, ಏಳು ಸಮುದ್ರಗಳು, ಏಳು ಕುಲಪರ್ವತಗಳು, ಏಳು ದ್ವೀಪಗಳು, ಏಳು ಪ್ರಕೃತಿಗಳು, ಏಳು ಮಿಶ್ರಮಾರ್ಗಪತಿಗಳು, ವಿದ್ವಾಂಸ ಮೊದಲಾದ ಏಳು ಸಭಾಂಗಗಳು, ಏಳನೂರೆಪ್ಪತ್ತು ಅಮರಗಣಂಗಳು, ಏಳು ಮಾತೃಕೆಗಳೆನಿಸಿಕೊಂಬ ಏಳು ಶಕ್ತಿಗಳು, ಏಳು ಮೋಕ್ಷಸೋಪಾನವುಳ್ಳ ಶರಣರು, ಐವತ್ತಾರು ದೇಶದ ಜನರು ಬಂದಿರುವರು ಏಳು.

ಏಳು ನಾಲಗೆಗಳುಳ್ಳ ಅಗ್ನಿಯು, ಏಳು ಕುದುರೆಗಳುಳ್ಳ ಸೂರ್ಯನು, ಇಪ್ಪತ್ತೇಳು ನಕ್ಷತ್ರಗಳಿಗೊಡೆಯನಾದ ಚಂದ್ರನು ಈ ಮೂರು ಕಣ್ಣುಗಳಾಗಿರುವವನೇ ಏಳು.

ಜಾಗ್ರದಾದಿಯಾದ ಏಳು ಅವಸ್ಥೆಗಳು, ರಸ ರಕ್ತ ಮೊದಲಾದ ಏಳು ಧಾತುಗಳು. ತನುವ್ಯಸನಾದಿ ಏಳು ವ್ಯಸನಗಳು. ಏಳು ಮಾಯಾವರಣಗಳು

ಇವೆಲ್ಲವುಗಳಿಂದ ಹೊರತಾದ ಪರಮಾತ್ಮನೇ ಏಳು. ಅಷ್ಟಾಂಗಯೋಗದಲ್ಲಿಯ ಯಮ ನಿಯಮಾದಿ ಏಳು ಯೋಗಾಂಗಗಳ ಸಹಾಯದಿಂದ ಏಳುಹೆಡೆಗಳುಳ್ಳ ಕುಂಡಲಿನೀಸರ್ಪವನ್ನು, ಹಾಗು ಆಧಾರಾದಿ ಬ್ರಹ್ಮರಂಧ್ರಾಂತ್ಯಮಾದ ಏಳು ಚಕ್ರಂಗಳಲ್ಲಿ ತೋರಿಬರುವ ಪ್ರಣವದ ನಕಾರಾದಿಪ್ರಣವಭೇದವನ್ನು ಕಂಡು ಸುಜ್ಞಾನಸೋಪಾನವ ಸಿದ್ಧಿಯಾಗಲು, ಹದಿನೇಳು ತತ್ತ್ವದ ಲಿಂಗ ಶರೀರ ವನ್ನು, ಮಾಯಾ ಕಾಳಿಕೆಯನ್ನು ಏಳು ಜನ್ಮದ ಪಾಪವನ್ನು ಜಯಿಸುವ ಯೋಗಿಶ್ರೇಷ್ಠರ ಬ್ರಹ್ಮರಂಧ್ರದಲ್ಲಿ ಕೇಳಿ ಬರುವ ನಾದಸ್ವರೂಪನಾದ ಹೇ ಪರಮಾತ್ಮನೇ, ಮಲಪಾಶಾದಿರಹಿತನು, ಮುನಿ ಸಮೂಹದಿಂದ ವಂದಿತನು ಆದ ಎಲೈ ಶಂಭುಲಿಂಗನೇ ಏಳು.

೩

ಪರಮಾತ್ಮನ ಪಾದಮಹಿಮೆಯನ್ನು ಅತ್ಯಂತ ಸುಂದರವಾಗಿ ಬಣ್ಣಿಸಲಾಗಿದೆ

ಹೇ ಆಚಾರ್ಯನಾದ ಶಂಭುಲಿಂಗನೇ ! ನಿನ್ನ ಪಾದವು ಶಿವಶರಣರ ನಿರ್ಮಲವಾದ ಹೃದಯದಲ್ಲಿ ಶೋಭಿಸುತ್ತಿರುವದು. ಮತ್ತು ವಿಷ್ಣುವಿನ ನೇತ್ರದಿಂದ ಚಿಹ್ನಿತವಾಗಿರುವದು.

ಶೂರನಾದ ರಾವಣನು ಕೈಲಾಸ ಪರ್ವತವನ್ನು ಮೇಲಕ್ಕೆತ್ತಿದಾಗ ಅವನನ್ನು ಪಾತಾಳಕ್ಕಿಳಿಯುವಂತೆ ತುಳಿಯಿತು ನಿನ್ನ ಪಾದ. ಅಂಧಕಾಸುರ ನೆಂಬ ರಾಕ್ಷಸನ ಎದೆಯ ಮೇಲೆ ಭರತ ಮುನಿಯ ನಾಟ್ಯ ಶಾಸ್ತ್ರಾನುಸಾರವಾಗಿ ಕುಣಿಯಿತು ನಿನ್ನ ಪಾದ. ಜೊಟ್ಟಿನಲ್ಲಿ ಬರೆದ ಸುದರ್ಶನ ಚಕ್ರವನ್ನು ಜಲಂಧರ ನೆಂಬ ರಕ್ಕಸನ ಕೊರಳಿಗೆ ಹಾಕಿ ಅವನ ಶಿರಸ್ಸನ್ನು ಕತ್ತರಿಸಿತು ನಿನ್ನಪಾದ. ಆಕಾಶದಲ್ಲಿ ತೀವ್ರಗತಿಯಿಂದ ತಿರುಗುತ್ತಿದ್ದ ಅಸುರರ ಮೂರು ಪಟ್ಟಣಗಳನ್ನು ಅಗ್ನಿನೇತ್ರದಿಂದ ನೋಡಿ ಸುಟ್ಟು ಜಯಶೀಲವಾಯಿತು ನಿನ್ನ ಪಾದ.

ಹೇ ಪರಮಾತ್ಮ ! ನಿನ್ನ ಪಾದಮಹಿಮೆಯನ್ನು ಎಷ್ಟು ಹೇಳಬೇಕು ! ವರಾಹರೂಪವನ್ನು ಧರಿಸಿಕೊಂಡ ವಿಷ್ಣುವು ಎಷ್ಟು ಕಾಲದವರೆಗೆ ಹುಡುಕಿದರೂ

ನಿನ್ನ ಪಾದವು ದೊರೆಯದಂತಾಯಿತು ! ಇಷ್ಟೇಕೆ ನಿನ್ನಪಾದ ಸಪ್ತಪಾತಾಳ ಲೋಕಗಳನ್ನು ಮೀರಿ ಕೆಳಕ್ಕಿಳಿದು ಎಲ್ಲ ಕಡೆಗೂ ವ್ಯಾಪಿಸಿಕೊಂಡಿತು. ವೇದಗಳೆಂಬ ನಾಯಿಗಳನ್ನು ಬೆನ್ನು ಹತ್ತಿಕೊಂಡು ಅರ್ಜುನನು ತಪಸ್ಸುಮಾಡುತ್ತಿದ್ದ ಅರಣ್ಯದಲ್ಲಿ ಪ್ರವೇಶಿಸಿತು ನಿನ್ನಪಾದ. ಪಾರ್ವತಿಪತಿಯಾಗಿ, ಅದ್ವಿತೀಯನು, ನಿತ್ಯನು, ಅಪಾರನು ಸರ್ವಾಂತರ್ಯಾಮಿಯು ಆದ ಎಲೈ ಪರಮಾತ್ಮನೆ ನಿನ್ನ ಪಾದವು ಇಂತಹ ಮಹಿಮಾಶಾಲಿಯಾಗಿರುವದು.

ಹೇ ಮಹಾದೇವನೇ ! ಎಲ್ಲರನ್ನು ಕಾಡಿದಂತೆ ನಿನ್ನನ್ನು ಕಾಡಲು ಬಂದ ಮನ್ಮಥನನ್ನು ಉರಿಗಣ್ಣಿನಿಂದ ಸುಟ್ಟು ಬೆಂದನುಲಿಯಂತೆ ಬಿದ್ದುಕೊಂಡ ಅವನನ್ನು ತುಳಿದಾಡಿತಲ್ಲಾ ನಿನ್ನಪಾದವು ! ಇದರಂತೆ ಭೂಮಿಯೆಂಬ ರಥವನ್ನು ಪಾತಾಳದವರೆಗೆ ಇಳಿಯುವಂತೆ ತುಳಿದುಬಿಟ್ಟಿತು ನಿನ್ನಪಾದ. ಕಾಳಿದಾಸಾದಿ ಮಹಾ ಕವೀಶ್ವರರು ನಿನ್ನ ಪಾದವನ್ನು ವಿಶೇಷವಾಗಿ ವರ್ಣಿಸಿರುವರು, ಚಂದ್ರ, ಮಲ್ಲಿಗೆ, ಮಂಜು, ಮುತ್ತಿನಹಾರ ಇವೆಲ್ಲವುಗಳಂತೆ ಅತ್ಯಂತ ಶುಭ್ರವಾದ ಶರೀರವುಳ್ಳ ಪರಮಾತ್ಮನೇ ನಿನ್ನಪಾದವು ಮಂದರ ಪರ್ವತವನ್ನು ವಾಸಸ್ಥಾನವನ್ನಾಗಿ ಮಾಡಿಕೊಂಡಿರುವದು. ಎಲೈ ಪರಮಾತ್ಮನೇ ನಿನ್ನಪಾದವನ್ನು ಹದಿನಾಲ್ಕು ಮನುಗಳು, ಎಂಬತ್ತೆಂಟುಕೋಟಿ ಮುನಿಗಳು, ಇದರಂತೆ ಮರ್ತ್ಯಲೋಕದವರು, ಪಾತಾಳ ಲೋಕದವರು, ರಾಕ್ಷಸರು. ದೇವತೆಗಳು ಪ್ರತಿದಿವಸ ಸೇವಿಸುತ್ತಿರುವರು. ಮತ್ತು ನಿನ್ನಪಾದವು ನಮಸ್ಕರಿಸಲು ಬಂದ ದೇವತೆಗಳ ಕಿರೀಟರತ್ನಗಳ ಕಾಂತಿಯಿಂದ ಪ್ರಕಾಶಿತವಾಗಿರುವದು. ಹೇ ಪರಮಾತ್ಮ ! ನಿನ್ನ ಪಾದವು ಭಕ್ತಿಯಿಂದ ಸ್ಮರಿಸುವವರ ವೈರಿರೂಪವಾದ ಪಾಪಾರಣ್ಯವನ್ನು ಸುಟ್ಟುಹಾಕುವಂತಹದು. ಭಕ್ತಜನರೆಂಬ ಕಮಲಗಳನ್ನು ಅರಳಿಸುವಲ್ಲಿ ಸೂರ್ಯನಂತಿರುವದು. ಹೇಮಪರ್ವತವನ್ನು ಮನೆಯಾಗಿ ಮಾಡಿಕೊಂಡವನು, ಕುಬೇರನಿಗೆ ಮಿತ್ರನಾದವನು. ಜನನ ಮರಣವಿಲ್ಲದವನು ಆದ ಹೇ ಪರಮಾತ್ಮನೇ ನಿನ್ನ ಪಾದವು ಇಂತಹ ಮಹಿಮಾನ್ವಿತವಾದುದು.

ಎಲೈ ಪರಮಾತ್ಮನೆ ನಿನ್ನ ಪಾದವು ಮೂಲಪ್ರಣವದ ಆಶ್ರಯಸ್ಥಾನವು, ಸಮಸ್ತ ಮಂತ್ರಗಳ ಆಗರವು, ಸದ್ಗುಣಗಳೆಂಬ ಮಣಿಗಳಿಗೆ ಸಮುದ್ರವು, ಅಣಿಮಾದಿ ಸಿದ್ಧಿಗಳ ಜನ್ಮಭೂಮಿಯು, ಸಮಸ್ತಸುಖಗಳ

ಸ್ಥಾನವು, ಪಾರಮಾರ್ಥಿಕ ಮಂಗಲವನ್ನುಂಟು ಮಾಡುವದು. ಮತ್ತು ಪ್ರಥಮ ಗಣಸಮೂಹಕ್ಕೆ ಆಶ್ರಯವು, ತೃಪ್ತಿಯ ಆಗರವು, ತತ್ತ್ವದ ನಿಲಯವು, ಮುಕ್ತಿಯ ಖಣಿಯು ಆಗಿದೆ.

೪

ಶಿವಮಂತ್ರದ ಮಹಿಮೆಯು ಅಗಾಧವಾಗಿರುವದು. ಈ ಮಂತ್ರವು ಸಪ್ತಕೋಟಿ ಮಂತ್ರಗಳ ರಾಜನೆಂದು ಹೇಳಲಾಗುತ್ತದೆ. ಶಿವಮಂತ್ರದ ಜಪಾನುಷ್ಠಾನ ಬಲದಿಂದ ಬಹುಜನರು ಕಲ್ಯಾಣ ಪಡೆದಿರುವರು. ಇಂತಹ ಮಂತ್ರದ ಘನತೆಯನ್ನು ಇಲ್ಲಿ ಬಣ್ಣಿಸಲಾಗಿದೆ.

ಮಾನವ ಶರೀರಧಾರಿಗಳಾದ ಜೀವರಿಗೆ ಮುಕ್ತಿಯನ್ನು ಪಡೆಯಲು ಶಿವ ಮಂತ್ರವೇ ಪರಮೋಪಾಯವು. ಯಾರೇ ಆಗಲಿ ಎಲ್ಲಿಯಾದರಾಗಲಿ ತಿಳಿದಾಗಲಿ ತಿಳಿಯದಾಗಲಿ ಒಂದುಸಲ ಶಿವಪಂಚಾಕ್ಷರೀ ಮಂತ್ರವನ್ನು ಉಚ್ಚರಿಸಿದರೆ ಸಾಕು ಅವರೆಲ್ಲರೂ ತಮ್ಮ ಪಾಪಗಳನ್ನೆಲ್ಲ ತೊಳೆದುಕೊಂಡು ಪರಿಶುದ್ಧರಾಗುವರು ಎಂದು ಶಿವಾಗಮಶಾಸ್ತ್ರವು ಸಾರುತ್ತದೆ.

ಸಣ್ಣದಾದ ಆಲದ ಬೀಜವು ದೊಡ್ಡಮರವನ್ನು ತನ್ನೊಳಗೆ ಹುದುಗಿಸಿ ಕೊಂಡಿರುವಂತೆ ಆರು ಅಕ್ಕರದ ಈ ಮಂತ್ರವು ಮಹಾಮಹಿಮನಾದ ಪರಮಾತ್ಮನನ್ನೇ ತನ್ನೊಳಗಿಟ್ಟುಕೊಂಡಿರುವದು. ಇಂತಹ ಮಂತ್ರವನ್ನು ಒಂದುಸಲವಾದರೂ ಜಪಿಸಿದರೆ ಸಕಲ ಇಷ್ಟಾರ್ಥಸಿದ್ಧಿಗಳು ಕೈಗೂಡುವವು ಎಂದು ಶ್ರುತಿಯು ಹೇಳುವದು.

ಗೌತಮ, ವಾಮದೇವ, ಶ್ವೇತ, ವಶಿಷ್ಠ, ನಾರದ, ಸನಕ ಇವರೇ ಮೊದಲಾದವರು ಈ ಶಿವಮಂತ್ರದ ಜಪದಿಂದಲೇ ಸಿದ್ಧಿಪಡೆದರೆಂದು ಪ್ರಮಾಣವುಂಟು. ಬ್ರಹ್ಮ-ವಿಷ್ಣು-ರುದ್ರ ದೇವತೆಗಳು ಕೂಡ ಈ ಮಂತ್ರದ ಮಹಿಮೆಯಿಂದಲೇ ಸೃಷ್ಟಿ ಸ್ಥಿತಿ ಲಯಗಳನ್ನು ಮಾಡುವ ಸಾಮರ್ಥ್ಯ ಪಡೆದಿರು ವರು. ಶಿವಮಹಿಮೆಯನ್ನರಿತ ಸಾನಂದನೆಂಬ ಋಷಿಯೊಬ್ಬನು ಈ ಮಂತ್ರ ವನ್ನೇ ಉಚ್ಚರಿಸಿ ನರಕದಲ್ಲಿ ಬಿದ್ದು ಸಂಕಟಪಡುತ್ತಿದ್ದ ಪ್ರಾಣಿಗಳನ್ನು ಶಿವಕೃಪೆಗೆ ಪಾತ್ರವಾಗುವಂತೆಮಾಡಿದನು ಎಂದು ಶ್ರುತಿಯು ಸಾರುತ್ತಿದೆ. ಅದ ಕ್ಕಾಗಿ ಶಿವಮಂತ್ರಜಪವು ಮುಮುಕ್ಷುಗಳಿಗೆ ಅತ್ಯಂತ ಉಪಕಾರಕವಾಗಿರುವದು.

೫

ಪರಮಾತ್ಮನ ನೂರೆಂಟು ನಾಮಗಳನ್ನು ಹೇಳಲಾಗಿದೆ

ಬುದ್ಧಿವಂತರು ಶಿವನ ನೂರೆಂಟು ನಾಮಗಳನ್ನು ಪ್ರತಿದಿನ ತಪ್ಪದೆ ಜಪಿಸಬೇಕು. ಅಂದರೆ ಅವರಿಗೆ ಜನನ, ಮರಣ, ಕರ್ಮಬದ್ಧತೆ, ಅಜ್ಞಾನ, ಪಾಪರೂಪ ಸಂಸಾರದುಃಖ ಇವೆಲ್ಲ ನಾಶವಾಗಿ ಇಹ ಪರಸುಖಗಳು ದೊರೆಯುವವು. ಆ ನಾಮಗಳು ಇಂತಿವೆ—ಶಿವ, ಮಹಾದೇವ, ಶಂಕರ, ಪಾರ್ವತೀಧವ, ನಂದಿವಾಹನ, ದೇವೇಶ, ದಕ್ಷ, ವಾಸವ, ನತಪದಾಂಭೋಜ, (ಇಂದ್ರನಿಂದ ನಮಸ್ಕರಿಸಲ್ಪಟ್ಟ ಪಾದವುಳ್ಳ) ನಗಚಾಪ (ಪರ್ವತವನ್ನೇ ಬಿಲ್ಲಾಗಿ ಮಾಡಿಕೊಂಡವ) ನಿರ್ಮಲ, (೧೦) ನಿರಾಂತಕ, ನೀಲಕಂಠ, ಭುವನೇಶ, ವಿಜಯ, ವೇದಾಂಗ (ವೇದವೇ ದೇಹವಾದವ), ವೈಶ್ರವಣಸಖ (ಕುಬೇರನ ಗೆಳೆಯ), ಪವಮಾನ (ಪ್ರಾಣವಾಯು ಸ್ವರೂಪನು) ಪಂಚಮುಖ, ಪಶುಪತಿ, ಸಹಸ್ರಾಕ್ಷ (೨೦) ಭವ, ಭರ್ಗ, ಭಸಿತಾಂಗ, ಭಾಳಲೋಚನ, ಮೇರುಕಾರ್ಮುಕ (ಗಿರಿಧನ್ವ) ಕಪರ್ದಿ (ಜಟಾಜೂಟ) ಸೋಮ, ಶಾಂತ, ಅಭಯ, ವಿರೂಪಾಕ್ಷ (೩೦) ವಿಶ್ವಾಭಿರಾಮ, ಗಂಭೀರ, ಕಾಲಾರಿ, ಕೂಟಸ್ಥ (ನಿರ್ವಿಕಾರಿ), ವಿಭು, ವಾಮದೇವ, ಅಘೋರ, ಪಂಚಾಕ್ಷರ, ಓಂಕಾರ (ಮೂಲಪ್ರಣವಸ್ವರೂಪ) ತತ್ಪುರುಷ (೪೦) ರುದ್ರ, ಭದ್ರ, ಭೀಮ, ಸದ್ಯೋಜಾತ, ಮೃಡ, ಮಹಾಕಾಲ, ಜಿತಕಾಮ, ಮೃತ್ಯುಂಜಯ, ಪುರಾತನ, ಪರಾತ್ಪರ (೫೦) ನಿರಾಮಯ, ಅನಂತತೇಜೋರಾಶಿ, ಸರ್ವಜ್ಞ, ಶಾಶ್ವತ, ಕಪಾಲಿ (ಬ್ರಹ್ಮಕಪಾಲವನ್ನು ಧರಿಸಿದವ), ಶೂಲಿ, ಸುಜನೈಕ ಬಾಂಧವ, ಸದಾಶಿವ,ಚಂದ್ರಮೌಲಿ ಮಹಿಮ,(೬೦)ಉಗ್ರ, ಚರ್ಮಾಂಬರ, ಅಸುರಶಿರೋಮಾಲಿ,ಮಂದಾಕಿನೀಧರ, ಮಹೇಶ್ವರ, ಮೇಘವಾಹ, ಮಂದರನಿವಾಸ, ನೀಲಲೋಹಿತ, ಪಾರಿಜಾತ, ಪಾವನ, (೭೦) ಲೋಕಪಾಲ, ಕೈಲಾಸಮಂದಿರ, ಮಂತ್ರಮಯ, ಭಕ್ತಲೋಲ, ಪಂಚಬ್ರಹ್ಮ, ಪರ, ನಾದಬಿಂದು, ಪರಮಾತ್ಮ, ಪುರವೈರಿ, ವರದ (೮೦) ವಾಗೀಶ, ವರ್ಣಾತೀತ, ವಂದ್ಯ, ಜಯ, ಪರಮ, ಪರತರ, ಪರಂಜೋತಿ, ಪರಮಾನಂದ, ನಿರಘ, ನಿರುಪಮ, (೯೦) ನಿರಾಮಯ, ನಿರಾವರಣ ನಿರ್ಲೇಪ, ನಿರಮಯ, ನಿತ್ಯ, ಉರಗಕಂಕಣ, ವಿಶ್ವತೋಬಾಹು, ವಿಶ್ವಾತ್ಮ

ಸುರಗಣಾರ್ಚಿತ, ಸನಾತನ, (೧೦೦) ಸದಾಗತಿ, ಹಂಸ, ಗಿರೀಶ, ಗಾಂಗೇಯ ಪಿತ (ಷಣ್ಮುಖನ ತಂದೆ) ಗಣನಾಥ ಜಗದೀಶ, ವಿಷಧರ, ಪಿನಾಕಿ. ಎಂಬ ನೂರೆಂಟು ನಾಮಗಳನ್ನು ಸೂರ್ಯೋದಯ ಹಾಗು ಸೂರ್ಯಾಸ್ತ ಕಾಲಗಳಲ್ಲಿ ಭಕ್ತಿಪೂರ್ವಕ ಪಠಿಸಿದವರು ಹಾಗು ಕೇಳಿದವರು ಇಹಲೋಕದ ಎಲ್ಲ ಸಂಪತ್ತು ಹಾಗು ಸುಜ್ಞಾನ ಸದ್ಭಕ್ತಿಗಳನ್ನು ಹೊಂದಿ ದೇಹಾವಸಾನದಲ್ಲಿ ನಿತ್ಯವಾದ ಮುಕ್ತಿಯನ್ನು ಪಡೆವರು.

೬

ಪಾರ್ವತಿಯ ನೂರೆಂಟು ನಾಮಗಳನ್ನು ಶ್ರದ್ಧೆಯಿಂದ ಹಗಲಿರುಳು ಓದುವವರ ಹಾಗು ಕೇಳುವವರ ಪಾಪಗಳೆಲ್ಲ ನಾಶವಾಗಿ ಅವರಿಗೆ ಮಂಗಲಮಯವಾದ ಮೋಕ್ಷವು ಕೈಗೂಡುವದು. ಆ ನಾಮಗಳು ಇಂತಿವೆ.

ಹ್ರೀಂಕಾರಿ, ವಾಣಿ, ಕಲ್ಯಾಣಿ. ರುದ್ರಾಣಿ, ರಮೆ, ಓಂಕಾರರೂಪಿಣಿ, ಗಣಾನಿ (ಗಣಾಧೀಶ್ವರ ಸ್ವರೂಪಳು), ಗಾನಪ್ರೀತೆ, ಐಂಕಿಲಾಮಾಸಿನಿ (ಐಂಕಿಲಮಂತ್ರ ಸ್ವರೂಪಳು, ಮಹಾಮಾಯೆ, ೧೦ ಮಾತಂಗಿ, ಕ್ಲೀಂಕಿಲೆ (ಕ್ಲೀಂಕಿಲಮಂತ್ರ ಸ್ವರೂಪಳು) ವರವರೇಣ್ಯೆ (ಶ್ರೇಷ್ಠರಿಗೂ ಶ್ರೇಷ್ಠಳಾದವಳು), ಸೌಂಕಾರಸದನೆ, ಶರ್ವಾಣಿ, ಶಾರದೆ, ಸತ್ಯೇ, ಕ್ರೌಂಕವಚಮುಖ್ಯಮಂತ್ರಾಧಿದೇವತೆ (ಕ್ರೌಂಕವೆಂಬ ಮಂತ್ರ ವಚನವೇ ಮುಖ್ಯವಾದ ಮಂತ್ರಂಗಳಿಗೆ ಅಧಿದೇವತೆಯಾದ), ದೇವಿ, ಶ್ರೀಂಕಿಲಾಕಾರೆ, ೨೦ ವಿದ್ಯಾಂಗಿ, ಮಾತೃಕೆ, ಮಾನ್ಯೆ. ಶಾಂಕರಿ. ಈಶಾನಿ, ಗಿರಿಜೆ, ಶರ್ವಾಣಿ, ಪೂಜಿತೆ, ಗೌರಿ, ಗುಹಜನನಿ, ೩೦ ವರನಾದಬಿಂದು ಮಂದಿರೆ, ಮನೋಂಭುಜಹಂಸೆ, ವರದೆ, ವೈಭವೆ, ನಿತ್ಯಮುಕ್ತೆ, ನಿರ್ಮಲೆ, ನಿರಾವರಣೆ, ಶಿವೆ, ಶಾಂತೆ. ಕಾಂತೆ, ೪೦ ಧರಣಿ, ಧರ್ಮಾನುಗತೆ. ಸಾವಿತ್ರಿ, ಗಾಯತ್ರಿ, ವಿರುಜೆ, ವಿಶ್ವಾತ್ಮಕೆ, ವಿಧೂತಪಾಪವ್ರಾತೆ. ಶರುಣಹಿತೆ, ಸರ್ವ ಮಂಗಲೆ, ಸಚ್ಚಿದಾನಂದೆ, ೫೦ ವರಸುಧಾಕರೆ, ಚಂಡಿ, ಚಂಡೇಶ್ವರಿ, ಚತುರೆ, ಕಾಳಿ, ಕೌಮಾರಿ, ಕುಂಡಲೆ, ಕುಟಿಲೆ, ಬಾಲೆ, ಭೈರವಿ, ೬೦ ಭವಾನಿ, ಚಾಮುಂಡಿ, ಮೂಲಾಧಾರೆ, ಮನುವಂದ್ಯೆ, ಮುನಿಪೂಜ್ಯೆ, ಪಿಂಡಾಂಡಮಯೀ ಚಂಡಿಕೆ, ಮಂಡಲತ್ರಯನಿಲಯೆ, ದಂಡಿಜಯೆ (ಏಕದಂಡಿ, ದ್ವಿದಂಡಿ, ತ್ರಿದಂಡಿ

ಸ್ವರೂಪಳು) ೭೦ ದುರ್ಗಿ, ಫಣಿಕುಂಡಲೆ, ಮಹೇಶ್ವರಿ, ಮನೋನ್ಮನಿ, ಜಗನ್ಮಾತೆ, ಖಂಡಶಶಿಮಂಡನೆ, ಮೃಡಾಣಿ, ಪಾರ್ವತಿ, ಪರಮಚಂಡಕರ ಮೂರ್ತಿ, ವಿಮಲೆ, ೮೦ ವಿಖ್ಯಾತೆ, ಮಧುಮತಿ, ಮುಖ್ಯೆ, ಮಹನೀಯೆ, ಸುಮತಿ, ಸುಲಲಿತೆ, ಹೈಮವತಿ, ಭಾವೆ, ಭೋಗಾರ್ಥಿನಿ, ಕಮಲೆ. ೯೦ ಕಾತ್ಯಾಯಿನಿ, ಕರಾಲೆ, ತ್ರಿಪುರವಿಜಯೆ, ದಯೆ, ದಯಾರಸಪೂರಿತೆ, ಅಮೃತೆ, ಅಂಬಿಕೆ, ಅನ್ನಪೂರ್ಣೆ, ಅಶ್ವಾರೂಢೆ, ಶಮೆ, ಶುದ್ಧೆ, ಸಿಂಹವಾಹಿನಿ ೧೦೦ ಶುಭಕಲಾಪೆ, ಸುಪ್ರಮದೆ, ಪಾವನಪದ್ಯೆ, ಪಾಶದೆ ಪರಬ್ರಹ್ಮೆ, ಉಮೆ, ಸಹಜೆ ಸುಮುಖಿ ಹೀಗೆ ಶಂಭುಲಿಂಗನ ಶಕ್ತಿಯು, ಸೌಭಾಗ್ಯಸಂತತಿ, ಶರೀರ, ಲೇಸಾದಜ್ಞಾನ, ಲೇಸಾದಕ್ರಿಯೆ, ಕೃಪಾಸ್ವರೂಪವು, ಸಿಂಹಾಸನವು, ಅಲಂಕಾರವು ಆಯುಗಳು, ಸದ್ಗುಣಗಳು, ಆಗಿ ಸಂತೋಷವನ್ನು ಕೊಡುವ ಶಂಭುಪತ್ನಿಯ ನೂರೆಂಟು ಮಂಗಲ ನಾಮಗಳನ್ನು ಪಠಿಸುವವರಿಗೆ ಹೆಂಡರು, ಮಕ್ಕಳು ಎಲ್ಲ ಸಂಪತ್ತುಗಳ ಸಿದ್ಧಿಯು ಆಗುವದು ನಿಶ್ಚಯ.

೭

ಪರಮಾತ್ಮನ ಮಹಿಮಾತಿಶಯವನ್ನು ಬಣ್ಣಿಸಿ ಆತನಿಗೆ ಜಯಕೋರಲಾಗಿದೆ

ಮಹಾಮಹಿಮಾಶಾಲಿಯು, ಜನನ ಜರಾ ಮರಣಗಳನ್ನು ಜಯಿಸಿದವನು ನಿತ್ಯನು, ಭಯರಹಿತನು, ಪರಿಶುದ್ಧನು ಭಕ್ತರಿಗೆ ಸುಖದಾಯಕನು ಆದ ಹೇ ಶಿವನೇ! ನಿನಗೆ ಜಯವಾಗಲಿ. ಮಸ್ತಕದಲ್ಲಿ ಗಂಗೆಯನ್ನುಧರಿಸಿದವನು, ಅಶ್ವತ ಕಂಬಳರೆಂಬ ಗಾಯಕರನ್ನು ಕಿವಿಗಳಲ್ಲಿ ಇಟ್ಟುಕೊಂಡವನು, ಕಾಮನಂತೆ ಚಲುವನಾದವನು, ಪಾರ್ವತಿಯ ಮುಖಕಮಲದಲ್ಲಿ ಭ್ರಮರನಂತಿಪ್ಪ ಮೂಗುಳ್ಳವನು, ವೇದಮುಖನು, ಹೊಳೆಯುವ ಕಪೋಲವುಳ್ಳವನು ಆದ ಎಲೆ ಶಿವನೇ ನಿನಗೆ ಜಯವಾಗಲಿ. ಹೊಳೆಯುವ ಸೂರ್ಯ, ಚಂದ್ರ, ಅಗ್ನಿಗಳೇ ಕಣ್ಣಾಗಿರುವವನು, ಕೊರಳಲ್ಲಿ ಕಸ್ತೂರಿಯ ಗೆರೆಯಂತೆ ವಿಷವನ್ನು ಧರಿಸಿದವನು, ವಿಸ್ತಾರವಾದ ಎದೆಯುವವನು, ಕೈಗಳಲ್ಲಿ ಕೊಡಲಿ, ಶೂಲ, ಮೃಗ, ಪಾಶ ಮುಂತಾದ ಆಯುಧಗಳನ್ನು ಧರಿಸಿದವನು, ಬ್ರಹ್ಮಾಂಡವನ್ನು ಹೊಟ್ಟೆಯಲ್ಲಿಟ್ಟುಕೊಂಡವನು

ಚರ್ಮಾಂಬರಧರನು ಆದ ಹೇ ಶಿವನೇ ನಿನಗೆ! ಜಯವಾಗಲಿ. ವಿಷ್ಣು, ಬ್ರಹ್ಮ ದೇವೇಂದ್ರ ಹಾಗು ಮನು, ಮುನಿ, ರಾಕ್ಷಸ, ನಾಗ, ನರ ಮುಂತಾದವರಿಂದ ಹೊಗಳಿಕೆಯೊಡನೆ ನಮಸ್ಕರಿಸಲ್ಪಟ್ಟವನು. ಅದ್ವಿತೀಯನು, ನಿರಂಜನನು, ನಾದಬಿಂದುಕಲಾತ್ಮನು, ಜ್ಞಾನರೂಪನು, ವೇದಾಗಮಗಳಿಂದ ಸ್ತುತಿಸಲ್ಪಟ್ಟ ವನು, ಭಕ್ತರಿಗೆಲ್ಲ ಕಲ್ಪವೃಕ್ಷ ಪ್ರಾಯನು ಆದ ಎಲೈ ದೇವನೆ, ನಿನಗೆ ಜಯವಾಗಲಿ.

೮

ಮಹೇಶ್ವರಿಯ ಮಹಿಮಾತಿಶಯವನ್ನು ಬಣ್ಣಿಸಿ ಆಕೆಗೆ ಜಯಕೋರಲಾಗಿದೆ

ದೇವತೆಗಳಿಂದ ಸ್ತುತಿಸಲ್ಪಟ್ಟ ಪಾದವುಳ್ಳವಳು, ದಿವ್ಯಾಭರಣಭೂಷಿತಳು ಶ್ರೇಷ್ಠಗುಣವುಳ್ಳವಳು, ತ್ಯಾಗಶೀಲಳು, ನಿರುಪಮ ಚರಿತ್ರವುಳ್ಳವಳು, ನಿತ್ಯಾ ನಂದ ಭರಿತಳು ಆದ ಪಾರ್ವತಿಗೆ ಜಯವಾಗಲಿ. ಸುವರ್ಣದ ಕಾಂತಿಯುಳ್ಳವಳು ಗಂಭೀರಳು, ಮಹಾಲಾವಣ್ಯವತಿಯು, ಕಮಲಗಂಧಿಯು ಈಶ್ವರನ ಅರ್ಧಾಂ ಗಿಯು, ಜ್ಞಾನಮಂದಿರಳು, ಧೀರಳು, ಕೃಪಾಸಮುದ್ರಳು, ಪುಣ್ಯಪ್ರದಳು, ಮುತ್ತಿನಹಾರದಿಂದ ಒಪ್ಪುವ ಕುಚವುಳ್ಳವಳು, ಭಕ್ತಜನರಿಂದ ಪೂಜಿಸಲ್ಪಟ್ಟ ವಳು, ಕೀರ್ತಿಶಾಲಿಯು, ಶಾರದಾದೇವಿಯಿಂದ ಪೂಜಿಸಲ್ಪಟ್ಟವಳು ಆದ ಪಾರ್ವತಿಗೆ ಜಯವಾಗಲಿ. ಜಗದಾಧಾರಳು, ಜನನಾದಿಗಳಿಲ್ಲದವಳು, ಪರ್ವತ ರಾಜನ ಮಗಳಾದವಳು. ಷಣ್ಮುಖನ ತಾಯಿಯಾದವಳು, ನಮ್ಮ ತಾಯಿ ಯಾದವಳು, ವೇದ ಶಾಸ್ತ್ರಾಲಾಪವುಳ್ಳವಳು, ಮಂಗಲಸ್ವರೂಪಳು, ಶಿವಗುಣ ವುಳ್ಳವಳು, ಪ್ರಕೃತಿಗುಣವಿಲ್ಲದವಳು, ಪ್ರಪಂಚಕ್ಕೆ ಮೂಲಕಾರಣವಾದವಳು, ಅನಂತ ನಾಮವುಳ್ಳವಳು. ಲಾವಣ್ಯನಿಧಿಯು, ಚಂದ್ರನನ್ನು ಮಸ್ತಕದಲ್ಲಿ ಧರಿಸಿ ದವಳು, ರತ್ನಖಚಿತ ಕಿರೀಟ ಧಾರಣಮಾಡಿದವಳು, ಮುನಿಸಮೂಹ ವುಳ್ಳಾಕೆಯು, ಬಹು ಮರ್ಯಾದೆಯುಳ್ಳವಳು ಮನಸಿಗೆ ನಿಲುಕವಳು ಉಮೆ ಯೆಂಬ ಹೆಸರುಳ್ಳವಳು ಆದ ದೇವಿಗೆ ಜಯವಾಗಲಿ. ಪಾಪವಿರೋಧಿಯು, ಕಾರಣರಹಿತಳು, ಮಾಯೆಯನ್ನು ಜಯಿಸಿದವಳು. ಭಕ್ತರನ್ನು ಪೋಷಿಸು

ಪವಳು, ಮೋಕ್ಷಸ್ವರೂಪಳು, ಪರಿಶುದ್ಧ ಭಕ್ತಿಸ್ವರೂಪಳು, ಐಶ್ವರ್ಯಕ್ಕೆ ನೆಲೆಯಾದವಳು, ಗಣಪತಿಯ ಆಟದಲ್ಲಿ ವಿನೋದವುಳ್ಳವಳು, ಪರಿಶುದ್ಧಕರಣವುಳ್ಳಾಕೆಯು ಇಷ್ಟಾರ್ಥವನ್ನು ಕೊಡುವವಳು, ಶಿವನ ಪ್ರಾಣಪ್ರಿಯಳು, ಆದ ಶಾಂಭವಿಗೆ ಜಯವಾಗಲಿ.

೯

ಮಹಾದೇವಿಯ ಮಹಿಮಾತಿಶಯದ ಬಣ್ಣನೆ

ಪರಮಾತ್ಮನಿಗೆ ಅತ್ಯಂತ ಪ್ರಿಯವಾದ, ಸದ್ಗುಣಗಳಿಂದ ಕೂಡಿದ ಹೇ ಮಹಾದೇವಿಯೆ! ನೀನು ನನ್ನನ್ನು ಸಂತೋಷದಿಂದ ರಕ್ಷಿಸು. ಮುಪ್ಪು ಸಾವುಗಳನ್ನು ಗೆದ್ದವರು, ಅಮೃತಪಾನ ಮಾಡಿದವರು ಆಗಿದ್ದ ವಿಷ್ಣು ಬ್ರಹ್ಮಾದಿ ದೇವತೆಗಳ ಸಾಮರ್ಥ್ಯವನ್ನು ತಿರಸ್ಕರಿಸಿದ, ಹಾಗು ಹರ್ಷದಿಂದ ವಿಷವನ್ನುಂಡು ಹರನು ಬದುಕಿದ ಮಹಿಮಾತಿಶಯವು ನಿನ್ನ ಮುತ್ತೈದೆತನದ ಸೂಚಕವಾದ ತಾಳಿಯ ಮಹತ್ವವಾಗಿದೆ.

ಹೇಳಲು ಹೆಸರಿಲ್ಲದ ಪರಮಾತ್ಮನು ನಿನ್ನ ನಿಮಿತ್ತದಿಂದಲೇ ಹಣೆಗಣ್ಣವನೆನಿಸಿಕೊಂಡು ದೇವತೆಗಳೆಲ್ಲರಿಗೆ ಅಧಿಪತಿಯಾಗಿರುವನೆಂದಾಗ ನಿನ್ನನ್ನು ಹೊಗಳಲು ವೇದಾಗಮಂಗಳಿಗೂ ಕೂಡ ಅಸಾಧ್ಯವಾಗಿರುವದು.

ದೇವನು ನಿನಗೆ ತನ್ನ ಅರ್ಧಶರೀರವನ್ನು ಕೊಟ್ಟನೆಂದು ಕವೀಶ್ವರರು ತಿಳಿಯದೆ ವರ್ಣಿಸಿರುವರು, ಆದರೆ ನೀನೇ ಅವನಿಗೆ ಅನೇಕ ಮಂತ್ರಮಯ ಶರೀರಗಳನ್ನು ಕಲ್ಪಿಸಿಕೊಟ್ಟು ಅವನನ್ನು ಪೂಜ್ಯನನ್ನಾಗಿ ಮಾಡಿರುವೆ. ಜಡೆಯನ್ನು ಬೆಳೆಯಿಸಿ, ಪಿಶಾಚಿಗಳೊಡನೆ ಕೂಡಿಕೊಂಡು. ಮೈಗೆ ವಿಭೂತಿಯನ್ನು ಬಳಿದುಕೊಂಡು, ಸುಡುಗಾಡಿನಲ್ಲಿ ಓಡಾಡಿ ಜಡನಾಗಿದ್ದ ರುದ್ರನನ್ನು ನೀನು ಮೆಚ್ಚಿ ಕೈಹಿಡಿದ ನಿಮಿತ್ತದಿಂದಲೇ ಅವನು ಪಾವನಚರಿತನೆಂದು ಪ್ರಸಿದ್ಧಿ ಪಡೆಯುವಂತಾಯಿತು ಮತ್ತು ನೀನು ಅಣಿಮಾದಿ ಅಷ್ಟಸಿದ್ಧಿಗಳು, ಸಂಪತ್ತು, ವಿದ್ಯೆ, ವೈಭವ ಮೊದಲಾದವುಗಳನ್ನು ಕೂಡಿಕೊಂಡು ಆ ದೇವನನ್ನು ಸೇವಿಸದೆ ಹೋಗಿದ್ದರೆ ಅವನು ಭಕ್ತರಿಗೆ ಬೇಡಿದಿಷ್ಟಾರ್ಥಗಳನ್ನು ಕೊಡಲು ಹೇಗೆ ಸಮರ್ಥನಾಗುತ್ತಿದ್ದನು ? ಮತ್ತು ಭಕ್ತಜನರು ಅವನನ್ನು ಹೇಗೆ ಪೂಜಿಸುತ್ತಿದ್ದರು ? ಇದೆಲ್ಲ ನಿನ್ನ ಮಹಿಮೆಯೆ ಆಗಿದೆ.

೧೦

ಜಾಣರ ದೇವ

ಎಣಿಕೆಗೆ ಮೀರಿದ ಮಹಿಮಾತಿಶಯಗಳಿಂದ ಕೂಡಿಕೊಂಡು ಮಹಾ ವೈಭವ ಶಾಲಿಯಾಗಿರುವವನು, ಮತ್ತು ಅನೇಕ ಸದ್ಗುಣಗಳಿಂದ ಮಂಡಿತನಾದವನು ಆದ ದೇವನೇ ಜಾಣರ ಒಡೆಯನು. ತಾಯಿ ತಂದೆಗಳಿಲ್ಲದೆ ಹುಟ್ಟಿದವನು, ಬುದ್ಧಿಯ ಸಹಾಯವಿಲ್ಲದೆ ಎಲ್ಲವನ್ನು ತಿಳಿದವನು, ಸದ್ಗತಿಯನ್ನಪೇಕ್ಷಿಸದೆ ಮುಕ್ತನಾದವನು, ಯೋಗಿಗಳ ಕಣ್ಣುಗಳ ತುದಿಯಲ್ಲಿ ಚರಿಸುವವನು ಆದ ದೇವನೇ ಜಾಣರ ಒಡೆಯನು. ತಿರಿದುಣ್ಣುವನಾದರೂ ಸಕಲ ಲೋಕಗಳನ್ನು ಪಾಲಿಸುವ ಸಾಮರ್ಥ್ಯವುಳ್ಳವನು, ಶ್ರೇಷ್ಠವಾದ ವೇದಗಳನ್ನು ನಿರಾಯಾಸ ದಿಂದ ಹೇಳಿದವನು,ದೇವತೆಗಳ ಗರ್ವವನ್ನು ಹುಲ್ಲುಕಡ್ಡಿಯಿಂದ ಮುರಿದವನು, ಬರೆದ ಚಕ್ರದಿಂದಲೇ ರಕ್ಕಸರ ತಲೆಗಳನ್ನು ಕತ್ತರಿಸಿದವನು ಆದ ದೇವನೆ ನಿಪುಣರೊಡೆಯನು. ತಾನು ಯಾರನ್ನು ಪೂಜಿಸದೆ, ತಾನೇ ಎಲ್ಲರಿಂದ ಪೂಜೆಗೊಳ್ಳುವವನು, ತ್ರಿಲೋಕವೆಂಬ ನಾಟಕವನ್ನು ಆಡಿಸುವವನು, ವಿಷ್ಣು ವನ್ನು ಹೆಣ್ಣಾಗಿ ಮಾಡಿ ಆಳಿದವನು. ಆಶ್ಚರ್ಯಕರವಾದ ದೇಹಗಳಲ್ಲಿ ಆತ್ಮರಿ ಗೆಲ್ಲ ಭೋಗವನ್ನುಂಟು ಮಾಡುವವನು, ಆದ ದೇವನೇ ಜಾಣರಲ್ಲಿ ಶ್ರೇಷ್ಠನಾ ದವನು. ಕಾಮವನ್ನು ಸುಟ್ಟು ಕಾಮಿನಿಯೊಡನೆ ಕೂಡಿಕೊಂಡವನು, ಸ್ವಾತ್ಮಾ ನಂದದಲ್ಲಿ ನಿರಂತರ ಲೀನನಾದವನು, ಜೀವಾತ್ಮರಲ್ಲಿ ಇದ್ದುಕೊಂಡು ಕಾಣಿಸು ವವನು, ಭಾವಿಸಿದಲ್ಲಿಯೇ ಕಾಣಿಸುವವನು ಆದ ದೇವನೇ ಜಾಣರೊಡೆಯನು. ಬ್ರಹ್ಮನಾರಾಯಣರುಗಳ ವಾದವನ್ನು ಬಿಡಿಸಿದವನು, ವಿಷವನ್ನು ಕುಡಿದು ಸಾವನ್ನು ಕಳೆದುಕೊಂಡವನು, ಭಕ್ತ ಜನರ ಸಂಸಾರ ರೋಗವನ್ನು ಪರಿಹರಿಸುವ ವೈದ್ಯನು ಆಗಿರುವ ದೇವನೊಬ್ಬನೆ, ವಿಚಾರಿಸಿ ನೋಡಿದರೆ ಜಾಣರಲ್ಲಿ ಅಗ್ರೇಸ ರನಾಗಿರುವನು.

೧೧

ಶಂಭುಲಿಂಗನಿಗೆ ಜಯವಾಗಲಿ

ಅತ್ಯಂತ ಪರಿಶುದ್ಧನು ಸದ್ಯೋಜಾತಾದಿ ಐದು ಮುಖವುಳ್ಳವನು, ಕರುಣಾ ಸಮುದ್ರನು, ಭಕ್ತರಿಗೆ ಇಷ್ಟಾರ್ಥಗಳನ್ನು ದಯಪಾಲಿಸುವವನು

ಇಂದ್ರಾದಿ ದೇವತೆಗಳಿಂದ ನಮಸ್ಕರಿಸಲ್ಪಟ್ಟವನು, ಪ್ರಪಂಚಕ್ಕೆಲ್ಲಾ ಪರಮ ಆಪ್ತನಾದವನು ಆದ ಶಂಭುಲಿಂಗನೆ, ನಿನಗೆ ಜಯವಾಗಲಿ. ನಿಷ್ಠಾವಂತ ಭಕ್ತರಿಗೆಲ್ಲಾ ಅನುಕೂಲವಾದವನು, ಮುನುಮುನಿಗಳ ತಪಸ್ಸೆಂಬ ನಿಕ್ಷೇಪದಲ್ಲಿ ಆಸಕ್ತನಾಗಿರುವವನು, ಹುಟ್ಟು ಸಾವುಗಳ ಭಯವಿಲ್ಲದವನು, ಕಾಲವನ್ನು ಜಯಿಸಿದವನು, ಬ್ರಹ್ಮಾಂಡ ಪರಿಪಾಲಕನು ಆದ ಶಂಭುಲಿಂಗನೆ ನಿನಗೆ ಜಯವಾಗಲಿ. ಪಾರ್ವತಿಯ ಸ್ತನಗಂಧದಿಂದ ಲಿಪ್ತವಾದ ವಕ್ಷಸ್ಥಲವುಳ್ಳವನು. ಶಿರವೆಂಬ ಅರಮನೆಯಲ್ಲಿರುವ ಚಿಕ್ಕರೂಪಳಾದ ಗಂಗೆಯ ಪತಿಯಾದವನು, ಶರಣಸತಿಯನ್ನು ಮೆಚ್ಚಿಸುವ ಕಲಾಸಂಪನ್ನನು, ನವರಸಭರಿತವಾದ ಸಂಗೀತ ಸಾಹಿತ್ಯಗಳಲ್ಲಿ ಪರಿಣತವಾದ ವಾಕ್ಕುಗಳುಳ್ಳವನು ಆದ ಶಂಭುಲಿಂಗನೇ ನಿನಗೆ ಜಯವಾಗಲಿ. ನಿಷ್ಕಳಂಕವಾದ ಮಹಿಮೆಯುಳ್ಳವನು, ಸದ್ಗುಣಗಳೆಂಬ ಮಣಿಗಳನ್ನೇ ಹಾರವನ್ನಾಗಿ ಮಾಡಿಕೊಂಡವನು, ಸ್ಥಾವರ ಜಂಗಮಾತ್ಮವಾದ ಪ್ರಪಂಚಕ್ಕೆಲ್ಲ ಆಧಾರನಾದವನು, ಅರಳಿದ ಹೃದಯಕಮಲಕ್ಕೆ ಹಂಸಪಕ್ಷಿಸ್ವರೂಪನಾದವನು, ಮುಕ್ತಿ ಸಂಪತ್ತನ್ನು ದಯಪಾಲಿಸಿ ರಕ್ಷಿಸುವವನು ಆದ ಎಲೈ ಶಂಭುಲಿಂಗನೆ, ನಿನಗೆ ಜಯವಾಗಲಿ.

ದೊಡ್ಡವರು ಸಣ್ಣವರಿಗೆ ಜಯವಾಗಲಿ ಎಂದು ಹೇಳುವದು ಆಶೀರ್ವಾದ. ಸಣ್ಣವರು ದೊಡ್ಡವರಿಗೆ ಹೇಳುವದು ಹರಕೆಯೆನಿಸುವದು.

೧೨

ಹೇ ದೇವನೆ ! ನೀನು ನನಗೆ ಒಳ್ಳೆಯದನ್ನು ಮಾಡಲು ನಿನ್ನ ಮೂರು ಕಣ್ಣುಗಳಿಂದಲು ನನ್ನನ್ನು ನೋಡಬಾರದೇ ? ಅತ್ಯಂತ ದಟ್ಟಾಗಿದ್ದ ನನ್ನ ಅಜ್ಞಾನವೆಂಬ ವನವನ್ನು ಸುಟ್ಟು ಬೂದಿ ಮಾಡಲು ನಿನ್ನ ಉರಿಗಣ್ಣಿನಿಂದ ನೋಡು. ಪಾಪವೆಂಬ ಕತ್ತಲೆಯು ಮುಸುಕಿಕೊಂಡಿದ್ದ ನಿಮಿತ್ತ ಅರಳದಿರುವ ನನ್ನ ಹೃದಯಕಮಲವನ್ನು ಅರಳಿಸಲು ನಿನ್ನ ಬಲಭಾಗದ ಸೂರ್ಯನೇತ್ರದಿಂದ ನೋಡು. ನನ್ನ ಸಂತಸ ಸಮುದ್ರವು ಉಕ್ಕೇರುವಂತೆ ಮತ್ತು ಮನವೆಂಬ ಚಕೋರ ಪಕ್ಷಿಯು ತಣಿಯುವಂತೆ ನಿನ್ನ ಎಡಭಾಗದ ಚಂದ್ರನೇತ್ರದಿಂದ ನೋಡು.

೧೩

ವಿಷ್ಣುವಿನ ದೃಷ್ಟಿಯು, ನನ್ನನ್ನು ದಯೆಯಿಂದ ನೋಡಬೇಕೆಂದು ಗಣ್ಣನ್ನು ಒಡಂಬಡಿಸಿಕೊಂಡು ಶಿವನ ಪಾದದಲ್ಲಿ ನೆಲೆಸಿತು. ನೀನು ಕೋ ಯಮ, ಮನ್ಮಥ, ತ್ರಿಪುರ, ಬ್ರಹ್ಮಾಂಡ ಮುಂತಾದವುಗಳನ್ನು ದಹಿಸಿ ಹೋ ಲಾಡುವ ಬಲವುಳ್ಳ ನಿನ್ನ ಕರುಣೆಯಿಲ್ಲದೆ ನನಗೆ ಶಿವನ ಪಾದವು ದೊರೆಯ ದೆಂಬ ಭಯದಿಂದ ನಿನ್ನನ್ನು ಬೇಡಿಕೊಳ್ಳುವೆನು. ಎಲೈ ಅಗ್ನಿನೇತ್ರವೇ ! ನನ್ನನ್ನು ಬದುಕಿಸು. ಎಲೈ ಅಗಿನೇತ್ರವ ! ನೀನು ವರಾಹ ಮೊದಲಾದ ಅನೇಕ ಜನ್ಮಾಂತರಗಳನ್ನು ಹೊಂದಿ ತಿರುಗುತ್ತಿರುವ ವಿಷ್ಣುವಿನ ಕೂಡ ಮರಳಿ ಮರಳಿ ಜನ್ಮಾಂತರಗಳನ್ನು ಧರಿಸಿ ಬಳಲಲಾರವೆ ಜನನ ಮರಣವಿಲ್ಲದ ಶಿವ ಪದವನ್ನು ಪರಿಗ್ರಹಿಸಿರುವೆಯೆನ್ನುವಾಗ ನಿನಗೆ ಸಮಾನರಾದ ಯಾರನ್ನೂ ನಾನು ನೋಡಲಿಲ್ಲ. ಎಲೋ ಅಗ್ನಿನೇತ್ರವೇ ! ವಿವೇಕವಿಲ್ಲದ ಕೆಲವರು ವಿಷ್ಣುವನ್ನು ಶಿವನ ಸಮಾನನೆಂದು ಹೇಳುವರು. ಅವರ ಅಭಿಪ್ರಾಯವನ್ನು ಹೋಗಲಾಡಿಸಿ, ವಿಷ್ಣುವೇ ಶಿವನನ್ನು ಪೂಜಿಸಿ ತಾನು ಪೂಜಕನು ಶಿವನು ಪೂಜ್ಯನು ಎಂಬುದನ್ನು ಎಲ್ಲರಿಗೂ ತಿಳಿಸಿಕೊಟ್ಟ ನೀನು ನನ್ನನ್ನು ರಕ್ಷಿಸು. ಎಲೋ ಅಗ್ನಿನೇತ್ರವೇ ! ನಾಲ್ಕು ವೇದಂಗಳಿಂದ ಹುಡುಕಿಸಿಕೊಂಬ ಹಾಗು ಇಪ್ಪತ್ತೆಂಟು ದಿವ್ಯನಾಮಂಗಳಿಂದ ಕೀರ್ತಿಸಿಕೊಂಬ,ಮೂರು ಲೋಕದವರು ಭಜಿ ಸುವ, ಋಷಿಗಳು ಧ್ಯಾನಮಾಡುವ, ಈಶ್ವರ ಪಾದಪದ್ಮವನ್ನು ಬಿಟ್ಟು ಹೋಗ ದಂತೆ ಎನ್ನನ್ನು ರಕ್ಷಿಸು. ತನ್ನ ಮಹಿಮಾತಿಶಯವನ್ನು ಬಣ್ಣಿಸುವ ವಿಷ್ಣು ವಿನ ದಿವ್ಯ ದೃಷ್ಟಿಗೆ ಅಗ್ನಿನೇತ್ರವು, ದೇವತೆಗಳು ನಮಸ್ಕರಿಸುವ ಶಿವನ ಪಾದಕಮಲದಲ್ಲಿಯೇ ನೀನು ವಾಸಿಸು ಎಂದು ಹೇಳಿ ಬಹಳ ಶಾಂತಿರಸದೊಡನೆ ಕೂಡಿಕೊಂಡು ಶೋಭಾಯಮಾನವಾಗಿರುವದು.

೧೪

ಎಲೋ ಒಡೆಯನಾದ ಶಿವನೇ ! ನಿನ್ನ ಪಾದವನ್ನು ನಂಬಿ ಆಶ್ರಯಿಸಿದ ನನ್ನನ್ನು ಕರುಣೆಯಿಂದ ನೋಡಿ ಯಾವಾಗಲೂ ಮನವನ್ನು ಮಥಿಸುವಂತ ಮನ್ಮಥನ ಹಾಗು ಹೇಡಿತನವನ್ನುಂಟುಮಾಡುವ ಯಮನ ಉಪದ್ರ

ಲನಾದ ನನ್ನನ್ನು ಗುರಿಮಾಡದೆ ರಕ್ಷಿಸು. ಎಲೋ ಮಹದೇವನೆ! ಬಾಲೆಯದ ಸ್ತ್ರೀಗಳು ಕಣ್ಣಿಗೆ ಬಿದ್ದೊಡನೆ ನನಗೆ ಆಕೆಯ ಮೇಲೆ ಅಪೇಕ್ಷೆಗೇಟಾಗುವದು, ಅದೇ ಸಮಯವನ್ನು ನಿರೀಕ್ಷಿಸುತ್ತಲಿದ್ದ ಮನ್ಮಥನು ನಾರ್ಣಗಳನ್ನು ಹಿಡಿದುಕೊಂಡು ನನ್ನ ಮೇಲೆ ಅವನು ಪ್ರಯೋಗಿಸುದ್ದು. ಅವನನ್ನು ಗೆಲ್ಲಲು ನನಗೆ ಸಾಮರ್ಥ್ಯವಿಲ್ಲ. ಆ ಸಮಯದಲ್ಲಿ ನೀನು ಬಂದು ಮನ್ಮಥನನ್ನು ಜಯಿಸಿ ನನ್ನನ್ನು ಕಾಪಾಡು. ಎಲೋ ಶಿವನೇ! ಯಮನು ನನ್ನನ್ನು ಜಿಗಿರಿಸುವದಕ್ಕಾಗಿ ಮೊದಲು ರೋಗವೆಂಬ ಕ್ರೂರವಾದ ಸಿಲನ್ನು ಕಳುಹಿಸುವನು. ಆದರಿಂದ ನಾನು ಬಳಲುತ್ತಿರುವಾಗ ಹೆಂಡತಿ ಮಕ್ಕಳು ಮೊದಲಾದವರು ನೋಡು ನೋಡುತ್ತಲಿ ತಾನೇ ಪಾಶವನ್ನು ತೆಗೆದುಕೊಂಡು ಬಂದು ನನನ್ನು ಕಟ್ಟಿ ಎಳೆದೊಯ್ಯುವನು. ಆಗ ನೀನು ಬಂದು ತ ಕಷ್ಟವನ್ನು ದೂರಮಾಡಿ ಕಾಪಾಡು. ಶರಣಬಂಧುವು ಕೃಪಾ ಸಿಂಧುವು, ಕಾಲಕಾಮರನ್ನು ಜಯಿಸಿದವನು, ಬ್ರಹ್ಮಾದಿ ದೇವತೆಗಳಿಂದ ಹೊಗಳಿಸಿಕೊಳ್ಳುವವನು ಆದ ಎಲೊ ಶಿವನೆ! ಸಂಸಾರ ಸಮುದ್ರದಲ್ಲಿ ಮುಳುಗುತ್ತಿರುವ ನನ್ನನ್ನು ಮೇಲಕ್ಕೆತ್ತಿ ಪ್ರೀತಿಯಿಂದ ಕಾಪಾಡು.

೧೫

ಆಗಮಗಳಿಂದ ಹೊಗಳಿಸಿಕೊಳ್ಳುವ ಹಾಗು ಇಂದ್ರಿಯಗಳನ್ನು ಜಯಿಸುವ ಎಲೋ ಶಂಕರನೆ! ನನ್ನನ್ನು ಪ್ರೀತಿಯಿಂದ ಕಾಪಾಡು. ಯಾಕೆಂದರೆ ಅಂಗನೆಯರ ಕೋಮಲವಾದ ಕಟಾಕ್ಷವೆಂಬ ಪುಷ್ಪಬಾಣವು ನನ್ನ ಎದೆಯನ್ನು ಹೊಕ್ಕ ಕೂಡಲೆ ಮನ್ಮಥನ ತಾಪವು ಮನವನ್ನು ಆವರಿಸಿ ಸಂತೋಷವ ಕಳೆದುಬಿಡುವದು. ಆಗ ವಿವೇಕರಹಿತನಾದ ನನಗೆ ಯಾವ ಪ್ರತಿನಿಯೂ ತೋಚುವದಿಲ್ಲ. ಆದಕ್ಕಾಗಿ ನಿನ್ನ ಪಾದವನ್ನು ಶರಣುಹೊಕ್ಕಿರುೆ. ಸಂಸಾರವೆಂಬ ಘೋರವಾದ ಅರಣ್ಯದಲ್ಲಿ ದಾರಿದಪ್ಪಿ ಅತ್ತಿತ್ತ ಇತ್ತ ಅಷ್ಟಿಷ್ಟೆಂದು ಹೇಳಲು ಬಾರದ ಪಾಪಗಳೆಂಬ ಮುಳ್ಳು ನಟ್ಟುಲೆ ಯಮದೂತರು ಕೊಡುವ ಕಾಟಗಳನ್ನು ಸಹಿಸಲಾರದೆ ಹೆದರಿ ಓಡಿದಿ ಶಿವಘೋ ಎಂದು ನಿನ್ನನ್ನು ಆಶ್ರಯಿಸಿರುವೆ, ಹೇ ಪರಮಾತ್ಮ! ರಕ್ಷಿಸು, ವಿಷ್ಣುಬ್ರಹ್ಮ ದೇವೇಂದ್ರ ಮುಂತಾದ ದೇವತೆಗಳಿಂದ

ನಮಸ್ಕರಿಸಲ್ಪಟ್ಟ ಪಾದಪದ್ಮವುಳ್ಳವನು, ಭಕ್ತರ ಇಷ್ಟಗಳನ್ನು ಪೂರೈಸ
ಕಲ್ಪವೃಕ್ಷನು, ಪಾರ್ವತಿಯ ಸುಖಸಮುದ್ರವನ್ನು ಉಕ್ಕೇರಿಸುವಲ್ಲಿ ಪ
ಚಂದ್ರನು, ಪ್ರಸಾದಪಸ್ತನು ಆದ ಗುರುಶಂಭುವೇ ನನ್ನನ್ನು ಕಾಪಾಡು.

೧೬

ಸತ್ಯಸುಖಸ್ವರೂಪನು, ಮಾಯಾವಿರಹಿತನು, ಸದ್ಗುಣಗಳೆಂಬ
ಹಾರವುಳ್ಳವನು ಆದ ಹೇ ಶಿವನೇ! ನೀನು ನನ್ನನ್ನು ಕೈಬಿಡದೆ ರ
ಶರೀರದ ಮೋಹ, ಇಂದ್ರಿಯಗಳ ಪರಿತಾಪ, ಧನದ ಆಸೆ, ಸತು
ದೂಷಣೆ, ಪರಸ್ತ್ರೀಯರ ಅನುರಾಗ, ಪ್ರಾಪಂಚಿಕ ವ್ಯವಹಾರ ಇವುಗಳಲ್ಲಿ
ಯಾವಾಗಲೂ ಮಗ್ನನಾದ ಮನಸ್ಸುಳ್ಳ ನನ್ನನ್ನು ಕೈಬಿಡದೆ ರಕ್ಷಿಸು.
ಬಗೆಯಾದ ವಿಷಯಸುಖಾಪೇಕ್ಷೆಯಿಂದ ದುಃಖಿತನಾಗಿ ಮಾಡಬಾರದ
ಪಾಪಕರ್ಮಗಳನ್ನು ಮಾಡಿ ಮತ್ತು ಸತ್ಕುಲ, ರೂಪ ಮೊದಲಾದವುಗ
ಬಯಸಿ ಅನೇಕ ಬಗೆಯಿಂದ ಬಳಲುವ ನನ್ನನ್ನು ನೀನು ಕೃಪಾದೃಷ್ಟಿ
ನೋಡಿ ಕಾಪಾಡು. ದಯಾಸಮುದ್ರದ ತೆರೆಗಳು ಏಳುತ್ತಿರುವ ಕಟಾಕ್ಷ
ವನು, ಪಾರ್ವತಿಯಿಂದ ಶೋಭಿಸುವ ಎಡಭಾಗವುಳ್ಳವನು ಭಕ್ತ
ನಿರಂತರ ವಾಸಮಾಡಿದವನು ಆದ ಎಲ್ಲೈ ಶಂಭುವೇ ಸಂಸಾರದಲ್ಲಿ
ವನ್ನು ಹೊಂದುತ್ತಿರುವ ನನ್ನನ್ನು ನೋಡಿ ಸಲಹು.

೧೭

ಪುಣ್ಯಮಯ ಶರೀರಿಯು, ಸದ್ಗುಣಗಳೆಂಬ ರತ್ನಗಳನ್ನು ಪೋಣಿ
ದಾರವಂತಿದ್ದವನು ಆದ ಹೇ ಶಿವನೇ! ನನ್ನನ್ನು ಬಿಡದೆ ಕಾಪಾಡು.
ಸಮುದ್ರವನ್ನು ಉಕ್ಕೇರಿಸಲು ಚಂದ್ರನು, ಮರೆಹೊಕ್ಕವರಿಗೆ ಕಲ್
ಪ್ರಾಯನು. ಅನೇಕ ವಿಧವಾಗಿ ಕಂಡುಬರುವ ಪ್ರಪಂಚಕ್ಕೆ ಮೂಲಕಾರ
ಆಗಿದ್ದ ಹೇ ದೇವನೇ ಜನನ ಮರಣಗಳಿಗೆ ಒಳಗಾಗಿದ್ದ ದೇಹವನ್ನೇ ನಾನೆ
ಭ್ರಮಿಸಿ ತಾಪತ್ರಯದ ಉರಿಯಲ್ಲಿ ಸಿಕ್ಕು ಷಡ್ವೈರಿಗಳಿಂದ ವ್ಯಥೆಪಟ್ಟ
ಬುದ್ಧಿಯು ವಿವೇಕರಹಿತವಾಗುತ್ತಲಿದೆ. ಇಂಥ ನನ್ನನ್ನು ದೇವನೇ
ಕಾಪಾಡು. ವಿಲಾಸಿನಿಯರ ರೂಪವನ್ನು ನೋಡಿ, ಕಾಮನ ಪುಷ್ಪ

...ರಿಯಾಗಿ, ನಿರತಿಶಯವಾದ ಆಶೆಯಿಂದ ಕೂಡಿ ಗತಿಗೆಟ್ಟ ನನ್ನ ಮನಸ್ಸು ...ಗೇಷ್ಟಪಡುತ್ತಲಿರುವದು. ಕಾಮನನ್ನು ಗೆದ್ದವನು, ಪಾರ್ವತಿಯ ಪ್ರೇಮ ...ಶೀಲನು, ದೇವದಾನವಾದಿಗಳಿಂದ ನಮಸ್ಕರಿಸಲ್ಪಟ್ಟವನು ಹದಿನಾಲ್ಕು ...ಲೋಕಗಳ ಅಧಿಪತಿಯು ಆದ ಎಲೈ ಶಿವನೆ ನನ್ನನ್ನು ಕಾಪಾಡು. ಯಾವಾ...ಲೂ ಯೋಗಿ ಜನರ ಸಂಗದಲ್ಲಿದ್ದವನು, ಮನ್ಮಥಧ್ವಂಸಿಯು, ಲಾವಣ್ಯ ನಿಧಿಯು ಆಗಿರುವ ಎಲೈ ಶಂಭುಲಿಂಗವೇ! ನಿರಂತರ ರಾಕ್ಷಸಕೃತ್ಯಗಳನ್ನೇ ಮಾಡುತ್ತ ಭ್ರಾಂತಿಯಿಂದ ಅಲ್ಪಸುಖಕ್ಕಾಗಿ ದಿವ್ಯತರವಾದ ಮೋಕ್ಷಸುಖ ವನ್ನುಂಟುಮಾಡುವ ಜ್ಞಾನವನ್ನು ಬಿಟ್ಟು, ನನ್ನ ಜೀವವು ಘಾಸಿಯಾಗುತ್ತಿರು ವದು. ಅದಕ್ಕಾಗಿ ನನ್ನನ್ನು ನೀನು ಕಾಪಾಡು.

೧೮

ಹೇ ಶಿವನೇ! ನೀನು ಯಾವ ಕಾರಣದಿಂದ ನನ್ನನ್ನು ಈ ಸಂಸಾರದಲ್ಲಿ ಭ್ರಾಂತಿ ಪಡಿಸುತ್ತಿರುವೆ? ಇನ್ನು ಇದನ್ನು ಸಾಕುಮಾಡು. ತಡಮಾಡದೆ ನಿನ್ನ ಸ್ವರೂಪವನ್ನು ದಯಮಾಡಿ ತೋರಿಸು. ನೀನು ನನ್ನನ್ನು ಮೊದಲು ಮಾಯೆಗೆ ಮಾರಿಬಿಟ್ಟೆ. ಅನಂತರ ಆ ಮಾಯೆಯನ್ನು ಕೆಡಿಸುವದಕ್ಕೆ ಮನಸ್ಸು ಹರಿಯುವಂತೆ ಮಾಡಿದೆ. ನಾನು ಸಮುಚಿತ ಕರ್ಮಗಳನ್ನು ಮಾಡ ದಾದೆನು. ಅದಕ್ಕಾಗಿ ನನ್ನನ್ನು ನೀನು ಪುನಃ ಮಾಯಾಮಲರೂಪವಾದ ಪಾಶ ದಿಂದ ಕಟ್ಟಿ ಬಿಟ್ಟೆ.

ಅನಂತರ ನನಗೆ ಭೂಲೋಕದಲ್ಲಿ ದೇಹಧರಿಸುವಂತೆ ಮಾಡಿದೆ. ಮನುಷ್ಯ ...ರು ದೇಹದಲ್ಲಿ ಮಮಕಾರವುಂಟಾಗುವಂತೆ ಮಾಡಿದೆ. ಇದರಂತೆ ಅನೇಕ ...ಪ್ರಾಣಗಳ ಬಸುರಲ್ಲಿ ಬರುವಂತೆ ಮಾಡಿದೆ. ಅಯಾ ಜಾತಿಯ ಪ್ರಾಣಿಗಳಿಗೆ ಯೋಗ್ಯವಾದ ಸುಖಾನುಭವವನ್ನುಂಟುಮಾಡಿದೆ. ಆಮೇಲೆ ನನ್ನಲ್ಲಿ ವಿನಯ ...ನ್ನು, ತಿಳಿವಳಿಕೆಯನ್ನು ಹುಟ್ಟಿಸಿದೆ, ಸ್ವಸ್ವರೂಪ ಜ್ಞಾನವನ್ನುಂಟುಮಾಡಿ ...ಸಾರ ಬಂಧವನ್ನು ಸಂಪೂರ್ಣವಾಗಿ ನಾಶಮಾಡಿದೆ, ಕಡೆಗೆ ದಯೆಯಿಂದ ದಿವ್ಯ ಸ್ವರೂಪವನ್ನೇ ನನಗೆ ಕೊಟ್ಟೆ. ಹೇ ದೇವನೇ! ನೀನು ನನಗಾಗಿ ...ಮಾಡಿದೆ.

೧೯

ಎಲೈ ಶಂಕರನೇ! ನೀನು ನನ್ನ ಸಂಸಾರ ಬಾಧೆಯನ್ನು ನೋಡು, ನನಗೆ ತೀವ್ರ ಅಭಯವನ್ನು ಕೊಟ್ಟು ಕಾಪಾಡು, ನನಗೆ ಮಾಯೆಯ ಬಾಧೆ, ತಾಪತ್ರಯದ ಬಾಧೆ, ಇಂದ್ರಿಯಗಳ ಬಾಧೆ, ಸಹಿಸಲಸಾಧ್ಯವಾದ ಜನನ ಮರಣಗಳ ಬಾಧೆ ಇವೆಲ್ಲ, ನನಗೆ ಬಹಳವಾಗಿವೆ. ಇದರಂತೆ ಹಸಿವು ತೃಷೆಗಳ ಬಾಧೆ, ಸಪ್ತವ್ಯಸನದ ಬಾಧೆ, ಅರಿಷಡ್ವರ್ಗದ ಬಾಧೆ, ಅದರಲ್ಲಿಯೂ ಮನ್ಮಥನ ಬಾಧೆ, ಗರ್ವ, ದುಃಖ, ಮಮತೆ, ಪ್ರೀತಿ ಮೊದಲಾದುವುಗಳ ಬಾಧೆ ಇವೆಲ್ಲ ಹೆಚ್ಚಾಗಿರುವವು. ಇನ್ನೂ ಹೇಳಬೇಕೆಂದರೆ ಬಗೆ ಬಗೆಯಾದ ಬಾಧೆಗಳಲ್ಲಿ, ಸಾವಿರಾರು ಕೋಟಿಗಳುಂಟು. ಇವನ್ನೆಲ್ಲ ದಾಟಿ ಹೋಗಲು ನನಗೆ ಶಕ್ತಿಯಿಲ್ಲ. ಹೇ ದೇವ! ಇವೆಲ್ಲ ಬಾಧೆಗಳನ್ನು ಪರಿಹರಿಸಿ ನನಗೆ ನಿತ್ಯ ಸುಖವನ್ನು ಕೊಟ್ಟು ಕಾಪಾಡು.

೨೦

ವಿಚಾರಿಸಿ ನೋಡಿದರೆ ನನ್ನಲ್ಲಿ ಸ್ವಲ್ಪಾದರೂ ಸುಗುಣವಿರುವದಿಲ್ಲ. ಎಣಿಸಲು ಬಾರದಷ್ಟು ದುರ್ಗುಣಗಳು ಮಾತ್ರ ನನ್ನಲ್ಲಿ ತುಂಬಿಕೊಂಡು ಕಾಡುತ್ತಿರುವವು. ಇವುಗಳನ್ನೆಲ್ಲ ಪರಿಹರಿಸಿಕೊಳ್ಳುವ ಬಲವಂತೂ ನನ್ನಲ್ಲಿರುವದಿಲ್ಲ. ದಯಾ ಸಮುದ್ರನಾದ ನೀನು ದಯೆಯಿಟ್ಟು ಕಾಪಾಡಬೇಕು. ನಾನು ಜನ್ಮವೆತ್ತಿ ಬಾರದ ಯೋನಿಯು, ಸತ್ತು ಹೂಳಿಸಿಕೊಳ್ಳದಿರ್ದ ಸ್ಥಳವು, ಹೊಂದದಿದ್ದ ಅವಸ್ಥೆಯು, ಅಪೇಕ್ಷಿಸದ ವಿಷಯವು ಇದರಂತೆ ನನ್ನ ದೇಹವನ್ನು ಮುತ್ತದ ರೋಗವು, ಮುಖವನ್ನು ಕೆಳಗೆ ಮಾಡಿಸದಿದ್ದ ನಾಚಿಕೆಯು, ಮನಸ್ಸಿನಲ್ಲಿ ತುಂಬದಿದ್ದ ಚಿಂತೆಯು, ಅಲ್ಲಾಡದಿದ್ದ ದೇಹ ವಿಕಾರವು, ನಾನು ವಂಚಿಸದ ಪ್ರಾಣಿಗಳು, ಮೋಸಮಾಡಿ ಅಪಹರಿಸಿದ ಪರಪದಾರ್ಥವು, ಕೋಪಿಸದಿದ್ದ ವೈರಿಯು, ತಿನ್ನದಿದ್ದ ಆಹಾರವು, ಈ ಲೋಕದಲ್ಲಿ ಇರುವದಿಲ್ಲ. ಇಷ್ಟೆಲ್ಲ ಅವಸ್ಥೆಗಳಿಗೆ ನಾನು ಗುರಿಯಾಗಿರುವೆನು. ಇದರಂತೆ ನಾನು ನಡೆಯದ ಅನ್ಯಾಯ ಮಾರ್ಗವು, ಮಾಡಬಾರದ ಪಾಪವು, ಜಯಿಸಿ ನಡೆಯಿಸದಿರುವ ಬಂಧ ವಿಶೇಷವುಳ್ಳ ಸುರತವು, ಸುಡತಿದ್ದ ತಾಪವು, ಹೊಡೆಯದಿದ್ದ

ಯಮದೂತರು ಎಳೆದುಕೊಂಡು ಹೋಗದ ನರಕವು, ಬಂದು ಮುತ್ತಿ ಹೆದರಿಸದಿದ್ದ ಕೊರತೆಯು, ನಾನು ದೂಷಿಸದಿದ್ದ ಸಜ್ಜನ, ಭಂಗ ಪಡದಂತೆ ವ್ಯರ್ಥಗೊಳಿಸದ ಜೀವನ, ಪ್ರಾಣವನ್ನೇ ಕಳೆದುಕೊಳ್ಳುವದು ಇದಕ್ಕಿಂತ ಮೇಲೆಂದು ಹೇಳುವಷ್ಟು ಬಲವಾದ ದಾರಿದ್ರ್ಯವು, ಹೊಂದದಿದ್ದ ನಿಂದೆ, ಇವುಗಳ ಹೊರತು ಬೇರೆ ನನ್ನಲ್ಲಿ ಎಷ್ಟು ಹುಡುಕಿದರೂ ಸದ್ಗುಣ ದೊರೆಯುವದಿಲ್ಲವೆಂದು ಹೇಳುವಾಗ ಬೇರೆ ಹೇಳುವದಾದರೂ ಏನು ? ಹೋಗಲಾಡಿಸಿಕೊಳ್ಳಬಹುದೆಂಬ ದುಃಖವು ಇನ್ನೇನು ! ಇಲ್ಲಿಯು ಪರ್ಯಂತರವೆಂದು ಹೇಳಬಹುದಾದ ಸಂಸಾರ ಬಂಧವು, ಸಹಿಸಿಕೊಂಬ ಬಗೆ, ಬಾರದ ವಿಘ್ನ, ನಡೆಯದೆ ಬಿಟ್ಟ ದುರ್ಮಾರ್ಗ, ವಿಚಾರಿಸಿ ನೋಡಿದರೆ ಇವುಗಳಲ್ಲಿ ಒಂದಾದರೂ ಇಲ್ಲವೆಂದು ಹೇಳಬರುವದಿಲ್ಲ. ಅದುಕಾರಣ ದೇವನೇ ! ನಾನು ನಿನ್ನನ್ನು ಶರಣು ಹೊಕ್ಕಿರುವೆ. ನೀನು ನಿನ್ನ ಪಾದಪದ್ಮಮಧ್ಯದಲ್ಲಿ ನನ್ನನ್ನು ಇಟ್ಟುಕೊಂಡು ಭಕ್ತವತ್ಸಲನೆಂಬ ಬಿರುದಿನ ನಿಮಿತ್ತದಿಂದಲಾದರೂ ನನ್ನನ್ನು ರಕ್ಷಿಸಬೇಕು.

೨೧

ಹೇ ದೇವನೇ ! ನಿನ್ನನ್ನು ಮರೆಹೊಕ್ಕ ನನ್ನನ್ನು ಕಾಡಿಸದೆ ರಕ್ಷಿಸು. ನನ್ನ ಮನಸ್ಸು ಯಾವಾಗಲೂ ವಿಷಯಸುಖಗಳನ್ನು ಬಿಡಲಾರದೆ ಚಲಿಸುತ್ತಲೇ ಇರುವದು, ಅದೆಲ್ಲಿ ಸಂಚರಿಸುವದೋ ಅಲ್ಲಲ್ಲಾ ವಿಚಾರಿಸಿ ಆ ವಿಷಯಗಳ ಆಶೆಯನ್ನು ದೂರಮಾಡಿ ನನ್ನನ್ನು ಕಾಪಾಡು, ದೇಹ, ದ್ರವ್ಯ, ಸ್ತ್ರೀ ಮೊದಲಾದವುಗಳಲ್ಲಿ ಯಾವ ಬಗೆಯಾದ ಪ್ರೀತಿಯು ಹುಟ್ಟುವದೋ ಅದೇ ಪ್ರೀತಿಯನ್ನು ನಿನ್ನ ಪಾದಕಮಲದಲ್ಲಿ ಹುಟ್ಟುವಂತೆ ಮಾಡಿ ನನಗೆ ಅಭಯವನ್ನು ನೀಡು. ಹೆತ್ತ ತಂದೆಯು ತನ್ನ ಮಗುವಿನ ಕೆಟ್ಟ ವರ್ತನವನ್ನು ಸೈರಿಸಿಕೊಂಡು ಮುದ್ದಿಸಿ ಲಾಲಿಸುವಂತೆ ನನ್ನಲ್ಲಿದ್ದ ದುರ್ಗುಣಗಳನ್ನು ಎಣಿಸದೆ ಮನ್ನಿಸು, ದೇವ ! ನೀನು ನನ್ನನ್ನು ಪಾಪಿಯೆಂದು ತಿರಸ್ಕರಿಸಬಹುದೆ ? ನಿನ್ನ ಸ್ಮರಣೆಯು ಹೋಗಲಾಡಿಸದಿದ್ದ ಯಾವುದಾದರೊಂದು ಪಾಪವುಂಟೋ ? ಅದು ಕಾರಣ ನನ್ನನ್ನು ದಯೆಯಿಟ್ಟು ಕಾಪಾಡು. ಸಜ್ಜನರಾದವರು ದರಿದ್ರರನ್ನು ನೋಡಿ ಅವರ ಬಯಕೆಗಳನ್ನು ಪೂರ್ಣಗೊಳಿಸುವಂತೆ ನೀನು ದೀನನಾದ ನನ್ನನ್ನು ಯಾವಾಗಲೂ ಅಗಲದೆ ಕಾಪಾಡು.

೨೨

ಎಲೈ ದೇವನೇ ! ನಿನ್ನಲ್ಲಿ ಯಾವ ಸುಗುಣಗಳಿರುವವೆಂಬುದನ್ನು ತಿಳಿದುಕೊಳ್ಳದೆ ನನ್ನಲ್ಲಿರುವ ದುರ್ಗುಣಗಳನ್ನು ಎಣಿಸುವೆ ? ಅತಿ ಸುಂದರನಾದ ಮನ್ಮಥನನ್ನು ಸುಟ್ಟು ಬೂದಿ ಮಾಡಿದೆ, ತ್ರಿಪುರರ ಹೆಂಡರು ಮಕ್ಕಳನ್ನೆಲ್ಲ ಹಾಳು ಮಾಡಿದೆ, ಬ್ರಹ್ಮನ ತಲೆಯನ್ನು ಕತ್ತರಿಸಿದೆ. ವಿಷ್ಣುವಿನ ಕಣ್ಣನ್ನು ಕಿತ್ತಿಸಿಕೊಂಡು ನಿನ್ನ ಪಾದದಲ್ಲಿರಿಸಿಕೊಂಡೆ, ಯಮನನ್ನು ಕೊಂದೆ, ವೇದಗಳನ್ನು ನಾಯಿಗಳನ್ನಾಗಿ ಮಾಡಿದೆ, ದಕ್ಷಬ್ರಹ್ಮನ ಯಜ್ಞವನ್ನು ಹಾಳುಮಾಡಿದೆ ಋಷಿಪತ್ನಿಯರನ್ನು ಕಾರಣವಿಲ್ಲದೆ ಅವಮಾನಗೊಳಿಸಿದೆ, ವಿಚಾರಿಸಿ ನೋಡಿದರೆ ನಿನ್ನಲ್ಲಿ ಅನೇಕ ದುರ್ಗುಣಗಳು ನೆಲೆಸಿರುವವು, ಅವುಗಳನ್ನೆಲ್ಲ ಅಡಿ ತೋರಿಸುವಲ್ಲಿ ಪ್ರಯೋಜನವೇನು ? ಅದುಕಾರಣ ದೇವ, ನಾನು ತಿಳಿಯದೆ ಮಾಡಿದ ಅಪರಾಧಗಳನ್ನೆಲ್ಲ ಕ್ಷಮಿಸಿ ನಿನ್ನಲ್ಲಿ ನನ್ನನ್ನು ಅಗಲದಂತೆ ತೊಡಿಸಿಕೊಂಡು ಬಿಡು.

೨೩

ಹೇ ದೇವನೇ ! ನೀನು ನಿಸ್ಸಾರವಾದ ಪದಾರ್ಥಗಳನ್ನೆಲ್ಲ ಏಕೆ ವಿಚಾರಿಸದೆ ಪ್ರೀತಿಸಿ ಪರಿಗ್ರಹಿಸಿಕೊಂಡಿರುವೆ ? ಕಂಪುಳ್ಳ ಗಂಧವನ್ನು ಬಿಟ್ಟು ಸುಡಗಾಡ ಬೂದಿಯನ್ನು ಮೈಗೆಲ್ಲಾ ಬಳಿದುಕೊಂಡಿರುವೆ. ದಿವ್ಯಾಭರಣಗಳನ್ನು ಬಿಟ್ಟು ಸರ್ಪಗಳನ್ನು ಒಡವೆಗಳನ್ನಾಗಿ ಮಾಡಿಕೊಂಡಿರುವೆ. ದಿವ್ಯವಸ್ತುಗಳನ್ನು ತ್ಯಜಿಸಿ ಆನೆಯ ಚರ್ಮವನ್ನು ಧರಿಸಿರುವೆ. ಶ್ರೇಷ್ಠವಾದ ಮುತ್ತಿನಹಾರವನ್ನು ತೊರೆದು ತಲೆ ಬುರುಡೆಗಳ ಸರವನ್ನು ಹಾಕಿಕೊಂಡಿರುವೆ. ಸೊಗಸಾಗಿರುವ ದೇವತೆಗಳನ್ನು ತ್ಯಜಿಸಿ ಪಿಶಾಚಿಗಳ ಗುಂಪನ್ನು ಸೇರಿಕೊಂಡಿರುವೆ. ಮೇರುವೆಂಬ ಬಂಗಾರದ ಪರ್ವತವನ್ನು ಬಿಟ್ಟು ಸ್ಮಶಾನದಲ್ಲಿ ಮನೆ ಮಾಡಿಕೊಂಡಿರುವೆ. ಆನೆ ಮೊದಲಾದ ವಾಹನಗಳನ್ನೆಲ್ಲ ಬಿಟ್ಟು ಮುದಿ ಎತ್ತನ್ನು ವಾಹನ ಮಾಡಿಕೊಂಡಿರುವೆ. ಲೋಕದೊಡೆಯನಾಗಿ ತಿರದುಣ್ಣುತ್ತಿರುವೆ. ಈ ರೀತಿಯಾಗಿ ಯಾವುವರಲ್ಲಿಯೂ ಆಶೆಯಿಲ್ಲದೆ ದೇವತೆಗಳ ಇಷ್ಟಾರ್ಥಸಿದ್ಧಿಯನ್ನು, ಮಾಡುತ್ತಿರುವ ನಿನ್ನನ್ನು ಕಂಡಾಗ ಸ್ವಾತ್ಮಾನುಭವವುಳ್ಳವರಿಗೆ ಲೋಕದ ಸುಖದ ಅನುಭವಗಳಲ್ಲಿ ಆಶೆಯಿರುವದಿಲ್ಲವೆಂದು ತೋರುವದಲ್ಲವೆ !

೨೪

ಹೇ ದೇವ! ಪ್ರಿಯ ಅಪ್ರಿಯ ಇವೆರಡನ್ನು ಒಂದೆಡೆ ಕೂಡಿಕೊಂಡಿರುವಂತೆ ಗೊತ್ತುಮಾಡಿರುವ ನಿನ್ನ ವಿಚಾರಸರಣಿಯನ್ನು ಏನೆಂದು ಹೇಳಲಿ! ನಿನ್ನ ವಿವೇಕ ಎಂತಹದು! ಸೌಂದರ್ಯವುಳ್ಳ ಯೌವ್ವನವನ್ನು ಅದರೊಡನೆ ಅಸಹ್ಯವಾದ ಮುಪ್ಪನ್ನು, ದಿವ್ಯವಾದ ಭೋಗವನ್ನು ಅದರೊಡನೆ ರೋಗವನ್ನು, ವಿದ್ಯೆಯನ್ನು ಅದರೊಡನೆ ದಾರಿದ್ರ್ಯವನ್ನು, ಅಧಿಕವಾದ ಸಂಪತ್ತನ್ನು ಅದರ ಸಂಗಡ ಲೋಭವನ್ನು, ಸಂತೋಷವನ್ನು ಅದರ ಕೂಡ ದ್ರವ್ಯದ ಆಶೆಯನ್ನು, ಪರಮಶಾಂತಿಯನ್ನು ಸ್ತ್ರೀಯರೊಡನೆ ವಿಲಾಸವನ್ನು, ಬದುಕನ್ನು ಅದರ ಸಂಗಡ ಸಾವನ್ನು, ದಿವ್ಯ ಜ್ಞಾನವನ್ನು ಅದರೊಡನೆ ಗರ್ವವನ್ನು, ಮನುಷ್ಯಜನ್ಮವನ್ನು ಮುಕ್ತಿಯಲ್ಲಿ ಪ್ರೇಮವಿಲ್ಲದುದನ್ನು, ದೇಹದಂಡನೆಯನ್ನು ಅದರೊಡನೆ ಮನದಲ್ಲಿ ಕಾಮವನ್ನು, ಮುನಿಗಳ ವರ್ತನೆಯನ್ನು, ಅದರಕೂಡ ಲೋಕರಂಜನೆಯನ್ನು, ಪವಿತ್ರನಾದ ನಿನ್ನನ್ನು ಅದರೊಡನೆ ಸಂಸಾರವನ್ನು ಹೀಗೆ ವಿರುದ್ಧವಾದವುಗಳನ್ನು ಒಂದೆಡೆಯಲ್ಲಿರಿಸಬಹುದೆ?

೨೫

ಹೇ ದೇವನೇ! ನೀನು ನನ್ನನ್ನು ಅನುಗ್ರಹಿಸದಿರುವ ಒಂದು ನಿಮಿಷವು ನನಗೆ ಹಲವು ವರುಷಗಳಾಗಿ ತೋರಿಬರುವದು. ಹೀಗಾದರೆ ನಾನು ಹೇಗೆ ಬದುಕಬೇಕು! ಅದಕ್ಕಾಗಿ ನನ್ನನ್ನು ನೀನು ಕ್ಷಮಿಸು. ಹೇ ಪರಮಾತ್ಮನೇ! ನೀನು ಜ್ಞಾನವಿರೋಧಿಯಾದ ಮಾಯೆಯ ಪರಿಣಾಮವಾಗಿ ಜನಿಸಿದ ಧಾನ್ಯವೆ ಆಹಾರ ರೂಪದಲ್ಲಿ ದೇಹವನ್ನು ಸೇರಿ, ಅದರ ಸಾರವಾಗಿ ಉದಯಿಸಿದ ಶುಕ್ಲ ಧಾತುವಿನಿಂದ ಪ್ರಜೆಗಳು ಹುಟ್ಟುವಂತೆ ಮಾಡಿರುವೆ. ಮನ್ಮಥನ ಪರಾಕ್ರಮವನ್ನು ಭಂಗಗೊಳಿಸಿ ಲೋಕಕಂಟಕರಾದ ರಾಕ್ಷಸರನ್ನು ಸಂಹರಿಸಿ ನಳ ಮೊದಲಾದ ಸಜ್ಜನರನ್ನು ಕಾಪಾಡಿ ಅವರಿಗೆಲ್ಲ ಸಂತೋಷವನ್ನುಂಟುಮಾಡಿದ ಮಹಾಮಹಿಮ ನೀನು. ಹೇ ಮಹಾದೇವ! ನೀನು ಜನನ ಮರಣಾದಿಗಳಿಗೊಳಪಟ್ಟವರನ್ನು ಹುಟ್ಟಿಸಿ ಆಮೇಲೆ ಷಡ್ಭಾವವಿಕಾರಗಳಲ್ಲಿ ಸಿಕ್ಕುಕೊಂಡು ಪೇಚಾಡುವ ಅವರ ಅಜ್ಞಾನವನ್ನು ಕರುಣೆಯಿಂದ ದೂರಮಾಡಿ ದುಃಖ ಸಮುದ್ರವನ್ನು ದಾಟಿಸುವ ತೆಪ್ಪದಂತಿದ್ದ ಮಹಾಮಹಿಮ ನೀನು.

೨೭

ವೇದಗಳನ್ನು ತನ್ನ ಹೊಟ್ಟೆಯಲ್ಲಿ ತುಂಬಿಕೊಂಡ ಬ್ರಹ್ಮನ ಐದು ಮುಖಗಳಲ್ಲಿ ಒಂದು ಮುಖವನ್ನು ಚೂಟಿಹಾಕಿ ಸಾಲಿಗೆ ಸರಿಯಾಗಿ ಮಾಡಿದ ಪರಮಾತ್ಮನನ್ನು ಇಂದುಮುಖಿಯೂ ಶಕ್ತಿಸ್ವರೂಪಳೂ ಆದ ಎಲೈ ಪಾರ್ವತಿಯೇ ನೀನು ತಂದು ತೋರಿಸು. ಆ ಪರಮಾತ್ಮನು ಎಂಥವನೆಂದರೆ ಅವನು ಪರ್ವತ ರಾಜನ ಮಗಳನ್ನು ಪ್ರೀತಿಸುವವನು, ನಿರ್ಲೋಭಿಯಾದವನು, ಭೂಲೋಕದ ತನ್ನ ಭಕ್ತರಿಗೆಲ್ಲ ಬೇಡಿದ ವರವನ್ನು ಕೊಡುವವನು, ಸರ್ಪವನ್ನು ಆಭರಣವನ್ನಾಗಿ ಮಾಡಿಕೊಂಡವನು, ಯಮನನ್ನು ಜಯಿಸಿದವನು ಮತ್ತು ಮನ್ಮಥನ ಕೊಂದವನು, ಅರ್ಜುನನೊಡನೆ ಯುದ್ಧ ಮಾಡಿದವನು, ಗಂಗೆಯನ್ನು ಹಾಗು ಚಂದ್ರನನ್ನು ತಲೆಯಲ್ಲಿ ಧರಿಸಿ ಅತಿ ಸುಂದರನಾದವನನ್ನು ಮತ್ತು ಪೂರ್ವದಲ್ಲಿ ಲಕ್ಷ್ಮೀಪತಿಯಾದ ನಾರಾಯಣನು ಸಹಸ್ರ ಕಮಲಗಳಿಂದ ಪರಮಾತ್ಮನ ಪೂಜೆಯನ್ನು ಮಾಡಬೇಕೆಂದು ಸಂಕಲ್ಪಿಸಿ ಸಹಸ್ರ ಕಮಲಗಳನ್ನು ಸರಿಯಾಗಿ ಎಣಿಸಿ ಇಟ್ಟುಕೊಂಡು ಪೂಜಿಸುತ್ತಿರುವಾಗ ಕೊನೆಗೆ ಒಂದು ಪುಷ್ಪವು ಕಡಿಮೆಯಾಗಿರಲು ಅವನು ತನ್ನ ಕಣ್ಣನ್ನೇ ಕಿತ್ತು ಶಿವನ ಪಾದಕ್ಕೆ ಅರ್ಪಿಸಿದನು. ಆಗ ಶಿವನು ಮೆಚ್ಚಿ ತನ್ನ ಭಕ್ತನಿಗೆ ಒಂದು ಕಣ್ಣಿಲ್ಲದಿರುವದು ಒಳಿತಲ್ಲವೆಂದು ಒಂದು ಕಮಲವನ್ನು ಮೊದಲು ಕಣ್ಣಿದ್ದ ಸ್ಥಳದಲ್ಲಿಟ್ಟ ಅದನ್ನೇ ಕಣ್ಣಾಗುವಂತೆ ಮಾಡಿದವನು. ಇಂತಹ ಪರಮಾತ್ಮನನ್ನು ತಂದು ತೋರಿಸಬೇಕು.

೨೭

ಶಂಭುಲಿಂಗನಾದ ಪರಮಾತ್ಮನು ದೇವಗಂಗೆಯನ್ನು ಹಾಗೂ ಚಂದ್ರನನ್ನು ತಲೆಯಲ್ಲಿ ಧರಿಸಿದವನು ಹಾಗು ಕೈಯಲ್ಲಿ ಸಾರಂಗವನ್ನು ಹಿಡಿದುಕೊಂಡವನು, ಮನ್ಮಥನನ್ನು ಉರಿಗಣ್ಣಿನಿಂದ ಸುಟ್ಟವನು, ನರಸಿಂಹಾವತಾರನಾದ ವಿಷ್ಣುವನ್ನು ಕೊಂದವನು, ಯಮನನ್ನು ದೊಡ್ಡ ಶೂಲದಿಂದ ಇರಿದವನು, ಹಾಗು ವಿಷ್ಣುವಂದಿತನು, ಸಿಂಹದ ಚರ್ಮವನ್ನು ಧರಿಸಿದವನು ಆಗಿದ್ದಾನೆ. ಮತ್ತು ಅವನು ಪಾರ್ವತಿಯನ್ನು ತನ್ನ ಎಡ ತೊಡೆಯ ಮೇಲಿಟ್ಟುಕೊಂಡ

ವನು, ಚಂದ್ರನಂತೆ ಪ್ರಕಾಶಿಸುವವನು, ಕುಬೇರನ ಮಿತ್ರನು, ಯೋಗಿಗಳಿಗೆಲ್ಲ ಕಲ್ಪವೃಕ್ಷಸ್ವರೂಪನು ; ಸೋಮನೆಂಬ ಹೆಸರುಳ್ಳವನು, ಜಗತ್ತಿನ ಸುಖಕ್ಕೆ ಆಧಾರನಾದವನು, ಚಂದ್ರನ ಕಳೆಗಳನ್ನು ಮೀರಿದವನು, ಜ್ಯೋತಿಸ್ವರೂಪನು ಮುಕ್ತಿಪ್ರಯೋಜನನಾಗಿರುವನು, ಸುಖವನ್ನು ನೀಡುವ ಲಿಂಗನು ಮತ್ತು ಸದ್ಗುಣಗಳೆಂಬ ಮಣಿಗಳನ್ನು ಪೋಣಿಸುವ ದಾರದಂತಿದ್ದವನು, ಭಕ್ತರ ಸಂಸಾರ ಸಮುದ್ರಕ್ಕೆ ಹಡಗವಾಗಿರುವವನು, ಬ್ರಹ್ಮನ ಸ್ತೋತ್ರಕ್ಕೆ ಪಾತ್ರನಾದ ವನು, ಜ್ಞಾನಿಗಳನ್ನು ಸಂತೋಷವೆಂಬ ವನಕ್ಕೆ ವಸಂತಮಾಸದಂತಿದ್ದವನು. ಇಂತಹ ಶಂಭುಲಿಂಗನು ಎಲ್ಲರನ್ನು ಕರುಣಿಸಲೆಂಬುದೇ ಕವಿಯ ಆಶಯ.

೨೮

ಎಲೆ ಮುದ್ದಾದ ಹಾಗು ಜಾಣನಾದ ಮನವೆಂಬ ಕೋಗಿಲೆಯೇ ! ನೀನು ಪೂರ್ವದಲ್ಲಿ ತಪಸ್ಸು ಮಾಡುತ್ತಿದ್ದ ದೇವನನ್ನು ಬಾಣದಿಂದ ಹೊಡೆದು ಅವನ ಕೋಪದುರಿಯಿಂದ ಸುಟ್ಟುಹೋದ ಮದನನನ್ನು ತ್ಯಾಗಮಾಡಿ ಬಾಲ ಚಂದ್ರನನ್ನು ಧರಿಸಿದ ಮಹಾದೇವನನ್ನು ಕೂಡಿಕೊಂಡು ಯಾವ ತೊಂದರೆ ಯಿಲ್ಲದೆ ಬಾಳು. ಹೇ ಮನವೆಂಬ ಕೋಗಿಲೆಯೇ ! ಮನ್ಮಥನು ಸ್ವಯಂಭುವೆ ಮೊದಲಾದ ಹದಿನಾಲ್ಕು ಮನುಗಳ ಹಾಗು ಎಂಭತ್ತೆಂಟು ಕೋಟಿ ಋಷಿಗಳ ನೀತಿಗಳನ್ನು ಕೆಡಿಸುವ ಅತ್ಯಂತದುರ್ಜನನಾಗಿರುವನು. ಆದಕ್ಕಾಗಿ ಅವನನ್ನು ನೀನು ಬಿಟ್ಟು, ತನ್ನನ್ನು ನೆನೆವವರಿಗೆ ಹಿರಿದಾದ ಪದವಿಯನ್ನು ದಯಪಾಲಿ ಸುವ ಕುಬೇರಮಿತ್ರನಾದ ಪರಮೇಶ್ವರನನ್ನು ಯಾವಾಗಲೂ ಬಿಡದಂತೆ ಪೊಂದಿಕೊಂಡಿರು. ಎಲೆ ಮನವೆಂಬ ಕೋಗಿಲೆಯೇ ! ಪತಿಯನ್ನಗಲಿದ ಮೃದು ಹೃದಯದ ಸ್ತ್ರೀಯರನ್ನು ಹಿಂಸಿಸುವ ಮನ್ಮಥನನ್ನು ತ್ಯಜಿಸಿ ಎಲ್ಲರ ಪ್ರೀತಿಗೆ ಪಾತ್ರನಾದ ಒಳ್ಳೆಯದನ್ನೇ ಉಂಟುಮಾಡಬಲ್ಲ ಪರಮಾತ್ಮನನ್ನೇ ನೀನು ನಿರಂತರ ಕೂಡಿಕೊಂಡಿರು. ಎಲೈ ಮನವೆಂಬ ಕೋಗಿಲೆಯೇ ! ಶುಭ ಶಬ್ದಗಳಿಂದ ಮನ್ಮಥನನ್ನು ಸ್ತೋತ್ರಮಾಡಿದರೆ ಅದು ಕೇಡಿಗೆ ಕಾರಣವಾಗು ವುದಿಲ್ಲವೆ ! ಆದಕ್ಕಾಗಿ ನೀನು ಶಿವನನ್ನೇ ಯಾವಾಗಲೂ ಹಾಡಿ ಹರಿಸಬೇಕು. ಎಲೆ ಮನವೆಂಬ ಕೋಗಿಲೆಯೇ ! ದುರುಳನಾದ ಮನ್ಮಥನ ಸಂಗಡ ನೀನು

ಇರುವದಾದರೆ ನಿನ್ನನ್ನು ಎಲ್ಲರೂ ಪರಪುಟ್ಟನೆಂದು ಹೇಳುವರು. ಅದಕ್ಕಾಗಿ ನೀನು ಈ ಜಗತ್ತಿನ ಉತ್ಪಾದಕನಾದ ಗುರು ಶಂಭುಲಿಂಗನ ಪಾದಪಲ್ಲವವನ್ನೇ ಹಿಡಿದುಕೊಂಡು ನಿತ್ಯಸುಖಿಯಾಗಿರು.

ಶಿವಕಾರುಣ್ಯಸ್ಥಲದ
ಭಾವಪ್ರಕಾಶ
ಸಮಾಪ್ತ

ಜೀವ ಸಂಬೋಧನ ಸ್ಥಳ

೧

ಎಲೈ ಜೀವನೇ ? ನಿನಗೆ ಮುಕ್ತಿ ಬೇಕಲ್ಲವೆ ? ಹಾಗಾದರೆ ಪ್ರತಿದಿನ ಪ್ರಾತಃಕಾಲ ಸಮಯದಲ್ಲಿ ಎದ್ದು, ಪಾರ್ವತೀಪತಿಯಾದ ಪರಶಿವನ ಪಾದ ಕಮಲಗಳನ್ನು ಸ್ಮರಿಸು. ಅದರಿಂದ ನಿನಗೆ ನಿಜಮುಕ್ತಿ ದೊರೆಯುವದು. ಜಾಗ್ರದವಸ್ಥೆಯಲ್ಲಿ ಹೆಂಡತಿ ಮತ್ತು ಮಕ್ಕಳೊಂದಿಗೆ ಹರ್ಷದಿಂದ ಇದ್ದೆನು. ಆಮೇಲೆ ಮಲಗಿ ಅನೇಕ ಆಕಾರಗಳುಳ್ಳ ಚಕಿತಗೊಳಿಸುವ ವಸ್ತುಗಳನ್ನು ನೋಡಿ, ಕನಸಿನಲ್ಲಿ, ಜಾಗ್ರದಾವಸ್ಥೆಯನ್ನೆಲ್ಲ ಮರೆತಿದ್ದೆನು. ಅನಂತರ ಗಾಢ ನಿದ್ರೆಯ ಸುಷುಪ್ತಾವಸ್ಥೆಯಲ್ಲಿ, ಎಣ್ಣೆ-ಬತ್ತಿಗಳು ತೀರಿಹೋದ ದೀಪದಂತೆ, ಜೀವಭಾವವನ್ನು ಮರೆತು, ದಿವ್ಯ ಆನಂದವನ್ನು ಹೊಂದಿದೆನು, ಪುನಃ ಎಚ್ಚರಗೊಂಡು ಮುನ್ನಿನಂತೆ ಅನೇಕ ಕಾರ್ಯಗಳನ್ನು ನಿಶ್ಚಯವೆಂದು ತಿಳಿದು ಮಾಡಿದೆನು. ಈ ನನ್ನ ಕೆಲಸಗಳನ್ನು ಏನೆಂದು ವರ್ಣಿಸಲಿ ॥೧॥ ಈ ದೇಹಸ್ವರೂಪವೇನು ? ಇದು ನನಗೆ ಏಕೆ ಬಂತು ? ನಾನು ಯಾರು ? ಹುಟ್ಟು-ಸಾವುಗಳಿಗೆ ಒಳಗಾದ ಈ ಸಂಸಾರವನ್ನು ಈ ಶರೀರದಲ್ಲಿ ಧರಿಸಿ ಸಹಿಸಲಾರೆನು. ಸ್ಮರಿಸುವ, ಕೇಳುವ, ಮುಟ್ಟುವ, ಅರಿತುಕೊಳ್ಳುವ, ಉಣ್ಣುವ, ಪಾನಮಾಡುತ್ತಿರುವ ಈ ಶರೀರವು ಯಾರು ? ಆಡುವ ಮಾತು ಗಳು ಎಲ್ಲಿಂದ ಹುಟ್ಟುತ್ತವೆ. ನನ್ನಲ್ಲಿ ಪ್ರಾಣಗಳು ಯಾವುದನ್ನು ಆಶ್ರಯಿ ಸಿವೆ ? ನನ್ನನ್ನು ಮೆಚ್ಚಿಸಿ ನಡೆಸಿಕೊಂಡು ಬರುವವರಾರು ? ಈ ಪ್ರಪಂ ಚದ ವೈವಿಧ್ಯಕ್ಕೆ ಕಾರಣವಾವುದು ? ಎಂಬ ವಿಷಯಗಳನ್ನು ವಿಚಾರಿಸು. ॥೨॥ ನೀನು ತಾಯಿಯ ಗರ್ಭದಲ್ಲಿದ್ದಾಗ ಅವಳ ಹೀನಾಯವಾದ ನೋವು

ಗಳನ್ನು ಅನುಭವಿಸಿ, ಮನಸ್ಸು ನೊಂದು, ಹಾಗೆ ಅಲ್ಲಿಂದ ಹುಟ್ಟಿ ಈಚೆಗೆ ಬಂದು ಪುನಃ ಜೀವಿಸಿರುವ ಸ್ವಲ್ಪ ಸಮಯವಾದರೂ, ಮನ್ಮಥನ ವೈರಿಯಾವ ಶಿವನನ್ನು ಧ್ಯಾನಿಸಿ, ಮಾಯೆಯನ್ನು ಗೆದ್ದು, ಸಂಸಾರದಿಂದ ಬಿಡುಗಡೆಯನ್ನು ಪಡೆದು ನಿತ್ಯ-ನಿಜಸುಖವವನ್ನು ಹೊಂದುವದೇ ನನ್ನ ಕರ್ತವ್ಯವೆಂಬುದನ್ನು ಮರೆತು ಬಿಟ್ಟೆನು—ಇದಕ್ಕೆ-ಧರ್ಮಾಚರಣೆಯನ್ನು ಬಿಟ್ಟರೆ—ಬೇರೆ ಯಾವದು ಉಪಾಯ ?

೨

ಎಲೈ ಮನುಷ್ಯನೇ, ವ್ಯರ್ಥವಾಗಿ ವೇಳೆಯನ್ನು ಹರಣಮಾಡುತ್ತ, ಆ ನಿಜ ವಸ್ತುವನ್ನು ನಂಬಿ ಅರಿಯದೇ, ಮುಕ್ತಿಯನ್ನು ಹೊಂದದೆ. ಪ್ರಾಣವನ್ನು ಕಳೆದುಕೊಂಡು,—ಇಹಲೋಕವನ್ನು ತ್ಯಜಿಸುವದು ಒಳಿತೇ ? ‖ಪ‖ ಈ ಭೂಮಿಯನ್ನೆಲ್ಲ ಪುಡಿ-ಪುಡಿಯಾಗಿ ಮಾಡುವದರಿಂದ ಉಂಟಾಗುವ, ಅನೇಕ ಅಣುಗಳಷ್ಟು ಅಸಂಖ್ಯ ಯೋನಿಗಳಲ್ಲಿ, ಜನ್ಮಗಳನ್ನು ತಳೆದು, ಪುನಃ ಆ ದಾರಿಗೇ ಹೋಗದಂತೆ ಆಲೋಚಿಸದೇ ಹುಟ್ಟು-ಸಾವು, ರೋಗ, ಅಂಜಿಕೆ, ದುಃಖ, ಮುಪ್ಪು, ದಾರಿದ್ರ್ಯ, ಎರಡನೆಯವರ ಸೇವೆ, ಭಿಕ್ಷೆ, ನಷ್ಟ, ಅಪ ವಾದ, ಕೋಪ, ಇಂದ್ರಿಯಗಳಿಚ್ಛೆ, ಅಗಲುವಿಕೆ (ವಿರಹ) ಸಂತಾಪ, ಆಲೋಚನೆ ಮೊದಲಾದವುಗಳಿಂದ ಉಂಟಾಗದಿರತಕ್ಕ ಒಲ್ಮೆಯನ್ನು ಕಲಿತು ಕೊಳ್ಳದೇ ! ವಿಚಾರಕ್ಕೂ ಸಿಲುಕದ ಕೆಲವು ದುಃಖಗಳನ್ನು ಸದಾಕಾಲ ಅನು ಭವಿಸುತ್ತಿರುತ್ತಿ. ಇದನ್ನು ತೊರೆದು. ಸಾರಾಸಾರಾ ವಿಚಾರಮಾಡಿ ಸದ್ಭಕ್ತಿ ಯಿಂದ ಆತ್ಮವಿಚಾರ ಮಾಡಿದರೆ, ಸತತ ನಿತ್ಯಾನಂದವನ್ನು ಪಡೆಯುವೆ ಎಂಬು ದನ್ನು ತಿಳಿದುಕೊಳ್ಳದೆ ಕಾಲಕಳೆಯುವದುಚಿತವಲ್ಲ.

೩

ಸಂಸಾರದುಃಖಸಮುದ್ರವನ್ನು ನೆನೆಸಿಕೊಳ್ಳುವ ನನಗೆ ನಿದ್ರೆಯೇ ಬಾರದು. ‖ಪ‖ ಮಾಡಿದ ಪಾಪಕ್ಕೆ ಅನುಗುಣವಾಗಿ, ಮರ, ಹುಳ ಕ್ರಿಮಿ, ಕೀಟಕಗಳಾಗಿ ಪಕ್ಷಿಗಳಾಗಿ, ಪ್ರಾಣಿಗಳಾಗಿ ಹುಟ್ಟಿ ಅನೇಕ ದುಃಖಗಳನ್ನು ಸ್ಮರಿಸು ವದರಿಂದ-ನಿದ್ರೆ ಬಾರದು. ಐದು ಮೂಲಭೂತಗಳ ರೂಪದಿಂದ, ನಂತರ

ಪೈರಾಗಿ, ಸಪ್ತಧಾತುಗಳಾಗಿ, ತಂದೆ-ತಾಯಿಗಳ ರಕ್ತದಿಂದ ಉತ್ಪತ್ತಿಯಾಗಿ, ಈ ದೇಹವು ಉಂಟಾಗುವುದೆಂಬ ಆಶ್ಚರ್ಯವನ್ನು ಕೇಳಿದ ನನಗೆ ನಿದ್ರೆ ಬಾರದು. ಬಾಲ್ಯ, ತಾರುಣ್ಯ, ಮುಪ್ಪುಗಳನ್ನು ಕಳೆದು, ಆಮೇಲೆ ನರಕಕ್ಕೆ ಹೋಗುವ ಕ್ರಮವುಳ್ಳ ಈ ದೇಹವನ್ನು ಹೊಂದಲಾರೆನು, ರಕ್ಷಿಸು ಎಂದು ಭಯದಿಂದ ಶಿವನನ್ನು ಪ್ರಾರ್ಥಿಸಿಕೊಳ್ಳುತ್ತಿರುವದರಿಂದ ನಿದ್ರೆಬಾರದು.

೪

ಕ್ಷಣಕ್ಷಣದಲ್ಲಿಯೂ ದುಃಖವೇ ಕಂಡುಬರುತ್ತಿರುವ ಕ್ರೂರಸಂಸಾರದ ಕಷ್ಟವನ್ನು ಯಾರು ತಡೆಯಬಲ್ಲರು ! ॥ಪ॥ ತಾಯಿಯ ಉದರದಿಂದ ಬರುವದಕ್ಕಿಂತ ಪೂರ್ವದಲ್ಲಿ ಅಸಹ್ಯವಾದ ದುರ್ಗಂಧವನ್ನೂ ಸಿಡಿಲಿನಂತೆ ಹೊಡೆದು ಕೆಡಹುವ ಪ್ರಸೂತ ವಾಯುವನ್ನೂ. ಸಮುದ್ರದಲ್ಲಿ ಕಣ್ಣುಬಿಟ್ಟಂತೆ ಗತಿಗಾಣದ ಜನನವನ್ನೂ ॥೧॥ ನರಕದಲ್ಲಿ ಮುಳುಗಿ ಏಳುವಂತೆ ಮಾಡುವ ದುಃಖಮಯ ಬಾಲ್ಯಾವಸ್ಥೆಯನ್ನೂ, ಬುದ್ಧಿಯನ್ನು ಭ್ರಮೆಗೊಳಿಸುವ, ಕಾಮಪೀಡೆಯನ್ನು ಉಂಟುಮಾಡುವ, ಮುಂದಾದ ಯೌವನವನ್ನೂ ೨ ಮಾತಾಡಲಾರದಷ್ಟು ನಾಚಿಕೆಯನ್ನು ಉಂಟುಮಾಡುವ ಮುಪ್ಪನ್ನೂ, ಕಷ್ಟತರವಾದ ಸಾವನ್ನೂ. ಹೊಡೆಯುತ್ತಿರುವ ಯಮನ ಸೇವಕರ ಕೋಪವನ್ನೂ, ಪ್ರತಿಯೊಂದು ಜೀವನದಲ್ಲಿ ಅನುಭವಿಸುತ್ತಿರುವ ನನ್ನನ್ನು, ಈ ದುಃಖದಿಂದ ಬಿಡಿಸಿ ರಕ್ಷಿಸು, ಶಿವನೇ !

೫

ಕೆಟ್ಟು ಹೋಗುವ ಈ ಶರೀರದ ಮೋಹವನ್ನು ಬಿಟ್ಟು, ಶ್ರೇಷ್ಠತರವಾದ ಮುಕ್ತಿಯನ್ನು ನೀನು ಎಂದಿಗೆ ಹೊಂದುವೆ ! ॥ಪ॥ ಸ್ವಲ್ಪ ಮಲಮೂತ್ರದಿಂದ ಕೂಡಿದಸ್ಥಳದಲ್ಲಿ ನಾನು ನಿಲ್ಲಲಾರೆನು ಎಂದು ಅನ್ನುವೆ. ಆದರೆ ಅಸಹ್ಯವಾದ ವಸ್ತುಗಳಿಂದ ಕೂಡಿದ ದೇಹದಲ್ಲಿ ಇದ್ದುಕೊಂಡು ವಿಷಯಸುಖಗಳನ್ನು ಪಡೆಯುವೆನೆಂಬ ಮನಸ್ಸನ್ನು ಬಿಡಲೊಲ್ಲೆ ! ॥೧॥ ಈ ಶರೀರವು ಸ್ಥೂಲವಾದದ್ದು, ದೃಶ್ಯವಾದದ್ದು, ಜಡವಾದದ್ದು, ಅಳತೆಗೊಳಪಟ್ಟದ್ದು, ಕೊನೆಯುಳ್ಳದ್ದು. ಪಂಚಮಹಾಭೂತಗಳಿಂದ ನಿರ್ಮಿತವಾದದ್ದು, ಕನಸಿ

ನಲ್ಲಿಯೂ, ನಿದ್ರೆಯಲ್ಲಿಯೂ ಇಲ್ಲವಾಗಿ ಕಾಣಿಸುವಂಥಾದ್ದು, ನಿನ್ನಿಂದ ಭಿನ್ನವಾದದ್ದು, ಪ್ರವೇಶದಿಂದ ನಿನ್ನನ್ನು ಸೇರಿಕೊಂಡಂಥಾದ್ದು, ನೀನು ಇಂಥ ಗುಣಗಳುಳ್ಳವನಾಗದೆ ಬೇರೆಯೇ ಆಗಿದ್ದಿ. ಆದರೂ ಈ ಶರೀರವೇ ಬೇರೆಯಾದದ್ದು ಎಂಬ ಅರಿವನ್ನು ಪಡೆಯದೇ ಇರುವಿ. ॥೩॥ ವಿನಾಕಾರಣ ನಿನ್ನ ವೈರಿಗಳಾದ ಕಾಮ ಕ್ರೋಧಗಳಿಗೆ ಪ್ರತಿಯೊಂದು ಜನ್ಮದಲ್ಲಿಯೂ ಅಪಾರ ದೇಹಗಳನ್ನು ಗುರಿಮಾಡಿದೆ. ಅವರ ಬದಲಾಗಿ ಇದೊಂದು ದೇಹದಲ್ಲಿ ಯಾದರೂ ತಪಸ್ಸುಮಾಡಿ, ಬಿಡುಗಡೆಯನ್ನು ಹೊಂದಿ ಈಶ್ವರರೂಪವನ್ನು ಹೊಂದುವದಕ್ಕೆ ಪ್ರಯತ್ನಮಾಡು.

೬

ಎಲೈ ಜೀವನೇ, ನೀನು ತಿಳಿಗೇಡಿಯಲ್ಲವೆ? ತಿಳಿದವನೆಂದು ಜಂಬ ಕೊಚ್ಚುವೆ. ನೀನು ಅವಿವೇಕಿ. ಏಕೆಂದರೆ—ಶುದ್ಧ ಚೈತನ್ಯರೂಪನು ನೀನಿದ್ದು, ಪಂಚಮಹಾಭೂತಗಳಿಂದ ಕೂಡಿದ ಶರೀರವೇ ನಾನೆಂಬೆ, ಶುದ್ಧ ತತ್ವಸ್ವರೂಪನಾಗಿದ್ದು ಮೈಲಿಗೆ ಮೊದಲಾದ ನಿಯಮಗಳನ್ನು ಪಾಲಿಸುತ್ತಿರುವೆ ॥೧॥ ಜಾಗ್ರತ್ ಸ್ವಪ್ನ, ಗಾಢನಿದ್ರೆ ಎಂಬ ಮೂರು ಅವಸ್ಥೆಗಳನ್ನು ತಿಳಿಯುತ್ತ, ಸಾಕ್ಷಿರೂಪನಾಗಿದ್ದು, ಸಂಸಾರ ಕಷ್ಟಕ್ಕೆ ಒಳಗಾಗಿರುವೆ ॥೨॥ ಶುದ್ಧ ಪರಂಜ್ಯೋತಿ ಸ್ವರೂಪನಾದ ಪರಶಿವನೊಬ್ಬನೇ ಶಾಶ್ವತನಲ್ಲದೇ ಮತ್ತೊಂದು ಪದಾರ್ಥವೇ ಜಗತ್ತಿನಲ್ಲಿಲ್ಲವೆಂಬ ತತ್ವವನ್ನು ತಿಳಿದಿದ್ದಾಗ್ಯೂ, ನೀನು ಬೇರೆಯೊಬ್ಬನೆಂದು ಹೆಸರಿಟ್ಟುಕೊಂಡಿರುವೆ.

೭

ಈ ಲೋಕದ ನಸಿಸುವ ವಿಷಯ ಸುಖಭೋಗಗಳನ್ನು ಕಂಡು ಕೇಳಿ ಪುನಃ ಭ್ರಾಂತಿಗೊಳಗಾಗಿ, ಅವನ್ನೇ ಮೆಚ್ಚಿಕೊಳ್ಳುವರೇ? ॥೧॥ ತಾಯಿ ತಂದೆಗಳು, ಬಂಧು ಬಳಗದವರು, ಮಿತ್ರರು, ಹೆಂಡರು, ಮಕ್ಕಳು, ಸಂಬಂಧಿಕರು, ಸುಖಿಗಳು, ಬುದ್ಧಿವಂತರು, ಸರ್ವರೂ ತಮ್ಮ ಎದುರಿಗೆ ನಾಶವಾಗುವದನ್ನು ಕಂಡು ॥೨॥ ಬಲಿಚಕ್ರವರ್ತಿ, ವಾಲಿ, ಕರ್ಣ, ದುರ್ಯೋಧನ, ರಾಮ, ರಾವಣ, ನಳ, ನಹುಷ, ರಘು, ಭೀಮ, ಬಲರಾಮ, ಸಗರ, ಅರ್ಜುನ,

ಕೀಚಕ ಶಿಶುಪಾಲ, ದಶರಥ ಮೊದಲಾದ ಧೀರರು ನಾಶವಾದ ಕಥೆಯನ್ನು ಕೇಳಿ ॥೩॥ ಎಲ್ಲ ಪದಾರ್ಥಗಳೂ ದೋಷದಿಂದ ಕೂಡಿರುವವೆಂದೂ, ಅವು ಗಳ ಬಳಕೆಯಿಂದ ಅನರ್ಥವುಂಟಾಗುತ್ತದೆಯೆಂದೂ ತಿಳಿದುಕೊಂಡಾಗಲೂ, ಅಜ್ಞಾನದಿಂದ ದೀಪದ ಹುಳುವು ದೀಪಕ್ಕೆ ಮುತ್ತಿ ಸಾಯುವಂತೆ, ನಾಶವಾಗು ವದು ಅನ್ಯಾಯವಾದ್ದು.

೮

ಬಹಳ ದುಃಖದಿಂದ ಕೂಡಿದ ಹಣದ ಆಶೆಯನ್ನು ಮಾಡುವದು, ಎಲೈ ಮನುಷ್ಯನೇ, ಯೋಗ್ಯವೆ? ॥ಪ॥ ದುಡ್ಡನ್ನು ದೊರಕಿಸುವಲ್ಲಿ ಮೊದಲಿಗೆ ಶರೀರಕ್ಕೆ ದಣಿವು, ಮಧ್ಯದಲ್ಲಿ ಮನಸ್ಸಿಗೆ ನೋವು, ಯಾವ ಕಾಲದಲ್ಲಿಯೂ ವೈರಿಗಳು ಇರುವದರಿಂದ. ಬಳಸಿದಲ್ಲಿ, ಹಾಳಾದಲ್ಲಿ ಕೊನೆಗೆ ಮನಸ್ಸಿಗೆ ಬಹಳ ದುಃಖ ಉಂಟಾಗುತ್ತದೆ. ॥೧॥ ಹಾವು, ಬೆಂಕಿ, ದೆವ್ವ, ಮರವು, ತುಡುಗರು, ಅಣ್ಣತಮ್ಮಂದಿರು, ಇವರೆಲ್ಲ ತಕ್ಕಷ್ಟು ಕಸಿದುಕೊಳ್ಳುವರು. ಭೂಮಿಯಲ್ಲಿ ಹುಗಿದರೆ, ತನ್ನಷ್ಟಕ್ಕೆ ತಾನೇ ಹಾಳಾಗಿ ಹೋಗುವದು. ಕಾರಣ ದುಡ್ಡನ್ನು ಗಳಿಸುವವನಿಗೆ ಬಹಳ ನೋವುಗಳುಂಟು. ಅದು ಈ ಜಗತ್ತಿನಲ್ಲಿ ಬಹಳ ಅನ್ಯಾಯ ಕಾರ್ಯಗಳನ್ನು ಮಾಡಿಸಿ ದುಃಖಕ್ಕೆ ಗುರಿಮಾಡಿ, ಪರ ಲೋಕದಲ್ಲಿಯೂ ಕಷ್ಟಕ್ಕೆ ಗುರಿಮಾಡಿ ಭ್ರಮೆಯನ್ನು ಹುಟ್ಟಿಸುವದು. ॥೨॥ ಈ ರೀತಿಯಾಗಿ, ತೋರಿಕೆಗೆ ಮನೋಹರವಾಗಿದ್ದರೂ, ವಿಷವನ್ನೊಳಗೊಂಡ ಕನ್ಯೆಯಂತಿರುವ ಧನವನ್ನು ಬಿಟ್ಟು, ಪರಮಾತ್ಮನಲ್ಲಿ ಭಕ್ತಿಯನ್ನು ಇರಿಸಿ, ದಾನಧರ್ಮಗಳನ್ನು ಮಾಡಿ, ಹೆಂಡರುಮಕ್ಕಳೊಂದಿಗೆ ಸುಖಿವಾಗಿರು. ಈ ಶರೀರವು ಒಂದು ದಿನ ಅಳಿದು ಹೋಗುವದೆಂದು ತಿಳಿದುಕೋ.

೯

ಎಲೈ ಮನುಷ್ಯನೇ, ಈ ಜಗತ್ತಿನಲ್ಲಿ, ಎಲ್ಲ ಭೋಗ ವಸ್ತುಗಳನ್ನು ಸಾಕಷ್ಟು ಉಪಯೋಗಿಸಿ ನೋಡಿ, ಪುನಃ ಅವುಗಳಲ್ಲಿ ಅತಿ ಆಶೆಯನ್ನು ತೋರಿ ಸುವದೇಕೆ? ನಿನ್ನಂತಹ ಮಂದಮತಿಯು ಬೇರೆ ಯಾರಾದರೂ ಉಂಟೆ? ಶಿವ, ಶಕ್ತಿ, ಸದಾಶಿವ, ಈಶ್ವರ, ಮಂತ್ರ ಮಾಯೆ, ಕಲೆ, ನಿಯತಿ, ವಿದ್ಯೆ,

ಅನುರಾಗ, ಪುರುಷ, ಪ್ರಕೃತಿ, ಗುಣ, ಬುದ್ಧಿ ಅಹಂಕಾರ, ಮನಸ್ಸು, ವಿಜ್ಞಾನ, ಇಂದ್ರಿಯಗಳು, ತನ್ಮಾತ್ರೆಗಳು, ಆಕಾಶ, ವಾಯು, ಅಗ್ನಿ, ಜಲ, ಭೂಮಿ ಇವುಗಳ ಪಂಚೀಕರಣದಿಂದ ಆದ ಪಂಚವಿಂಶತಿ ತತ್ವದ ಕೂಟದ ಒಟ್ಟು ಮೂವತ್ತಾರು ತತ್ವಗಳ ಕಾರ್ಯಗಳಲ್ಲಿ ಅನೇಕ ಬ್ರಹ್ಮಾಂಡಗಳು ಹುಟ್ಟಿವೆ. ॥೧॥ ಅವುಗಳಲ್ಲಿ ಭೂಲೋಕವು, ಒಂದಾಗಿದೆ; ಅದರಲ್ಲಿ ಏಳು ದ್ವೀಪಗಳಾಗಿವೆ. ಅವುಗಳಲ್ಲಿ ಜಂಬೂದ್ವೀಪವೆಂಬುದೊಂದು ಅದು ಒಂಬತ್ತು ಖಂಡಗಳಾಗಿವೆ, ಅದರಲ್ಲಿ ಭರತ ಖಂಡವೊಂದು, ಅದು ಐವತ್ತಾರು ದೇಶಗಳನ್ನು ಒಳಗೊಂಡಿದೆ, ಅದರಲ್ಲಿ ಒಂದು ದೇಶವಿದೆ, ಅದರಲ್ಲಿ ಅನೇಕ ಪಟ್ಟಣಗಳಿವೆ. ಒಂದೊಂದು ಪಟ್ಟಣಗಳಲ್ಲಿ ನೂರಾರು ಮನೆಗಳಿವೆ. ॥೨॥ ಅದರಲ್ಲಿ ನಿನಗೊಂದು ಮನೆಯಿದೆ. ಅದರಲ್ಲಿ ನಿನ್ನ ದಾಯಾದಿಗಳ ಪಾಲಿಗೆ ಹೋಗಿ, ಉಳಿದ ಚಿಕ್ಕದೊಂದು ಭಾಗವು ನಿನ್ನ ಪಾಲಿಗೆ ಬಂದಿದೆ. ಅದರಲ್ಲಿ ನಿನ್ನ ಮಕ್ಕಳೂ ಅಳಿಯಂದಿರೂ ಇರುವ ಭಾಗವನ್ನು ಬಿಟ್ಟು, ನಿನ್ನ ವಡನಾಡಿಯೊಡನೆ ವಾಸಿಸುವ ಚಿಕ್ಕ ಭಾಗವಲ್ಲದೇ, ಮತ್ತೆ ಏನಾದರೂ ಇದೆಯೇ ? ವಿಚಾರಿಸಿ ನೋಡು, ಇದಕ್ಕೋಸ್ಕರ, ಶರೀರ, ಮನಸ್ಸನ್ನು ಬಳಲಿಸದೇ ಈಶ್ವರನ ಕೃಪೆಗೆ ಪಾತ್ರನಾಗಿ, ಪೂರ್ಣ ಹರ್ಷವನ್ನು ಹೊಂದುವದನ್ನು ನಿನಗಿಂತಲೂ ಬುದ್ಧಿಹೀನರು ಯಾರಾದರೂ ಇದ್ದಾರೇಯೇ ॥೩॥

೧೦

ಬಿಟ್ಟು ಬಿಡದೇ ಪ್ರತಿದಿವಸ ಮೋಹಿಸುವ ಹೆಂಗಸಿನಲ್ಲಿ. ವಿಚಾರಿಸಿ ನೋಡಲಾಗಿ ಎಳ್ಳಷ್ಟಾದರೂ ಸುಖವಿರುವದೇ ? ॥ಪ॥ ಮಾಂಸದ ಮುದ್ದೆಯಾದ ಮೇಲೆ, ಕೂದಲಿನ ಹೊದಿಕೆಯುಂಟಿರುವ ನಲೆ, ಎಲುಬನ್ನೊಳಗೊಂಡ ಶರೀರವನ್ನು, ಚರ್ಮದ ಹೊದಿಕೆಯಿಂದ ಬಿಗಿಯಲ್ಪಟ್ಟ ನರಗಳನ್ನು ಬಿಡಿಬಿಡಿಸಿ ನೀನು ನೋಡು, ಸ್ತ್ರೀಯು ಸುಂದರಿಯೇ ? ॥೧॥ ಇಂದ್ರಿಯಗಳಿಂದ ಸೋರಿಬರುವ ಹೊಲಸನ್ನೂ ಹರಿದು ಬರುವ ರಕ್ತವನ್ನೂ ತುಂಬು ವಯಸ್ಸಿನಲ್ಲಿ ನಿನಗೆ ಉಂಟಾಗುವ ಸುಖವನ್ನೂ, ಮನಸ್ಸಿನಲ್ಲಿಯ ಕಾಪಟ್ಯವನ್ನೂ ದೂರಮಾಡಿ ಬಿಚ್ಚುಮನಸ್ಸಿನಿಂದ ಸಾರಾಸಾರಾ ವಿಚಾರ ಮಾಡಿ ನೋಡು. ಹೆಂಗಸಿನಿಂದ ನಿನಗೆ ನಿಜವಾಗಿಯೂ ಸುಖವು ದೊರಕುತ್ತದೆಯೇ ? ॥೨॥

ಹೆಂಗಸಿನ ಪ್ರೀತಿಯನ್ನು ದೊರಕಿಸುವದಕ್ಕೆ ಮೊದಲಿಗೆ ಆಯಾಸ, ನಡುವೆ ಸ್ವಲ್ಪ ಸುಖ, ಕೊನೆಗೆ ಹೇಯದಿಂದ ಕೂಡಿದ ನಶಿಸುವ ದೇಹವನ್ನು ತಿಳಿದು ನೋಡಿ, ಮೇಲಿನ ಸೊಗಸನ್ನೂ ನೋಡಿ, ಹೆಂಗಸಿನ ರತಿಸುಖವನ್ನು ಬಯಸಿ, ಪರಮಾತ್ಮನನ್ನು ಮೆಚ್ಚಿಸುವದನ್ನೂ ಬಿಟ್ಟು, ಸುಮ್ಮನೇ ಏತಕ್ಕೆ ಕೆಟ್ಟು ಹೋಗುವೆ ? ॥೩॥

೧೧

ಮುಕ್ತಿಯನ್ನು ಪಡೆಯದೇ, ಹೆಂಗಸರಲ್ಲಿ ಯಾವ ಗುಣವನ್ನು ಕಂಡು ಅವರಲ್ಲಿ ಪ್ರೀತಿಯನ್ನು ಇಟ್ಟುಕೊಂಡಿರುವರೋ, ಜನಗಳು ತಿಳಿಯದಾಗಿದೆ. ॥ಪ॥ ಕಳಾಸ್ಥಾನಗಳನ್ನು ತೀಡಿದು ಪ್ರೀತಿಸುತ್ತ, ಬಯಸಿದ್ದನ್ನೆಲ್ಲಾ ಕೊಟ್ಟು, ತುಂಬಾ ಸುಂದರರೂಪವುಳ್ಳ ಪುರುಷನು, ಯಾವಾಗಲೂ ಕೂಡಿಬರುತ್ತಿದ್ದಾಗ್ಯೂ, ಕಮಲ ಕಣ್ಣಿನ ಹೆಂಗಸರು ಮತ್ತೊಬ್ಬನಲ್ಲಿ ಪ್ರೀತಿಯನ್ನು ತೋರಿಸುವವರು ॥೧॥ ಮೃದುವಾದ ನುಡಿ, ಸೊಗಸು, ವಿವೇಕ, ಅನುಕೂಲತೆ, ಹೊಸಯುವ್ವನ, ಇವುಗಳ ಸೊಗಸಿನಿಂದ ಬಹಳವಾಗಿ ಮೆಚ್ಚಿಸಿಕೊಂಡಿರತಕ್ಕ ಪುರುಷನನ್ನು ಬಿಟ್ಟು, ಬೇರೊಬ್ಬರನ್ನು ಹೆಂಗಸು ಮನದಲ್ಲಿ ನೆನೆವಳು. ॥೨॥ ಹೆಂಗಸಿನ ಪ್ರೀತಿಯು, ಸುಂಟರಗಾಳಿ, ಕಾಮನಬಿಲ್ಲು, ಸ್ವಪ್ನ, (ಕನಸು), ನೀರಿನ ಮೇಲೆ ಬರೆದ ಅಕ್ಷರ, ಮಿಂಚಿನಗೆರೆ, ಇವುಗಳಿಗೆ ಸರಿಸಮಾನವಲ್ಲದೆ ಶಾಶ್ವತವಲ್ಲ. ಆದ್ದರಿಂದ ಇದನ್ನು ಬಿಟ್ಟು, ಪರಮಾತ್ಮನ ಧ್ಯಾನಮಾಡಿ ಮೆಚ್ಚಿಗೆಯನ್ನು ಪಡೆ.

೧೨

ಸ್ತ್ರೀಯರ ಸೌಂದರ್ಯವನ್ನು ನೋಡಿ ಮನಸ್ಸಿನಲ್ಲಿ ಎಳಸದವನೇ ಯೋಗಿ ॥ಪ॥ ಮಾವಿನ ಚಿಗುರು ಎಲೆಯಂತೆ ಮೃದುವಾದ ಪಾದಗಳು, ಹೊಳೆಯುವ ತೊಡೆಗಳು, ಆಕರ್ಷಕವಾದ ನಡುವಿನ ಹಿಂಭಾಗವೂ, ಮುಂದ ನಡಿಗೆ, ಬಳುಕುತ್ತಿರುವ ನಡುವೂ, ತೆಳುವಾದ ಹೊಟ್ಟೆಯೂ, ಕೋಮಲವಾದ ತೋಳುಗಳೂ ಉಳ್ಳ ಹೆಂಗಸಿನ ರೀತಿಯನ್ನು ನೋಡಿ, ॥೧॥ ಸ್ವಲ್ಪ ಕಾಣುತ್ತಿರುವ ದಪ್ಪಾದ ಮೊಲೆಗಳೂ, ಸೌಂದರ್ಯ ರಸವನ್ನೇ ಸುರಿಸುತ್ತಿರುವ

ಮುಖದ ಕಾಂತಿಯನ್ನೂ, ಪಸರಿಸುತ್ತಿರುವ ಕಣ್ಣುಗಳೂ, ತಾರುಣ್ಯವೂ ಬಂಗಾರದಂತೆ ಹೊಳೆಯುತ್ತಿರುವ ಶರೀರವೂ, ಉಳ್ಳ ಸ್ತ್ರೀಯರನ್ನು ನೋಡಿ ॥೨॥ ಇಳಿಬಿದ್ದಿರುವ ಕೂದಲದ ನಡುವೆ ಶೋಭಿಸುವ ಪುಷ್ಪವೂ, ಹೊಳೆಯುತ್ತಿರುವ, ಹಾಗೂ ತಾಂಬೂಲ ರಸದಿಂದ ಕೂಡಿದ ಕೆಂಪಗಾದ ಹಲ್ಲುಗಳೂ, ಶಂಖದಂತೆ ಶೋಭಿಸುವ ಕಂಠವೂ, ಕೆಂಪಾದ ತುಟಿಯೂ, ಕನ್ನಡಿಯಂತೆ ನುಣುಪಾಗಿ ಹೊಳೆಯುವ ಕಪೋಲಗಳೂ, ಉಳ್ಳ ಕಾಂತೆಯರನು ಕಂಡು ॥೩॥ ಓರೆನೋಟವೂ, ನಸುನಗೆಯೂ, ಕೋಮಲವಾದ ಸ್ವರವೂ, ಸಂಜ್ಞೆಯಿಂದ ತೋರಿಸುವ ಮನೋಭಿಪ್ರಾಯವೂ ಮನೋಹರವಾದ ಸೊಗ ಉಳ್ಳ ಸ್ತ್ರೀಯರನ್ನು ಕಂಡು ॥೪॥ ಮನಸ್ಸು ಕಳವಳಗೊಳ್ಳುವಂತೆ ಮಾಡುವ, ಯಾವ ಅಂಜಿಕೆಯೂ ಇಲ್ಲದೇ ಸೌಂದರ್ಯವತಿಯಾದ ಸ್ತ್ರೀಯು ತನಗೆ ಅನುಕೂಲೆಯಾಗಿ ಮೋಹಿಸಿ ಬಂದಾಗಲೂ, ದೇವರ ಕೃಪೆಯಿಂದ ಮನಸ್ಸಿನ ಹೊಯಿದಾಟವನ್ನು ಹೊಂದದೆ, ಭಯಪಡದೆ, ಧೈರ್ಯವನ್ನು ಹೊಂದಿರುವನೇ ಮಹಾ ವೈರಾಗ್ಯಶಾಲಿಯಾದ ಯೋಗಿಯು. ॥೫॥

೧೩

ಬುದ್ಧಿವಂತರು ಮಗನ ಸೌಂದರ್ಯಕ್ಕೆ ಚಕಿತರಾಗದೇ, ಅವನನ್ನು ಮೋಹದಿಂದ ಮುದ್ದಿಸದೇ ಅವನ ಆಲೋಚನೆಯನ್ನು ಬಿಟ್ಟಿರಬೇಕು. ॥ಪ॥ ಮೊದಲಿಗೆ, ಮಗನು ಜನಿಸಲಿಲ್ಲವೆಂತಲೂ, ನಂತರ ಗರ್ಭವು ಸುರಳೀತವಾಗಲೆಂತಲೂ, ಹಡೆಯುವದು ಸುಖವಾಗಲೆಂದೂ, ಯಾವ ರೋಗಗಳು ಬರಬಾರದೆಂತಲೂ, ಆಮೇಲೆ ಜೋಪಾನ ಮಾಡಬೇಕೆಂಬ ಚಿಂತೆ ॥೧॥ ಅನಂತರ ಅವನ ತುಂಟತನದ ಚಿಂತೆ, ವಯಸ್ಸಿಗೆ ಬಂದಾಗ್ಗೆ, ಕಾಮನ ಪೀಡೆಯಿಂದ ಬಳಲಬಾರದೆಂಬ ಚಿಂತೆ, ಅವನ ಮದುವೆಯನ್ನು ಮಾಡುವ ಚಿಂತೆ, ವಿವೇಕಿಯಾಗಿ ಬದುಕಲು ಬುದ್ಧಿಯನ್ನು ಕಲಿಸುವ ಚಿಂತೆ ॥೨॥ ದೈವವಶಾತ್ ಅವನು ಮೃತಪಟ್ಟರೆ ಅದರ ಚಿಂತೆಯನ್ನಂತೂ ವರ್ಣಿಸಲಿಕ್ಕಾಗದು. ಈ ರೀತಿಯಾಗಿ ಮಗನ ಮೇಲಿನ ಮೋಹದಿಂದ ಉಂಟಾಗುವ ದುಃಖವೆಲ್ಲ ಸುಳ್ಳಾದುದೆಂದು ಬಗೆದು ಶಂಭುಲಿಂಗನಲ್ಲಿ ಭಕ್ತಿಯನ್ನು ಇಡಬೇಕು.

೧೪

ಸುಮ್ಮನೇ ತನ್ನನ್ನು ಹಾಳುಮಾಡುತ್ತಿರುವ ಕಾಮನ ವಿಕಾರವನ್ನು ತಿಳಿದು, ಯೋಗಿಯು ಬಿಟ್ಟುಬಿಡಬೇಕು ॥ಪ॥ ಉತ್ತಮ ಗುಣಗಳನ್ನೂ ವೇದನಿಯಮಗಳನ್ನೂ, ತಪಸ್ಸನ್ನೂ, ತನಗೆ ದೊರೆತ ಸಿದ್ಧಿಗಳನ್ನೂ, ಗೌರವ ವನ್ನೂ, ಕೊನೆಗೆ ಈ ಶರೀರವನ್ನೂ, ಈ ಕಾಮವೆಂಬುದೇ ಹಾಳುಮಾಡುವದ ರಿಂದ ॥೧॥ ಹಿರಿಯರ ಪ್ರೀತಿಯನ್ನೂ, ರಾಜರ ಮೆಚ್ಚಿಗೆಯನ್ನೂ, ಉತ್ತಮ ಜನರ ಭಯಭಕ್ತಿಗಳನ್ನೂ, ಜನರ ವಂದನೆಗಳನ್ನೂ, ತನ್ನ ವರ್ಚ ಸ್ಸನ್ನೂ, ಕಠೋರವಾದ ಈ ಕಾಮವೇ ಹಾಳುಮಾಡುವದು. ॥೨॥ ಮುಂದೆ ತನಗೆ ದೊರಕುವ, ಋಷಿ, ದೇವಗಣರ ಪ್ರಾಪ್ತಿಯನ್ನು, ದೇವರ ಕೃಪೆಯನ್ನೂ ಸಾರೂಪ್ಯವನ್ನೂ, ದೊರಕುವ ಮುಕ್ತಿಸುಖವನ್ನೂ, ಈ ಕಾಮವು ಜನಿಸಿ ಹಾಳುಮಾಡುವದು. ॥೩॥

೧೫

ವೈರಾಗ್ಯವನ್ನು ಬಿಟ್ಟು, ಕೆಟ್ಟ ವಿಷಯಗಳಿಗೆ ಮೋಹಿಸುವೆ, ಎಲೈ ನೀಚಮನಸ್ಸೆ ? ॥ಪ॥ ಉತ್ತಮವಾದ ಹಾಲನ್ನು ಚೆಲ್ಲಿ, ಸುರೆ ಯನ್ನು ಕುಡಿಯುವಂತೆ, ಸಿಹಿ ಮೃಷ್ಟಾನ್ನವನ್ನು ಬಿಟ್ಟು, ಮಾಂಸವನ್ನು ತಿನ್ನು ವಂತೆ, ಯಶವನ್ನು ದೊರಕಿಸದೇ, ಮಹಾ ರುಜೆಯನುಂಬಂತೆ, ತತ್ವಜ್ಞಾನ ವನ್ನು ಬಿಟ್ಟು ಅಜ್ಞಾನದಲ್ಲಿ ಏಕೆ ಬಾಳುವೆ ? ॥೧॥ ರತ್ನ ಮಾಲೆಯನ್ನು ತೆಗೆದು, ದಾರದ ಹಾರವನ್ನು ಹಾಕಿಕೊಂಡಂತೆ, ಸುವಾಸನೆಯೊಡಗೂಡಿದ ಕಸ್ತೂರಿಯನ್ನು ತೊಳೆದುಕೊಂಡು, ಕೆಸರನ್ನು ಸವರಿಕೊಂಡಂತೆ, ಹಿರಿದಾದ ಪರ್ವತವನ್ನು ಬಿಟ್ಟು ಚಿಕ್ಕ ದಿನ್ನಿಯನ್ನು ಸೇರಿದಂತೆ, ನಿಶ್ಚಯವಾದ ಪಾರ ಮಾರ್ಥವನ್ನು ತ್ಯಜಿಸಿ, ಹುಸಿಯನ್ನು ನಂಬುವಂತೆ ॥೨॥ ವೇದಗಳಲ್ಲಿ ಹೇಳಿದ ಮಾರ್ಗಗಳನ್ನು ವಾದಿಸಿ ಮದಿಸುವಂತೆ, ವ್ರತನಿಯಮಗಳನ್ನು ಬಿಟ್ಟು, ನೊಣ ಗಳನ್ನು ತಿಂದಂತೆ, ಸದ್ಗತಿಯನ್ನುಂಟುಮಾಡುವ ಪರಮಾತ್ಮನ ಮಾರ್ಗವನ್ನು ಬಿಟ್ಟು ಲೋಕದ ಸುಖಗಳಿಗೆ ಪ್ರಯತ್ನಮಾಡಿ ಸುಮ್ಮನೇ ಕೆಟ್ಟು ಹೋಗುವೆ.

೧೬—೧೭

ಎಲೈ ಮನಸ್ಸೇ, ಸಾರಿಹೇಳುತ್ತೇನೆ, ಕೇಳು, ಸುಖದ ಆಶೆಯನ್ನು ಮಾಡಿ ಕೆಡಬೇಡ ॥ಪ॥ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಐದು ವಿಷಯುಗಳಲ್ಲಿ ಒಂದೊಂದಕ್ಕೆ ಆಶೆಪಟ್ಟಾಗ್ಯೂ ಭ್ರಮರ, ಮೀನು, ಆನೆ, ಮಿಡಚಿ, ಜಿಂಕೆ ಇವುಗಳು ನಾಶಹೊಂದುತ್ತಿರುವವು, ಹೀಗಿರುವಾಗ, ಈ ಐದು ವಿಷಯುಗಳಲ್ಲಿಯೂ ಆಶೆಯನ್ನು ಹೊಂದಿರುವ ನೀನು ಹೇಗೆ ಬುದುಕುವೆ ! ॥೧॥ ವಿಷಯುದಲ್ಲಿಯ ಆಶೆ, ಕೆಂಪಗೆ ಕಾದ ಬಂಗಾರದ ಒಡವೆ, ವಿಷದಿಂದ ಕೂಡಿದ ಊಟ, ಸೂಳೆಯರ ಪ್ರೀತಿ, ಇವುಗಳಂತೆ ಕೊನೆಗೆ ಕೆಡು ಕನ್ನು ಮಾಡಿ ಹಾಳುಮಾಡುವವು. ಅವುಗಳನ್ನು ಆಶಿಸಬೇಡ. ॥೨॥ ಇಂದ್ರಿಯಭೋಗವು, ಕನಸು, ಬಿಸಿಲುಗುದುರೆ, ಇಂದ್ರಧನಸ್ಸು, ಸುಂಟರ ಗಾಳಿ, ಮೋಡದ ಗುಂಪುಗಳು, ಮಿಂಚು, ಇವುಗಳ ಹಾಗೆ ಕಂಡು ಸ್ವಲ್ಪ ಕಾಲ ದಲ್ಲಿಯೇ ಮಾಯುವಾಗಿ ಹೋಗುತ್ತವೆ, ಅವು ಶಾಶ್ವತವಲ್ಲ. ಇದನ್ನು ಕಂಡು ಕೇಳಿದಾಗ್ಯೂ ಮನಸ್ಸು ಮಾಡಿದರೆ, ಬೂದಿಯಲ್ಲಿ ಹೋಮಮಾಡಿದಂತೆ ನಿಷ್ಫಲವಾದುದು. ಆದ್ದರಿಂದ ಎಲ್ಲ ವಿಷಯುಗಳು ನೀರಸವಾದವುಗಳೆಂದು ತಿಳಿದು, ಅವುಗಳಿಗೆ ಅಂಜದೇ, ಧೈರ್ಯವನ್ನು ತಾಳಿ, ಪ್ರಸಿದ್ಧನಾದ ಈಶ್ವರ ನನ್ನು ನಂಬಿ, ಶಾಶ್ವತ ಆನಂದವನ್ನು ಹೊಂದಿ, ಭ್ರಾಂತಿಯನ್ನು ಬಿಟ್ಟು ಸುಖ ವನ್ನು ಹೊಂದುವುದಕ್ಕೆ ಯತ್ನಿಸು.

೧೮

ಮಾಯೆ ಎಂಬ ನಟಿಯು ಕುಣಿಯುತ್ತ ಬರುವಳು, ಬುದ್ಧಿವಂತರು ಸಂಸಾರವೆಂಬ ನಾಟಕವನ್ನು ನೋಡಿ ॥ಪ॥ ಶಿವ-ಶಕ್ತಿಯೆಂಬ ನಾಟ್ಯರಂಗ, ಅದ ರಲ್ಲಿ ದೇವ, ಮನುಷ್ಯ. ರಾಕ್ಷಸ, ನಾಗ, ಮುಂತಾದ ದೇಹವೆಂಬ ಗೊಂಬೆಗಳಿಗೆ, ಜೀವಾತ್ಮನೆಂಬ ಕನಕಸೂತ್ರವನ್ನು ಕಟ್ಟಿ ಮೋಹಿಸುವಂತೆ ಕುಣಿಸುತ್ತಿರು ವಳು. ॥೧॥ ಎಚ್ಚರವಿರುವಿಕೆ. ಗಾಢನಿದ್ರೆಗಳೆಂಬ ಮೂರು ತೆರೆಗಳ ಮರೆ ಯಲ್ಲಿ ನಿಂತು. ಆರು ವಿಕಾರಗಳು. ಒಂಬತ್ತು ಗುಣಗಳೇ ಮೂಲವಾಗಿ, ನವ ರಸ ಭಾವವು ಸ್ವಲ್ಪೂ ಕೆಡದಂತೆ, ನೇರವಾಗಿ ಅಭಿನಯಿಸಿ ತೋರಿಸುತ್ತಾ,

ಮಾಯೆಯು ಬಾರದಿರುವಳೇ. ॥೨॥ ಶ್ರೇಷ್ಠವಾದ ಶಂಭುಲಿಂಗವೆಂಬ ಮೇಧಾವಿಗಳೊಡನೆ ಕೂಡಿಕೊಂಡು. ತನ್ನ ಬಳಿಯಲ್ಲಿ ಕುಣಿಯುತ್ತಿರುವ ಗೊಂಬೆಗಳ ರೀತಿಯನ್ನು ಚನ್ನಾಗಿ ನೋಡುತ್ತಿರಲು.

೧೯

ಸಂಸಾರ ಬಗೆಯನ್ನು ಕಂಡು, ಇದು ಇಂದ್ರಜಾಲದಂತೆ ಸುಳ್ಳಾದದ್ದೆಂದು ನನ್ನಲ್ಲಿ ನಾನೇ ತಿಳಿದುಕೊಂಡೆನು ॥ಪ॥ ಹುರುಳಿಲ್ಲದ ವೀರ್ಯದ ಹನಿಯು ಗರ್ಭದಲ್ಲಿ ನಿಂತು, ಶರೀರವಾಗುವಂತೆ ಬೆಳೆದು, ಜನಿಸಿ, ಮಾತಾಡಿ, ನೋಡಿ ಕೇಳಿ ಪುನಃ ನಶಿಸುವ ಆಶ್ಚರ್ಯವನ್ನು ಕಂಡು, ॥೧॥ ತೊಗಲಿನ ಚೀಲದಂತಿರುವ ಶರೀರಕ್ಕೆ ಹಲವು ತೂತುಗಳನ್ನು ಮಾಡಿ, ಅದರಲ್ಲಿ ಗಾಳಿ, ಸಾಕಷ್ಟು ಸಂಚರಿಸುತ್ತಿರುವವರೆಗೆ, ನಾನಾ ಸೊಬಗನ್ನು ತೋರಿಸುತ್ತಿರುವದನ್ನು ಕಂಡು ॥೨॥ ಭೂಮಿ, ನೀರು, ಆಕಾಶ, ಗಾಳಿಗಳನ್ನು ಮೀರಿ, ಪರಿಪೂರ್ಣನೆನಿಸಿಕೊಂಡಿರುವ ಆತ್ಮನಿಗೆ ಮನಸ್ಸು, ಬುದ್ಧಿ, ಚಿತ್ತ, ಅಹಂಕಾರಗಳು ಸೇರಿದ ಮಾತ್ರಕ್ಕೆ, ಬೇಧ ಬುದ್ಧಿಯುಂಟಾಗಿ, ಭ್ರಾಂತಿಯಿಂದ ಅನೇಕ ಸಂಕಲ್ಪಗಳಿಂದ ಕ್ಷಣಿಕ ಸುಖದ ಆಶೆಯನ್ನು ಮಾಡಿ ನಡೆಯಿಸುವ ವಿಚಿತ್ರ ವ್ಯವಹಾರಗಳನ್ನು ನೋಡಿ ॥೩॥ ಅನೇಕ ಮೋಹ ವಸ್ತುಗಳಿಗೆ ಭ್ರಾಂತಿ ಹೊಂದುತ್ತ ಕೂಡಿ, ಜಾಗ್ರತ್, ಸ್ವಪ್ನ, ಸುಷುಪ್ತಿ ಅವಸ್ಥೆಗಳನ್ನು ಒಂದೇ ದಿನದಲ್ಲಿ ಹೊಂದಿ, ಜೀವಾತ್ಮನ ಶತ್ರುಭಾವದ ರೀತಿಯನ್ನು ಕಂಡು ॥೪॥ ಸಂಸಾರದ ಕಷ್ಟವನ್ನು ಹೊಂದಿ, ಆಯಾಸಪಡುವ ಜೀವನು, ಸದ್ಗುರುವಿನ ಕೃಪಾಕಟಾಕ್ಷದಿಂದ ಚಿದಾನಂದಮಯನಾದ ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆದು ಆನಂದಪಡುವದನ್ನು ನೋಡಿ. ನನ್ನಲ್ಲಿ ನಾನೆ ತಿಳಿದುಕೊಂಡೆ.

೨೦

ಸಂಸಾರ ಸುಖವು ಕೆಡುಕನ್ನು ಉಂಟುಮಾಡುವದು ಎಂದು ಬಗೆದು ಅವುಗಳಲ್ಲಿ ಉದಾಸೀನವನ್ನು ಹೊಂದುವದೇ ವೈರಾಗ್ಯವು ॥ಪ॥ ವಿರಾಗಿಗೆ ಭೂಮಿಯು ಆಕಳಪಾದದಷ್ಟು ಅಗಲವಾದದ್ದು, ಮೇರು ಪರ್ವತವು ದಿನ್ನಿಗೆ

ಸಮನಾದದ್ದು, ಏಳು ಸಮುದ್ರಗಳು ಒಂದು ಸೇರು ನೀರುವುಳ್ಳದ್ದು, ಹತ್ತು ದಿಕ್ಕುಗಳು ಹೊಸಲಿನಷ್ಟು ವಿಸ್ತಾರವಾದದ್ದು, ಬೇಡಿದ್ದನ್ನು ಕೊಡುವ ಗಿಡವೂ ಬೇವಿನ ಮರವೂ ಒಂದೇ ಎಂದು ತಿಳಿಯಬೇಕು. ॥೧॥ ವಿಶ್ವವು ಹುಲ್ಲು ಕಡ್ಡಿಗೆ ಸರಿಯಾದದ್ದು, ತ್ರಿಮೂರ್ತಿಗಳ ಜಗತ್ತು ಅಣುವಿಗೆ ಸಮವಾದದ್ದು, ಅಣಿಮಾದಿ ಸಿದ್ಧಿಗಳು ನಾಟಕದಂತೆ ಸಟೆ, ಈ ಶರೀರವು ಒಡೆದ ಗಡಿಗೆ, ಸ್ತ್ರೀರತಿಸುಖವು ಮೊದಲಾದ ಸುಖವೆಲ್ಲಾ ನಿಸ್ಸಾರವಾದದ್ದು ಎಂದು ತಿಳಿದು ಕೊಳ್ಳು ॥೨॥ ಉಪಮಾತೀತವಾದ, ಅದ್ವೈತದ ಆನಂದವನ್ನು ಕೊಡುವ, ಪರವಸ್ತುವೇ ತಾನಾಗಿ, ಇನ್ನುಳಿದ ಸುಖಗಳೆಲ್ಲವೂ ಅಸ್ವಾರಸ್ಯವಾದವುಗಳೆಂದು ತಿಳಿದು, ನಡೆದುಕೊಳ್ಳುವದು, ವೈರಾಗ್ಯವೆನಿಸುವದು.

೨೧

ಪುರಾತನರ ಟೀಕೆಯ ಅಭಿಪ್ರಾಯದಂತೆ, ಈ ಪದ್ಯದಲ್ಲಿ ನೂರೊಂದು ಸ್ಥಲಗಳ ಲೆಕ್ಕವನ್ನು ಮಾಡಿದಂತಿದೆ.

ಮೊದಲನೆಯ ನುಡಿಯಲ್ಲಿ ನಾಲ್ವತ್ತುನಾಲ್ಕು ಅಂಗಸ್ಥಲಗಳ ಗಣಿತವನ್ನು
ಎರಡನೆಯ ನುಡಿಯಲ್ಲಿ ಐವತ್ತೇಳು ಲಿಂಗಸ್ಥಲಗಳ ಗಣಿತವನ್ನು

ಮೂರನೆಯ ಸ್ಥಲದಲ್ಲಿ ಏಕಮೇವಾದ್ವಿತೀಯವಾದ ಮೂಲಸ್ಥಲದಲ್ಲಿ ನೂರೊಂದಾದ ಅಂಗಲಿಂಗಸ್ಥಲಗಳೆಲ್ಲ ಕೂಡಿ ಒಂದಾಗಿ ಕೊನೆಗೆ ಆ ಒಂದೂ ಕೂಡ ನಿಷ್ಪತ್ತಿಯಾಗಿ ನಿಂದುದೇ 'ಶೂನ್ಯ' ಎಂಬ ಹೆಸರಿನಿಂದ ಕರೆಯಲ್ಪಡುವ ಗಣಿತವನ್ನು ಕೊಟ್ಟಂತಿರುವದು.

ಅಂಗಸ್ಥಲ ಮತ್ತು ಲಿಂಗಸ್ಥಲ ಇವುಗಳ ವಿವರ :

೧	ಭಕ್ತಸ್ಥಲ	೧೫	೧	ಆಚಾರಲಿಂಗ	೯
೨	ಮಹೇಶ	೯	೨	ಗುರುಲಿಂಗ	೯
೩	ಪ್ರಸಾದಿ	೭	೩	ಶಿವಲಿಂಗ	೯

೪	ಪ್ರಾಣಲಿಂಗ	೫	೪	ಜಂಗಮಲಿಂಗಿ	೧೨
೫	ಶರಣ	೪	೫	ಪ್ರಸಾದಲಿಂಗ	೯
೬	ಐಕ್ಯ	೪	೬	ಮಹಾಲಿಂಗ	೯

೧೧೧

ಶೂನ್ಯವನ್ನು ವಿಭಾಗಿಸಿದರೆ ಒಂದು ಎರಡಾಗುವದು
ಕೊನೆಗೆ ಎರಡು ಒಂದರಲ್ಲಿ ಪರ್ಯವಸಾನವಾಗುವವು

೨೨

ಎಲೈ ಜ್ಞಾನಶಕ್ತಿಯೇ ! ಮನುಷ್ಯನಿಗೆ ವೇಳೆಯು ಮೀರಿ ಹೋದಲ್ಲಿ, ಇವೆಲ್ಲವೂ ತಪ್ಪಿಹೋಗುವವು, ಅವು ಯಾವವೆಂದರೆ ॥ಪ॥ ಲಗ್ನದ ವೇಳೆಯಲ್ಲಿ ಆಡುವ ಸರಸಸಲ್ಲಾಪಗಳು, ಕನಸಿನಲ್ಲಿ ದೊರೆತ ದುಡ್ಡು, ಹೆಂಗಸಿನ ಕಳೆ, ಯೌವನದ ಮಾಧುರ್ಯ, ಭೋಗಸುಖ ಏರಿಳಿತಗಳುಳ್ಳ ಧಾರಣೆಗಳು ॥೧॥ ಬಿತ್ತುವ ಹದಗಾಲ, ಲಂಚದಿಂದ ಬರುವ ದುಡ್ಡು, ಮಿಂಚಿನ ನೋಟ, ಬೀಸುವ ಗಾಳಿಯಲ್ಲಿ ತೂರಿಬರುವ ಸುಗಂಧ, ಅಡವಿಯಲ್ಲಿಯ ಪ್ರವಾಹ ಇವುಗಳು ॥೨॥ ಪರಕೆಯನ್ನು ಹೊತ್ತು, ಕ್ಲುಪ್ತವೇಳೆಯಲ್ಲಿ ಮಾಡಬೇಕಾದ ದಾನವೂ, ಒಡೆಯನ ಸೇವೆಯೂ, ಪರರ ಉಪಕಾರವೂ, ಮೋಹದಿಂದ ಹುಟ್ಟಿದ ಪ್ರೀತಿಯೂ, ಆರು ರಸಗಳಿಂದ ಕೂಡಿದ ಮೃಷ್ಟಾನ್ನವೂ, ಅದರ ರುಚಿಯೂ, ದೇವರ ಅನುಗ್ರಹವೂ, ಇವುಗಳಲ್ಲಿ ಸಮಯ ತಪ್ಪಿದರೆ ಆಗಲಾರವು, ಯೋಗ್ಯಕಾಲದಲ್ಲಿಯೇ ಉಂಟಾಗುತ್ತವೆ.

ಶ್ರೀ ನಿಜಗುಣ ಶಿವಯೋಗಿಗಳ ಕೈವಲ್ಯಪದ್ಧತಿಯ ದ್ವಿತೀಯ ಪ್ರಕರಣದ ಜೀವಸಂಬೋಧನ ಸ್ಥಲದ ಭಾವಪ್ರಕಾಶ ಸಮಾಪ್ತ

ಮಂಗಲಮಹಾ

ನಿಗೆ ಅಧಿಕಾರ ತಪ್ಪಿತೆ ? ಮೃತ್ಯುದೇವತೆ ಸದ್ಧರ್ಮವನ್ನು ಅವಲಂಬಿಸಿತೆ ಯಮದೂತರು ಕರುಣಾರಸವುಳ್ಳವರೇ ? ಚಿತ್ರಗುಪ್ತರಿಗೆ ಅಜ್ಞಾನವೇ ? ಕಾಲವು ಕಳೆದುಹೋಯಿತೆ ? ॥೧॥

ಕೇಡು ಕೊನೆಯಾಗಿ ಹೋಯಿತೆ ? ರೋಗಗಳು ಈ ಲೋಕವನ್ನೇ ಬಿಟ್ಟು ಓಡಿಹೋದವೊ ? ಮುಪ್ಪು ದೇಹವನ್ನು ಆಕ್ರಮಿಸದಂತೆ ಕಟ್ಟಾಗಿದೆಯೇ ? ಜನನ ಮರಣಗಳು ಆಲಸ್ಯವನ್ನು ಹೊಂದಿಹವೇ ? ವಯೋಧರ್ಮಗಳು ಕಾಣಬಾರವೇ ? ॥೨॥

ವಿಧಿಯು ನಾನಾ ಚಿಂತೆಗಳನ್ನು ತಂದು ಕವಿಸದೆ ಸುಖವನ್ನುಂಟು ಮಾಡುವದನ್ನು ಕಲಿತಿರುವದೋ ? ವಿಷಯಗಳು ಮನೋವಿಕಾರವನ್ನುಂಟು ಮಾಡುವದನ್ನು ಬಿಟ್ಟವೆ ? ನೀನು ಈಶ್ವರನನ್ನು ಮೆಚ್ಚಿಸದೆ ಸುಮ್ಮನಿರುವದು ಯಾವ ಬಲದಿಂದ ? ॥೩॥

೪

ಒಂದರಿಂದ (ವಿಷಯಾಪೇಕ್ಷೆಯೊಂದರಿಂದ) ಅಗಣಿತ ಕೇಡು ಸಂಭವಿಸುತ್ತಿರುವಾಗ ಅಗಣಿತ ಅವಗುಣನಿಧಿಯಾಗಿರುವ ನನಗೆ ಅದೆಂಥ ಕೇಡು ಸಂಭವಿಸುವುದೋ ತಾನರಿಯೇ ! ॥ಪ॥ ಗರ್ವ, ಆಶೆ, ಮನೋಭ್ರಾಂತಿ, ಜಗಳ, ಕಾಠಿಣ್ಯ, ಯೌವ್ವನದ ಸೊಗಸು, ಐಶ್ವರ್ಯ, ಸತ್ಕುಲ, ಲಾವಣ್ಯ ಸೌಂದರ್ಯ, ಮನ್ಮಥವಿಕಾರ, ವಾಕ್ಯಾರ್ಥ, ವಿಶ್ವ, ವಿದ್ಯೆ, ನೀತಿ ಇವುಗಳಲ್ಲಿ ॥೧॥

ಮೌಢ್ಯ, ಹಿಂಸೆ, ಪರಸ್ತ್ರೀ ಮೋಹ, ಸಿಟ್ಟು, ಆತುಕ, ದ್ವೇಷ, ಬಗೆ ಬಗೆಯಾಗಿ ಅಂತಃಕರಣವಲ್ಲಿ ಹುಟ್ಟುವ ಭ್ರಾಂತಿ, ಮಿತಿಮೀರಿದ ಆಶೆ, ಶುಭಾಶುಭ ಕರ್ಮಗಳು ಇವುಗಳಲ್ಲಿ ॥೨॥

ದುರಭಿಪ್ರಾಯವುಳ್ಳ ಶಾಸ್ತ್ರಿಗಳ ತಿಳುವಳಿಕೆ, ಬುದ್ಧಿಹೀನತೆ, ದೇಹಾಭಿಮಾನ, ಸಂಸಾರದ ಸಡಗರ, ದುಷ್ಟರ ಸಂಗ, ಈಶ್ವರಭಕ್ತಿಯಲ್ಲಿ ಅಲಕ್ಷ್ಯ,

ದಯೆ (ಕರುಣೆ) ಯಿಂದ ಬೇರೆಯಾದ ಧರ್ಮವೂ, ನಿರ್ಮೋಹಕ್ಕಿಂತ ಶ್ರೇಷ್ಠವಾದ ಸಂಪತ್ತೂ, ಶ್ರೇಷ್ಠಭಕ್ತಿಗಿಂತ ಸುಚರಿತವೆಂಬುದೂ ಇನ್ನಿಲ್ಲ. ಅದೇ ರೀತಿ ಗುರುವಾದ ಶಂಭುಲಿಂಗನೇ ಪರಾತ್ಪರ ದೈವವಲ್ಲದೆ ಬೇರೆ ದೇವರೆಂಬುದಿಲ್ಲ. ॥೫॥

೨

ಕರುಣತ್ರಯ-ಶರೀರ, ವಾಣಿ, ಮನಗಳಿಂದ ಪಾಪವನ್ನೇ! ಮಾಡುತ್ತಿರುವ ನನಗೆ ಗುರು ಶಂಭುಲಿಂಗನು ಹೇಗೆ ಒಲಿಯುವದು ಸಾಧ್ಯವಿದೆ ॥ಪ॥

ಹೀನ ಜನ್ಮಕ್ಕೆ ಕಾರಣವಾದ ಪರಸ್ತ್ರೀಸಂಗ, ಪರಧನಾಪಹರಣ, ಪ್ರಸಾದವಲ್ಲದುದರ ಸೇವನೆ, ಪರರಿಗೆ ಹಿಂಸೆಯನ್ನು ಕೊಡುವದು ಈ ನಾಲ್ಕು ಪಾತಕಗಳು ದೇಹದಲ್ಲಿ ವಾಸಮಾಡಿಕೊಂಡಿರುವಾಗ ನನ್ನನ್ನು ದೇವನು ಹೇಗೆ ಮೆಚ್ಚುವನು? ॥೧॥

ಅಸತ್ಯ, ಅನುಚಿತ, ಅಪ್ರಿಯ ಆಗಿರುವ ಮಾತು, ಚಾಡಿ ಎಂಬ ಈ ನಾಲ್ಕು ದೋಷಗಳು ಪಶು, ಪಕ್ಷಿ, ಮೃಗಗಳ ಹೊಟ್ಟೆಯಲ್ಲಿ ಹುಟ್ಟುವಂತೆ ಮಾಡುವವು. ಇಂಥ ದೋಷಗಳು ಎನ್ನಲ್ಲಿರಲು ನನಗೆ ದೇವನು ಹೇಗೆ ಒಲಿವನು? ॥೨॥

ಜನರು ಮೆಚ್ಚುವಂಥ ಕಾರ್ಯದಲ್ಲಿ ಪ್ರೀತಿ, ಅಪ್ರಿಯವಾದುದರ ಚಿಂತನೆ. ಪರಧನ, ಪರಸತಿಗಳಲ್ಲಿ ಆಸೆ ಎಂಬ ನಾಲ್ಕು ಪಾಪಗಳು ಜನ್ಮಗಳನ್ನು ಕೊಡುತ್ತವೆ. ಇವೆಲ್ಲ ನನ್ನ ಮನಸ್ಸಿನಲ್ಲಿ ನೆಲೆಸಿರುವಾಗ ನನ್ನನ್ನು ಶಂಭುಲಿಂಗನು ಹೇಗೆ ಮೆಚ್ಚುವನು? ॥೩॥

೩

ಎಲೆ ಮನುಷ್ಯನೆ, ಅದಾವ ಧೈರ್ಯದಿಂದ ನೀನು ಅಂಜದೆ ಪಾಪಕಾರ್ಯಗಳನ್ನು ಮಾಡುತ್ತಿರುವಿ ಹೇಳು? ॥ಪ॥ ನರಕವಿಲ್ಲವೆ? ಯಮ

ನೀತಿ ಕ್ರಿಯಾಚರ್ಯ ಸ್ಥಳ

೧

ಗುರುವಿನ ಉಪದೇಶಕ್ಕಿಂತ ಶ್ರೇಷ್ಠತರವಾದ ಅಮೃತವು, ಮೋಹ ವನ್ನು ಮೀರಿಸುವಂಥ ಸಂಸಾರಕ್ಕೆ ಬೀಜರೂಪವಾದುದು ಮತ್ತೊಂದು ಇರು ವದಿಲ್ಲ ॥ಪ॥ ಈ ಲೋಕದಲ್ಲಿ ಮಾನವಜನ್ಮಕ್ಕಿಂತಲೂ ಶ್ರೇಷ್ಠವಾದ ಜನ್ಮವೂ, ಇಂದ್ರಿಯ ನಿಗ್ರಹಕ್ಕಂತಲೂ ಮೇಲಾದ ಶತ್ರುಜಯವೂ, ಭಿಕ್ಷೆ ಗಿಂತಲೂ ಕೀಳಾದುದೂ, ಬ್ರಹ್ಮ ಜ್ಞಾನ (ಆತ್ಮಸಾಕ್ಷಾತ್ಕಾರ) ಕ್ಕಿಂತಲೂ ಮೇಲಾದ ವಿದ್ಯೆಯೂ ಇನ್ನೊಂದಿಲ್ಲ. ॥೧॥

ದುರಾಸೆಗಿಂತ ಹೆಚ್ಚಿನ ದುರ್ಗುಣವೂ, ಅಪವಾದಕ್ಕಿಂತ ಬೇರೆ ಮರ ಣವೂ, ಸತ್ಯವ್ರತಾಚಾರಕ್ಕಿಂತ ಬೇರೆ ತಪಸ್ಸೂ, ಸ್ವಾಭಿಮಾನಕ್ಕಿಂತ ಮೇಲಾದ ಧನವೂ ಇರುವದಿಲ್ಲ. ॥೨॥

ದೇಹಕ್ಕಿಂತಲೂ ಮಿಗಿಲಾದ ಇಂದ್ರಜಾಲವೂ, ಹೂವಿನ ಬಾಣಗಳಿಗಿಂತ ಹಿಂಸಾತ್ಮಕ ಬಾಣಗಳೂ, ಸದುವಿನಯಗಿಂತಲೂ ಬೇರೆ ಉಪಚಾರವೂ, ಸ್ವಾತ್ಮ ನಿಗಿಂತಲು ಬೇರೆ ಪ್ರಿಯವಾದ ವಸ್ತುವೂ ಇರುವದಿಲ್ಲ. ॥೩॥

ತಾಳ್ಮೆಗಿಂತಲು ಬೇರೆಯಾದ ಮುಕ್ತಿ, ಸಾಧನಮಾರ್ಗವೂ, ಪರಿಶುದ್ಧ ಮನಕ್ಕಿಂತ ಬೇರೆ ಪುಣ್ಯತೀರ್ಥವೂ, ಕ್ರಮತಪ್ಪಿ ನಡೆಯುವ ನಡವಳಿಕೆಗಿಂತ ಬೇರೆ ಕಷ್ಟವೆಂಬುದೂ, ನನ್ನದೆಂಬ ಭಾವಕ್ಕಿಂತ ಬೇರೆಯಾದ ಬಂಧನವೂ ಇರುವದಿಲ್ಲ.

ವೇದಶಾಸ್ತ್ರಗಳ ದೂಷಣೆ ಇವುಗಳಲ್ಲಿ ಆಸಕ್ತಿಯಿರುವಾಗ ಅದೆಂಥ ಕೇಡು ಸಂಭವಿಸುವದೋ ? ॥೩॥

೫

ತನ್ನಲ್ಲಿ ತೋರುವ ಸುಖ ದುಃಖ ಪ್ರೀತಿ ಮೊದಲಾದ ಭಾವಗಳೆಲ್ಲಾ ಪ್ರಕೃತಿ ಗುಣಗಳೆಂದು ತಿಳಿಯಕ್ಕದ್ದು. ॥ಪ॥

ಶರೀರವೇ ನಾನೆಂದು ವ್ಯರ್ಥವಾದ ಮೂಢ ಬುದ್ಧಿಯಿಂದ ಮೋಸ, ಆಲಸ್ಯ ನಿದ್ರೆ ದುಷ್ಕರ್ಮ ಇವುಗಳನ್ನು ಬಿಡದೆ ಚಾಪಲ್ಯದಿಂದ ವ್ಯರ್ಥವಾಗಿ ಕೆಟ್ಟು ಹೋಗುವ ದೇಹಾಭಿಮಾನವು ಇವು ತಾಮಸಗುಣಗಳು. ॥೧॥

ಗರ್ವ, ಜಿಪುಣತನ, ಮಮತೆ, ಅಸೂಯೆ, ಕ್ರೂರಕೃತ್ಯ, ಸ್ತ್ರೀ ವ್ಯಾಮೋಹ, ಮೋಸ, ಸಿಟ್ಟು, ಜಗಳ, ಕರ್ಕಶವೃತ್ತಿ, ದುಃಖ, ದಯಾಶೂನ್ಯತೆ ಮೊದಲಾದವು ರಾಜಸ ಗುಣಗಳು. ॥೨॥

ದಯೆ, ನಮ್ರತೆ, ತಪಸ್ಸು, ವೈರಾಗ್ಯ, ತಿಳುವಳಿಕೆ, ದಾನ, ನಿಶ್ಚಲ ಚಿತ್ತ, ಇಂದ್ರಿಯ ನಿಗ್ರಹ ಧರ್ಮ, ಧೈರ್ಯ, ನಿರಭಿಮಾನತೆ, ಸತ್ಯ, ಬ್ರಹ್ಮವಿದ್ಯೆ (ಪರಾವಿದ್ಯೆ), ಪ್ರೀತಿ, ಇವೆಲ್ಲ ಗುರುಶಂಭು ಲಿಂಗನನ್ನು ಒಲಿಸುವ ಸಾತ್ವಿಕ ಗುಣಗಳು. ॥೩॥

೬

ನಾನಾ ಬಗೆಯ ವಿಷಯಗಳ ಕಡೆಗೆ ಹರಿದು ಹೋಗುವ ಮನಸ್ಸನ್ನು ನಿಗ್ರಹ ಗೊಳಿಸುವದು ನನಗೆ ಅಸಾಧ್ಯವು. ॥ಪ॥

ಭೂಮಿಯನ್ನು ಚರ್ಮದ ಹಾಗೆ ಸುರುಳಿ ಸುತ್ತಬಹುದು, ಮೇರು ಪರ್ವತವನ್ನು ಬೆರಳತುದಿಯಿಂದ ನಿಲ್ಲಿಸಬಹುದು, ಸಮುದ್ರವನ್ನಾದರೂ ಕುಡಿಯಬಹುದು. ಮನಸ್ಸನ್ನು ಮಾತ್ರ ಚಲಿಸದಂತೆ ಕ್ಷಣ ಕಾಲವಾದರೂ ನಿಲ್ಲಿಸುವುದು ಅಸಾಧ್ಯವಾಗಿರುವುದು. ॥೧॥

ಮೊಲದ ತಲೆಯಲ್ಲಿ ಕೊಂಬನ್ನು ಕಾಣಬಹುದು, ಮಘಮಘಿಸುವ ಆಕಾಶಕಮಲವನ್ನು ಕಿತ್ತು ತರಬಹುದು, ಮೃಗಜಲವನ್ನಾದರೂ ಕುಡಿಯ ಬಹುದು. ಅರ್ಧಗಳಿಗೆಯಾದರೂ ಮನಸ್ಸನ್ನು ಸ್ಥಿರವಾಗಿ ನಿಲ್ಲಿಸುವದಕ್ಕಾಗು ವುದಿಲ್ಲ. ॥೨॥

ಸಂಸಾರಿ ಮನುಷ್ಯನು ಕಾಮವಿರೋಧಿಯಾದ, ಅಪಾರಮಹಿಮನಾದ ಶಂಭುಲಿಂಗನ ಪ್ರೀತಿಯನ್ನು, ಹೇರಳವಾದ ಪುಣ್ಯದ ಫಲದಿಂದ ಪಡೆಯದೆ ಸುಮ್ಮನೆ ಮನಸ್ಸನ್ನು ಗೆಲ್ಲುವುದು ಸಾಧ್ಯವಲ್ಲ. ॥೩॥

೭

ಅನುಭವಶಾಲಿಗಳಾದವರು ಅಲ್ಪವಾದ ಐಹಿಕಸುಖಕ್ಕೆ ಆಸೆಪಟ್ಟು ಕೆಟ್ಟುಹೋಗ ಬೇಡಿರಿ. ಶಿವಭಜನೆಯನ್ನು ತಪ್ಪದೆ ಮಾಡಿರಿ. ಭಾಗ್ಯವಿಲ್ಲದ ವರಿಗೆ ಅದು ದೊರಕೊಳ್ಳದು. ಶಿವನಲ್ಲದೆ ಅನ್ಯದೇವತೆಯನ್ನು ಭಜಿಸ ಬೇಕೆಂಬ ಕಷ್ಟಬೇಡ. ॥೧॥

ಒಳ್ಳೇ ಕುಲವೂ, ಜಾತಿಯೂ, ಆಕಾರವೂ, ಯೌವನವೂ, ಸೊಗಸೂ, ಗೌರವವೂ, ಬಂಧುಗಳ ಪ್ರೀತಿಯೂ, ಪಾಂಡಿತ್ಯವೂ, ಹಠವೂ, ನ್ಯಾಯವೂ, ವಿದ್ಯೆಯೂ, ಮೃದುವಾಕ್ಕೂ, ಶಾಸ್ತ್ರಜ್ಞಾನವೂ ಕವಿತೆಯೂ, ಕುಶಲವಿದ್ಯೆಯೂ ಸದಾಚಾರವೂ, ವ್ಯವಸಾಯವೂ, ಸೇವೆಯೂ, ಬೇಡುವಿಕೆಯೂ, ಭೂಷಣವೂ ಜಯವೂ, ಸದ್ಗುಣವೂ, ತರ್ಕವೂ, ವಿದ್ಯೆಯೂ, ಮಣಿಮಂತ್ರಗಳ ಪ್ರಯೋ ಗವೂ, ಸುಕೃತವಿಲ್ಲದೆ ತನ್ನ ಇಚ್ಛೆಯಂತೆ ಫಲವನ್ನು ಕೊಡುವುದಿಲ್ಲ. ॥೧॥

ಇಂದ್ರನ ವಾಸ ಸ್ವರ್ಗ. ಕೋಟಿ ದೇವತೆಗಳೇ ಸೇನೆ, ಬೃಹಸ್ಪತಿಯೇ ಮಂತ್ರಿ, ವಜ್ರವೇ ಆಯುಧ, ಬ್ರಹ್ಮ ವಿಷ್ಣುಗಳ ಬಲ, ಋಷಿಗಳ ಆಶೀರ್ವಾದ, ಐರಾವತವೇ ಆನೆ, ಸಂಜೀವನವೇ ಮಂತ್ರದಿಂದುಂಟಾದ ಸಿದ್ಧಿ, ಅಮೃತವೇ ಆಹಾರ, ಇಷ್ಟಿದ್ದರೂ ಕೂಡ ಅವನು ರಾಕ್ಷಸರಿಗೆ ಹೆದರಿ ಯುದ್ಧದಲ್ಲಿ ಸೋತನು. ಹೀಗೆ ಯಾರೇ ಆಗಲಿ ದೈವಬಲವಿಲ್ಲದಿದ್ದರೆ ಹಾನಿಯನ್ನು ಹೊಂದುವರು. ॥೨॥

ಪೂರ್ವ ಪುಣ್ಯವಿದ್ದರೆ ಬೆಟ್ಟದ ಶಿಖರದಲ್ಲಿಯೂ, ಅರಣ್ಯದಲ್ಲಿಯೂ, ಸಮುದ್ರ ಮಧ್ಯದಲ್ಲಿಯೂ, ಉರಿಯ ಮಧ್ಯದಲ್ಲಿಯೂ, ರಣಭೂಮಿಯಲ್ಲಿಯೂ, ವಿಷ ಹಾಗೂ ಪಿಶಾಚ ಮೊದಲಾದವುಗಳ ಬಾಧೆಗಳಲ್ಲಿಯೂ, ಪರದೇಶದಲ್ಲಿಯೂ, ರಾಜ ಗೃಹದಲ್ಲಿಯೂ, ಬಹಳ ಕಷ್ಟದಲ್ಲಿಯೂ, ನಿದ್ರೆಯಲ್ಲಿಯೂ, ಪ್ರಾಣಾಂತ್ಯದಲ್ಲಿಯೂ, ಜಾಡ್ಯದಲ್ಲಿಯೂ, ಮೂರ್ಛೆಯಲ್ಲಿಯೂ, ಸಾಮರ್ಥ್ಯ ಕುಂದಿದಾಗಲೂ ರಕ್ಷಿಸಲ್ಪಡುವನು. ॥೩॥

ಒಂದೇ ಗಾಲಿಯುಳ್ಳ ರಥ, ಶತ್ರುವಾದ ಸರ್ಪನೇ ವೀಣೆ, ಸಮಸಂಖ್ಯೆಯಿಲ್ಲದ ಏಳು ಕುದುರೆಗಳು, ಕುಂಟ ಸಾರಥಿಯಾದ ಅರುಣ. ಆಧಾರವಿಲ್ಲದ ದಾರಿ, ಬಹುಶಕ್ತರಾದ ಮಂದೇಹರು ಎಂಬ ರಾಕ್ಷಸರೊಡನೆ ಯುದ್ಧ ಇವೆಲ್ಲವುಗಳನ್ನು, ಹೊಂದಿದ ಸೂರ್ಯನೊಬ್ಬನೇ ಒಂದೇ ಹಗಲಿನಲ್ಲಿ ವಿಸ್ತಾರವಾದ ಆಕಾಶದಲ್ಲಿ ಮೊದಲಿನಿಂದ ಕೊನೆಯ ವರೆಗೂ ಪ್ರಯಾಣಮಾಡುವನು. ದೈವಬಲವಿದ್ದರೆ ಉಪಕರಣಗಳು ಕಡಿಮೆಯಾಗಿದ್ದರೂ ಮನುಷ್ಯನಿಗೆ ಕಾರ್ಯ ಸಿದ್ಧಿಯಾಗಿ ಕೀರ್ತಿ ಉಂಟಾಗುವದು. ॥೫॥

ಈ ವಿಷಯವನ್ನು ತಿಳಿದು ಸ್ತ್ರೀ ಮೊದಲಾದ ವಿಷಯಗಳಲ್ಲಿ ಕೊರಗದೆ ಸಮಸ್ತಸಂಪತ್ತನ್ನೂ ಅಪೇಕ್ಷಿಸುವವರು, ಪರಹಿತವನ್ನುಂಟು ಮಾಡುವವರು, ಮೋಕ್ಷವನ್ನು ಅಪೇಕ್ಷಿಸುವವರು ಶಿವನ ಪಾದಪದ್ಮವನ್ನು ಭಜಿಸುತ್ತಾ ನಿಷ್ಕಾಮಿಗಳಾಗಿ ಕರ್ಮವನ್ನು ಮಾಡುತ್ತ ಇರುವರು. ಇಂಥವರಿಗೆ ಅಂತರ್ಬಾಹ್ಯಗಳಲ್ಲಿ ಪರಮಾನಂದವು ಸಿದ್ಧಿಯಾಗುವದು. ॥೫॥

೮

ಎಲೈ ಜೀವನೇ, ನೀನು ಹೀಗೆ ತಿಳಿದಮೇಲೆ ಸುಖದುಃಖ ಮೊದಲಾದ ದ್ವಂದ್ವಗಳಿಗೆ ಯೋಚಿಸದಿರು. ॥೧॥

ರೋಗಾದಿಗಳ ಬಾಧೆಯು ನೀನು ಅಪೇಕ್ಷಿಸದಿದ್ದಾಗ್ಯೂ ತಾವಾಗಿ ಬಂದು ದುಃಖವನ್ನು ಉಂಟುಮಾಡುವ ಹಾಗೆ, ನೀನು ಸುಖಗಳನ್ನು ಅಪೇಕ್ಷೆ ಮಾಡದಿದ್ದರೂ ಅವು ತಾವಾಗಿಯೇ ಬಂದು ನಿನ್ನನ್ನು ಸೇರುವದು, ನಿಜವಾದ್ದರಿಂದ ॥೧॥

ಬಂದ ದುಃಖವನ್ನು ಅನುಭವಿಸದೇ ಅದು ತೀರದೆಂದು ತಿಳಿ. ಮಹಾ ಪರಾಕ್ರಮಿಗಳಾದ ರಾಮ, ನಳ ಮೊದಲಾದವರೆಲ್ಲರೂ ಏಕೆ ಕಷ್ಟವನ್ನು ಅನುಭವಿಸಿದರು ? ಇದನ್ನು ತಿಳಿದು ಜಾಣನಾಗು ॥೨॥

ಜನನ ಮರಣ ಮೊದಲಾದವುಗಳು ನೀನು ಅಪೇಕ್ಷಿಸದಿದ್ದಾಗಲೂ ಹೇಗೆ ನಿನಗುಂಟಾಗುವವೋ ಹಾಗೆಯೇ ದೇಹಸೌಖ್ಯ, ಭೋಗಭಾಗ್ಯಗಳೂ ತಾವಾಗಿಯೇ ಲಭಿಸುವವು. ಶಂಭುಲಿಂಗನನ್ನು ಧ್ಯಾನಿಸುತ್ತಾ ನೀನು ಸುಮ್ಮನಿರು. ॥೩॥

೯

ಹಿಂದೆ ಮಹಾತ್ಮರಾದ ದೇವತೆಗಳಿಗೂ, ಮಹಾಪುರುಷರಿಗೂ ಆದ ಕಷ್ಟವನ್ನು ನೋಡಿದರೆ ನಿನಗಾದ ಬಾಧೆಗೆ ಲಕ್ಷ್ಯಕೊಡಬಹುದೇ? ॥ಪ॥ ವಿಷ್ಣುವಿಗೆ ದಶಾವತಾರ ಮಾಡಬೇಕಾಗಿ ಬಂದುದರಿಂದುಂಟಾದ ಕಷ್ಟವನ್ನೂ, ಬ್ರಹ್ಮನಿಗೆ ತಲೆ ಹೋಗುವದರಿಂದುಂಟಾದ ದುಃಖವನ್ನೂ, ಇಂದ್ರನಿಗೆ ಮೈಯ್ಯೆಲ್ಲಾ ಯೋನಿ ಯಾಗುವುದರಿಂದ ಉಂಟಾದ ನಾಚಿಕೆಯನ್ನೂ, ಮನ್ಮಥನಿಗೆ ಉಂಟಾದ ಉರಿಯನ್ನೂ, ಚಂದ್ರನಿಗೆ ಆದ ಕ್ಷಯರೋಗವನ್ನೂ, ಅರುಣನಿಗಾದ ಅಂಗವೈಕಲ್ಯವನ್ನೂ ನೋಡಿದರೆ ॥೧॥

ಸೂರ್ಯನಿಗಾದ ಭ್ರಮಣವನ್ನೂ, ಆದಿಶೇಷನಿಗಾದ ಭಾರವನ್ನೂ, ದಕ್ಷಬ್ರಹ್ಮ ತಲೆಯನ್ನು ಕಡಿಸಿಕೊಂಡದ್ದನ್ನೂ. ಅಗ್ನಿಯು ನಾಲಗೆಯನ್ನು ಕಳೆದುಕೊಂಡದ್ದನ್ನೂ, ಯಮನಿಗೆ ಎದೆಯ ಮೇಲಾದ ಗಾಯವನ್ನೂ ನೋಡಿದರೆ ॥೨॥

ವಸಿಷ್ಠ ಋಷಿಗೆ ವಿಶ್ವಾಮಿತ್ರನಿಂದಾದ ದುಃಖವನ್ನೂ, ದಶರಥನಿಗೆ ಆದ ಭಂಗವನ್ನೂ, ಸನತ್ಕುಮಾರನಿಗಾದ ಒಂಟೆಯ ಜನ್ಮವನ್ನೂ, ವ್ಯಾಸ ಋಷಿಗೆ ತೋಳು ಹೋದುದರಿಂದುಂಟಾದ ದುಃಖವನ್ನೂ, ನೋಡಿದರೆ ॥೩॥

ಬಲಿಗೂ, ಹರಿಶ್ಚಂದ್ರನಿಗೂ ಬಂದ ಕಷ್ಟವನ್ನೂ, ನಳನಹುಷರಿಗುಂಟಾದ ಕೇಡನ್ನೂ, ಸಗರನ ಮಕ್ಕಳಿಗೂ, ಕಾರ್ತವೀರ್ಯನಿಗೂ ಆದ ನಾಶವನ್ನೂ, ಬಲಿಷ್ಠರಾದ ಪಾಂಡವರಿಗಾದ ಕಷ್ಟವನ್ನೂ ನೋಡಿದರೆ ॥೪॥

ಎಂಥವರೇ ಇರಲಿ ದೇಹಧಾರಿಗಳಾದ ಮಹಾಪುರುಷರಿಗೆ ಆದ ದುಃಖ ವನ್ನು ವರ್ಣಿಸಲಸಾಧ್ಯವು. ಕಾರಣ, ಗುರು ಶಂಭುಲಿಂಗನ ಪಾದಾರವಿಂದ ವನ್ನು ಭಜಿಸಬೇಕು. ಅದೇ ಸುಖಪ್ರದವಾದುದು. ॥೫॥

೧೦

ಮಹಾತ್ಮರೆಲ್ಲರನ್ನೂ, ಭಂಗಪಡಿಸಿದ ವಿಧಿಯೇ, ನಿನಗಿಂತಲೂ ಬಲಿಷ್ಠ ರಿನ್ನಾರಿರುವರು ? ॥ಪ॥ ವಿಷ್ಣುವನ್ನು ದಶಾವತಾರದಿಂದ ಬಳಲಿಸಿದೆ. ಬ್ರಹ್ಮನ ಮಧ್ಯದ ತಲೆಯನ್ನು ಕೆಡಿಸಿದೆ ಚಂದ್ರನ ದೇಹವನ್ನು ಬಡವಾಗಿ ಮಾಡಿದೆ. ಇಂದ್ರನ ದೇಹದಲ್ಲೆಲ್ಲಾ ಯೋನಿಗಳು ಕಲ್ಪಿಸಿದೆ. ॥೧॥

ವೇದಗಳನ್ನು ಕುದುರೆಗಳನ್ನಾಗಿ ಮಾಡಿದೆ. ವ್ಯಾಸನನ್ನು ವಾದದಲ್ಲಿ ಸೋಲಿಸಿ ತೋಳುಗಳನ್ನು ಕಡಿಸಿದೆ, ಸೂರ್ಯನಿಗೆ ರಾಹುವಿನಿಂದ ಕೇಡನ್ನುಂಟು ಮಾಡಿದೆ. ಸರ್ಪ, ಆನೆ, ಪಕ್ಷಿ, ಇವುಗಳ ಸಾಮರ್ಥ್ಯವನ್ನು ತಡೆದು ಅವು ಗಳನ್ನು ಸೆರೆಯಲ್ಲಿ ಹಾಕಿಸಿದೆ ॥2॥ ಚಕ್ರವರ್ತಿಯಾದ ಹರಿಶ್ಚಂದ್ರನನ್ನು ಚಂಡಾಲನ ಆಳಾಗುವಂತೆ ಮಾಡಿದೆ. ಐದು ಜನ ಚಕ್ರವರ್ತಿಗಳಾದ ಅಣ್ಣ ತಮ್ಮಂದಿರಗೆ ತಿರಿದು ತಿನ್ನುವ ಗತಿಯನ್ನುಂಟು ಮಾಡಿದೆ. ಜ್ಞಾನಿಗಳಾದ ಭಕ್ತರಿಗೂ ಪ್ರಾರಬ್ಧಕರ್ಮಾನುಭವವನ್ನು ಮಾಡಬೇಕೆಂಬ ನ್ಯಾಯವನ್ನು ಹೊಂದಿದೆ. ॥೩॥

೧೧

ವಿಶಾಲಮತಿಗಳಾದವರು ಶಿವಭಕ್ತಿಯಿಂದ ಕೂಡಿದವರಾಗಿದ್ದರೆ ಮಾತ್ರ ಕಾಲ, ಕರ್ಮ, ಮಾಯೆ ಇವುಗಳನ್ನು ಗೆಲಲು ಸಮರ್ಥರಾಗಿರುವರು. ದೃಷ್ಟಾಂತಗಳು—॥ಪ॥

ಮಾರ್ಕಂಡೇಯನು ತನಗೆ ಹದಿನಾರುವರ್ಷ ಆಯುಷ್ಯ ಮುಗಿದ ಕೂಡಲೆ ಈಶನ ಮರೆಹೊಕ್ಕು ಯಮನ ಕೂಡ ಅತ್ಯುಗ್ರವಾದ ಕದನ ಹೂಡಿ ಜಯಿಸಿ ಚಿರಂಜೀವತ್ವವನ್ನು ಪಡೆದನು. ॥೧॥

ಹೇಳಲಸಾಧ್ಯವಾದಷ್ಟು ಪಾಪಕೃತ್ಯಗಳನ್ನು ಮಾಡಿದ ವಿದಳನು ತಾನು ಸಾಯುವ ಕಾಲದಲ್ಲಿ ತನಗೆ ಅನ್ನವು ಬೇಕೆಂದು ಹೇಳುವ ಕಾಲದಲ್ಲಿ "ಅಹರ"ವೆಂದು ಕೂಗಿಕೊಳ್ಳಲು, ಅವನು ಶಿವನೆಂದು ನುಡಿದನೆಂದು ಭಾವಿಸಲ್ಪಟ್ಟವನಾಗಿ ಅವನು ಅನುಭವಿಸಬೇಕಾಗಿದ್ದ ನರಕಯಾತನೆಗಳನ್ನೆಲ್ಲಾ ತಪ್ಪಿಸಿಕೊಂಡು ಮುಕ್ತಿಸುಖವನ್ನು ಹೊಂದಿ ಹೆಸರು ವಾಸಿಯಾದನು ಅವನಿಯೊಳು. ॥೨॥

ಭೃಂಗೀಶ್ವರನು ಪಾರ್ವತಿಗೆ ನೀನು ಮಾಯೆ, ನಿನಗೆ ನಮಿಸಲಾರೆನೆನ್ನಲು ಅದಕ್ಕೆ ಅವಳು ತನ್ನಂಶವಾದ ರಕ್ತ, ಮಾಂಸ, ಚರ್ಮ, ಮೊದಲಾದವುಗಳನ್ನು ಕೊಡಲು ಹೇಳಿದಳು. ಆಗವನು ಹಾಗೆ ಮಾಡಲು ಶಂಭುಲಿಂಗದ ಅಂಘ್ರಿಯಿಂದ (ದಯೆಯಿಂದ) ಮತ್ತೊಂದು ಪದವನ್ನು ಪಡೆದು ಸುಖಿಯಾದನು. ॥೩॥

೧೨

ಆಲೋಚಿಸಿ ನೋಡಿದರೆ ಈಶ್ವರನು ದೇಶ, ಕಾಲ, ವಸ್ತು ಇವುಗಳಿಂದ ಮೆಚ್ಚುವನು. ಅದರಿಂದ ಅವನ ಸಾಕ್ಷಾತ್ಕಾರವಾಗುವದು ನಿಶ್ಚಯವು. ॥ಪ॥

ಕಾಶೀ ಕ್ಷೇತ್ರದಲ್ಲಿ ಜಾರಪುರುಷನಾದ ಒಬ್ಬ ಬ್ರಾಹ್ಮಣನು ಹೆಂಗಸೊಬ್ಬಳ ನೀಚವಾಸದ ಸುರೆಯ ಭಾಂಡದಲ್ಲಿ ಬಿದ್ದು ಸಾಯಲು, ಈಶ್ವರಾನುಗ್ರಹದಿಂದ ಲಿಂಗವೇ ಆಗಿ ಪೂಜ್ಯನಾದನು. ॥೧॥

ಸುಕುಮಾರನೆಂಬುವನು ಪೂರ್ವಕಾಲದಲ್ಲಿ ಕುಲಾಚಾರಗಳನ್ನು ಬಿಟ್ಟು, ನೀಚ ಜಾತಿಯ ಹೆಂಗಸೊಬ್ಬಳಲ್ಲಿ ರಮಿಸಿ ತನ್ನೊಳಗೆ ಹುಟ್ಟಿದ ಹೆಣ್ಣುಮಕ್ಕಳೊಡನೆ ಕ್ರೀಡಿಸುತ್ತಾ ಪಾಪಿಯಾಗಿದ್ದಾಗ್ಯೂ ಶಿವರಾತ್ರಿಯಲ್ಲಿ ಈಶ್ವರನ ಪಾದ ಸಂದರ್ಶನ ಮಾಡಿದ್ದರಿಂದ ಪ್ರಮಥಗಣಗಳಿಗೆ ಪತಿಯೆನಿಸಿಕೊಂಡು ಸುಖವನ್ನು ಪಡೆದನು. ॥೨॥

ಬಹಳ ಪಾಪಿಷ್ಠನಾದ ಬೇಡನೊಬ್ಬನು ಅರಣ್ಯದಲ್ಲಿ ಬಿದ್ದಿರಲು, ನಾಯಿಯೊಂದು ಸ್ಮಶಾನ ಬೂದಿಯನ್ನು ತುಳಿದು ಬಂದು ಅವನ ಹಣೆಯನ್ನು

ತುಳಿದು ಹೋಗಲು, ಅದರಿಂದ ಆ ಬೇಡನು ಶಂಭುಲಿಂಗದ ಕೃಪೆಗೆ ಪಾತ್ರನಾಗಿ ಮುಕ್ತಿ ಹೊಂದಿದನು. ॥೩॥

ಮೇಲೆ ಹೇಳಿದ ಮೂರು ದೃಷ್ಟಾಂತಗಳಿಂದ ಕಾಶೀಕ್ಷೇತ್ರವೆಂಬ ದೇಶಮಹಿಮೆಯೂ, ಶಿವರಾತ್ರಿಯೆಂಬ ಕಾಲಮಹಿಮೆಯೂ, ವಿಭೂತಿಯೆಂಬ ವಸ್ತುಮಹಿಮೆಯೂ, ಮುಕ್ತಿಗೆ ಸಾಧನಗಳಾದುವೆಂಬುದು ತಿಳಿದುಬರುತ್ತದೆ.

೧೩

ಕಾಮಾರಿ-ಶಿವನು-ತನ್ನ ಭಕ್ತರಿಗೆ ಮುಕ್ತಿಯನ್ನು ಕೊಡುವ ರೀತಿಯು ಸುಲಭವಾದದ್ದಲ್ಲವೆ ! ॥ಪ॥ ಶಿವದೇವಸ್ಥಾನಕ್ಕೆ ಕದಿಯುವದಕ್ಕಾಗಿ ಬಂದವನೊಬ್ಬನು ಆರಿಹೋಗುತ್ತಿದ್ದ ದೀಪವನ್ನು ನೆಟ್ಟಗೆ ಮಾಡಿದ್ದರಿಂದ ಈಶ್ವರನು ಪ್ರೀತಿಯಿಂದ ಅವನಿಗೆ ಮುಕ್ತಿಯನ್ನು ಕೊಟ್ಟನು. ॥೧॥

ಒಬ್ಬನು ಸಾಯುವಾಗ ಹೊಲದ ಹರಗಣೆ ಎಂಬುದಾಗಿ ಹಂಬಲಿಸುತ್ತ ಪ್ರಾಣಬಿಡಲಾಗಿ, ಹರನೆಂಬ ಶಬ್ದವನ್ನುಚ್ಚರಿಸುವಂತಾದ್ದರಿಂದ ಶಿವನು ಅವನಿಗೆ ಪರಮ ಪದವನ್ನು ಕರುಣಿಸಿದನು. ॥೨॥

ಶ್ವೇತರಾಜನೆಂಬವನು ಹೂ ಕೊಯ್ಯುತ್ತಿರುವಾಗ ಜಾರಿ, ನೆಲಕ್ಕೆ ಬಿದ್ದು ಹೋದ ಒಂದು ಹೂವನ್ನು ನೋಡಿ ಶಿವಾರ್ಪಣವಾಗಲೆಂದು ಹೇಳಿದ ಮಾತ್ರಕ್ಕೆ ಈಶ್ವರನು ಅದನ್ನು ಸ್ವೀಕರಿಸಿ ಅವನಿಗೆ ಪರಮಪದವಿಯನ್ನು ಕರುಣಿಸಿದನು. ॥೩॥

ಜೇಡರಹುಳ, ನಾಯಿ, ಆನೆ, ಹಂದಿ, ಮೊಲ, ಇರುವೆ, ಹದ್ದು ಮೊದಲಾದವುಗಳನ್ನು ದೇವತೆಗಳಿಂದ ಶ್ರೇಷ್ಠವೆಂದು ಶಂಭುಲಿಂಗನು ತೋರಿಸಿ ಕೊಟ್ಟನು. ಆದ್ದರಿಂದ ಅವನಿಂದ ಮುಕ್ತಿಯನ್ನು ಪಡೆವುದು ಬಹಳ ಸುಲಭ. ॥೪॥

೧೪

ತಿಳಿಯುವಂತೆ ಬೋಧಿಸುವ ಗುರುವಿನ ಬೋಧೆಯ ಅಭಿಪ್ರಾಯವನ್ನು ಗ್ರಹಿಸಿ ಅದರಂತೆ ನಡೆಯುವವನೇ ವಿವೇಕಿಯು ॥ಪ॥ ಪಾಪಗಳಲ್ಲೆಲ್ಲ

ದೊಡ್ಡದು ಪರನಿಂದೆ. ಬದುಕಿದ್ದರೂ ಸತ್ತಂತೆ ಮಾಡುವದು ಚಿಂತೆ. ನಶ್ವರದೇಹದ ಸಾರ್ಥಕತೆಯು ಪರಹಿತದಿಂದ, ದುರಾಸೆಯೇ ದಾಸ್ಯ ವೃತ್ತಿ. ॥೧॥

ಪ್ರಾಣಕ್ಕೆ ಸಮಾನವಾದುದು ತನ್ನ ಸ್ವಾಭಿಮಾನ. ಎಚ್ಚರಿಕೆಯೇ ಸದಸದ್ವಿವೇಕ. ಚಂದ್ರಕಿರಣಗಳ ಹಾಗೆ ತಂಪಾದದ್ದು ಶಾಂತಿ. ಮೃದು ವಚನ ಗಳೇ ಅಮೃತಧಾರೆ. ॥೨॥

ವ್ಯರ್ಥಕಾಲವ್ಯಯ ಮಾಡದೆ ಮಾಡಬೇಕಾದ ಕೆಲಸವೇಂದರೆ ಸಂಸಾರ ಬಂಧವನ್ನು ತಪ್ಪಿಸಿಕೊಳ್ಳುವುದು. ಶ್ರೇಷ್ಠವಾದ ಗಳಿಕೆಯೆಂದರೆ ಸಚ್ಚರಿತ್ರವು. ಮನುಷ್ಯನಾಗಿ ಹುಟ್ಟಿದ ಮೇಲೆ ತನ್ನನ್ನು ತಾನು ಅರಿತುಕೊಳ್ಳುವುದೇ ಜೀವನ ಸಾರ್ಥಕತೆ. ಶೌರ್ಯವೆಂದರೆ ಕಾಮಜಯ ॥೩॥ ಒಬ್ಬರನ್ನು ಪೀಡಿಸದಿರುವದೇ ಗೌರವ. ವಿಷಯಸುಖಗಳನ್ನು ಅಪೇಕ್ಷೆ ಮಾಡದಿರುವುದೇ ಶ್ರೇಷ್ಠಸುಖ. ಔದಾರ್ಯವೇ ಉತ್ತಮವಾದ ಗುಣ. ಅಚ್ಚಳಿಯದ ಆಭರಣವೆಂದರೆ ವಿದ್ಯೆ. ॥೪॥ ಮನಸ್ಸಿಗೆ ಮಂಗಲಕರವಾವುದೆಂದರೆ ಸಾಧುಜನರ ಸಂಗ. ಅತಿಯಾದ ನಿಷ್ಠೆಯನ್ನಿಡಬೇಕಾದುದಾವುದೆಂದರೆ ಶಿವಧರ್ಮ, ಇಹಪರಗಳಲ್ಲಿ ಒಳ್ಳೆಯ ದನ್ನು ಮಾಡುವುದಾವುದೆಂದರೆ ಧರ್ಮ. ಶಂಭುಲಿಂಗವೇ ಸದ್ಗತಿಯಾಗಿ ರುವುದು. ॥೫॥

೧೫

ಅಹ ! ಎಲ್ಲರೊಡನೆ ವೈರತ್ವವಿಲ್ಲದಿರುವುದೇ ಚಂದ. ತಲ್ಲಣಿಸದೆ ನೀತಿ ವಂತನಾಗಿರುವುದೇ ಚಂದ ॥೨॥ ಇದು ಇಷ್ಟವಾದದ್ದು, ಇದು ಅನಿಷ್ಟ ವಾದದ್ದು ಎಂದು ಅನುಭವದಿಂದ ತಿಳಿವುದೇ ಚಂದ. ವೇದವಿರುದ್ಧವಾದ ಮತವನ್ನು ಬಿಡುವುದೇ ಚಂದ. ಕೆಟ್ಟಮನಸ್ಸಿನಲ್ಲಿ ತೋರುವ ವಿಚಾರಗಳನ್ನು ಬಿಡುವುದೇ ಚಂದ, ಹೆಂಡರು ಮಕ್ಕಳು ಅಶಾಶ್ವತವೆಂದು ತಿಳಿವುದೇ ಚಂದ. ॥೧॥

ಯಾವುದಕ್ಕೂ ಕೊರಗದೆ ಜಾಗರೂಕನಾಗಿ ನಡೆವುದೇ ಚಂದ. ಅನ್ಯರ ಗುಣಗಳನ್ನು ಎಣಿಸದೆ ಅವರನ್ನು ಉಪಚರಿಸುವುದೇ ಚಂದ. ಕಷ್ಟ ಬಂದಾಗ

ಹೆದರದೆ ಧೀರನಾಗಿರುವುದೇ ಚಂದ. ಬಿಟ್ಟದ್ದರಲ್ಲಿ ಪುನಃ ಮನಸ್ಸನ್ನು ಮಾಡದಿರುವುದೇ ಚಂದ. ॥೨॥

ಕಿಂಚಿತ್ತಾದರೂ ಪಾಪವನ್ನು ಮಾಡದಿರುವುದೇ ಚಂದ. ದೊರಕಿದಷ್ಟರಲ್ಲಿ ತೃಪ್ತಿ ಹೊಂದುವುದೇ ಚಂದ. ಅಂತಃಕರಣವನ್ನು ಯಾವ ವಿಷಯದತ್ತ ಎಳೆಯಗೊಡದಿರುವುದೇ ಚಂದ. ಪುಣ್ಯವೆಂಬ ಬಳ್ಳಿಯನ್ನು ಎಲ್ಲ ದಿಕ್ಕುಗಳಲ್ಲಿ ಹಬ್ಬುವಂತೆ ಮಾಡುವುದೇ ಚಂದ. ॥೩॥

ಪುನರ್ಜನ್ಮವೆಂಬ ವೈರಿಯು ಪುನಃ ಉಳಿಯದಂತೆ ಅದನ್ನು ಜಯಿಸುವುದೇ ಚಂದ. ಯಮನ ಹಾವಳಿಯನ್ನು ಹೋಗಲಾಡಿಸುವ ಭಕ್ತಿಯನ್ನು ಕಲಿವುದೇ ಚಂದ. ಈಶ್ವರನ ಪಾದವನ್ನು ಧ್ಯಾನಿಸಿ ಮನಸ್ಸಿನಲ್ಲಿ ಸಂತೋಷ ಮಾಡಿಕೊಳ್ಳುವುದೇ ಚಂದ. ತನ್ನನ್ನು ತಾನು ತಿಳಿವ ಉಪಾಯವನ್ನು ಕಲಿಯುವುದೇ ಚಂದ. ॥೪॥

ಎಲೈ ಮನಸ್ಸೇ ದುಷ್ಟನಾದ ಮನ್ಮಥನ ಚಾಪಲ್ಯವನ್ನು ತಡೆಯುವುದೇ ಚಂದ. ವೈರಾಗ್ಯವೆಂಬ ವಜ್ರಾಯುಧದಿಂದ ಅಜ್ಞಾನವೆಂಬ ಪರ್ವತವನ್ನು ಒಡೆದು ಪುಡಿ ಮಾಡುವುದೇ ಚಂದ. ಮುಕ್ತಿಹೊಂದುವುದೇ ಚಂದ, ಮಹಾತ್ಮರ ಪಾದಕ್ಕೆ ಅಹಂಕಾರವಿಲ್ಲದೆ ನಮಸ್ಕರಿಸುವುದೇ ಚಂದ, ಗುರುಶಂಭುಲಿಂಗನಿಂದ ಮುಕ್ತಿ ಹೊಂದುವುದೇ ಚಂದ. ॥೫॥

೧೬

ಜಾಣನು ಇಹಪರ ಪ್ರಯೋಜನಗಳೆರಡನ್ನೂ ಜತೆದೆ ಕೂಡಿಸಿಕೊಂಡು ನಡೆಯುವನು. ಅದು ಹೇಗೆಂದರೆ— ॥ಪ॥ ಮಗುವು ಒಂದು ಮೊಲೆಯನ್ನು ಕುಡಿಯುತ್ತಿರುವಂತೆಯೇ ಇನ್ನೊಂದು ಮೊಲೆಯನ್ನು ಕೈಯಿಂದ ಹಿಡಿದುಕೊಂಡಿರುವಂತೆ, ತಾನು ಮನುಷ್ಯನಾಗಿ ಇಹಲೋಕ ಸುಖಗಳನ್ನು ಅನುಭವಿಸುತ್ತಿದ್ದಾಗ್ಯೂ ಪರಲೋಕ ಸಾಧನೆಗಳನ್ನು ಮಾಡಿಕೊಳ್ಳುತ್ತಲೇ ಇರುವನು. ॥೧॥

ಕೊಳದಲ್ಲಿ ಇಳಿದು ಸ್ನಾನ ಮಾಡುತ್ತಿರುವವನ ದೇಹದ ಕೆಳಭಾಗ ನೀರಿನಿಂದ ತಂಪನ್ನೂ, ಮೇಲಣ ಅರ್ಧ ಬಿಸಿಲಿನಿಂದ ಶಕೆಯನ್ನೂ ಅನುಭವಿಸು

ತ್ತಿರುವಂತೆ ಜಾಣನು ತತ್ವಜ್ಞಾನದ ಸುಖವನ್ನು ಹಾಗೂ ವಿಷಯದ ಬಾಧೆಯನ್ನು ಜೊತೆಜೊತೆಯಾಗಿ ಅನುಭವಿಸುವನು. ॥೨॥

ಪರ ಪುರುಷ ಸಂಗದ ಸೊಗಸನ್ನು ಮರೆಯದೆ ತನ್ನ ಪತಿಯ ಸಂಗ ಸುಖದಲ್ಲಿರುವ ಸ್ತ್ರೀಯಂತೆ ಜಾಣನು ಗುರುಶಂಭುಲಿಂಗದ ಧ್ಯಾನದಲಿದ್ದು ಹೊರಗಣ ಸಾಮಗ್ರಿಗಳಲ್ಲಿ ಸುಖಹೊಂದುವನು. ॥೩॥

೧೭

ಮುಕ್ತಿಯೆಂಬ ಸತಿಯ ಸಂಗವು, ಯುಕ್ತಿಗಳನ್ನರಿದು ಕೂಡುವವರಿಗಲ್ಲದೆ ಲಭ್ಯವಾಗದು ॥ಪ॥ ವೇದ, ಗುರು, ಮಿತ್ರರು, ಇವರುಗಳ ಸಹಾಯವಿಲ್ಲದೆ, ಅಜ್ಞಾನದಿಂದುಂಟಾದ ಭ್ರಾಂತಿಯು ಹೋಗದೆ, ಮನಸ್ಸನ್ನು ಶುದ್ಧ ಚೈತನ್ಯದಲ್ಲಿ ಲೀನಮಾಡಿ. ಶುದ್ಧಗೊಳಿಸಲು ಸ್ಥಾನವಿಲ್ಲದೆ ಸಂಸಾರ ದುಃಖದ ಆಲೋಚನೆಯು ನಾಶವಾಗದು, ॥೧॥ ಸದ್ಗುಣಗಳನ್ನು ಹೊಂದಿ ನಡೆಯದೆ, ಪುಣ್ಯವಿಶೇಷವನ್ನು ಪಡೆಯದೆ. ಮಂತ್ರ ರಹಸ್ಯಗಳನ್ನು ತಿಳಿಯದೆ, ವಿಚಾರದಲ್ಲಿ ತತ್ವವನ್ನು ತಿಳಿದುನೋಡದೆ, ನೇಮವನ್ನು ಪರಿಪಾಲಿಸದೆ, ॥೨॥ ಆನಂದವು ಉಕ್ಕುವ ರೀತಿಯನ್ನು ತಿಳಿದು ಅನುಭವಿಸದೆ, ಇಂದ್ರಿಯನಿಗ್ರಹ ಮಾಡದೆ, ಪರಿಶುದ್ಧವಾದ ಶಂಭುಲಿಂಗನನ್ನು ಮನಸ್ಸಿನಲ್ಲಿ ತಪ್ಪದೆ ಧ್ಯಾನ ಮಾಡಿ ಅವನ ಕರುಣೆಯನ್ನು ಪಡೆಯದೆ. ॥೩॥ ಮುಕ್ತಿಲಾಭವಾಗದು.

೧೮

ಸದಾಚಾರವಿಲ್ಲದೆ ಬರಿ ಜ್ಞಾನವನ್ನು ಮಾತ್ರ ಪಡೆದವರಿಗೆ ಮುಕ್ತಿಯು ದೊರೆಯಲಾರದು. ॥ಪ॥ ಗುರುವಿನ ಪಾದಸೇವೆ, ಸಜ್ಜನರ ಸಹವಾಸ, ಶಿವಪೂಜೆ. ಇಂದ್ರಿಯನಿಗ್ರಹ. ಮನದಲ್ಲಿ ನಂಬಿಕೆ, ವೈರಾಗ್ಯ, ತಿಳುವಳಿಕೆ, ವಿದ್ಯೆ. ಸತ್ಯ, ಧರ್ಮ, ಭಕ್ತಿ, ನ್ಯಾಯ ಇವುಗಳ ಬಲವಿಲ್ಲದೆ ॥೧॥ ವೇದೋಕ್ತವಿಧಿಯಲ್ಲಿ ನಂಬಿಕೆ. ನಿತ್ಯಕರ್ಮಗಳಲ್ಲಿ ಜಾಗರೂಕತೆ, ಲೋಕಾಪವಾದದಲ್ಲಿ ಭಯ, ಸಜ್ಜನರೊಪ್ಪುವಂತಹ ನಡೆ ನುಡಿಗಳಿಲ್ಲದೆ, ॥೨॥ ಮನ್ಮಥನ ಪುಷ್ಪಬಾಣಕೆ ಎದೆಗೊಡದೆ ನಾನು ಜೀವನೆಂಬ ಅಭಿಪ್ರಾಯವು ಹೋಗದೆ. ಸುವಿರೂಪ ನಾದ

ಶಂಭುಲಿಂಗ ತಾನೆಂದು ಧ್ಯಾನಿಸಿ ಭ್ರಮರಕೀಟನ್ಯಾಯದಂತೆ ತಾನೇ ಬ್ರಹ್ಮನಾಗದೆ ಮುಕ್ತಿಯಾಗಲಾರದು. ||೩||

೧೯

ಶಿವನೇ! ನನಗೆ ಪ್ರತಿ ಜನ್ಮದಲ್ಲಿಯೂ ಸುಗುಣಗಳನ್ನೇ ಉಂಟು ಮಾಡೆಂದು ಬೇಡಿಕೊಳ್ಳುವೆನು. ||ಪ||

ಕಷ್ಟಬಂದ ಕಾಲದಲ್ಲಿ ಧೈರ್ಯವನ್ನೂ, ಐಶ್ವರ್ಯಬಂದಾಗ ನಮ್ರತೆಯನ್ನೂ, ತುಂಬಿದ ಯೌವನಾವಸ್ಥೆಯಲ್ಲಿ ವಿಕಾರವಿಲ್ಲದಿರುವುದನ್ನೂ, ಹಿಡಿದ ನಿಯಮಗಳನ್ನು ಬಿಡದಿರುವವರಲ್ಲಿ ಪರವನ್ನೂ ಉಂಟುಮಾಡು. ||೧||

ಪ್ರಾಣ ಹೋದರೂ ಬಿಡದ ಧೈರ್ಯವನ್ನೂ, ಯಾವಾಗಲೂ ಸುಳ್ಳು ಹೇಳದಂತೆ ಸತ್ಯವನ್ನೂ, ನಾಶವಾಗದ ಪುಣ್ಯಮಯಕೀರ್ತಿಗಳನ್ನೂ, ಉತ್ತಮರು ಕೊಂಡಾಡುವ ಮಾರ್ಗದಲ್ಲಿ ನಡೆಯುವದನ್ನೂ ಕೃಪೆಮಾಡು. ||೨||

ದಾನ-ಧರ್ಮ ಮಾಡುತ್ತ ಅನುಭವಿಸುವ ಐಶ್ವರ್ಯವನ್ನೂ, ಹಿತವಾದ ಮಾತೇ ಅಲಂಕಾರವಾಗಿದ್ದ ದಾನ ಗುಣವನ್ನೂ, ವೇದವಿಚಾರದಲ್ಲಿ ಕಡಿಮೆಯಾಗದ ತಿಳುವಳಿಕೆಯನ್ನೂ, ಇತರರಿಂದ ಹೊಗಳಿಕೆಯನ್ನೂ ಪಡೆದು ಹೊಂದುವ ಇಷ್ಟಾರ್ಥಗಳನ್ನೂ ಕೃಪೆಮಾಡು. ||೩||

ಕೋಪವನ್ನು ಹುಟ್ಟಿಸದ ತಪಸ್ಸನ್ನೂ, ಪರಸ್ತ್ರೀಸೌಂದರ್ಯಕ್ಕೆ ಆಸೆಪಡದ ಇಂದ್ರಿಯ ನಿಗ್ರಹವನ್ನೂ, ಸಂಕಟರಹಿತವಾಗಿರುವ ದಿವ್ಯ ಸುಖವನ್ನೂ ಮೋಸವಿಲ್ಲದೆ ತನ್ನ ಧರ್ಮದಲ್ಲಿರಬೇಕೆಂಬ ಆಸಕ್ತಿಯನ್ನೂ ಕೃಪೆಮಾಡು ||೪||

ಲೋಕಕ್ಕೆಲ್ಲಾ ದೊಡ್ಡದಾದ ಶಾಂತಿಯನ್ನೂ; ದಯೆಯೂ, ದಿವ್ಯ ಜ್ಞಾನವೂ ಉಳ್ಳ ಗುರುಸೇವೆಯನ್ನೂ; ಮುಕ್ತಿಯನ್ನುಂಟುಮಾಡುವ ತತ್ವ ಶಾಸ್ತ್ರಜ್ಞಾನವನ್ನೂ ಶ್ರೀ ಗುರುಶಂಭುಲಿಂಗನೇ ಕೃಪೆಮಾಡು. ||೫||

೨೦

ಭಕ್ತರಿಗೆ ಸ್ವಸ್ವರೂಪವನ್ನು ತೋರಿಸುವ ಪಾರ್ವತೀಪತಿಯಾದ ಪರಮೇಶ್ವರನೇ, ಅಂತಃಕರಣ ಚತುಷ್ಟಯಗಳ ವಶನಾಗಿರತಕ್ಕ ನನ್ನನ್ನು ಪುಣ್ಯವ

ತೊಲಗದಂತೆ ಮಾಡಿ ಕಾಪಾಡು ॥ಪ॥ ಎಲೈ ಶಿವನೇ ಹೆಂಡತಿ ಮೊದಲಾದವುಗಳ ಭೋಗಗಳನ್ನಪೇಕ್ಷಿಸಿ ಅವಿವೇಕಿಯಾದ ನಾನು ದುಷ್ಕಾರ್ಯಗಳನ್ನು ಮಾಡುವಂತೆಯೇ ಗುರುವಿನ ಸೇವೆಯಲ್ಲಿ ನನಗೆ ಅಭಿರುಚಿಯನ್ನುಂಟುಮಾಡು. ಜನಗಳು ಗೌರವವನ್ನು ಸಂಪಾದಿಸುವದಕ್ಕಾಗಿ ತರ್ಕ ಮೊದಲಾದ ಶಾಸ್ತ್ರಗಳನ್ನೋದಿ ಆಯಾಸಪಡುವಂತೆಯೇ ನನಗೆ ಯಾವಾಗಲೂ ಮಂತ್ರಪಾರಾಯಣ ಮಾಡುವ ಬುದ್ಧಿಯನ್ನು ಕೊಡು ॥೧॥ ಸಮರತಿಯಿಂದ ಸುಖವನ್ನುಂಟುಮಾಡಿದ ಇನಿಯನನ್ನು ಸ್ತ್ರೀಯು ಬಿಡದೆ ಸದಾ ಧ್ಯಾನಿಸುವಂತೆ ತತ್ವಜ್ಞಾನವು ಸದಾ ನನ್ನಂತರಂಗದಲ್ಲಿರುವಂತೆ ಶಂಭುಲಿಂಗಗುರುವೇ ನನಗೆ ಕೃಪೆಮಾಡು. ॥೩॥

೨೧

ಕರುಣತ್ರಯದಲ್ಲಿಯೂ ವಿಚಾರಮಾಡಿ ತಿಳಿಯುತ್ತ, ಸದ್ಗುಣಿಯಾಗಿ. ತಪಸ್ಸನ್ನು ಮಾಡಲಿಲ್ಲವೆ ? ॥ಪ॥

ಗುರುಸೇವೆ, ಸತ್ಕರ್ಮಾಚರಣೆ, ಶಿವಪೂಜೆ, ಮಹಾತ್ಮರ ಭಜನೆ, ಎಂಟು ವಿಧವಾದ ಭಕ್ತಿ, ಇವುಗಳಿಂದೊಡಗೂಡಿದ ಶರೀರಿಯಾಗಿ. ॥೧॥

ಸಮ್ಮತಿ, ಪರಹಿತ, ತರ್ಕಮಾಡದಿರುವುದು, ಕುಶಬ್ದರಾಹಿತ್ಯ. ಸದಭಿಪ್ರಾಯ. ಮಂತ್ರ, ಜಪ, ಇಪ್ಪತ್ತೆಂಟು ಆಗಮಗಳು ಇವೆಲ್ಲವುಗಳನ್ನು ವಾಣಿಯಲ್ಲಿಟ್ಟು ॥೨॥

ಶಾಂತಿ, ಜ್ಞಾನ, ತತ್ವಸ್ವರೂಪ, ದಯೆ, ಇಂದ್ರಿಯನಿಗ್ರಹ, ವೈರಾಗ್ಯ, ಯೋಗ ಇವುಗಳನ್ನು ಸುಮನಸ್ಸಿನಲ್ಲಿಟ್ಟು ಪವಿತ್ರರೂಪಿಯಾದ ಶಂಭುಲಿಂಗನನ್ನು ಅಚಲನಾಗಿ ಧ್ಯಾನಿಸಿ ಅವನನ್ನು ಕೂಡಬೇಕು. ॥೩॥

೨೨

ಎಲೈ ಪರಮಾತ್ಮನೇ ನಾನು ಮುಕ್ತಿಗೊಡುವ ಒಂದು ಭಕ್ತಿ ಸಾಧನವನ್ನು ಮಾತ್ರ ಕೇಳುವೆನು; ಬೇರಾವುದನ್ನೂ ಬೇಡೆನು. ಆದುದರಿಂದ ಇದನ್ನಷ್ಟೇ ಕೃಪೆಮಾಡು ॥ಪ॥

ಕಾಲ, ದೇಶ. ವಸ್ತು ಭೇದವಿಲ್ಲದೆ ದೇಹದಮೇಲೆ ನನಗೆ ಎಷ್ಟು ಮಮತೆ ಇರುವದೋ ಅಷ್ಟನ್ನು ಯಾವಾಗಲೂ ಗುರುವಿನಲ್ಲಿಯೂ, ದೇವರಲ್ಲಿಯೂ ಉಂಟಾಗುವಂತೆ ಮಾಡುವುದೇ ನಿಜ ಭಕ್ತಿ. ॥೧॥

ಬಗೆಬಗೆಯಾದ ವಿಷಯುಗಳ ಜ್ಞಾನವನ್ನು ಬಿಟ್ಟು ಪರಿಶುದ್ಧನಾದ, ಆನಂದರೂಪನಾದ ಪರಮಾತ್ಮನೇ ನಾನೆಂದು ದೃಢವಾಗಿ ನಂಬಿ ಹಲವು ಬಗೆಯ ಆಲೋಚನೆಗಳನ್ನು ಮಾಡದೆ ಸುಖವಾಗಿರುವುದೇ ನಿಶ್ಚಯ ಜ್ಞಾನ. ॥೨॥

ಸ್ತ್ರೀಸಂಭೋಗ ಮೊದಲಾದ ವಿಷಯಗಳಲ್ಲಿರುವ ದೋಷಗಳನ್ನು ವಿಚಾರಿಸಿ ತಿಳಿದು ಹಠದಿಂದ ಅವುಗಳನ್ನು ಬಿಟ್ಟು ಗುರುಶಂಭುಲಿಂಗನಲ್ಲಿ ಪ್ರೀತಿಯನ್ನಿಟ್ಟು ಭೋಗಾಪೇಕ್ಷೆಯಿಲ್ಲದಂತಿರುವುದೇ ವೈರಾಗ್ಯವೆನಿಸಿಕೊಳ್ಳುವುದು. ॥೩॥

೨೩

ಮುಂದೆ ಹೇಳುವ ಮೂರು ಕಾಂಡಗಳು ಕ್ರಮವಾಗಿ ಅವಿವೇಕಿಗೂ, ಬುದ್ಧಿಶಾಲಿಗೂ, ವಿರಕ್ತನಿಗೂ, ಸಲ್ಲುವವು ಎಂಬುದನ್ನು ತಿಳಿಯಬೇಕು. ॥ಪ॥

ದೇಹಾಭಿಮಾನವನ್ನಿಟ್ಟುಕೊಂಡು ಕಾಮ್ಯಕರ್ಮಗಳನ್ನು ಮಾಡಿ, ಅವುಗಳ ಫಲವನ್ನು ಅನುಭವಿಸುವವನು ನಾನೆಂದು ತಿಳಿದು ಭ್ರಾಂತಿಪಡುವ ಸಂಸಾರ ದುಃಖಕ್ಕೆ ಕಾರಣವಾದುದೇ ಕರ್ಮಕಾಂಡವು. ॥೧॥

ಮನ, ಬುದ್ಧಿ, ಚಿತ್ತ, ಅಹಂಕಾರಗಳು ವಿಷಯದಲ್ಲಿ ಸಂಚರಿಸುತ್ತಾ ಕಷ್ಟಪಡುತ್ತಿರುವವಲ್ಲದೆ ನಾನು ಅವಕ್ಕೆ ಬೇರಾದವನು ಎಂಬ ಜ್ಞಾನವನ್ನು ಪಡೆಯುವದೇ ಜ್ಞಾನಕಾಂಡವು. ॥೨॥

ತಾನೂ, ದೇಹವೂ, ಕರ್ಮವೂ, ವಿಷಯಗಳೂ, ಭೋಗವೂ ಮುಂತಾದ ಈ ಪ್ರಪಂಚವೆಲ್ಲ ಈಶ್ವರನೇ, ಬೇರೆಯಾದದ್ದಲ್ಲವೆಂದು ತಿಳಿದು ಪ್ರೀತಿಪೂರ್ವಕವಾಗಿ ಅಭಿಮಾನಾದಿಗಳನ್ನು ಬಿಟ್ಟು ಶ್ರೀ ಗುರುಶಂಭುಲಿಂಗನನ್ನು ಧ್ಯಾನಿಸುವುದೇ ಭಕ್ತಿ ಕಾಂಡವು. ॥೩॥

೨೪

ಶರಣನೆಂಬ ವಧುವಿನ ಮದುವೆಯನ್ನು ನೋಡಿ ಪರಮಾನಂದ ಸಮುದ್ರದಲ್ಲಿ ತೇಲಾಡಿರಿ. ॥ಪ॥

ಅಲಂಕಾರಮಾಡಿದ ಮನೆಗೆ ಚಪ್ಪರವನ್ನು ಹಾಕಿದೆಯಮ್ಮ ಮಂಗಲ ಕರವಾದ ಕಟ್ಟೆಯ ಮೇಲೆ ಹಸೆಯನ್ನು ಹಾಕಲಾಗಿದೆಯಮ್ಮ. ಅವರಲ್ಲಿ ಶೋಭಿಸುವ ಕಲಶಗಳಿಂದ್ಯೆರಣೆ ತುಂಬಿದೆಯಮ್ಮ. ಅವುಗಳಲ್ಲಿ ಇರಿಸಿದ ಚಿಗುರಿನಿಂದ ತೋಂಟದ ಹಾಗೆ ಕಾಣಿಸುತ್ತಿದೆಯಮ್ಮ. ॥೧॥

ಮಂಗಳ ಸ್ನಾನದಿಂದ ದೇಹವು ಶುದ್ಧವಾಯಿತು. ದಿವ್ಯವಾದ ಸೂಕ್ಷ್ಮ ವಸ್ತ್ರವನ್ನು ಧರಿಸಿಯಾಯ್ತು. ಹಣೆಬೊಟ್ಟು, ವಿಭೂತಿ, ರುದ್ರಾಕ್ಷಿ ಎಂಬ ಒಡವೆಗಳನ್ನು ಧರಿಸಿ ಗುರುವಿನಿಂದ ಕಂಕಣ ಕಟ್ಟಲ್ಪಟ್ಟಾಯಿತು. ॥೨॥

ಕೂಡಿದ ಭಕ್ತರೆಂಬ ಸುವಾಸಿನಿಯರಮ್ಮ, ದೀಕ್ಷಾವಿಧಿಯನ್ನು ಹೇಳು ವಿಕೆಯೆಂಬ ವಾದ್ಯಗಳು ಬಾರಿಸಲ್ಪಟ್ಟವಮ್ಮ. ಮಾಯೆಯು ಮಲಕರ್ಮದ ತೆರೆ ಒಳಗಡೆಗೇ ಸರಿದು ಹೋಯಿತಮ್ಮ. ॥೩॥

ಭಜನೆ, ಭಕ್ತಿಗಳೇ ಜೀರಿಗೆ ಬೆಲ್ಲವಾದವಮ್ಮ ನಿಜ ದೀಕ್ಷಾ ಸಮಯದ ಸುಮುಹೂರ್ತ ಉಂಟಾದವಮ್ಮ! ಸುಜನರು ಹೊಗಳುವದೇ ಮಂಗಳ ಧ್ವನಿಯಾಯಿತಮ್ಮ. ಮೂರುಲೋಕಕ್ಕು ಶ್ರೇಷ್ಠನಾದ ಗುರುವಿನ ಕರುಣೆ ಯೆಂಬ ಅಮೃತ ಕೈ ಧಾರೆಯಮ್ಮ ॥೪॥

ತಲೆಯೆಂಬ ಅರಮನೆಯ ನೆಂಟರೆಲ್ಲರೂ ಬಂದರು. ಈಶ್ವರನೇ ನೇರ ವಾಗಿ ಬಂದನಮ್ಮ. ಅತಿಶಯ ಪ್ರೀತಿಯಿಂದ ಭಕ್ತಳೆಂಬ ವಧುವಿನ ಕೈ ಹಿಡಿ ದನಮ್ಮ ಶಂಭುಲಿಂಗನು ತಾನು ಮದುವಣಿಗನಾಗಿ ಬಂದು ಕೈ ಹಿಡಿದ, ಭಕ್ತ ಳೆಂಬ ಹೆಣ್ಣು ಮುತ್ತೈದೆಯಾದಳಮ್ಮ. ॥೫॥

೨೫

ವೇದ ಆಗಮಗಳ ಸಮೂಹವು ಕಾಣಲರಿಯದ ಲಿಂಗದ ಪೂಜೆಯು ಅದಾವ ಪುಣ್ಯದ ಫಲದಿಂದ ಸಾಧ್ಯವಾಯಿತೋ ನರಜನ್ಮದಲ್ಲಿ ॥ಪ॥

ಮೊದಲು ಲಿಂಗದ ಕಳೆಯನ್ನು ಕಂಡು ಹಿಡಿಯುವ ಬಯಕೆ. ಮನಸ್ಸಿನಲ್ಲಿ ಅದನ್ನು ಕೂಡಿಕೊಂಡು ನೆನೆವ ಇಚ್ಛೆ, ನಿರ್ಮಲ ಕಣ್ಣುಗಳಿಂದ ಎವೆ ಹಳಚದೆ ನೋಡುವ ಪ್ರೀತಿ. ಅದನ್ನು ಹಸ್ತದಲ್ಲಿ ತುಂಬಿಕೊಂಡಿರುವರು. ||೧|| ಸಂತೋಷ ರಸದಿಂದ ಅದಕ್ಕೆ ಅಭಿಷೇಕ ಮಾಡುವ ರುಚಿ, ಉತ್ಕೃಷ್ಟವಾದ ವಸ್ತ್ರ, ಗಂಧ, ಅಕ್ಷತೆಗಳನ್ನು ಕೊಡುವ ರುಚಿ (ಇಂಪು) ಸುವಾಸನೆಯುಳ್ಳ ಪುಷ್ಪಗಳಿಂದಲಂಕರಿಸಿ ಧೂಪ ದೀಪಗಳನ್ನು ಕಲ್ಪಿಸುವ ಸೊಗಸು. ||೨||

ರಸಭರಿತ ನೈವೇದ್ಯ ಮಾಡುವ ಪ್ರೀತಿ, ಕಂಪುಳ್ಳ ತಾಂಬೂಲವನ್ನು ಕೊಡುವ ಪ್ರೀತಿ. ಚಿನ್ನದ ಛತ್ರ, ಚಾಮರಗಳನ್ನು, ಕನ್ನಡಿಯನ್ನು ಹಿಡಿಯುವ ಪ್ರೇಮ. ||೩||

ಕೂಡಲೆ ಬೀಸಣಿಗೆಯಿಂದ ಬೀಸುವ ಬೆಡಗು. ಚನ್ನಾಗಿ ನಮಸ್ಕಾರ ಮಾಡಿ ಲಲ್ಲೆಗರೆವ ಹರ್ಷ. ತನುರೋಮಾಂಚನಗೊಂಡು ಹಾಡುವ ನಚ್ಚು. ಕಣ್ಣುತುಂಬ ನೋಡಿ ಆನಂದಾಶ್ರುಗಳು ಸುರಿಯುವ ಹೆಬ್ಬಯಕೆ. ||೪||

ಬಿಟ್ಟೂಬಿಡದೆ ಪುಷ್ಪಾಂಜಲಿ ಹಾಡುವ ಅತಿಯಾದ ಸುಖ, ಶೃಂಗಾರ ಮಾಡಿ ವರ್ಣಿಸುವ ಕೋರಿಕೆ, ತಾನೂ ಲಿಂಗಮಯನಾಗುವ ಬಯಕೆ, ಇಷ್ಟ. ಶಂಭುಲಿಂಗ ಪೂಜಾಸುಖ ||೫|| ಇವೆಲ್ಲ ಆವಪುಣ್ಯದ ಫಲದಿಂದ ಸಾಧ್ಯವೋ ?

೨೬

ಸದ್ಗುರುವಿನ ಕೃಪೆಯೊಂದನ್ನು ಬಿಟ್ಟು ಬೇರೊಂದು ಸುಖ ಪಡೆವ ಬಯಕೆ ಆಸಕ್ತಿ ನನಗೆ ಇಲ್ಲ. ||ಪ|| ಶ್ರೀ ಗುರುಪಾದಕಮಲದ ಧೂಳಿಯೆಂಬ ಭಸ್ಮ, ನನ್ನ ಮೇಲೆ ಯಾವಾಗಲೂ ಇದ್ದು ಸಂಸಾರವೆಂಬ ಜನನ ಮರಣವನ್ನು ನೀಗಿ ನಿಜವಾದ ಬೋಧೆ ಪಡೆದು ಸಂತೋಷದಲ್ಲಿ ನಾನಿರುವಂತಹ.||೧||

ತಿಳಿದು ನೋಡಲಾಗಿ ನನ್ನ ಪುಣ್ಯವೆಂಬ ಬೆಟ್ಟದ ಮೇಲೆ ಗುರುಕೃಪೆಯೆಂಬ ಸೂರ್ಯನು ಹುಟ್ಟಲು ಅಜ್ಞಾನ ಕತ್ತಲೆಯು ನಾಶವಾಗಿ ಸ್ವಾನುಭಾವ ಸಾಕ್ಷಾತ್ಕಾರವಾಗುವುದು. ||೨|| ನನ್ನ ಬುದ್ಧಿಯೆಂಬ ಸಸಿ ಒಣಗಿದಾಗಲೂ

ಗುರುಕಟಾಕ್ಷವೆಂಬ ಬೆಳದಿಂಗಳನ್ನು ಕೂಡಿ ತಿಳಿವಳಿಕೆಯೆಂಬ ನೀರನ್ನು ಪಡೆದು ತೇಜೋಭರಿತವಾಗಲು ಆದರಲ್ಲಿ ಆತ್ಮಾನಂದವನ್ನು ಹೊಂದುವೆಯೆಂದು ಹೇಳುವ ॥೩॥ ಶಿವ (ಮಂಗಳಮಯನ) ಹಸ್ತವೆಂಬ ಪರುಷವನ್ನು ತಲೆಯ ಮೇಲಿಟ್ಟ ಗುರುವರನು ದುರ್ಗುಣವೆಂಬ ಕೀಳು ಧಾತುತ್ವವನ್ನು ಹೋಗಲಾಡಿಸಿ ತನು, ಮನ, ಕರಣ ಮೊದಲಾದವುಗಳ ಸಮೂಹವನ್ನು ಪವಿತ್ರಗೊಳಿಸಿದ ಗುರು ॥೪॥ ಗುರುವಿನ ಅಮೃತಧಾರೆಯೆಂಬ ಉಪದೇಶದಲ್ಲಿ ನನ್ನ ಪಾಪ ಸಂತಾಪಗಳು ನಾಶವಾಗಿ ಹೋಗಿ ಅತಿಶಯವಾದ ಪ್ರೀತಿ ಉಂಟಾಗಿ ತೆಕ್ಕನೆತೀವಿ ಗುರುಶಂಭುಲಿಂಗವಾಗುವದನ್ನು ಬಿಟ್ಟು ಬೇರೊಂದನ್ನಪೇಕ್ಷಿಸಬಹುದೇ ॥೫॥

ನೀತಿಕ್ರಿಯಾಚರ್ಮ ಸ್ಥಳ ಸಂಪೂರ್ಣ

ಯೋಗಪ್ರತಿಪಾದನ ಸ್ಥಳ

ಮಂತ್ರಯೋಗ

೧

ನಿತ್ಯ ಸುಖಕ್ಕೆ ಸಮುದ್ರಪ್ರಾಯವಾಗಿಯೂ, ಸಕಲ ವಿದ್ಯೆಗಳಿಗೆ ನೆಲೆಯಾಗಿಯೂ ಇರುವ ಸದ್ಗುರುವೇ ನೀನೆನಗೆ ಆಶ್ರಯದಾತನಾಗು ॥ಪ॥

ಮಲದಿಂದುಂಟಾದ ಅಜ್ಞಾನವನ್ನೂ, ಮಾಯೆಯಿಂದ ಬಂದ ಮಮತೆಯನ್ನೂ, ಕುಲಸಂಬಂಧವಾದ ಸುಖದುಃಖಗಳನ್ನೂ, ಕಠಿಣೋಕ್ತಿಯನ್ನೂ, ಅಜ್ಞಾನದ ಪರಾಕ್ರಮವನ್ನೂ ದಯವಿಟ್ಟು ಹೋಗಲಾಡಿಸಿ ಬ್ರಹ್ಮಸ್ವರೂಪವನ್ನು ತೋರಿಸಿ ಕೊಟ್ಟ ಸದ್ಗುರುವೇ ॥೧॥

ದೇವತೆಗಳೂ, ಮನುಷ್ಯರೂ, ನಾಗರೂ, ರಾಕ್ಷಸರೂ, ಪಶುಗಳೂ ಮುನೀಶ್ವರರೂ, ವೇದವೇದಾಂತಗಳೂ, ತರ್ಕಶಾಸ್ತ್ರ ಪುರಾಣ ಹಾಗೂ ಷಡ್ದರ್ಶನಗಳೂ, ಮತಗಳೂ ಕಾಣದೆ ಹುಡುಕುತ್ತಿರುವ ತತ್ವದ ಇರವನು, ಇದು ಎಂದು ನನಗೆ ಕಣ್ಣಾರೆ ಕಾಣ ಹಚ್ಚಿದ ಗುರುವೇ ॥೨॥

ವಿಚಾರಿಸಿ ನೋಡಲಾಗಿ ಐದು ಅಧ್ವಗಳನ್ನು ಮೀರಿ ಹೆಚ್ಚಾದ ಕಾಂತಿಯಿಂದ ಶೋಭಿಸುತ್ತಿರುವ ಶಕ್ತಿ ತತ್ವವನ್ನು ಮೀರಿರುವ ಈಶ್ವರನ ಅನುಸಂಧಾನವನ್ನುಂಟುಮಾಡಿ ನನ್ನನ್ನು ರಕ್ಷಿಸಿದ ಮಹಾನುಭಾವನಾದ ಗುರುವರೇಣ್ಯ. ॥೩॥

೨

ಎಲೈ ಜ್ಞಾನಿಶಕ್ತಿಯೇ ಎಲ್ಲರೂ ಯೋಗಿಗೆ ಸಂಸಾರ ಸಂಬಂಧವೇ ಇಲ್ಲವೆಂದು ತಿಳಿದು ಕೊಂಡಿರುವರು. ಅದು ಸುಳ್ಳಾದದ್ದು ನೋಡು. ಹೇಗೆಂದರೆ—॥ಪ॥

ಆತ್ಮ ವಿದ್ಯೆಯೆಂಬ ಕುಲಸ್ತ್ರೀಯೂ, ಸರ್ವದಾ ಸಂತೋಷವೆಂಬ ಮಮತೆಯ ಮಗನೂ, ವೈರಾಗ್ಯವೆಂಬ ಸಹಾಯಕ ಜನವೂ, ತಾಳ್ಮೆಯೆಂಬ ಆಳೂ ಸಹನೆಯೆಂಬ ಸ್ನೇಹಿತನೂ ಇರುವರು. ॥೧॥

ಭಕ್ತಿಯೆಂಬ ತಾಯಿಯೂ, ಸದಾಚಾರವೆಂಬ ತಂದೆಯೂ, ನಿಶ್ಚಯ ವೆಂಬ ಮಗಳೂ, ನಂಬಿಕೆಯೆಂಬ ಇಷ್ಟ ಜನವೂ, ಬುದ್ಧಿಯೆಂಬ ಮನೆಯೂ, ನಡತೆಯೆಂಬ ಭೂಮಿಯೂ ಉಂಟು. ॥೨॥

ಅಹಿಂಸೆಯೆಂಬ ಹೆಣ್ಣಾಳೂ, ಕುದಿಯದಿರುವ ಗುಣವೆಂಬ ಗಂಡಾಳೂ, ಧರ್ಮವೆಂಬ ವಾಹನವೂ, ಸ್ನೇಹವೇ ಮೊದಲಾದ ಮೊಮ್ಮಕ್ಕಳೂ, ಮೋಕ್ಷ ವೆಂಬ ದೇಶವೂ ಪರಶಿವನೆಂಬ ಗುರುವೂ ಉಂಟು. ॥೩॥

ಇತಿ ಅಧಿಕಾರಿ ಭೇದ

೩

ಪ್ರಪಂಚದಲ್ಲಿ ಶ್ರೇಷ್ಠರಾದ ನಾಲ್ಕು ಬಗೆಯ ಯೋಗಸಾಧಕರನ್ನು ಇಲ್ಲಿ ತಿಳುಹುವೆನು. ॥ಪ॥

ಬಲವಿಲ್ಲದವನು, ವಿಷಯ ಸುಖಗಳಲ್ಲಿ ಅಪೇಕ್ಷೆಯುಳ್ಳವನು, ಮೂಢನು, ಸ್ವಲ್ಪ ಕೆಲಸವನ್ನು ಮಾಡುವವನು, ಪರಾಧೀನನು, ರೋಗಿಯು, ಗೃಹಕೃತ್ಯದಲ್ಲಿ ಕುತೂಹಲವುಳ್ಳವನು ಮೃದುವೆನಿಸಿಕೊಳ್ಳುವನು. ॥೧॥

ಎಲ್ಲರೂ ಸಮವೆಂದು ಭಾವಿಸುವವನು, ಸತ್ಸಹವಾಸವುಳ್ಳವನು ಸೌಖ್ಯವುಳ್ಳವನು, ಸತ್ಕಾರ್ಯಗಳಿಗೆ ಸಾಕ್ಷಿಯಾದವನು, ಗಟ್ಟಿಯಾದ ಶರೀರ ವುಳ್ಳವನು, ಪರಿಶುದ್ಧನಾದವನು, ಇಂದ್ರಿಯವ್ಯಾಪಾರಗಳನ್ನು ತಡೆದಿರತಕ್ಕ ವನು, ಶಮೆಯುಳ್ಳವನು, ಯೋಗಾಭ್ಯಾಸ ಮಾಡುವವನು, ಪರಿಶುದ್ಧತೆ ಯುಳ್ಳವನು ಮಧ್ಯಮನೆನಿಸಿಕೊಳ್ಳುವನು. ॥೨॥

ನ್ಯಾಯ, ಸಹನೆ, ಧೈರ್ಯ, ನಿಶ್ಚಯವಾಕ್ಯ, ದೃಢಬುದ್ಧಿ, ಪರಿಶುದ್ಧ ವಾದ ಮನಸ್ಸು, ಶಕ್ತಿ, ಪರಾಕ್ರಮ, ಸಂತೋಷ, ನಮ್ರತೆ ಮೊದಲಾದ ಸಮಸ್ತ ಗುಣಗಳು ಉಳ್ಳವನು ಅತಿಮಾತ್ರನೆಂಬ ಹೆಸರುಳ್ಳವನು. ॥೩॥

ಶಾಸ್ತ್ರಗಳಲ್ಲಿ ಪಂಡಿತನು, ಈ ಲೋಕ ಪರಲೋಕಗಳಲ್ಲಿ ಸುಖವನ್ನು ಅಪೇಕ್ಷಿಸದಿರುವವನು, ಕರ್ಮಬದ್ಧನಲ್ಲದವನು, ಬಹಳಶೂರನು, ಚಾಪಲ್ಯ ವಿಲ್ಲದವನು, ಆತ್ಮ ಸಾಕ್ಷಾತ್ಕಾರದಿಂದ ಕೂಡಿರುವವನು ಅತಿಮಾತ್ರನೆಂದೆ ನಿಸಿಕೊಳ್ಳುವನು. ॥೪॥

ಈ ನಾಲ್ಕು ಬಗೆಯ ಜನರೂ ಮಂತ್ರ, ಲಯ, ಹಠ, ರಾಜವೆಂಬ ಯೋಗಗಳಲ್ಲಿ ಒಂದೊಂದು ಯೋಗವನ್ನು ಸಾಧಿಸಿ ಕ್ರಮಕ್ರಮವಾಗಿ ಈಶ್ವ ರನ ಕರುಣೆಯಿಂದ ಶಾಶ್ವತಸುಖವನ್ನು ಪಡೆವರು.

೪

ಕೆಳಗೆ ಹೇಳುವ ಐದು ಬಗೆಯ ಯೋಗಗಳ ಕ್ರಮವನ್ನು ಗುರುವಿನ ಉಪದೇಶದಿಂದ ತಿಳಿದುಕೊಂಡು ಸಾಧನ ಮಾಡಿದರೆ ಮೋಕ್ಷ ಪದವನ್ನು ಹೊಂದಬಹುದು ॥೨॥ ಪ್ರಣವವೆಂಬ ಏಕಾಕ್ಷರ ಮಂತ್ರವನ್ನು ಎರಡು ಅಕ್ಷರದ ಹಂಸ ಮಂತ್ರವನ್ನು ಓಂ ನಮಃಶಿವಾಯವೆಂಬ ಆರು ಅಕ್ಷರದಮಂತ್ರವನ್ನು ಎಂಟಕ್ಷರಗಳುಳ್ಳ ಮಾಯಾಮಂತ್ರವನ್ನು ಜಪಮಾಡುವುದು ಮಂತ್ರಯೋಗ ವೆನಿಸುವುದು ॥೧॥

ನಾದದ ನಿಜಸ್ವರೂಪದಲ್ಲಿ ಅಥವಾ ಬಿಂದುವಿನಲ್ಲಿ ಮನೋಹರವಾದ ರೂಪದಲ್ಲಿ ಮನವೊಡವೆರೆದು ಕೂಡಿನಿಲ್ಲುವುದೇ ಲಯಯೋಗವೆಂದು ಬಲ್ಲವರು ಹೇಳುವರು ॥೨॥

ಕಠಿಣವಾದ ಅಷ್ಟಾಂಗಗಳಿಂದಲೂ, ಮೋಹನ ಮೊದಲಾದ ಸಾಮಗ್ರಿಗಳಿಂದಲೂ. ಶಾಂಭವೀ ಖೇಚರೀ ಮೊದಲಾದ ಮುದ್ರೆಗಳಿಂದಲೂ ಶ್ವಾಸವನ್ನು ನಿಲ್ಲಿಸುವುದೇ ಸುಯೋಗ(ಹಠಯೋಗ)ವೆಂದು ಜ್ಞಾನರಾದವರು ಹೇಳುವರು. ॥೩॥

ಅರಿವಿನಿಂದ ಒಳ ಹೊರಗಣ ಮೂರು ಲಕ್ಷ್ಯದಿಂದ ತತ್ವವನ್ನು ತಿಳಿದುಕೊಂಡು ಮನಸ್ಸಿನ ಚಂಚಲತೆಯಳಿದು ಆ ಮೂರು ತತ್ವಗಳಲ್ಲಿ ಮನವು ಕರಿಗೊಂಡು ನಿಲಲವುವೇ ರಾಜಯೋಗವೆಂದು ಹೆಸರಾದುದು. ॥೪॥

ಗುರುವಾದ ಶಂಭುಲಿಂಗವೆಂಬ ಇಷ್ಟಲಿಂಗದ ಪೂಜೆ, ಸಾಕ್ಷಾತ್ಕಾರ, ಭಕ್ತಿ, ಜ್ಞಾನ, ವ್ರತಗಳು ಈ ಐದನ್ನು ನಡೆಯಿಸುವುದೇ ಶಿವಯೋಗವು. ॥೫॥

೫

ಜನಗಳು ತಮ್ಮಲ್ಲಿಯೇ ತೋರಿಬರುವ ಮಂತ್ರವನ್ನು (ಆತ್ಮವನ್ನು) ಧ್ಯಾನಿಸುವದನ್ನು ಬಿಟ್ಟು. ಅನೇಕ ಹೊರಗಣ ಮಂತ್ರಗಳನ್ನು ಜಪಮಾಡುತ್ತ ಕಷ್ಟ ಪಡುವರು. ॥೫॥ ವಾಯು ಸಂಚರಿಸುವ ವರ್ಗವೆಂದೆನಿಸುವ ಇಡಾ ಪಿಂಗಳಾ ಎಂಬ ಎರಡು ನಾಡಿಗಳಲ್ಲಿ ಬಿಂದುವಿನಿಂದಲೂ ವಿಸರ್ಗದಿಂದ ಕೂಡಿದ ಶಕ್ತಿವರ್ಣ ಬೀಜವೆಂಬ ಎರಡು ಅಕ್ಷರಗಳುಳ್ಳ (ಹಂಸಃ) ಎಂಬ ಮಂತ್ರವು ಸಂಚರಿಸುವ ಹಾಗೆ ಎಲ್ಲರೆಲ್ಲಿಯೂ ತೋರಿಬರುವುದು. ಆ ಮಂತ್ರ ಜಪದಿಂದಲೇ ಮನ ಶುದ್ಧವಾಗುವದು. ॥೧॥

ಪ್ರತಿದಿನವೂ ಸೂರ್ಯೋದಯದ ಕಾಲದಲ್ಲಿ ಆ ಮಂತ್ರವನ್ನು ಜಪಿಸುವುದರಿಂದಲೇ ಇಪ್ಪತ್ತೊಂದುಸಾವಿರದ ಆರ ನೂರು ಸಾರಿ ಜಪಮಾಡಿದಂತಾಗುವುದು. ಆದ್ದರಿಂದ ಆ ಹಂಸಮಂತ್ರವನ್ನು ತಪ್ಪದೆ ನಿತ್ಯವೂ ಜಪ ಮಾಡಬೇಕು. ॥೨॥

ಆ ಮೇಲೆ ಆ ಮಂತ್ರದ ಅಕ್ಷರಗಳೆರಡೂ ಸೇರಿ ಹಿಂತಿರುಗುವಾಗ ಅಂದರೆ "ಹಂಸ" ಎಂಬುದು ತಿರುಗಿಸಲ್ಪಟ್ಟರೆ "ಸೋಹಂ" ಎಂದು ಆಗುವದು. ಆಗ ಅದರಲ್ಲಿರುವ ವ್ಯಂಜನಗಳನ್ನು ಬಿಟ್ಟರೆ ಸಾಕಾರದ ಮೇಲಿರುವ ಓಂಕಾರವೂ ಹಕಾರದ ಮೇಲಿರುವ ಬಿಂದುವೂ ಸೇರಿ ಅದು 'ಓಂ' ಎಂಬುದಾಗಿ ಭ್ರೂಮಧ್ಯದಲ್ಲಿ ಹುಟ್ಟುವುದು. ಆ ಓಂಕಾರವೇ ಮಾಯೆಯನ್ನು ಹೋಗಲಾಡಿಸುವ ಪ್ರಣವ ಮಂತ್ರ-ವಾಗುವುದು ॥೩॥

ಆಧಾರಚಕ್ರ, ಸ್ವಾಧಿಷ್ಠಾನಚಕ್ರ. ಮಣಿಪೂರಕಚಕ್ರ, ಅನಾಹತಚಕ್ರ, ವಿಶುದ್ಧಿಚಕ್ರ, ಆಜ್ಞಾಚಕ್ರ, ಮೊದಲಾದ ಆರು ಚಕ್ರಗಳೆಂಬ ಕಮಲಗಳಿಗೆ ದಳಗಳೆನಿಸಿರುವ ಐವತ್ತು ಶುದ್ಧಾಕ್ಷರಗಳು ನಕಾರಾದಿಯಾಗಿ ಓಂ ಪ್ರಣವವೇ ಕೊನೆಯಾಗುಳ್ಳ ಬೀಜಾಕ್ಷರಗಳು ಸೇರಿದ ಒಟ್ಟು ಗುಂಪು ಮೂಲಮಂತ್ರವೆನಿಸಿಕೊಳ್ಳುವದು. ॥೪॥

ಹೀಗೆ ಈ ಮಂತ್ರಗಳೆಲ್ಲ ಈಶ್ವರವಾಚಗಳು. ಈಶ್ವರನೇ ಈ ಮಂತ್ರಗಳಿಂದ ವಾಚ್ಯನು. ಈ ರೀತಿಯಾಗಿ ಪ್ರಖ್ಯಾತವಾಗಿರುವ ಈ ಮಂತ್ರವನ್ನು ಮನಃಪೂರ್ವಕವಾಗಿ ಯಾರು ಜಪಿಸುವರೋ ಅವರಿಗೆ ಮೋಕ್ಷವು ಸಿದ್ಧಿಸುವುದು. ॥೫॥

ಇತಿ ಮಂತ್ರಯೋಗ ಸಮಾಪ್ತ

ಅಥ ಲಯಯೋಗಃ

೬

ಇಂಥ ಮಂತ್ರಗಳನ್ನು ಗುರುವಿನಿಂದ ಉಪದೇಶಿಸಿಕೊಂಡು ಜಪಮಾಡಿ ಬಿಂದು ರೂಪದಲ್ಲಿ ಪ್ರತ್ಯಕ್ಷವಾಗಿ ನೋಡಿ, ನಾದರೂಪದಲ್ಲಿ ಅದೇ ವಸ್ತುವನ್ನು ಕೇಳಿ, ಮನಸ್ಸಿನಲ್ಲಿ ಅದೇ ರೂಪವನ್ನೇ ಧ್ಯಾನಿಸಿ, ಸಾರೂಪ್ಯವನ್ನು ಹೊಂದಿ ಸುಖಪಡುವದನ್ನು ಅಭ್ಯಾಸ ಮಾಡುವವನೇ ಮುಕ್ತನಾಗುವನು. ॥೭॥

ಅಷ್ಟಮದಗಳ ದೋಷದಿಂದಲೋ ಸ್ತ್ರೀಪುತ್ರಾದಿ ಸಂಸಾರದಲ್ಲಿ ಉಂಟಾದ ಮಮಕಾರದಿಂದಲೋ ನಿದ್ರೆಮಾಡಿದ್ದರಿಂದುಂಟಾದ ಅಜ್ಞಾನ ದಿಂದಲೋ ಆ ಸ್ವರೂಪವನ್ನು ಮರೆತರೆ ಪುನಃ ಜ್ಞಾಪಿಸಿಕೊಳ್ಳುವಂಥ ತಿಳಿವಳಿ ಕೆಯನ್ನುಂಟುಮಾಡಿ ಕೊಂಡು ವಿಷಯಗಳಲ್ಲಿ ಸಂಚಾರಮಾಡುತ್ತ, ಮರೆದರೆ ಹಿಂದಕ್ಕೆಳೆದುಕೊಳ್ಳುತ್ತ, ಮರೆಯಾಗಿ ನೆನಪಿಗೆ ಬಾರದಿದ್ದರೆ ನೆನೆದು, ಪುನಃ ಧ್ಯಾನಿಸುವಂತೆಮಾಡಿ ತನ್ನ ಮನಸ್ಸನ್ನು ಹೀಗೆ ಸಮಾಧಾನದಿಂದ ಇಟ್ಟು ಕೊಳ್ಳುವ ರೀತಿಯನ್ನು ಗುರುವಿನ ಉಪದೇಶದಿಂದ ಪಡೆದು, ॥೧॥

ಮಹದಹಂಕಾರಾದಿ ಮಾಯೆಯೆಂಬ ತೆರೆಯನ್ನು ತೆಗೆದುಹಾಕಿ, ಮಾಯೆಗೆ ಸಿಕ್ಕದವನಾಗಿ, ಕೇವಲ ಜ್ಞಾನಸ್ವರೂಪನಾಗಿ, ಅಖಂಡಕಾರನಾಗಿ, ಅದ್ವಿತೀಯನಾಗಿ, ಪರಮೇಶ್ವರನನ್ನು ಕಂಡುಹಿಡಿಯಲು ಆತನ ಧ್ಯಾನದ ಅಧ್ಯಾನಿಷ್ಟವಾದ ವಸ್ತುವನ್ನು ಮರೆಯದಂತೆ ಧರಿಸಿಕೊಂಡಿರುವುದು. ಆ ಧ್ಯಾನದ ಬಲದಿಂದ ನೀನೇ ಆ ಚೈತನ್ಯಸ್ವರೂಪವೆಂಬ ಜ್ಞಾನವನ್ನು ಹುಟ್ಟಿಸಿ, ಭ್ರಮರಕೀಟನ್ಯಾಯದಂತೆ ಅಭೇದಜ್ಞಾನದಿಂದ ಸಾರೂಪ್ಯವನ್ನು ಹೊಂದುವ ಉಪಾಯವನ್ನು ತಿಳಿದು ಕೊಂಡಿರುವದರಿಂದಲೇ ಮಂತ್ರವೆಂದು ಹೇಳಿಸಿಕೊಳ್ಳುವ ಮಹಾಮಹಿಮೆಯುಳ್ಳ ಮಂತ್ರಗಳನ್ನು ಜಪಿಸಿ ॥೨॥

ಹವಳದಕಾಂತಿ, ಬಳ್ಳಿಮಿಂಚಿನಹೊಳಪು, ಚಿನ್ನದಗೆರೆಯ ಪ್ರಕಾಶ, ರತ್ನಮಯವಾದ ದೀಪದ ಬೆಳಕು, ನಕ್ಷತ್ರಗಳ ಪ್ರಭೆ, ಸೂರ್ಯ, ಚಂದ್ರ, ಅಗ್ನಿ, ಇವುಗಳ ಕಳೆ, ಇವೆಲ್ಲವೂ, ಮಿಶ್ರವಾದ ಬಣ್ಣವುಳ್ಳದ್ದಾಗಿ ಹೊಳೆಯು ತ್ತಿರುವ ಜ್ಯೋತಿರೂಪವಾದ ಬಿಂದುವನ್ನು ಈಶ್ವರನಿರೀಕ್ಷಣಸ್ಥಾನವಾದ ತ್ರಿಕೋಣದಲ್ಲಿ ನೋಡಿ ॥೩॥

ಸಮುದ್ರ, ನದಿ, ಭೇರಿ, ಗುಡುಗು, ಮೃದಂಗ, ಕಹಳೆ, ಶಂಖ, ಘಂಟೆ, ವೀಣೆ. ಕಿರಿಗೆಜ್ಜೆ, ಭ್ರಮರ ಮೊದಲಾದವುಗಳ ಝೇಂಕಾರವೆ ಮೊದಲಾದ ಎಲ್ಲಾ ಜಾತಿಯ ಶಬ್ದಗಳನ್ನು ಸೇರಿಸಿ ಹುಟ್ಟಿದ ಶಬ್ದದಂತಿರುವ ನಾದರೂಪದ ಪರಬ್ರಹ್ಮಸ್ವರೂಪವನ್ನು ಕೇಳಿ ॥೪॥

ಬೆಳಕು, ಕತ್ತಲೆ, ಸೂರ್ಯ, ಚಂದ್ರ, ನಕ್ಷತ್ರಗಳು, ಪ್ರಪಂಚ ಇವೆಲ್ಲವೂ ಪ್ರಲಯದಿಂದ ನಾಶವಾಗಲು ಶೂನ್ಯವಾದ, ವಿಸ್ತಾರವಾದ ಆಕಾಶವನ್ನು ಮೀರಿ ನಿಶ್ಚಲನಾಗಿಯೂ ಸಚ್ಚಿದಾನಂದಸ್ವರೂಪವಾಗಿಯೂ ಉಳಿದದ್ದನ್ನೇ ಪರಮಾತ್ಮನೆಂದು ತಿಳಿದು ಅತನನ್ನು ನೆನೆದು. ॥೫॥

೭

ಈಶ್ವರನೇ, ನಿನ್ನ ಧ್ಯಾನವು ಒಂದು ನಿಮಿಷ ಕಾಲವಾದರೂ ಮನಸ್ಸಿನಲ್ಲಿ ನಿಂತರೆ ಸಿದ್ಧಿಸದ ಇಷ್ಟಾರ್ಥಗಳಿನ್ನಿರುವವೇ? ॥ಪ॥

ರೇಚಕ, ಪೂರಕ, ಕುಂಭಕಗಳೆಂಬ ಮೂರು ವಾಯು ನಾಳಗಳು ಕೂಡಿರುವ ಮಧ್ಯಸ್ಥಾನದಲ್ಲಿ ಮುಳುಗಿ ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕಗಳೆಂಬ ಮೂರು ಕೊಳೆಗಳನ್ನು ಹೋಗಲಾಡಿಸಿ ಸತ್ವ, ರಜಸ್ಸು, ತಮಸ್ಸು, ಎಂಬ ಮೂರು ಗುಣಗಳನ್ನು ಅತಿಕ್ರಮಿಸಿ ಕಾಣಬರುವ ತೇಜಸ್ಸಿನಲ್ಲಿ ಮನಸ್ಸು, ಉಸಿರು, ದೃಷ್ಟಿ ಈ ಮೂರು ಏರಕಹೊಯ್ದ ಪ್ರತಿಮೆಯಂತೆ ನಿಶ್ಚಲವಾಗಿ ನಿಂತು, ॥೧॥

ನಿಶ್ವಾಸ, ಉಛ್ವಾಸ, ವಾಯುಗಳಾಡುವ ರೀತಿಯಲ್ಲಿ ತೋರಿಬರುವ "ಸೋಹಂ" ಎಂಬೆರಡು ಅಕ್ಷರಗಳಲ್ಲಿರುವ ವ್ಯಂಜನಗಳನ್ನು ತೆಗೆದುಬಿಡುವದರಿಂದ ಏಕಾಕ್ಷರವಾಗಿ ನಿಲ್ಲುವ ಓಂ ಎಂಬ ಪ್ರಣವ ಶಬ್ದವನ್ನು ಹತ್ತುಬಗೆಯಾಗಿ ಕೇಳುವದರಿಂದ ಉಂಟಾಗುವ ಸುಖದಿಂದ ಇತರ ಪದಾರ್ಥಜ್ಞಾನವಿಲ್ಲದೆ ಎಲ್ಲವನ್ನು ಮರೆತು ॥೨॥

ಶಬ್ದದ್ವಾರ, ಗಂಧದ್ವಾರ, ರೂಪದ್ವಾರ, ರಸದ್ವಾರಗಳೆಂಬ ನಾಲ್ಕು ದ್ವಾರಗಳೂ ಸೇರಿರುವ ಮಧ್ಯಭಾಗದಲ್ಲಿ ಮಹಾತೇಜೋರೂಪದಿಂದ ಕೂಡಿದ ಸಚ್ಚಿದಾನಂದರೂಪನಾದ ಪರಮೇಶ್ವರನನ್ನು ಕಂಡು ಇತರ ಪದಾರ್ಥಗಳನ್ನು ಮರೆತು ಐಕ್ಯಭಾವದಿಂದ ಪುರುಷಾರ್ಥವಾದರೂ ಇರುವದು ॥೩॥

೮

ಎಲೆ ಜ್ಞಾನಶಕ್ತಿಯೇ, ನನ್ನ ಮನಸ್ಸೆಂಬ ಗಿಳಿಯನ್ನು ಬಲವಂತವಾಗಿ ಹಿಡಿದುಕೊಂಡು ಪ್ರೀತಿಯಿಂದ ಕಾಪಾಡುತ್ತ ಮುದ್ದು ಮಾತುಗಳನ್ನು ಕಲಿಸು ॥ಪ॥ ಆರು ಗವಾಕ್ಷಗಳುಳ್ಳ. ಹುಬ್ಬಿನ ಮಧ್ಯವೆಂಬ ರತ್ನಖಚಿತವಾದ ಪಂಜರದಲ್ಲಿ ಮೂರು ಅಕ್ಷರಗಳೆಂಬ ಕೋಲಿನ ಮೇಲಕ್ಕೆ ಹತ್ತಿಸಿ, ಹಾರಿಹೋಗದ ಹಾಗೆ ಕಾಲಿಗೆ ಜೀವವೆಂಬ ಸರಪಣಿಯನ್ನು ಕಟ್ಟಿ ॥೧॥ ಕಣ್ಣೆಂಬ ಬಟ್ಟಲಿನಲ್ಲಿರುವ ಜ್ಞಾನಸ್ವರೂಪವೆಂಬ ರುಚಿಕರವಾದ ಹಾಲಿನ ಕೆನೆಯನ್ನು ತಿನ್ನಿಸಿ, ನಾದಸ್ವರೂಪವೆಂಬ ಹಣ್ಣನ್ನು ಕೊಟ್ಟು, ಭಯಂಕರವಾದ ಅರಿಷಡ್ವರ್ಗವೆಂಬ ಬೆಕ್ಕನ್ನು ಓಡಿಸಿ, ಭಾವವೆಂಬ ಕೃಪೆಯಿಂದ ಮೈದಡವಿ ॥೨॥ ಹೆಸರು ಮೊದಲಾದವುಗಳಲ್ಲಿದ್ದ ಅಪಾರನಾದ ಸರ್ವದಾ ಆನಂದ ಸ್ವರೂಪನಾದ, ಕೇವಲ ಜ್ಞಾನಸ್ವರೂಪನಾದ ಹಾಗೂ ಅದ್ವಿತೀಯನಾದ ಪರಮೇಶ್ವರನೇ ಜೀವಾತ್ಮನಾದ ನೀನು ಎಂದು ಪಾಠಮಾಡಿಸಿ ॥೩॥

೯

ಎಲೌ ಜ್ಞಾನದೇವತೆಯೇ, ನನ್ನಲ್ಲಿಯೇ ನನಗೆ ಆ ವಿಚಿತ್ರವು ತೋರಿ ವಿಸ್ಮಯವುಂಟಾಗಿ ಸುಮ್ಮನೆ ಬೆರಗಾದೆನು. ॥ಪ॥ ವಿಷಯ ಮತ್ತು ಕರಣಗಳ ಬಾಧೆಯನ್ನು ಪರಿಹಾರಮಾಡಿಕೊಂಡು ಕಣ್ಣಿನ ದೃಷ್ಟಿಯನ್ನು ಹೊರಗೆ ಇಡದೆ ಒಳಗೆ ಇಟ್ಟು ಹಣೆಯಲ್ಲಿ ನಿಲ್ಲಿಸಿರಲು ಅಪಾನದಿಂದ ವಾಯು ಮೇಲಕ್ಕೆ ಹತ್ತಿ ಕುಂಭಕದಲ್ಲಿ ನಿಶ್ಚಯವಾಗಿ ನಿಲ್ಲಲು ಆ ಮನಸ್ಸು ಪ್ರಕಾಶಮಾನವಾಗಿ ಚಿಗುರಿತು, ॥೧॥

ಹಸಿವಿನಿಂದ ಕೂಡಿದ ಭ್ರಮರವು ಅರೆಬಿರಿದ ರಸವತ್ತಾದ ಹೂವನ್ನು ತಪ್ಪದೆ ಝೇಂಕಾರ ಶಬ್ದದೊಡನೆ ಸೇರುವಂತೆ ಜೀವಾತ್ಮನಲ್ಲಿ ಶಿವಪಂಚಾಕ್ಷರಿಯ ನಾದವು ಶೋಭಿಸಲು ಜೀವನಿಗೆ ಮಹಾಸಂತೋಷದಿಂದ ಕಳೆಯು ತುಂಬಿಕೊಂಡಿತು. ॥೨॥

ಎಲ್ಲಾ ವ್ಯಾಪಾರಗಳೂ ನಿಂತು, ಇಂದ್ರಿಯಗಳು ಬಹಿರ್ಮುಖವಾಗದೆ, ಕೇವಲ ಜ್ಯೋತಿರೂಪವಾದ ಅಮೃತಸಮುದ್ರದಲ್ಲಿ ಮುಳುಗಿ ಎಚ್ಚರವಿಲ್ಲದೆ

ದಿವ್ಯ ಸುಖವನ್ನು ಸೂರೆಗೊಂಡು, ಈಶ್ವರನಲ್ಲಿ ಸೇರಿ ನೆನಪು ಮರೆಯದೆ ನಾನು ಬೆರಗಾಗಿ ಕೇವಲ ಪರಮೇಶ್ವರ ಸ್ವರೂಪನಾಗಿ ನಿಂತೆನು. ಆದ್ದರಿಂದ ಏನು ಹೇಳಲಿ ಈ ವಿಚಿತ್ರವನ್ನು ॥೩॥

೧೦

ಎಲೈ ಓಂಕಾರರೂಪವಾದ ವಿಚಿತ್ರವಾದ ಕೋಗಿಲೆಯೇ ! ಪುಣ್ಯ, ಪಾಪ, ಕರ್ಮವೆಂಬ ಮಾಗಿಯು ಕಳೆದುಹೋಯಿತು. ಈಗ ನನಗೆ ಸದ್ಗುರುವಿನ ಕೃಪೆಯೆಂಬ ವಸಂತಕಾಲವು ಬಂತು ; ಇನ್ನು ನಿನ್ನ ನಾದವೆಂಬ ಧ್ವನಿಯನ್ನು ತೋರಿಸು. ॥ಪ॥ ಎರಡು, ನಾಲ್ಕು, ಆರು, ಹತ್ತು, ಹನ್ನೆರಡು, ಹದಿನಾರು ದಳಗಳುಳ್ಳ ಕಮಲಗಳಿಂದ ಕೂಡಿದ ಆರು ಚಕ್ರಗಳೆಂಬ ತಿಳಿಗೊಳಗಳ ಸಮೀಪದಲ್ಲಿ ಧ್ವನಿಮಾಡು. ಎಲೆ ಕೋಗಿಲೆಯೆ ಸರಸ್ವತಿ, ಗಂಗೆ, ಯಮುನೆ ಎಂಬ ನದಿಗಳ ಸಂಗಮಸ್ಥಳದಲ್ಲಿ ಬೆಳೆದಿರುವ ಬಿಂದುವೆಂಬ ಮಾಧುರ್ಯವುಳ್ಳ ಮಾವಿನಮರದ ಮೇಲೆ (ಅಂದರೆ ಬಿಂದುವೆಂಬ ಪರಮಾತ್ಮವೆಂಬುದು ಮಾವಿನ ಮರ) ವಾಸವಾಗಿರು ॥೧॥

ಸಮುದ್ರ, ಗುಡುಗು, ನದಿ, ದೇವದುಂದುಭಿ, ಘಂಟೆ, ಶಂಖ, ಮೃದಂಗ, ಭ್ರಮರ. ವೀಣೆ. ಸಣ್ಣಗೆಜ್ಜೆಗಳು ಇವುಗಳಂತೆ ಧ್ವನಿಯುಳ್ಳದ್ದಾಗಿ. ॥೨॥

ಎಲೆ ಪ್ರಣವಸ್ವರೂಪನಾದ ಕೋಗಿಲೆಯೇ ! ನಿನ್ನ ಧ್ವನಿಯನ್ನು ಕೇಳಿದ ಮಾತ್ರಕ್ಕೆ ಯೋಗಿಗಳಿಗೆ ಅಣಿಮಾದಿ ಅಷ್ಟಸಿದ್ಧಿಗಳೂ, ತರ್ಕಮಾಡುವರಿಗೆ ಆಗಮಗಳು, ಇಂದ್ರಿಯಸುಖಾಪೇಕ್ಷೆಯುಳ್ಳವರಿಗೆ ಇಂದ್ರಿಯಸುಖಗಳು ಕೈಸೇರುವವು. ಎಲೈ ಕೋಗಿಲೆಯೇ, ನೀನು ಕೂಗಿ ಕರೆದು ಪರಮಾತ್ಮನನ್ನು ತೋರಿರುವೆ. ಕಾರಣ ನಿನಗಿಂತ ಪರಮ ಸುಖರು ಬೇರಿಲ್ಲ. ॥೩॥

೧೧

ಎಲೈ ಜ್ಞಾನಶಕ್ತಿಯೇ ! ಯೋಗಿಗಳು ಆತ್ಮಾನಂದದಲ್ಲಿ ಬಾರಿಸುವ ವೀಣೆಯು ಬಗೆಬಗೆಯ ರಾಗಗಳ ಸ್ವಾರಸ್ಯವಾದ ಪ್ರವಾಹವುಳ್ಳದ್ದು

ನೋಡು ॥೫॥ ದೇಹವೆಂಬ ದಂಡಿಗೆ, ಕಣ್ಣುಗಳೆಂಬ ಎರಡು ಕಾಯಿಗಳನ್ನು ಭದ್ರವಾಗಿ ಕೀಲಿಸಿ ಅದಕ್ಕೆ ಸೊಗಸಾದ ಆರು ಚಕ್ರಗಳೆಂಬ ಆರು ಮೆಟ್ಟಲುಗಳನ್ನು ಮೇಳಮಾಡಿ ॥೧॥ ಏಳು ನಾಡಿಗಳೆಂಬ ಏಳು ತಂತಿಗಳನ್ನು ಜೋಡಿಸಿ ನಿರ್ಮಲವಾದ ಮನಸ್ಸು, ಪ್ರಾಣ, ಇಂದ್ರಿಯಗಳೆಂಬ ಕಿವಿಗಳಿಂದ ತಿರುಗಿಸಿ ಬಿಗಿಗೊಳಿಸಿ ಮೂಲಮಂತ್ರದ ತಾರನಾದವೆಂಬ ಶ್ರುತಿಯನ್ನು ಮಾಡಿಕೊಂಡು ॥೨॥ ಶಂಕರಾಭರಣವೆಂಬ ಸರ್ಪಸುಖವನ್ನು ಮೇಲಕ್ಕೆ ಮಾಡಿ, ಅಷ್ಟಾಂಗಯೋಗ ಅಂತಃಕರಣ–ಚತುಷ್ಟಯಗಳೆಂಬ ಬೆರಲುಗಳಿಂದ ಬಾರಿಸಿ, ಶ್ರೇಷ್ಠವಾದ ನಾದವೆಂಬ ಸಂಗೀತವನ್ನು ಮೆಚ್ಚಿ ಪರಮೇಶ್ವರನು ಆಶ್ಚರ್ಯಕರನಾದವನೆಂದು ಮುಕ್ತಿ ಮಾರ್ಗವನ್ನು ಕೇಳಿಕೊಳ್ಳುವಂತೆ ಮಾಡುವ. ॥೩॥

ಇತಿ ಲಯಯೋಗ ಸಮಾಪ್ತ

ಹಠಯೋಗ

೧೨

ಸಗುಣಾಷ್ಟಾಂಗಃ— ಮುಕ್ತಿಯನ್ನು ಅಪೇಕ್ಷಿಸುವ ಸಜ್ಜನರು ಎಂಟು ಬಗೆಯಾದ ಯೋಗಗಳನ್ನು ಆಗಮಶಾಸ್ತ್ರದ ಆಧಾರದಿಂದ ತಿಳಿಯಬೇಕು. ॥೫॥ ಯಮವೆಂಬುದು ಅಹಿಂಸೆ ಮೊದಲಾದ ಹತ್ತು ಬಗೆಗಳುಳ್ಳದು, ನಿಯಮವೆಂಬುದು ತಪಸ್ಸು ಮೊದಲಾದ ಹತ್ತು ಬಗೆಗಳುಳ್ಳದು ಆಸನವೆಂಬುದು ಮಹೋತ್ಪಲ ಮೊದಲಾದ ಎಂಭತ್ತು ನಾಲ್ಕು ಬಗೆಯಾಗುಳ್ಳದು, ಪ್ರಾಣಾಯಾಮವು ರೇಚಕ ಮೊದಲಾಗಿ ಏಳು ಬಗೆಯುಳ್ಳದ್ದು. ॥೧॥ ಚಪಲವಾದ ಇಂದ್ರಿಯಗಳನ್ನು ಚಲಿಸದಂತೆ ನಿರೋಧಿಸುವುದೇ ಪ್ರತ್ಯಾಹಾರ. ಈಶ್ವರನ ಪಾದಕಮಲವನ್ನು ನೆನೆಯುತ್ತಿರುವುದೇ ಧ್ಯಾನ. ಆತ್ಮಸ್ವರೂಪದಲ್ಲಿ ಅಚಲವಾಗಿ ಭಾವ ನೆಲೆಗೊಳ್ಳುವುದೇ ಶ್ರೇಷ್ಠವಾದ ಸಮಾಧಿ ಎಂದೆನಿಸುವುದು ॥೨॥ ಯಮ, ನಿಯಮ, ಆಸನ, ಪ್ರಾಣಾಯಾಮಗಳೆಂಬ ನಾಲ್ಕು ಬಾಹ್ಯಾಂಗವೆಂದು ಅನಿಸಿಕೊಳ್ಳುವವು. ಇವು ಕಾಮ, ಕ್ರೋಧ, ರೋಗ ಕಲ್ಮಷಗಳನ್ನು ಹೋಗಲಾಡಿಸುವವು. ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿಗಳು ಈ ನಾಲ್ಕು ಅಂತರಂಗದ ಅಂಗಗಳು. ಇವು ವಿಷಯ,

ಅಜ್ಞಾನ, ಬುದ್ಧಿಹೀನತೆ, ಭ್ರಾಂತಿ ಇವುಗಳನ್ನು ಹೋಗಲಾಡಿಸುವವು. ಹೀಗೆ ಆಗುಮಾಡಿ ಈಶ್ವರನ ಪಾದಸಂಯೋಗ ಸುಖವನ್ನುಂಟು ಮಾಡುವವು.

೧೩

ನಿರ್ಗುಣಾಷ್ಟಾಂಗ

ಕ್ರಮವಾಗಿ ಗುಣರಹಿತವಾದ ಅಷ್ಟಾಂಗ ಯೋಗಗಳನ್ನು ತಿಳಿದ ಯೋಗಿಗೆ ಆನಂದ ರೂಪವಾದ ಮುಕ್ತಿಯಾಗುವುದು. ॥ಪ॥ ದೇಹ, ಇಂದ್ರಿಯಗಳು, ಅಂತಃಕರಣ ಇವುಗಳಲ್ಲಿ ಅಭಿಮಾನವನ್ನು ಬಿಡುವುದು ಯಮ ವೆನಿಸುವುದು, ಪರಮಾತ್ಮ ಸ್ವರೂಪದಲ್ಲಿ ನಿತ್ಯವಾದ ಪ್ರೀತಿಯನ್ನಿಟ್ಟು ಕೊಂಡಿರುವುದು ನಿಯಮವು, ಸ್ತ್ರೀ ಮೊದಲಾದ ಭೋಗಗಳ ವಿಷಯದಲ್ಲಿ ಆಸಕ್ತಿ ಇಲ್ಲದಿರುವುದೇ ಆಸನವು, ಹೊರಗೆ ಬಗೆಬಗೆಯ ವಸ್ತುಗಳಿಂದ ಕೂಡಿ ರುವಂತೆ ಕಾಣುವ ಜಗತ್ತನ್ನು ಸ್ವಪ್ನದಂತೆ ಸುಳ್ಳೆಂದು ಭಾವಿಸುವುದೇ ಪ್ರಾಣಾ ಯಾಮವು ॥೧॥ ಮನಸ್ಸನ್ನು ದೇಹದೊಳಕ್ಕೆ ಎಳೆಯುವುದೇ ಪ್ರತ್ಯಾ ಹಾರವು, ಆ ಮನಸ್ಸನ್ನು ಚೈತನ್ಯರೂಪ ಪರಮಾತ್ಮನಲ್ಲಿರಿಸುವುದೇ ಧಾರಣ. ನಾನೇ ಆ ಶುದ್ಧ ಪರಮಾತ್ಮ ಚೈತನ್ಯವೆಂದು ತಿಳಿಯುವುದೇ ಧ್ಯಾನ. ಆ ಧ್ಯಾನವನ್ನು ಮರೆಯದಿರುವ ಬುದ್ಧಿಯೇ ಸಮಾಧಿಯು ॥ ೨॥ ಮೇಲೆ ಹೇಳಿದ ಅಂಗಗಳಲ್ಲಿ ಮೊದಲಿನ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರಗಳೆಂಬ ಐದು ಅಂಗಗಳಿಂದ ಅರಿಷಡ್ವರ್ಗ ಮೊದಲಾದ ವಿಘ್ನ ಗಳು ನಾಶವಾದ, ಪರಿಶುದ್ಧವಾದ ಮನಸ್ಸನ್ನು ಉಳಿದ ಮೂರಂಗಗಳ ಸಹಾಯದಿಂದ ಪರಶಿವನಲ್ಲಿ ಸೇರಿಸಿದರೆ ಅದೇ ಯೋಗವೆನಿಸುವುದು. ॥೩॥

೧೪

ಸಿದ್ಧಾಸನ ಮೊದಲಾದ ಎಂಭತ್ತು ನಾಲ್ಕು ಆಸನಗಳಿಂದ ನಿಶ್ಚಲನಾಗಿ ಮನಸ್ಸು, ಪ್ರಾಣ, ದೃಷ್ಟಿ ಇವುಗಳನ್ನು ಮೂಗಿನ ತುದಿಯಲ್ಲಿ ನಿಲ್ಲಿಸುವುದೇ ಮುಕ್ತಿಯೆನಿಸುವುದು. ॥ಪ॥ ಎಡದ ಹಿಮ್ಮಡದಿಂದ ನೆಲವನ್ನು ಕಚ್ಚುವಂತೆ ಭದ್ರವಾಗಿ ತುಳಿದುಕೊಂಡ, ಬಲದ ಹಿಮ್ಮಡವನ್ನು ಶಿಶ್ನ ಸ್ಥಾನದಲ್ಲಿಟ್ಟು

ಕೊಂಡು ನೇರವಾದ ದೇಹವುಳ್ಳವನಾಗಿ ನಿಲ್ಲುವುದೇ ಸಿದ್ಧಾಸನವು. ॥೧॥ ತೊಡೆ ಮತ್ತು ಕಿರುದೊಡೆ ಇವುಗಳ ಮಧ್ಯದಲ್ಲಿ ಎರಡುಪಾದಗಳೂ ಅಡಗುವಂತೆ ಮಾಡಿ, ದೇಹವನ್ನು ನೆಟ್ಟಗೆ ನಿಲ್ಲಿಸಿ ಕೂತುಕೊಳ್ಳುವುದೇ ಸ್ವಸ್ತಿಕಾಸನವು. ॥2॥ ಎಡದ ಪಾದವನ್ನು ಬಲದ ತೊಡೆಯ ಮೇಲಕ್ಕೂ ಬಲದ ಪಾದವನ್ನು ಎಡದ ತೊಡೆಯ ಮೇಲಕ್ಕೂ ಹೇರಿ, ನೇರವಾದ ದೇಹವುಳ್ಳವನಾಗಿ ಕೂತುಕೊಳ್ಳುವುದೇ ಪದ್ಮಾಸನವು, ॥೩॥

ಎಡದ ಹಿಮ್ಮಡವನ್ನು ನೆಲದಲ್ಲಿಟ್ಟು, ಬಲದ ಹಿಮ್ಮಡವನ್ನು ಎಡದ ತೊಡೆಯ ಮೇಲೆ ಕೂಡಿಸಿಕೊಂಡು ದೇಹವನ್ನು ನೆಟ್ಟಗೆ ನಿಲ್ಲಿಸಿ ಕೂತುಕೊಂಡರೆ ಅದೇ ವೀರಾಸನವು. ॥೪॥

ಕತ್ತನ್ನು ಕುಗ್ಗಿಸಿ, ಗದ್ದವನ್ನು ಹೃದಯ ಮಧ್ಯದಲ್ಲಿಟ್ಟುಕೊಂಡು ನಿಶ್ಚಲವಾಗಿ ನಿಂತರೆ ಅದು ಜಾಲಂಧರಬಂಧವೆನಿಸುವುದು. ಅದರಿಂದ ಉಂಟಾದ ಜ್ಞಾನಾಮೃತವೇ ಪರಮೇಶ್ವರ ರೂಪವಾದದ್ದು. ॥೫॥

೧೫

ಶಿವನೇ ನನ್ನನ್ನು ವಿಷಯಸುಖಾಭಿಲಾಷೆಯುಳ್ಳವನನ್ನಾಗಿ ಮಾಡದೆ ಯೋಗಿಯಾಗುವಂತೆ ಮಾಡು. ॥ಪ॥ ಗಂಧದ್ವಾರ ಮೊದಲಾದ ನಾಲ್ಕು ಬಾಗಿಲುಗಳ ಮಧ್ಯದಲ್ಲಿರುವ ಪ್ರಣವಧ್ವನಿಯನ್ನೇ ಬೋಧಿಸಿ ಯುವತಿಯರ ಚತುರತರ ಮಾತುಗಳನ್ನು ಆತುರನಾಗಿ ಕೇಳದಂತೆ ಮನವನ್ನು ಸಿದ್ಧಗೊಳಿಸು. ॥೧॥

ಆರಂಭದಲ್ಲಿಯೇ ಯೋಗಾಸನ, ಮುದ್ರೆಗಳನ್ನು ಕಲಿಸಿಕೊಟ್ಟು ಸುಂದರಿಯರ ಆಲಿಂಗನವನ್ನು ಮಾಡುವ ನಾನಾಬಗೆಯ ಕಲೆಗಳಲ್ಲಿ ಆಸಕ್ತಿಯಿಲ್ಲದಂತೆ ಮಾಡು. ॥೨॥

ಇಡಾ, ಪಿಂಗಳಾ, ಸುಷುಮ್ನಾನಾಡಿಗಳ ಸಂಗಮಸ್ಥಳದಲ್ಲಿ ಪ್ರಕಾಶಿಸುವ ಅಖಂಡ ಜ್ಯೋತಿ ಸ್ವರೂಪವನ್ನು ತೋರಿಸಿ ಕಮಲನಯನೆಯರ ರೂಪವನ್ನು ಮೋಹಿಸಿ ನೋಡುವ ಯೋಚನೆ ಇಲ್ಲದಂತೆ ಮಾಡು, ॥೩॥

ಸುಷುಮ್ನಾ ನಾಡಿಯು ತುದಿಯಲ್ಲಿರುವ ಬ್ರಹ್ಮರಂಧ್ರದಲ್ಲಿ ಶಾಶ್ವತ ಸುಖದ ಪರಿಣಾಮವುಳ್ಳ ಚಿದಾನಂದವೆಂಬ ಅಮೃತರಸವನ್ನು ಕುಡಿಸಿ ಕೋಮಲಾಂಗಿಯರ ಅಧರಾಮೃತಪಾದನ ಸಂಭ್ರಮವನ್ನು ತಪ್ಪಿಸು, ॥೪॥

ಅನಾಹತ ಮೊದಲಾದ ಒಂಭತ್ತು ಚಕ್ರಗಳೆಂಬ ಕಮಲಗಳು ಹೃದಯದಲ್ಲಿ ಬಿರಿಯುತ್ತಿರಲು ರೇಚಕ ಪೂರಕ ಸ್ವರೂಪದಿಂದೆ ಬೀಸುತ್ತಿರುವ ವಾಯುವನ್ನು ಮೂಸಿ ನೋಡಿಸಿ ಯುವತಿಯ ನಿಶ್ವಾಸಸುಗಂಧವನ್ನು ವಾಸಿಸುವಲ್ಲಿ ರುಚಿಯನ್ನುಂಟು ಮಾಡದಿರು, ॥೫॥

೧೬

ಅಜ್ಞಾನರೂಪವಾದ ಆಣವಾದಿ ಮೂರು ಮಲಗಳೆಂಬ ಹಗ್ಗಗಳಿಂದ ಬಿಗಿಯಲ್ಪಡದಿದ್ದ ನಿನಗೆ ನಿದ್ರಾವಸ್ಥೆಯನ್ನು ಕಲ್ಪಿಸಿದ ನನ್ನ ವಿಸ್ಮೃತಿಯನ್ನು ಹೋಗಲಾಡಿಸಲು ಉಂಟಾಗಿದ್ದ ಪರಾಕ್ರಮವೆ ಚಿತ್ಸೂರ್ಯನ ಉದಯದ ಸಮಯವಾಗುವಂತೆ ದೇವನೇ ನೀನು ಬೇಗ ಏಳುವನಾಗು.

ಶ್ರೇಷ್ಠವಾದ ಪ್ರಣವಧ್ವನಿಯೆಂಬ ಕೋಳಿ ಕೂಗುತಿದೆ. ಬಿಂದುವೆಂಬ ಪೂರ್ವದಿಕ್ಕಿನ ಕೆಂಪುಬಣ್ಣವು ಹರಡುತ್ತಲಿದೆ, ಒಹಳ ಕಾಲದಿಂದ ಮುಚ್ಚಿಕೊಂಡಿರ್ದ ಅಜ್ಞಾನವೆಂಬ ಕತ್ತಲೆ ಹೆದರಿಕೊಂಡು ಓಡಿಹೋಗುತ್ತಿದೆ. ಊರ್ಧ್ವ ಕುಂಡಲಿಯೆಂಬ ಸೂರ್ಯನು ಹುಟ್ಟುತ್ತಿದ್ದಾನೆ. ಪೂಜಾವಿಧಾನವೆಂಬ ಪಕ್ಷಿಗಳು ಸೇರಿ ಕೂಗಿಕೊಳ್ಳುತ್ತಲಿವೆ. ಶುದ್ಧವಾದ ಮನಸ್ಸೆಂಬ ಕಮಲಗಳು ಬಿರಿಯುತ್ತಿವೆ. ಪರಶಿವನೆ! ನೀನು ಇನ್ನು ತಡಮಾಡದೆ ಜಾಗರನಾಗು. ॥೧॥

ಮನೋವಿಕಾರಗಳೆಂಬ ಕನ್ನೈದಿಲೆಗಳು ಬಾಡಿಹೋಗುತ್ತಿವೆ. ಮಮಕಾರವೆಂಬ ಕಳ್ಳರ ಬಾಧೆಯು ನಾಶವಾಗುತ್ತಿದೆ. ಅಷ್ಟಮದಗಳೆಂಬ ರಾಕ್ಷಸರ ಸಂಚಾರವು ನಿಂತುಹೋಗಿದೆ, ಧ್ವನಿಮಾಡುತ್ತಿರುವ ಜ್ಞಾನೇಂದ್ರಿಯಪಂಚಕ ಕರ್ಮೇಂದ್ರಿಯ ಪಂಚಕಗಳೆಂಬ ಚಕೋರಪಕ್ಷಿಗಳು ವ್ಯಥೆಯನ್ನು ಹೊಂದಿವೆ. ಪುಣ್ಯವೆಂಬ ಜನಗಳೆಲ್ಲಾ ನಿತ್ಯಕರ್ಮವನ್ನು ಮಾಡಿಕೊಳ್ಳುವದಕ್ಕೆ ಅಪೇಕ್ಷಿಸುತ್ತಿವೆ. ಮಾಯಾ ಸಂಬಂಧವಾದ ತೆರೆಯು ಮುಚ್ಚಲ್ಪಡದಿರುವ ಪರಶಿವನೇ ನೀನು ಏಳು, ॥೨॥

ಪಾಪಶಕ್ತಿಯೆಂಬ ಗೂಗೆಯು ದಿಗ್ಭ್ರಮೆಯನ್ನು ಹೊಂದುತ್ತಿದೆ. ಜನನ ಮರಣ ಪ್ರವಾಹ ರೂಪವಾದ ಸಂಸಾರವೆಂಬ ಸ್ವಪ್ನವು ಕಳೆಯುತ್ತಿದೆ. ಪರಿವಿಡಿದು ಪ್ರಾರಬ್ಧವೆಂಬ ವಿಷಯಾಳಿ ಗೋಚರಿಸುತಿದೆ ಮತಿದೃಷ್ಟಿಗೆ. ಓಡು ತ್ತಿರುವ ಗಂಗಾ ಯಮುನೆಗಳೆಂಬ ಚಕ್ರವಾಕಗಳ ಜೋಡಿಯು ಸಂತೋಷದಿಂದ ಕೂಡುತ್ತಿದೆ. ಸಂಕಲ್ಪವೆಂಬ ನಕ್ಷತ್ರಗಳು ಅದೃಶ್ಯವಾಗುತ್ತಿವೆ. ಅಹಂಕಾರ ವೆಂಬ ಚಂದ್ರನು ಮರೆಯಾಗುತ್ತಿದ್ದಾನೆ. ಹೇ ಪರಶಿವನೇ, ವರಗಳನ್ನು ದಯಪಾಲಿಸುವ ನೀನೇಳು. ॥೩॥

ಲೆಕ್ಕವಿಲ್ಲದ ಮೋಹನ ಮೊದಲಾದ ಆರುಕರಣಗಳು, ಷಣ್ಮುಖೀ ಶಾಂಭವೀ ಮೊದಲಾದ ಮುದ್ರೆಗಳು ಎಂಬ ಸೇವಕರು ಯೋಗವೆಂಬ ಷೋಡ ಶೋಪಚಾರ ಪೂಜೆಯನ್ನು ಮಾಡುತ್ತಿರಲು, ಗಂಧದ್ವಾರಾದಿಗಳ ಮಧ್ಯದಲ್ಲಿ ರುವ ಗದ್ದುಗೆಯಲ್ಲಿ ಕೂತು ಸ್ವೀಕರಿಸುತ್ತ ಲಕ್ಷ್ಯಗಳೆಂಬ ದೊರೆಗಳು ರಾಜೋ ಪಚಾರವೆಂಬ ಸಭೆಯಲ್ಲಿ ಕೂತಿರಲು ಮೇಲ್ಕವಿದ ದಶವಿಘ್ನಗಳೆಂಬ ಶತ್ರುಗಳು ಓಡಿಹೋಗುತ್ತಿರುವರು. ನಿತ್ಯಸ್ವರೂಪನಾದ ಭಗವಂತನೇ ನೀನು ಏಳು. ॥೪॥ ಶಿವಾನುಭವವೆಂಬ ಪರಿಚಾರಕರು ಬಂದು ಮಂತ್ರಗಳೆಂಬ ವಿಜ್ಞಾಪನೆಯನ್ನು ಅರ್ಪಿಸಲು ಅವನ್ನು ತಿರಸ್ಕರಿಸದೆ ಚನ್ನಾಗಿ ಕೇಳಿ ಅಲಕ್ಷ್ಯಮಾಡದೆ ನೋಡಿ, ಸಮೀಪದಲ್ಲಿದ್ದ ನನ್ನನ್ನು ಕುರಿತು "ಎಲೈ ಮಗನೆ ! ಹೆದರಬೇಡ ನಿನಗೆ ಸಂಸಾರದುಃಖ ಪೀಡೆಯು ತೀರಿತು." ಎಂದು ಅಭಯಪ್ರದಾನಮಾಡಿ ನಿನ್ನ ಪಾದಪದ್ಮದಲ್ಲಿ ವಾಸಮಾಡುವಂತೆ ನನ್ನನ್ನು ಸೇರಿಸಿಕೊಂಡು ಕಾಪಾಡಲೋ ಸುಗ ಹೇ ಪ್ರಭುವಾದ ಶಂಭುಲಿಂಗವೇ ನೀನೇಳು. ॥೫॥

ಹಠಯೋಗ ಸಮಾಪ್ತ

ಅಥ ರಾಜಯೋಗಃ

೧೭

ಸದ್ಯೋನ್ಮುಕ್ತಿಯು ಯೋಗಿಗಳಿಗಲ್ಲದೆ ಮತ್ತೊಬ್ಬರಿಗೆ ಆದೀತೆ ? ॥ಪ॥ ನಿತ್ಯ ಸುಖಾಸನದಲ್ಲಿ ಕುಳಿತುಕೊಳ್ಳುವಿಕೆ, ದೇಹವು ನೆಟ್ಟಗೆ ನಿಲ್ಲುವದು, ಕರಣಗಳ ಸ್ಥಿರತೆಯು, ಪ್ರಾಣವಾಯು ಮನ ಹಾಗೂ ಕಣ್ಣಿನ ನೋಟ ಇವೆ

ಲ್ಲವು ಕೂಡಿಕೊಂಡು, ಹೃದಯದಲ್ಲಿರುವ ಪರಮಾತ್ಮನಲ್ಲಿ ನಿಶ್ಚಲವಾಗಿ ನಿಲ್ಲುವದು ಯೋಗಿಗಲ್ಲದೆ ದೊರಕೊಳ್ಳುವದೆ ? ॥೧॥

ಸೂರ್ಯ, ಚಂದ್ರ, ಅಗ್ನಿ ಈ ಮೂರು ಮಂಡಲಗಳ ಮೇಲುಭಾಗದ ನಕ್ಷತ್ರವಿರುವ ಆಕಾಶವೆಂಬ ಹೆಸರುಳ್ಳ ಚಿತ್ತಿನಲ್ಲಿ ಶಿವನೆಂಬ ಚಂದ್ರೋದಯವಾಗಲು ಆ ಪರಶಿವನಿಂದ ಅಮೃತವನ್ನು ಪಡೆದುಂಡು ಮನಸ್ತೃಪ್ತಿಯನ್ನು ಹೊಂದುವದು ಯೋಗಿಯಾದವನಿಗಲ್ಲದಿಲ್ಲ. ॥೨॥

ರೇಚಕ, ಪೂರಕ, ಕುಂಭಕಗಳೆಂಬ ವಾಯುಪ್ರವಾಹವುಳ್ಳ ನದಿಗಳ ಮಧ್ಯದಲ್ಲಿರುವ ಕುಂಡಲಿನಿಶಕ್ತಿಯ ತಲೆಯಲ್ಲಿದ್ದ ಪ್ರಣವಧ್ವನಿಯನ್ನು ಕೇಳಿ ಅದನ್ನು ದಾಟಿ ಹ್ರೀಂಕಾರ ಶಕ್ತಿಯೊಡನೆ ಕೂಡಿ ಬೇರೆಯಾಗದೆ ಹಾಗೂ ಒಂದೇ ಎಂದೆನಿಸದೆ ಇರುವ ಚಿದ್ರೂಪನಾದ ಪರಮಾತ್ಮನೊಡನೆ ಐಕ್ಯಭಾವದಿಂದ ಸೇರುವುದು ಪರತರ ಶಿವಯೋಗಿಗಲ್ಲದೆ ಸಾಧ್ಯವಿಲ್ಲ. ॥೩॥

೧೮

ಈ ಕೆಳಗೆ ಹೇಳುವ ಮೂರು ಲಕ್ಷ್ಯಾನುಸಂಧಾನ ಮಾಡಿದರೆ ಪರತತ್ವಸ್ವರೂಪನಾದ ಪರಮೇಶ್ವರನು ತಾನಾಗಿ ಗೋಚರವಾಗುವನು. ॥ಪ॥

ಆಧಾರ ಚಕ್ರ ಮೊದಲಾಗಿ ನವಚಕ್ರಗಳನ್ನು ಭೇದಿಸಿಕೊಂಡು ಪ್ರಕಾಶಿಸುತ್ತಿರುವ ಸುಷುಮ್ನಾ ಎಂಬ ಮಧ್ಯನಾಡಿಯಲ್ಲಿ ತಾವರೆ ನೂಲಿನ ಹಾಗೆ ಆಕಾರವುಳ್ಳದ್ದಾಗಿ, ಬಳ್ಳಿ ಮಿಂಚಿನಂತೆ ಕಾಂತಿಯುಳ್ಳದ್ದಾಗಿರುವ ತೇಜವನ್ನು ಮನದಲ್ಲಿ ನೆನೆದು ನೋಡುವದು. ॥೧॥

ಕಪ್ಪು, ಕಪಿಲ, ಕೆಂಪು, ಬಿಳಿಪು, ಹಳದಿ ಬಣ್ಣಗಳನ್ನು ಕ್ರಮವಾಗಿ ಹನ್ನೆರಡು, ಹತ್ತು, ಎಂಟು, ಆರು, ನಾಲ್ಕು ಅಂಗುಲವುಳ್ಳದ್ದಾಗಿ ಮೂಗಿನ ತುದಿಯಲ್ಲಿ ಕಂಡು ದೃಷ್ಟಿಯು ಚಲಿಸದಂತೆ ನೋಡುತ್ತಿದ್ದರೆ ಅದು ಬಹಿರ್ಲಕ್ಷ್ಯವೆನಿಸುವುದು. ॥೨॥

ಅನೇಕ ಸೂರ್ಯ, ಚಂದ್ರ, ನಕ್ಷತ್ರ, ಅಗ್ನಿ, ನವರತ್ನಗಳು ಇವುಗಳ ಕಾಂತಿಯನ್ನು ಹೊಂದಿ ಮಿತಿಮೀರಿ ಪ್ರಕಾಶಿಸುವ ಪರಮೇಶ್ವರನ ಪಾದ

ಪದ್ಮವನ್ನು ಅನುಸಂಧಾನ ಮಾಡಿಕೊಂಡು ಸುಖದಿಂದ ಇರುವುದು ಮಧ್ಯಲಕ್ಷವೆಂದೆನಿಸುವುದು. ॥೩॥

೧೯

ಮೂರು ತಾರಕಗಳ ವಿಚಾರವು ಎಲ್ಲರನ್ನು ಸಂಸಾರಸಾಗರವನ್ನು ದಾಟು ವಂತೆ ಮಾಡುವುದು ಆಶ್ಚರ್ಯವೇ, ॥ಪ॥ ಪೃಥ್ವಿ ಮೊದಲಾದ ಐದು ಭೂತ ಗಳಲ್ಲಿ ಒಂದೊಂದರಿಂದ ಐದು ಐದಾಗಿ ಹುಟ್ಟಿದ ಇಪ್ಪತ್ತೈದು ತತ್ವಗಳನ್ನು ತಿಳಿದು ಆ ತತ್ವಗಳನ್ನು ಮೀರಿರುವ ಪರಶಿವನೇ ತಾನೆಂದು ತಿಳಿದುಕೊಳ್ಳುವ ಪರಿಶುದ್ಧತೆಯೇ ಸಾಂಖ್ಯಮತಪ್ರಕಾರ ಪೂರ್ವತಾರೆ. ॥೧॥ ಮೂಗಿನ ಎರಡು ತುದಿಗಳಿಗೂ, ಕಣ್ಣಿನ ಮೇಲುಭಾಗವೆರಡರಲ್ಲಿಯೂ, ಕಿವಿಗಳೆರಡರ ರಂಧ್ರ ಗಳಿಗೂ, ಎರಡು ಕೈಗಳಲ್ಲಿರುವ ಅಂಗುಷ್ಠ ಮಧ್ಯಮ ಅನಾಮಿಕೆಗಳೆಂಬ ಮೂರು ಬೆರಳುಗಳನ್ನು ಕೂಡಿಸಿ ಇಟ್ಟು ಕೊಂಡು ಒಳಗಣ ಹತ್ತು ಬಿಂದು ಗಳನ್ನು ನೋಡುತ್ತ ಹತ್ತುನಾದಗಳನ್ನು ಕೇಳುತ್ತಿರುವುದೇ ಎರಡನೇ ತಾರಕ. ಇದು ಬಾಹ್ಯ ಮುದ್ರೆಯುಳ್ಳದ್ದು. ಅಂದರೆ ಹೊರಗೆ ಕಾಣಬರುವ ಅಂಗಗಳ ಸಹಾಯದಿಂದ ಈಶ್ವರನನ್ನು ಕಾಣುವದು. ॥೨॥

ರೆಪ್ಪೆಗಳನ್ನು ತೆರೆದುಕೊಂಡು ಕಣ್ಣುಗಳನ್ನು ಬಿಟ್ಟು ನೋಡುತ್ತಿ ದ್ದಾಗ್ಯೂ ಹೊರಗಣ ವಿಷಯುಗಳಿಂದ ಮನಸ್ಸಿಗೆ ಭ್ರಮಣೆಯುಂಟಾಗದೆ ಶ್ವಾಸವಾಯುವನ್ನು ಪೂರಕ ರೂಪದಿಂದ ಒಳಕ್ಕೆ ತುಂಬಿಕೊಂಡು ರೇಚಕಸ್ಥಿತಿ ಯಿಂದ ಅದು ಹೊರಗೆ ಬಾರದ ಮನಸ್ಸು ನಿಶ್ಚಲವಾಗಿ ನಿಂತು ಈಶ್ವರನಲ್ಲಿ ಕೂಡಿಕೊಂಡು ಅಗಲದೆ ಇರುವುದು ಇದು ಮೂರನೆಯ ತಾರಕವಾದ ಅಮ ನಸ್ಕ ಮುದ್ರೆ ಎನಿಸಿಕೊಳ್ಳುವುದು, ಹೀಗೆ ಮೂರು ಬಗೆಯಾದ ತಾರಕಗಳ ವಿಚಾರದಿಂದ ಜ್ಞಾನವನ್ನು ಪಡೆದು ಮುಕ್ತನಾಗುವನು. ॥೩॥

೨೦

ಪರಮಾತ್ಮನು ಕಣ್ಣೆದುರಿಗೆ ಕಾಣಿಸುತ್ತಿದ್ದಾಗ್ಯೂ ಅದನ್ನು ಕಾಣದೆ ಜನರುಗಳು ಬೇರೆ ಹೋಗಿ ಯಾತಕ್ಕೆ ಹುಡುಕುತ್ತಿರುವರೋ ಕಾಣೆ ॥ಪ॥

ಸೂರ್ಯ ಚಂದ್ರ, ಅಗ್ನಿ ಈ ಮೂರು ಮಂಡಲಗಳ ಮಧ್ಯದಲ್ಲಿ ಕಪ್ಪು, ಬಿಳಿಪು, ಮೊದಲಾದ ಅನೇಕ ಬಣ್ಣಗಳುಳ್ಳ ಬಿಂದುಗಳ ಕಾಂತಿ ಸಮೂಹದಲ್ಲಿ ಕಾಣ ಬರುವ ॥೧॥

ಅರೆಮುಚ್ಚಿದ ಕಣ್ಣುಗಳಿಂದ ಕೂಡಿ, ಪ್ರಾಣವಾಯುವನ್ನು ರೇಚಕ, ಪೂರಕ ಅವಸ್ಥೆಗಳಿಲ್ಲದಂತೆ ನಿಶ್ಚಲವಾಗಿ ನಿಲ್ಲಿಸಿ ಮನಸ್ಸಿನಲ್ಲಿ ತಪ್ಪದೇ ದೃಷ್ಟಿ ಸಲು ಕಾಣಬರುವ ॥೨॥ ಎದುರಿಗೆ ಕಾಣಬರುವ ಸಮಸ್ತ ಪದಾರ್ಥಗಳನ್ನು ಚನ್ನಾಗಿ ನೋಡಿ ತಿಳಿದುಕೊಳ್ಳುವ ಮನಸ್ಸೆಂಬ ಕಮಲ ಮಧ್ಯದಲ್ಲಿರುವ ಪೀಠ ದಲ್ಲಿ ಸಚ್ಚಿದಾನಂದ ಸ್ವರೂಪನಾದ ಶಂಭುಲಿಂಗನು ನೆಲೆಸಿರುವಂತೆ ಧ್ಯಾನಿಸಿ ತಿಳಿದುಕೊಂಡರೆ

೨೧

ಪರಮಾತ್ಮಸ್ವರೂಪವನ್ನು ಎಲ್ಲಿ ಚೆನ್ನಾಗಿ ನೋಡಬಹುದು ? ॥ಪ॥ ಎರಡು ಕಣ್ಣುಗುಡ್ಡೆಗಳ ತುದಿಯಲ್ಲಿ ಮಾಯೆಯನ್ನಾಶ್ರಯಿಸಿ ಪರಮಾತ್ಮನನ್ನು ಮರೆಯುವ ಜೀವಾತ್ಮನು ಒಳಗೆ ಪಚ್ಚಕರ್ಪೂರದ, ಕಪ್ಪಿಗೆ ಸಮಾನವಾದ ಮೇಘಗಳ, ಮರೆಯಲ್ಲಿ ಮಿಂಚಿನ ಕಾಂತಿಯಂತೆ, ಹೊಳೆಯುತ್ತಿರುವ ತೇಜೋ ಭಾಗವೇ ಆತ್ಮಸ್ವರೂಪವೆಂದು ತಿಳಿಯುವ ಸ್ಥಾನವು ಕಣ್ಣು, ॥೧॥

ಮೊರಗೆ ಮೆರವಣಿಗೆಯಲ್ಲಿ ದಂಪತಿಗಳನ್ನು ಕಾಣುವಂತೆ ಚಿದಾಕಾಶದಲ್ಲಿ ಛತ್ತದ ಬಾಲದಂತೆ ಸೂಕ್ಷ್ಮವಾಗಿ ಚಿನ್ನದಂತೆ ಹೊಳೆಯುತ್ತಿರುವ ಪರಮಾತ್ಮ ಸ್ವರೂಪವನ್ನು ಕಾಣುವುದೇ ಕಣ್ಣು. ॥೨॥

ರೇಚಕ, ಪೂರಕವೆಂಬ ನದಿಗಳಮೇಲೆ ತಿರುಗಾಡುವ ಹಂಸಮಂತ್ರವೆಂಬ ಹಂಸಪಕ್ಷಿಯು ನೆಲೆಯಾದ ಆಜ್ಞಾಚಕ್ರವೆಂಬ ಗೂಡಿನ ಮೇಲ್ಭಾಗದ ಸುವರ್ಣ ಕಮಲ ಮಧ್ಯದ ಬೀಜಕೋಶದಲ್ಲಿ ಕಮಲದ ನೂಲಿನಂತೆ ಪ್ರಕಾಶಿಸುತ್ತಿರುವ ಪರಬ್ರಹ್ಮವನ್ನು ನೋಡುವುದು ಕಣ್ಣೆ, ॥೩॥

೨೨

. ಈ ಕೆಳಗೆ ಹೇಳುವುದು ಏನು ಎಂಬುದನ್ನು ಹೇಳಿದವನಿಗೆ ಸೃಷ್ಟಿಸ್ಥಿತಿ ಸಂಸಾರ ಮಾಡತಕ್ಕ ಶಕ್ತಿಯುಂಟಾಗುವುದು. ॥ಪ॥ ಪ್ರಾರಂಭದಲ್ಲಿ ಒಂದು ವಸ್ತುವಿನಿಂದ ಮೂವರು ಸ್ತ್ರೀಯರಾದರೂ ಮೊದಲನೆಯ ಕ್ರಿಯಾಶಕ್ತಿ ಪುಣ್ಯಫಲಗಳನ್ನು ಕೊಡವುದು ಎರಡನೆಯ ಜ್ಞಾನಶಕ್ತಿಯು ಜ್ಞಾನಿಗಳ ಉತ್ಪತ್ತಿಗೂ ಲಯಕ್ಕೂ ಕಾರಣವಾಗುವದು. ಮೂರನೆಯದಾದ ಇಚ್ಛಾಶಕ್ತಿಯು ನಾನಾವಿಧವಾದ ಸಂಕಲ್ಪಗಳನ್ನು ಉಂಟುಮಾಡುತ್ತ ಜನನ ಮರಣರೂಪವಾದ ಸಂಸಾರಸಮುದ್ರಕ್ಕೆ ಆಧಾರವಾಗುವುದು. ॥೧॥

ಕ್ರಿಯಾಶಕ್ತಿಯಿಂದ ಕೇಳಿಕೊಂಡು ಇಚ್ಛಾಶಕ್ತಿಯಿಂದ ರಕ್ಷಿಸುವುದು ಜ್ಞಾನ ಶಕ್ತಿಯು. ಇಚ್ಛಾಶಕ್ತಿ ಕ್ರಿಯಾಶಕ್ತಿಗಳೆರಡನ್ನು ಪಡೆವುದು ಜ್ಞಾನ ಶಕ್ತಿಯಿಂದ, ಜ್ಞಾನಜ್ಞಾನಗಳಿಗೆ ಹೆದರದೆ ಇಚ್ಛಾಶಕ್ತಿಯೊಂದರಲ್ಲಿಯೇ ಜ್ಞಾನಶಕ್ತಿ ಕ್ರಿಯಾಶಕ್ತಿಗಳನ್ನು ಹೊಂದಿರುವುದು ॥೨॥

ಪ್ರಪಂಚದ ಎಲ್ಲಾ ಶಕ್ತಿಗಳ ಸ್ನೇಹವನ್ನು ಬಿಟ್ಟು ಅನೇಕ ಬಗೆಯಾದ ವ್ಯಾಪಾರವುಳ್ಳ ಇಚ್ಛಾಶಕ್ತಿ, ಜ್ಞಾನಶಕ್ತಿಗಳೆರಡನ್ನೂ ಹೊಂದಿ ಕ್ರಿಯಾಶಕ್ತಿ ಇರುತ್ತದೆ. ಶಾಂತಿಮಯವಾದ ಈ ಜ್ಞಾನಶಕ್ತಿಯು ಇಚ್ಛಾಶಕ್ತಿಯೊಡನೆ ಸೇರಿ ಚಿದಗ್ನಿಮಯವೆನಿಸಿಕೊಂಡು ಆಸುರವೃತ್ತಿಯುಳ್ಳದ್ದಾಗುವುದು. ॥೩॥

ಇಚ್ಛಾಶಕ್ತಿಯೂ, ಜ್ಞಾನಶಕ್ತಿಯೂ ಒಂದರಲ್ಲಿಯೇ ನಿಲ್ಲದೆ ತಿರುಗುತ್ತಿರುವುದು. ಜ್ಞಾನಶಕ್ತಿಯ ಒಂದು ಭಾಗವಾದ ಪಂಚತತ್ವಗಳಲ್ಲಿ ಕೂಡಿ ಕರಣಗಳೆಂಬ ತೆರೆಯನ್ನು ಹೋಗಲಾಡಿಸುವುದು, ಕ್ರಿಯಾಶಕ್ತಿಯೊಡನೆ ಕೂಡಿ ಅನೇಕ ಸಂಪತ್ತುಗಳನ್ನು ಕೊಡುವುದು. ॥೪॥

ಕ್ರಿಯಾಶಕ್ತಿಯೊಂದರಿಂದ ಕೊರತೆಯನ್ನು ಹೋಗಲಾಡಿಸಿ ಆನಂದ ಹೊಂದಬಹುದು, ಜ್ಞಾನಶಕ್ತಿಯಿಂದ ಬಲಿಷ್ಠರಾದ ಮನ್ಮಥ, ಯಮ ಮುಂತಾದವರನ್ನು ನಾಶಪಡಿಸಬಹುದು, ಇಚ್ಛಾಶಕ್ತಿಯೊಂದರಿಂದ ಶಂಭುಲಿಂಗನ ಸ್ನೇಹವನ್ನುಂಟು ಮಾಡಿಕೊಂಡು, ಕ್ರಿಯಾಶಕ್ತಿಯೊಡನೆ ಸೇರಿ ಐಕ್ಯಭಾವವನ್ನು ಪಡೆಯಬಹುದು ॥೫॥

೨೩

ಎಲೈ ಜ್ಞಾನಶಕ್ತಿಯೇ ಮಧುರಸ್ವರವುಳ್ಳ ಹಂಸಮಂತ್ರವೆಂಬ ಹಂಸದ ವಾಸಸ್ಥಾನವೆನಿಸಿಕೊಂಡಿರುವ ಸೂರ್ಯ, ಚಂದ್ರಮಂಡಲದೊಳಗಿನ ಚೌಕವಾದ ಪೀಠದಲ್ಲಿ ಸುಷುಮ್ನಾದ್ವಾರದ ರಂಧ್ರವೆಂಬ ಸರೋವರವು ಆಶ್ಚರ್ಯಕರ ವಾಗಿ ಕಾಣಿಸುತ್ತಿರುವುದು ನೋಡು ॥ಪ॥ ಆ ಸರೋವರವು ಶಾಂಭವೀಕ ಮಲದ ಮಧ್ಯದಲ್ಲಿ ಇರುವುದು ಆ ಸರೋವರದ ಎಡಬಲ ಬದಿಗಳಲ್ಲಿ ಗಂಗಾ, ಯಮುನಾ ನದಿಗಳ ನೀರು ಹದಿನಾರು ಅಂಗುಲ ದೂರಕ್ಕೆ ಹರಿದು ಪಿಂಗಳಾ ಮತ್ತು ಇಡಾ ಎಂಬ ನಾಡಿಗಳಿಂದ ಬೆಚ್ಚಗೂ ತಣ್ಣಗೂ ಇರುವುದು. ಇವೆರಡೂ ಸೂರ್ಯ ಚಂದ್ರಗಳೆಂಬ ಕಣ್ಣುಗಳಾಗಿ ಶಾಂಭವೀಮುದ್ರೆಯಿಂದ ಒಂದೇ ಆಗಿರುವುದು. ಕಾಲತ್ರಯದಲ್ಲಿ ಸಂಚಾರ ಮಾಡುವುದರಿಂದ ಸ್ತ್ರೀ ಪುರುಷ ರೂಪವನ್ನು ಹೊಂದಿರುವುದು. ॥೧॥

ಭ್ರಮರ, ಮೀನು, ಮಿಂಚು. ನೀಲೋತ್ಪಲ, ಮನ್ಮಥನ ಬಾಣ, ಜಿಂಕೆಯು ಕಣ್ಣುಗಳು, ಕಮಲ, ನವಿಲು, ಚಕೋರ, ಚಂದ್ರಕಿರಣ, ಪ್ರಕಾಶ ಮಾನವಾದ ತಾವರೆ, ಮಲ್ಲಿಗೆಗಳಂತೆ ಮನೋಹರವಾಗಿದ್ದು ತನ್ನಲ್ಲಿಯೇ ವಿಶ್ವಸಂಪತ್ತಿನ ಸುಖವನ್ನು ಪಡೆವುದು. ॥೨॥

ಸೂರ್ಯ, ಚಂದ್ರ ಅಗ್ನಿ ಮಂಡಲಗಳನ್ನೂ ; ವಿಷ್ಣು, ಬ್ರಹ್ಮ, ರುದ್ರ ರನ್ನೂ, ಚಿದಾಕಾಶ, ಕುಂಡಲಿಸರ್ಪವನ್ನೂ, ರೇಚಕ, ಪೂರಕ, ಹಂಸವೆಂಬ ವರ್ಣಗಳನ್ನೂ ಹೊಂದಿ ಪರಶಿವಸ್ವರೂಪವಾಗಿ ದಶವಿಧಬಿಂದುಗಳು ತನ್ನಲ್ಲಿ ಕಾಣಿಸಿಕೊಳ್ಳುವಂತೆ ಮಾಡಿ ಸುಷುಮ್ನಾದ್ವಾರವುಳ್ಳದೆಂದು ಕರೆಯಿಸಿಕೊಳ್ಳುವ ಸರೋವರವು. ॥೩॥

೨೪

ಎಲೈ ಜ್ಞಾನಶಕ್ತಿಯೇ ನೀನು ಒಂದೊಂದನ್ನಾಗಿ ಹೇಳು. ನಾನು ಆ ಒಂದೊಂದು ತತ್ವವನ್ನು ಸಂತೋಷದಿಂದ ಕೇಳುವೆನು. ॥ಪ॥ ಮನಸ್ಸು, ಬುದ್ಧಿ ಚಿತ್ತ, ಅಹಂಕಾರವೆಂಬ ಕರಣಗಳಲ್ಲಿ ಚಂಚಲತೆಯು ಹುಟ್ಟಲು

ಕಾರಣವೇನು? ಪೃಥ್ವೀ, ಅಪ್, ತೇಜ, ವಾಯು, ಆಕಾಶ, ಆತ್ಮ, ಸೂರ್ಯ ಚಂದ್ರರೆಂಬ ಪರಶಿವನ ಎಂಟು ತನುಗಳು ಕೂಡಿದ ನೆಲೆಯಾವುದು? ಒಂದು ಎರಡಾದುದೆಂಬ ಪ್ರಸಂಗವು ಹುಟ್ಟಿದ ನೆಲೆಯಾವುದು? ಕರುಣಾಮೃತವು ಯಾವಕಡೆಯಿಂದ ಬರುವುದು? ॥೧॥

ಶಿವ, ಶಕ್ತಿಗಳೆರಡು ಎಲ್ಲಿ ಕಾಣಿಸುತ್ತಿರುವವು ? ಈಶ್ವರನ ಚಿದ್ರೂಪವನ್ನು ತೋರಿಸುವ ಮಾರ್ಗವಾವುದು ? ಈಶ್ವರನ ಯೋಗಮುದ್ರೆಯಾದ ಶಾಂಭವಿಯು ಗೋಚರವಾಗುವ ನೆಲೆಯಾವುದು ? ಶಿವಲಿಂಗ ಸ್ಥಲವನ್ನು ಏನೆಂದು ನುಡಿಯುವರು ? ॥೨॥ ದೇಹಧಾರಿಗಳಾದವರು ವಿಷಯವನ್ನನುಭವಿಸುವ ಸ್ಥಳವಾವುದು ? ಹಸ್ತಪೀಠವನ್ನು ಅಲಂಕರಿಸುವ ಇಷ್ಟಲಿಂಗವೆನಿಸುವ ಶಂಭುಲಿಂಗವು ಗುರುವಿನ ಅಭಿಪ್ರಾಯದ ಪ್ರಕಾರ ಎಲ್ಲಿಂದ ಬಂತು? ಮನಸ್ಸಿನ ಪರಿಣಾಮ (ಆನಂದ) ಪರವಶತೆಯು ಎಲ್ಲಿ ತಿಳಿಯುವದು ? ॥೩॥

೨೫

ಇದಿರು ಭಾವನೆಯನ್ನು ಹೋಗಾಡಿಸಿ ನಾನೇ ಆ ಜ್ಞಾನರೂಪವಾದ ಪರಬ್ರಹ್ಮವೆಂಬುದನ್ನು ನಿನ್ನ ಜ್ಞಾನಚಕ್ಷುವಿನಿಂದ ತಿಳಿದುಕೊ. ॥ಪ॥ ಚಂದ್ರ, ಸೂರ್ಯ, ಅಗ್ನಿಮಂಡಲತ್ರಯವೂ; ಕಪ್ಪು, ಬಿಳುಪು, ಕೆಂಪು ಬಣ್ಣಗಳಲ್ಲಿ ತಮ, ಸತ್ವ, ರಜೋಗುಣಗಳೂ; ಅ, ಉ, ಮ್, ಎಂಬ ಅಕ್ಷರತ್ರಯವೂ; ಬ್ರಹ್ಮ ವಿಷ್ಣು, ಮಹೇಶ್ವರ, ತ್ರಿಮೂರ್ತಿಗಳೂ; ಭೂತ, ಭವಿಷ್ಯ, ವರ್ತಮಾನ ಕಾಲತ್ರಯವೂ. ಜಾಗ್ರತ್, ಸ್ವಪ್ನ, ಸುಷುಪ್ತಿ ಅವಸ್ಥಾತ್ರಯವೂ; ಸೂಕ್ಷ್ಮ, ಸ್ಥೂಲ, ಕಾರಣವೆಂಬ ದೇಹತ್ರಯವೂ; ಇಷ್ಟ, ಪ್ರಾಣ, ಭಾವವೆಂಬ ಲಿಂಗತ್ರಯವೂ; ವಿಶ್ವ, ತೈಜಸ, ಪ್ರಾಜ್ಞರೆಂಬ ಜೀವತ್ರಯವೂ; ಋಗ್, ಯಜುಸ್, ಸಾಮವೆಂಬ ವಿದ್ಯಾತ್ರಯವೂ. ಜೀವಾತ್ಮ, ಪರಮಾತ್ಮ ಅಂತರಾತ್ಮನೆಂಬ ಆತ್ಮತ್ರಯವೂ; ಇವೇ ಮೊದಲಾದವೆಲ್ಲವೂ ಕಾಣಬರುವವಾಗಿ ನೀನೆಯಲ್ಲದೆ ಬೇರೆಯಲ್ಲವೆಂಬುದ ತೋರಿಸುತಿರ್ಪುದು ॥೧॥ ಸೂರ್ಯ, ಚಂದ್ರ, ಅಗ್ನಿ ಮಂಡಲಗಳ ಕಾಂತಿಯಿಂದ ಘಟ ಪಟ ಮೊದಲಾದ ವಸ್ತುಗಳು ಹೇಗೆ ಕಾಣುತ್ತಿರುವವೋ ಹಾಗೆಯೇ ತತ್ವಗಳೆಲ್ಲವೂ ನಿನ್ನ ಪ್ರಕಾಶದಿಂದಲೇ ಕಾಣು

ತ್ತಿರುವವೆಂಬುದು ನಿಶ್ಚಯವೆಂಬುದನ್ನು ತಿಳಿಯಬೇಕು. ||೨|| ಸರ್ವಜ್ಞ ನಾಗಿಯೂ, ಸಮಸ್ತ ಇಂದ್ರಿಯಗಳಿಗೆ ಮೊದಲನೆಯವನಾಗಿಯೂ, ಯೋಗಿಗಳ ಮನಸ್ಸೆಂಬ ಕಮಲಕ್ಕೆ ಸೂರ್ಯನಂತೆ ಆಹ್ಲಾದಕರನಾಗಿಯೂ, ಸಮಸ್ತ ಇಷ್ಟಾರ್ಥಗಳನ್ನು ಕೊಡತಕ್ಕವನಾಗಿಯೂ ಇರುವ ಪರಮೇಶ್ವರನು ನೀನೇ ಎಂಬುದು ||೩||

೨೮

ಯೋಚಿಸಿದರೆ ಮನಸ್ಸು ನಾಲ್ಕು ಬಗೆಯಾಗಿ ಸಂಚಾರ ಮಾಡುತ್ತಿರುವುದು, ಅದನ್ನು ಹೇಳುವೆನು. ||೪|| ಮೂರು ಕಾಲಗಳಲ್ಲಿಯೂ ಪದುಳದಿಂದಿರದೆ ವಿಷಯಸುಖಕ್ಕೆ ಹಂಬಲಿಸಿ ಚಿಂತೆಗೊಳಗಾಗಿ, ತಮೋಗುಣವು ಉಂಟಾಗಿ ಕೆಟ್ಟ ಕೆಲಸಕ್ಕೆ ಕೈಹಾಕಲುದ್ಯುಕ್ತವಾಗಾವುದು ವಿಕ್ಷೇಪವೆನಿಸುವುದು. ||೧||

ಒಮ್ಮೆ ಯೋಗದಲ್ಲಿ ಅಂತರಂಗದತ್ತ ಹೊರಳುವುದು (ಅಂತಮುಖಿಯಾಗುವುದು). ಒಮ್ಮೆ ವಿಷಯಸುಖದತ್ತ ಹೊರಳಿ ಬಹಿರ್ಮುಖಿಯಾಗಿರುವುದು. ಹೀಗೆ ದ್ವಿವಿಧವಾಗಿರುವದೇ ರಾಜಸ್ವಭಾವವುಳ್ಳ ಮಧ್ಯಮವೆನಿಸುವುದು, ||೨||

ಈಶ್ವರನನ್ನುಳಿದು ಬೇರೆ ವಿಷಯಗಳಲ್ಲಿ ಹರಿಯದೆ, ಚಂಚಲತೆಗೆ ಕಾರಣವಾಗುವಂಥ ತತ್ವಗಳುಂಟಾದರೂ ಮನವು ಅವುಗಳಲ್ಲಿ ರಮಿಸದೆ ಕೇವಲ ಸತ್ವಗುಣವೇ ಎರಕಹೊಯ್ದಂತೆ ಇರುವ ಬುದ್ಧಿಯುಳ್ಳದ್ದಾಗಲು ಸಂಶ್ಲಿಷ್ಟವೆನಿಸುವುದು. ||೩||

ನಾನು ನೀನು, ಅದು ಇದು ಎಂಬುವ ದ್ವಂದ್ವತೋರದೆ ಸಚ್ಚಿದಾನಂದದ ಅನುಭಾವದ ಬೋಧೆಯೊಳು ಮನವು ಅಡಗಿ ಸ್ವಲೀನವಾಗಿರುವುದು. ಅತಿ ಶ್ರೇಷ್ಠವಾದ ನಿರ್ಗುಣವಾಗಿರುವುದು, ||೪|| ಈ ನಾಲ್ಕರಲ್ಲಿ .ಮೂರನೆಯದಾದ ಸತ್ವ ಗುಣವುಳ್ಳ ಮನಸ್ಸನ್ನು ನಾಲ್ಕನೆಯ ತುರೀಯಾವಸ್ಥೆಯುಳ್ಳಂತೆ ಮಾಡಿ `ಶಂಭುಲಿಂಗನೇ ತಾನೆಂದು ಭಾವಿಸಿಕೊಂಡಿರುವುದೇ ಮುಕ್ತಿ. ||೫||

೨೯

ತನ್ನ ಕೂಡ ಚನ್ನಾಗಿ ಸ್ನೇಹವಿರುವವರನ್ನು ಬಿಟ್ಟು ಕೊಟ್ಟು, ಅಂತಃಕರಣಗಳನ್ನು ಬಿಟ್ಟು ಕೊಟ್ಟು, ಮುಕ್ತಿಯೆಂಬ ಕನ್ನೆಯೊಡಗೂಡಿಕೊಂಡಿರುವವನನ್ನು ಹೇ ಜ್ಞಾನಶಕ್ತಿಯೇ ನೋಡು. ॥ಪ॥ ದೇಹವೆಂಬುವ ಪವಡಿಸುವ ಮನೆಯ ಚೌಕ ಮಧ್ಯದಲ್ಲಿ ಸಿರಿಮಂಚವನ್ನು ಏರಿ ಮನವೆಂಬ ಮಿತ್ರನನ್ನು, ಇಂದ್ರಿಯವೆಂಬ ಉಪಕರಣಗಳನ್ನು ಹಾಗೂ ಪ್ರಾಣಗಳೆಂಬ ಆಳುಗಳನ್ನು ಪಡೆದು. ॥೧॥

ಪ್ರಸಿದ್ಧವಾದ ತತ್ತ್ವಾಧ್ವವೇ ಮೊದಲಾದ ಆರು ಅನುಕೂಲ ಜನಗಳನ್ನೂ, ಪ್ರಕಾಶಮಾನವಾದ ನಾದಬಿಂದುಗಳೆಂಬ ಗಾಯಕರನ್ನೂ, ಕ್ರಿಯಾಶಕ್ತಿ ಮೊದಲಾದ ಆರು ಜನ ಸ್ತ್ರೀಯರನ್ನೂ, ಬ್ರಹ್ಮಾದಿ ಅಧಿದೇವತೆಗಳೆಂಬ ಪಂಡಿತ ಮಂಡಲಿಯನ್ನೂ ಹೊಂದಿ ನಾಟಕವನ್ನಾಡಿಸುತ್ತಿರುವಾಗ; ॥೨॥ ಇವರೆಲ್ಲರನ್ನು ಕಳುಹಿಸಿ ಮುಕ್ತಿ ಸ್ತ್ರೀಯನ್ನು ರಮಿಸಬೇಕೆಂದು ಯೋಚಿಸುತ್ತಿರುವಾಗ ಆಶ್ಚರ್ಯಕರವಾದ ಮುಕ್ತಿಯುಂಟಾಗಿ ಸ್ತ್ರೀಯರ ಮೋಹವು ಹೋಗಿ ಅನುಪಮವಾದ ಶಂಭುಲಿಂಗವೇ ತಾನಾದ. ॥೩॥

ಸಮಾಧಿ

ಇತಿ ರಾಜಯೋಗ ಸಮಾಪ್ತ

ಶಿವಯೋಗ

೨೦

ಎಲೈ ಯೋಗಿಯೆ, ನಿನ್ನ ಕಲ್ಯಾಣಕ್ಕಾಗಿ ನಿನ್ನ ಕೈಯಲ್ಲಿಯೇ ಲಿಂಗವು ದರ್ಶನ ಕೊಟ್ಟಿತು. ಆದ್ದರಿಂದ ನೀನು ಅದನ್ನು ಪೂಜಿಸು. ||ಪ||

ಮೊದಲ ಪೀಠವೇ ಬಿಂದುವಾಗಿ, ಅದರ ಮೇಲಣ ಪೀಠವೇ ನಾದವಾಗಿ, ಗೋಮುಖವೇ ಕಳೆಯೆನಿಸಿಕೊಂಡು ಸಕಲರೂಪಾದ ತಾನೇ ಲಿಂಗದ ನಿಜವಾಗಿ ಅದರಲ್ಲಿ ಪ್ರಕಾಶಿಸುತ್ತಿರುವ ||೧||

ಬೀಜವು ಮರದ ವಿಸ್ತಾರವನ್ನು ತನ್ನೊಳಗಿಟ್ಟುಕೊಂಡು ಸಣ್ಣದಾಗಿರು ಪಂಚಮಂತ್ರಾಧ್ವಾದಿ ಷಡಧ್ವಗಳಿಗೆ ಆಧಾರನಾದ ಪರಬ್ರಹ್ಮನಿಗೆ ಆಶ್ರಯವಾದ ಶಕ್ತಿಯಿಂದ ಕೂಡಿ ತನಗೆ ತಾನೇ ಆಧಾರವಾಗಿರುವ ಲಿಂಗವು ||೨||

ಸೂರ್ಯ, ಚಂದ್ರ, ಅಗ್ನಿಮಂಡಲಗಳನ್ನೂ, ಸತ್ವರಜಸ್ತಮೋಗುಣಗಳನ್ನೂ ಅ, ಉ, ಮ್ ಎಂಬ ಅಕ್ಷರಗಳನ್ನೂ ಮೀರಿ ಸ್ವಾನುಭವೈಕವೇದ್ಯವಾದ ಶಂಭುಲಿಂಗನೇ ತಾನು ಬೇರೆಯಾಗಿ ಕಾಣಿಸಿಕೊಳ್ಳದೆ ನಿನ್ನ ಕಣ್ಣಿಗೆ ಇದರಾಗಿರುವನು. ||೩||

೨೧

ಎಲೈ ಯೋಗಿಯೇ, ನೀನು ಪ್ರತಿದಿನದಲ್ಲಿಯೂ ತಕ್ಕ ಕಾಲಗಳಲ್ಲಿ ಈ ಐದು ಬಗೆಯ ಯೋಗಗಳನ್ನು ಬಿಟ್ಟುಬಿಡದೆ ಆಚರಿಸು. ನಿನಗೆ ಇವು ಯೋಗ್ಯವಾಗಿವೆ ||ಪ||

ಶಿವನ ದೇಹಕಾಂತಿ ಸಮವಾದ ವಿಭೂತಿಯನ್ನೂ, ಶಿವನ ಮುಖದಂತಿರುವ ರುದ್ರಾಕ್ಷಮಾಲೆಯನ್ನೂ, ಶಿವನ ಹೆಸರುಳ್ಳ ಪಂಚಾಕ್ಷರೀ ಮಂತ್ರವನ್ನೂ, ಶಿವನ ರೂಪದಂತಿರುವ ಇಷ್ಟಲಿಂಗವನ್ನೂ. ॥೧॥

ದೇವನ ದಯಾರೂಪವಾದ ಪ್ರಸಾದವನ್ನೂ ದೇವನ ಸುಖರೂಪವಾದ ಪಾದೋದಕವನ್ನೂ, ಶಿವನ ಐಶ್ವರ್ಯರೂಪಳಾದ ಪಾರ್ವತಿಯನ್ನೂ, ಶಿವನ ಗಣಗಳನ್ನೂ ॥೨॥

ಶಿವನ ಪ್ರಾಣಪ್ರಿಯಳಾದ ಶಕ್ತಿಯನ್ನೂ, ಈಶ್ವರನ ಯಶಸ್ಸೇ ಮೂರ್ತೀಭವಿಸಿದಂತಿರುವ ವೇದವನ್ನೂ, ಈಶ್ವರಜ್ಞಾನಸ್ವರೂಪವಾದ ತನ್ನನ್ನೂ, ಶಂಭುಲಿಂಗನ ಸಾಕ್ಷಾತ್ಕಾರ ಮಾಡಿಸಿದ ಗುರುವಿನ ಪಾದವನ್ನೂ ಬಿಡದೆ ಯೋಗವನ್ನಾಚರಿಸು. ॥೩॥

೩೨

ಆಚಾರವೇ ಮೊದಲಾದ ಆರು ವಿಧಗಳಾದ ಅಂತರ್ಲಿಂಗವಿದನ್ನು ಗುರುವಿನ ಉಪದೇಶದಿಂದ ತಿಳಿದು ನೋಡಿ, ಏಕಾಗ್ರಚಿತ್ತದಿಂದ ಬಿಡದೆ ಧ್ಯಾನಿಸುವನೇ ಕೃತಾರ್ಥನು ॥೪॥ ಪ್ರಾಣವಾಯುವೇ ಪಿಂಗಳವೆನಿಸಿಕೊಂಡಿರುವ ರೇಚಕವು, ಇದು ಸೂರ್ಯನಾಡಿ. ಅಪಾನವಾಯುವೆ ಚಂದ್ರನಾಡಿ. ಇದು ಈಡಾಸಂಜ್ಞೆಯುಳ್ಳ ಪೂರಕವು. ಈ ರೇಚಕ ಪೂರಕಗಳನ್ನು ಸೇರಿ ಬಿಟ್ಟು ಹೋಗದೆ ಶಿವಶಕ್ತಿಯ ಬೀಜಭೂತವಾದ ಹಕಾರ ಸಕಾರಾಂತಗಳಾದ ಶಬ್ದಗಳಿಂದ ಇದ (ಸೋಽಹಂ, ಹಂಸಃ) ಎಂಬ ಹಂಸ ಮಂತ್ರಗಳ ವ್ಯಂಜನಗಳನ್ನು ಲೋಪಮಾಡುವದರಿಂದುಂಟಾದ ಓಂ ಎಂಬ ಪ್ರಣವಧ್ವನಿಯೇ ಶ್ರಾವ್ಯವಾದ ನಾದವೆನಿಸಿಕೊಳ್ಳುವದು, ಈ ನಾದವನ್ನೂ ॥೧॥ ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾಚಕ್ರಗಳ ಬ್ರಹ್ಮರಂಧ್ರ, ಶಿಖಾಚಕ್ರಗಳ ಸಮೂಹದಲ್ಲಿ ಚೌದಳಾದಿಯಾದ ಕಮಲಗಳೂ. ಸಕಾರಾದಿಯಾದ ಅಕ್ಷರಗಳೂ, ಬ್ರಹ್ಮಾದಿಯಾದ ಅಧಿದೇವತೆಗಳೂ, ನಕಾರಾದಿಯಾದ ಮನುಗಳೂ, ಕ್ರಿಯಾದಿಯಾದ ಶಕ್ತಿಗಳ ಮೇಳದೊಡನೆ ಸೇರಿ, ನಾನಾವರ್ಣಗಳನ್ನು ತೋರ್ಪಡಿಸುವ ಪ್ರಕಾಶಮಾನವಾದ ಬಿಂದುವನ್ನೂ ॥೨॥

ಅನೇಕ ರುಂದ್ರಗಳುಳ್ಳ ಮಡಕೆಯಲ್ಲಿ ಹಚ್ಚಿಟ್ಟ ಒಂದು ದೀಪವೇ ತೂತುಗಳಲ್ಲಿ ನೋಡುವವರಿಗೆ ಅನೇಕವಾಗಿ ಕಾಣಬರುವಂತೆ ದೇಹ, ಇಂದ್ರಿಯ, ಮನಸ್ಸು, ಮುಖಮೊದಲಾದವುಗಳಲ್ಲಿ ಬೇರೆ ಬೇರೆಯಾಗಿ ತೋರುವಂತೆ ಪ್ರಪಂಚವನ್ನು ಕಾಣಿಸುತ್ತಾ ಚಿತ್ಕಲೆಯಿಂದ ತುಂಬಿ ಪೂರ್ಣನಾದ ದೇವನನ್ನು ಧ್ಯಾನಿಸುವವನೇ ಕೃತಾರ್ಥನು. ॥೩॥

೩೩

ಎಲೈ ಯೋಗಿಯೇ, ಸದ್ಭಾವನೆಯಿಂದ ಲಿಂಗವನ್ನು ನೀನು ಬಿಡದೆ ಧ್ಯಾನಿಸು ॥೫॥ ಗುರುವಿನ ಮಂತ್ರೋಪದೇಶದ ಬಲದಿಂದ ಹುಟ್ಟಿದ, ಯೋಗದಲ್ಲಿ ಮೋಹನಾದಿ ಆರು ಕರಣದಲ್ಲಿಯೂ ತೋರ್ಪಡದ, ಕೈ, ಹೃದಯ ಇವುಗಳನ್ನು ಆಧಾರ ಮಾಡಿಕೊಳ್ಳದ, ಹೆಚ್ಚಾದ ಆನಂದವನ್ನು ಬಿಡದ. ॥೧॥

ದೀಪವು ತನ್ನ ಕಿರಣಗಳನ್ನು, ತಾನೇ ವ್ಯಾಪಿಸಿಕೊಂಡು ಕಾಣಿಸುವ ಬೆಳಕಿನಂತೆ ಜೀವಾತ್ಮನನ್ನು ಪರಮಾತ್ಮನಲ್ಲಿ ಐಕ್ಯಮಾಡಿ, ನೋಡುವ ಉಪಾಧಿಯಿಲ್ಲದೆ ನಿರುಪಾಧಿಕವಾದ ॥೨॥

ಪೂಜೆ, ಧ್ಯಾನ ಮೊದಲಾದವುಗಳನ್ನು ಮಾಡುವವರಿಂದ ಕಾಣಬರುವ ಸಗುಣ, ನಿರ್ಗುಣ, ನಿಷ್ಕಲವಾದ ರೂಪವಿಲ್ಲದೆ ವಿಷಯ ವಿಕಲ್ಪದಿಂದ ಸಂಕಲ್ಪ ಮೊದಲಾದವಿಲ್ಲದೆ ನಿತ್ಯ ನಿಷ್ಕಲಂಕ ರೂಪವಾದ ॥೩॥

ಹೊರಗೂ, ಒಳಗೂ, ಕಣ್ಣು, ಮನಸ್ಸು ಇವುಗಳಿಂದ ಗುರುತುಗಳನ್ನು ಇಟ್ಟುಕೊಂಡು ನಾನಾಬಣ್ಣವುಳ್ಳದ್ದಾಗಿರುವಂತೆ ಸೂರ್ಯನ ಬೆಳಕೆಯಿಂದ ಸೇರದ ಮಹಾ ಪ್ರಕಾಶವು ಎರಕಹೊಯ್ದಂತೆ ನಿಶ್ಚಲವಾಗಿದು ವಿಕಾರವನ್ನು ಹೊಂದದ. ॥೪॥

ಪೃಥ್ವ್ಯಾದಿ ಸ್ಥೂಲತತ್ವಗಳ ಸಂಬಂಧವಾದ ಜೀವಾತ್ಮನ ವ್ಯಾಪಾರವಿಲ್ಲದೆ ವಿಷಯ ವಿಕಲ್ಪದಿಂದ ಇರುವ ಸೂಕ್ಷ್ಮ ಆಕಾರದಲ್ಲಿಯೂ ಸೇರದಿರುವ ಸಹಾಯಕನೂ ಸಾಕ್ಷಿಯೂ ಆದ. ॥೫॥

ಶಿವನನ್ನು ನೋಡುವದು, ಆ ಮೇಲೆ ಮನಸ್ಸನ್ನು ಅವನಲ್ಲಿ ಸೇರಿಸುವುದು, ಆ ಮೇಲೆ ಅದರಲ್ಲಿಯೇ ನಿಶ್ಚಲವಾಗಿ ಚಿರಗಾಗುವದು. ಇವುಗಳಿಂದ ಭಿನ್ನವಾದ ಯಾವದರಲ್ಲಿಯೂ ಮನಸ್ಸನ್ನು ಮಾಡವೆ ತೃಪ್ತಿಮಯವಾಗಿರುವ. ॥೬॥

ದೇಹಸಂಬಂಧವಾದ ಯಜ್ಞ ಮುಂತಾದ ಕರ್ಮಗಳನ್ನೂ ಅಷ್ಟಾಂಗ ಯೋಗಗಳನ್ನೂ ಅಪೇಕ್ಷಿಸದೆ, ಸರ್ವಚೈತನ್ಯಸ್ವರೂಪ ಶಂಭುಲಿಂಗವನ್ನು ತಿಳಿ. ॥೭॥

೩೪

ಸಕಲ ಜಗತ್ಕಾರಣನಾದ ಪರಮೇಶ್ವರನನ್ನು ಕಾಮಿಕ ಮೊದಲಾದ ಇಪ್ಪತ್ತೆಂಟು ಬಗೆಯಾದ ಆಗಮಶಾಸ್ತ್ರಗಳನ್ನು ಬಿಟ್ಟು ಯಾವ ಮತದವರು ತಾನೇ ತಿಳಿಯಬಲ್ಲರು ? ॥ಪ॥ ಕಲೆ. ವರ್ಣ ಪದ, ಮಂತ್ರ, ಭುವನ, ತತ್ವಗಳೆಂಬ ಆರು ಮಾರ್ಗಗಳಲ್ಲಿ ಅಧಿಕಾರ, ಅನುಭವ, ನಾಶಗಳೆಂಬ ಅನೇಕ ರೀತಿಗಳನ್ನು ಹೊಂದಿ ಈಶ್ವರನಿಗೆ ಆಯಾ ಅವಸ್ಥೆಗಳಿಂದ ಆಯಾ ಹೆಸರುಗಳನ್ನು ಕಲ್ಪಿಸಿಕೊಳ್ಳುವಂತೆ ಮಾಡುವ ಬಿಂದುವನ್ನೂ ॥೧॥

ಈಶ್ವರನ ಶಕ್ತಿಗಳಾದ ಹುಟ್ಟಿಸುವಿಕೆ, ಸಂರಕ್ಷಿಸುವಿಕೆ, ನಾಶಮಾಡುವಿಕೆ, ಮಾಯೆಯಿಂದ ಮರೆಮಾಡುವಿಕೆ, ಅನುಗ್ರಹಿಸುವಿಕೆ ಎಂಬ ಐದು ಕಾರ್ಯಗಳನ್ನೂ ಪರೆ ಮೊದಲಾದ ನಾಲ್ಕು ನುಡಿಗಳಲ್ಲಿ ಪ್ರೇಮವಿಟ್ಟು ಪರಿಪೂರ್ಣವಾದ ಕುಂಡಲಿನಿಯನ್ನೂ ॥೨॥

ಮಾಯೆಯನ್ನು ದಾಟಿ ಆಗಾಮಿ, ಸಂಚಿತ, ಪ್ರಾರಬ್ಧಗಳೆಂಬ ಕರ್ಮತ್ರಯವನ್ನೂ, ಆಣವಾದಿ ಮಲತ್ರಯವನ್ನೂ ಬಿಟ್ಟು ಕೇವಲ ಜ್ಞಾನವೇ ಮುಖ್ಯವಾದದ್ದೆಂದು ತಿಳಿದು, ಜೀವಾತ್ಮನು ಸುಳ್ಳಾದ ಗುರುತುಗಳನ್ನು ಇಟ್ಟುಕೊಂಡು ಧ್ಯಾನಿಸುತ್ತಾ ತನ್ಮಯವಾಗಿ ಇರಬೇಕೆಂಬುದನ್ನೂ ಬಿಟ್ಟು, ಸದ್ವ್ಯಾಪಾರಗಳಿಂದ ಕಾರ್ಯಗಳನ್ನು ನಡೆಯಿಸುವಂತೆ ಮಾಡುವ ಚಿದಾಕಾಶವನ್ನು ॥೩॥

ಈಶ್ವರನಿಗೊಬ್ಬಗಲ್ಲದೆ ಉಳಿದ ಬ್ರಹ್ಮಾದಿ ದೇವತೆಗಳಿಗೆ ಕೃರ್ತತ್ವವಿಲ್ಲವೆಂದು, ಸಮಸ್ತ ವಿಧವಾದ ಉಪದೇಶಗಳಿಗೂ ಯೋಗಸಿದ್ಧಿಗಳಿಗೂ ತಾನೆ ವಿಷಯವೆನಿಸಿಕೊಂಡು ಅವುಗಳಿಗೆ ಫಲವನ್ನು ಕೊಡುವ ಬ್ರಹ್ಮವನ್ನು ॥೪॥

ತಿಳಿದು ಗಾರುಡ ಮೊದಲಾದ ತಂತ್ರಸಿದ್ಧಿಗಳನ್ನು ಅಪೇಕ್ಷಿಸಿ, ತಮ್ಮ ತಮ್ಮ ಮತಾನುಸಾರವಾಗಿ ದೀಕ್ಷೆಯನ್ನು ವಹಿಸಿ ಮಾಯಾ, ಕರ್ಮಗಳೆಂಬ ಹಗ್ಗದ ಕಟ್ಟನ್ನು ತಪ್ಪಿಸಿಕೊಂಡು, ಮೋಕ್ಷವನ್ನು ಹೊಂದಿರುವರೆಲ್ಲರನ್ನೂ ತನ್ನ ಸಂಪತ್ತನ್ನು ಅನುಭವಿಸುವವರನ್ನಾಗಿ ಮಾಡಿಕೊಂಡಿರುವ ಕುಟಿಲೆಯೆಂಬ ಶಕ್ತಿಯನ್ನೂ ॥೫॥

ಆಧಾರ ಮೊದಲಾದ ಒಂಭತ್ತು ಚಕ್ರಗಳಲ್ಲಿ ಸೂರ್ಯಚಂದ್ರಾಗ್ನಿ ಮಂಡಲಗಳ ಮಧ್ಯದಲ್ಲಿ ಅಪರಿಮಿತವಾದ ಕಾಂತಿಯನ್ನೂ ನಾದವನ್ನೂ ತೋರಿಸಿ ಯೋಗಿಗಳಿಗಾನಂದವನ್ನುಂಟುಮಾಡುವ ಈಶ್ವರನ ಅರ್ಧದೇಹವಾದ ವಾಗೀಶ್ವರೀಯೆಂಬ ಶಕ್ತಿಯನ್ನೂ ॥೬॥

ಉಪಾಧಿರಹಿತನಾಗಿರವ ಈಶ್ವರನನ್ನು, ಯೋಗಿಗಳ ಮನದೃಷ್ಟಿಗಳಿಗೆ ಸ್ಪಷ್ಟವಾಗಿ ತೋರ್ಪಡಿಸುವ ವಿದ್ಯೆಯೆಂಬ ಶಕ್ತಿಯನ್ನೂ ತಿಳಿವುದಕ್ಕೆ ಆಗಮಗಳಲ್ಲದೆ ಮತ್ತೊಂದು ಆಶ್ರಯಿಸಿದರೆ ಸಾಧ್ಯವಾದೀತೆ? ॥೭॥

೨೫

ಎಲೈ ಯೋಗಿಯೇ, ಚಿನ್ಮಯನಾದ ಪರಮೇಶ್ವರನನ್ನು ಮೊದಲು ಹೃದಯ ಕಮಲದಲ್ಲಿ ಧ್ಯಾನಿಸಿ ಪೂಜಿಸು ॥ಪ॥

ಧರ್ಮವೆಂಬ ಗಡ್ಡೆಯಿಂದಲೂ, ಜ್ಞಾನವೆಂಬ ದಂಟಿನಿಂದಲೂ, ಅಷ್ಟೈಶ್ವರ್ಯವೆಂಬ ಎಂಟು ದಳಗಳಿಂದಲೂ, ವೈರಾಗ್ಯವೆಂಬ ಕರ್ಣಿಕೆಯಿಂದಲೂ, ಈಶ್ವರನೇ ಮೊದಲಾದ ದೇವತೆಗಳೆಂಬ ಕಿಂಜಲ್ಕಗಳಿಂದಲೂ ಕೂಡಿದ ಚಂದ್ರನಂತಿರುವ ಹೃತ್ಕಮಲವನ್ನು ಧ್ಯಾನಿಸು ॥೧॥ ಸತ್ವಾದಿ ಗುಣ ಸಮೂಹವೂ, ಹಳದಿ ಮೊದಲಾದ ಬಣ್ಣಗಳೂ, ಸೂರ್ಯ, ಚಂದ್ರ, ಅಗ್ನಿ ಮಂಡಲಗಳೂ

ನಾದಬಿಂದುಗಳೂ, ಕುಂಡಲಿನೀಶಕ್ತಿ ಎಂಬ ಸರ್ಪದ ಪೆಡೆಯ ಬೆಳಗಿನ ವಲಯವುಳ್ಳ ಹೃತ್ಕಮಲವನ್ನು ಧ್ಯಾನಿಸು ॥೨॥

ತಾವರೆದಂಟಿನ ದಾರದಂತೆಯೂ, ತೃಣಧಾನ್ಯದ ಸೂಕ್ಷ್ಮವಾದ ಬಾಲದಂತೆಯೂ, ಮಿಂಚಿನಂತೆ ಹೊಳೆವ ಆಕಾರವುಳ್ಳ ಎಲ್ಲ ದಿಕ್ಕುಗಳನ್ನೂ ಪ್ರಕಾಶಪಡಿಸುವ ಶಂಭುಲಿಂಗನೆ ನೆಲಸಿರುವ ಹೃತ್ಕಮಲವನ್ನು ಧ್ಯಾನಿಸು. ॥೩॥

೩೬

ಮನಸ್ಸಿನಲ್ಲಿ ನೋಡಿ, ಸುಖರೂಪ ಸಾಮಗ್ರಿಗಳನ್ನು ತೆಗೆದುಕೊಂಡು ಶಿವನನ್ನು ಪೂಜೆಮಾಡು. ॥೫॥ ಶಿವನೆ ಸರ್ವಾಧಾರನೆಂಬುದು ಆಸನವೂ, ಎಲ್ಲವನ್ನೂ ಈಶ್ವರನೇ ಧರಿಸಿರುವನೆಂದು ತಿಳಿಯುವುದು ಆವ್ಹಾಹನವೂ, ಈಶ್ವರನ ಪಾದವೇ ಜಗತ್ತು ಎಂಬುವದೇ ಪಾದ್ಯವೂ, ಸದಾಶಿವನು ಆನಂದಸಾರನಾಗಿರುವನೆಂಬುದು ಅರ್ಘ್ಯವೂ ಆಗಿರುವನೆಂದು ಭಾವಿಸು ॥೧॥ ಶಿವನೇ ಮಹಾಪರಿಶುದ್ಧನಾಗಿರುವನೆಂಬುದು ಆಚಮನೀಯವು ನಿರ್ಮಲವಾದ ಶಾಂತಿಯೆಂಬುದೇ ಅಭಿಷೇಕವು. ಸಂಪೂರ್ಣವಾದ ಭಕ್ತಿಯೇ ವಸ್ತ್ರವು. ಅರಿಷಡ್ವರ್ಗವು ಬಂದು ಸೇರದಂತಿರುವದೇ ಯಜ್ಞೋಪವೀತವಾಗಿರುವದೆಂದು ಭಾವಿಸು ॥೨॥

ಹೆಚ್ಚಾದ ಮಂಗಳವುಂಟಾಗುವುದೇ ಅಲಂಕಾರವು. ಶಿವನ ಧ್ಯಾನದ ಅನುಭವವೇ ಗಂಧವು. ಶಿವನು ಕೃಪೆಯುಳ್ಳವನಾಗಿರುವುದೇ ಅಕ್ಷತೆಯು. ಮನಸ್ಸೇ ಹೂವು ವಿಷಯಾಭಿಲಾಷೆಯಿಲ್ಲದಿರುವುದೇ ಧೂಪವು. ಎಡೆಬಿಡದೆ ನೆನಪಿನಲ್ಲಿರುವ ಜ್ಯೋತಿಸ್ಸ್ವರೂಪವೇ ದೀಪವು ಆಗಿರುವುದು. ॥೩॥

ಭೇದಬುದ್ಧಿ ಇಲ್ಲದಿರುವುದೇನೈವೇದ್ಯವು. ಸತ್ವಮೊದಲಾದ ಗುಣಗಳಲ್ಲಿ ಒಂದೇ ಸಮನಾದ ವೃತ್ತಿಯೇ ತಾಂಬೂಲವು. ಪ್ರಣವನಾದವೇ ವಾದ್ಯವು. ಆ ಪರಶಿವನೇ ನಾನು ಎಂಬುದೇ ಪ್ರದಕ್ಷಿಣೆಯು. ॥೪॥

ಶಿವತತ್ವ ಮೊದಲಾದ ಮೂವತ್ತಾರು ತತ್ವಗಳ ನಿಶ್ಚಯಜ್ಞಾನವೇ ನಮಸ್ಕಾರವು. ನ್ಯಾಯವಾದ ಯೋಗಮಾರ್ಗದಿಂದ ತನ್ನನು ಪರತರ ಶಂಭುಲಿಂಗ

ದಲ್ಲಿ ಕೂಡಿಸಿ ಲೀನವಾಗುವಂತೆ ಮಾಡುವುದೇ ವಿಸರ್ಜನೆಯು. ಇಂಥ ಶಿವ ಪೂಜೆಯನ್ನು ಮಾಡಿರಿ. ॥೫॥

೩೭

ಈ ಕೆಳಗೆ ಹೇಳುವ ಐದು ಬಗೆಯಾದ ಶಿವಯೋಗವನ್ನು ಅಭ್ಯಾಸ ಮಾಡಿದರೆ ಕಷ್ಟವು ತೊಲಗಿ ಶಾಶ್ವತವಾದ ಮೋಕ್ಷವು ಲಭಿಸುವದು ॥ಪ॥

'ನಿವೃತ್ತಿ' ಮೊದಲಾದ ಕಳೆಗಳಲೊಂದು ಕಳೆಯೂ. 'ಉಕ್ತ' ಮೊದಲಾದ ಛಂದಸ್ಸಗಳಲ್ಲಿಯ ಒಂದು ಛಂದಸ್ಸೂ, 'ವಾಮದೇವ' ಮೊದಲಾದ ಋಷಿಗಳಲ್ಲಿ ಒಬ್ಬ ಋಷಿಯೂ, 'ಕ್ರಿಯಾಶಕ್ತಿ' ಮೊದಲಾದ ಶಕ್ತಿಗಳಲ್ಲಿ ಒಂದು ಶಕ್ತಿಯೂ. ಯಾವುದಾದರೊಂದು 'ಬೀಜ'ವೂ, 'ಸಪ್ತಸ್ವರ'ಗಳಲ್ಲಿ ಒಂದು ಸ್ವರವೂ. 'ಪೃಥ್ವೀ' ಮೊದಲಾದವುಗಳಲ್ಲಿ ಒಂದು ತತ್ವವೂ, 'ನೂರೊಂದರಲ್ಲಿ' ಒಂದು ಕುಲವೂ, 'ದೇವತೆಗಳಲ್ಲಿ, ಒಂದು ಇಷ್ಟ ಅಕ್ಷರಗಳೆಂಬ ಎಣಿಕೆಯೂ, ಯೋಗ್ಯವಾದ ಅರ್ಥವುಳ್ಳ ಎರಡು ಅಕ್ಷರಗಳು ಮೊದಲಾಗಿ ಹನ್ನೆರಡು ಅಕ್ಷರಗಳ ವರೆಗೂ ಇರುವ ಮಂತ್ರಗಳನ್ನು ಜಪಮಾಡುತ್ತ ಈಶ್ವರನಲ್ಲಿ ಮನವು ಮಗ್ನವಾಗುವಂತೆ ಮಾಡುವದು ಮಂತ್ರಯೋಗವೆನಿಸುವದು. ॥೧॥

ಆಧಾರ ಮೊದಲಾದ ಆರು ಚಕ್ರಗಳಗಳಲ್ಲಿ, ನಾಲ್ಕು ದಳ ಮೊದಲಾದ ಆರು ವಿಧವಾದ ಕಮಲದಲ್ಲಿ ಮನಸ್ಸನ್ನು ಮಂತ್ರಗಳೊಡನೆ ಸೇರಿಸಿ ಚಂಚಲವಾಗದೆ ಮೂಲಾಧಾರವಾದ ಅಗ್ನಿಯೊಡನೆ ಸೇರಿಕೊಂಡು ಸುಷುಮ್ನಾ ನಾಡಿಯಲ್ಲಿ ಹತ್ತಿ, ಜ್ಞಾನ ಸ್ವರೂಪವಾದ ಬೆಳಕನ್ನು ಬಿಟ್ಟು ಬೇರಾಗದೆ ಇರುವುದೇ ಸ್ಪರ್ಶಯೋಗ ॥೨॥

ಕೈಕಾಲು ಮೊದಲಾದ ಅಂಗಗಳುಳ್ಳ ವಿಗ್ರಹರೂಪದಲ್ಲಿ ಈಶ್ವರನನ್ನು ಧ್ಯಾನಿಸುತ್ತ ಕ್ರಮಕ್ರಮವಾಗಿ ಒಂದೊಂದಾಗಿ ಬಿಟ್ಟು, ಸಚ್ಚಿದಾನಂದ ಸ್ವರೂಪನೇ ಪರಮಾತ್ಮನೆಂದು ತಿಳಿದು, ಆ ಚಿದಾನಂದರೂಪವನ್ನು ಮನಸ್ಸಿನಲ್ಲಿ ಧ್ಯಾನಿಸುತ್ತ ತನ್ನನ್ನು ಆ ಜ್ಯೋತಿರೂಪದಲ್ಲಿ ಲಯವಾಗುವಂತೆ ಮಾಡುವುದೇ ಭಾವಯೋಗವು ॥೩॥

ಅವಾಗ್ಮಾನಸಗೋಚರವಾದ, ಮನೋವ್ಯಾಪಾರಕ್ಕೆ ಗುರಿಯಾಗದ, ಭೂಮಿ ಮೊದಲಾದ ತತ್ವಗಳಲ್ಲಿ ಕೂಡದ, ನಾಮರೂಪಾದಿಗಳಿಲ್ಲದ, ಯೋಚಿಸುವದಕ್ಕೆ ಅಶಕ್ಯನಾದ, ಸಾಮ್ಯರಹಿತನಾದ, ಅದ್ವಿತೀಯನಾದ, ಶಾಶ್ವತನಾದ, ಅಪ್ರಮೇಯನಾದ. ಗುಣರಹಿತನಾದ ಪರಮಾತ್ಮನಲ್ಲಿ ಮನಸ್ಸು ಲೀನವಾಗುವುದೇ ಭಾವಯೋಗವು, ॥೪॥

ಮನಸ್ಸಿನ ಜ್ಞಾನಕ್ಕೂ ಅಜ್ಞಾನಕ್ಕೂ ಸಾಕ್ಷಿರೂಪಾಗಿರುವದು ಕೇವಲ ಜ್ಞಾನವೆಂದು ಹೇಳಿ ಗೊತ್ತುಮಾಡಿಕೊಂಡು ಕಣ್ಣಿಗೆ ಕಾಣಿಸುವ ಪ್ರಪಂಚವು ಹುಟ್ಟಿದರೂ, ನಾಶವಾದರೂ ತನ್ನರೂಪವನ್ನು ತೋರಿಸದೆ ಯಾವಾಗಲೂ ಏಕರೂಪವಾಗಿದ್ದು ಕೊರತೆಯನ್ನು ಬಿಟ್ಟು ಗುರುಶಂಭುಲಿಂಗದೊಡನೆ ತನ್ನ ಮನಸ್ಸನ್ನು ಒಂದುಗೂಡಿಸಿ ನಿಶ್ಚಲವಾಗಿರುವಂತೆ ಮಾಡಿಕೊಂಡಿರಲು ಮಹಾಯೋಗವೆನಿಸುವದು. ಈ ಯೋಗದಿಂದ ಸಂಪೂರ್ಣ ಮುಕ್ತಿಯು ಪ್ರಾಪ್ತವಾಗುವುದು, ॥೫॥

೩೮

ಎಲೈ ಜ್ಞಾನಶಕ್ತಿಯೇ, ಶರಣನೆಂಬ ಹೆಂಡತಿ ಮತ್ತು ಈಶ್ವರನೆಂಬ ಗಂಡ ಇವರಿಬ್ಬರ ಸಮಾನವಾದ ಸುಖದ ಬದುಕಿಗೆ ಸರಿದೊರೆಯಾವುದು ಪ್ರಪಂಚದಲ್ಲಿ ಮತ್ತಾವುದಿರುವುದು ? ॥೧॥ ಕಣ್ಣೆಂಬ ಪಟ್ಟಣದ ಈಡಾ, ಪಿಂಗಳಾ ಎಂಬ ಬೀದಿಗಳ ಮಧ್ಯದ (ಕುಂಡಲಿನಿಯ ತಲೆಯಲ್ಲಿ) ಅಲಂಕರಿಸಲ್ಪಟ್ಟ ಇಂದ್ರನೀಲಮಣಿಯ ಅರಮನೆಯಾಗಿರುವ ಕರೇಗುಡ್ಡಿಯ ಮಧ್ಯಭಾಗದಲ್ಲಿ ರತ್ನಕಾಂತಿಗಳಿಂದ ಪ್ರಕಾಶಿಸುವ ಶಯನ ಗೃಹದಲ್ಲಿ ಇರುವ ಪಕ್ಷಿಯ ಆಕಾರದ ಮಂಚದ ಬಳಿಗೆ ಮನಃಪೂರ್ವಕವಾಗಿ ಬಂದು ಸೇರುವೆ. ॥೧॥

ನಿರಿಗೆಯು ಬಿಚ್ಚಿಹೋಗುತ್ತಿರಲು, ಕುಪ್ಪಸವು ಜಾರಿ ಬೀಳಲು, ಜಾಗ್ರತೆಯಾಗಿ ಮುಂದೆ ಬರುತ್ತಿರಲಾಗಿ ನಾಚಿಕೆಯು ಓಡಿ ಹೋದದ್ದರಿಂದ ಗಾಢಾಲಿಂಗನ ಮಾಡಿಕೊಂಡು ಆ ಸುಖದಲ್ಲಿ ಮುಳುಗುತ್ತೆ, ॥೨॥

ಎರಡು ಆಲಿಕಲ್ಲುಗಳು ಬೇರೆಯಾಗಿದ್ದಾಗ್ಯೂ ಕರಗಿ ಒಂದಾಗಿ ನೀರಾಗುವಂತೆ ಶಂಭುಲಿಂಗನು. ಶರಣಸತಿಯನ್ನು ಕೂಡಿ ಸಂಪೂರ್ಣವಾದ ಆನಂದ

ದಿಂದ ಐಕ್ಯಭಾವವನ್ನು ಹೊಂದಿ ಇರುವದನ್ನು ಹೋಲುವಂಥದು ಬೇರೆ ಯಾವುದಾದರೂ ಇರುವುದೇ ? ॥೩॥

ಯೋಗಿಗೆ ಐದು ಅವಸ್ಥೆಗಳು ವಿಶೇಷವಾದವುಗಳು ಇರುತ್ತವೆ, ಅವುಗಳನ್ನು ತಿಳಿದವನನ್ನು ಕೂಡಲೇ ಮುಕ್ತಿಯೆಂಬ ಕನ್ಯೆಯು ಮೆಚ್ಚಿ ಮದುವೆಯಾಗುವಳು, ಅವುಗಳನ್ನು ಹೇಳವೆನು ಕೇಳು. ॥೪॥

ಇಹ ಹಾಗೂ ಪರಲೋಕ ಸುಖಗಳನ್ನು ಆಶಿಸದೆ ನಿಶ್ಚಯವಾದ ಮುಕ್ತಿಯು ತನಗೆ ಹೇಗೆ ಆದೀತು ಎಂದು ವೇದಗಳನ್ನೂ, ಗುರುಗಳನ್ನೂ ವಿಚಾರಿಸಿ ತಿಳಿದು ಸಹಜ, ಶಮೆ, ಸತ್ಯಸಂಧತೆಯನ್ನುಳವಡಿಸಿಕೊಂಡು ಸತ್ಪುರುಷರ ಸಹವಾಸ ಮೊದಲಾದ ಅನೇಕ ಸುಗುಣಗಳಿಂದ ಕೂಡಿ ಜಾಗರೂಕನಾಗಿರುವದೇ ಜಾಗ್ರದವಸ್ಥೆ. ॥೧॥

ಬಿಸಿಲು ಕುದುರೆ, ಕಾಮನ ಬಿಲ್ಲು, ಶರತ್ಕಾಲದ ಮೋಡ ಇವುಗಳಂತೆ ಸುಳ್ಳಾದ ಭ್ರಾಂತಿ ಜ್ಞಾನವನ್ನುಂಟುಮಾಡುವ ಪಂಚಭೂತಗಳು, ತದ್ವಿಕಾರವಾದ ಲೋಕಗಳೇ ವಸ್ತುಗಳನ್ನು ಸುಳ್ಳೆಂದು ತಿಳಿದು ಜೀವಾತ್ಮನೇ ಪರಮಾತ್ಮನಾಗಿರುವನೆಂಬ ಅಭಿಪ್ರಾಯವನ್ನು ಹೊಂದಿರುವದು ಸ್ವಪ್ನಾವಸ್ಥೆ. ॥೨॥

ಭೇದಜ್ಞಾನವು ಹೋಗಿ, ಸರ್ವವೂ ಒಂದೇ ಎಂಬ ಅದ್ವೈತಜ್ಞಾನವು ಉಂಟಾಗುವ ಬ್ರಹ್ಮೋಪದೇಶವನ್ನು ಹೊಂದಿ, ಆಗಾಮಿ, ಸಂಚಿತ, ಪ್ರಾರಬ್ಧ ಕರ್ಮಗಳು ನಾಶವಾದವು ಎಂಬ ಅಭಿಪ್ರಾಯವೂ ತೋರದೆ ನಿಶ್ಚಲವಾದ ಮನಸ್ಸು ಉಂಟಾದರೆ ಅದು ಸುಷುಪ್ತ್ಯವಸ್ಥೆಯು. ॥೩॥

ಬಯಲಲ್ಲಿಟ್ಟಿರುವ ಗಡಿಗಿಯ ಹಾಗೆ ಒಳಗೆ ಹೊರಗೆ ಎಂಬ ಭಾವನೆ ಇಲ್ಲದೆ ಸಂಶಯವನ್ನು ಬಿಟ್ಟು, ಸಮುದ್ರದಲ್ಲಿ ಮುಳುಗಿದ ಗಡಿಗೆಯಂತೆ ಎಲ್ಲಾ ಕಡೆಗೂ ಒಂದೇ ಒಂದಾದ ವಸ್ತುವು ಇದೆಯೆಂಬ ಭಾವನೆಯು ದೃಢವಾಗಿ ನಿಂತು ಬಯಲಾಗಿರುವುದೇ ತುರ್ಯಾವಸ್ಥೆ ॥೪॥

ದೇಹವನ್ನು ಮಾತ್ರ ಧರಿಸಿ, ಧನಕನಕಾದಿಗಳಲ್ಲಿ ಆಸೆಯು ಸ್ವಲ್ಪೂ ಇಲ್ಲದೆ ಸರ್ವಸಾಕ್ಷಿಕನಾಗಿ, ಕೇವಲ ಸುಖಸ್ವರೂಪನಾಗಿ ಇರುವ ಶಂಭುಲಿಂಗನೇ ತಾನಾಗಿ ನಿಂತು ಎಲ್ಲ ಮತ ಸಿದ್ಧಾಂತದವರು ತನ್ನನ್ನು ಹೊಗಳುತ್ತಿರಲು ಅದು ತುರ್ಯಾತೀತಾವಸ್ಥೆಯೆನಿಸುವುದು. ॥೫॥

ಇತಿ ಶಿವಯೋಗ ಸಮಾಪ್ತ

ಜ್ಞಾನ ಪ್ರತಿಪಾದನಸ್ಥಲ

೧

ಆರು ಪ್ರಕಾರದ ಸಾಧಕರಿಗೆ ಅನುಕೂಲವಾಗಿ ಆರು ರೀತಿಯಲ್ಲಿ ಉಪದೇಶಿಸುವ ಆರು ಬಗೆಯ ಗುರುಗಳ ರೀತಿಯನ್ನು ಹೇಳುತ್ತೇನೆ. ॥ಪ॥ ಮತ್ತೊಬ್ಬರಿಂದ ಪದಾರ್ಥಗಳನ್ನು ಎಳೆಯುವದಕ್ಕೆ ಅವರನ್ನು ಮರುಳು ಮಾಡುವುದನ್ನೂ, ರಾಜರು ಮೊದಲಾದವರನ್ನು ವಶಮಾಡಿಕೊಳ್ಳುವುದನ್ನೂ ತಿಳಿಸಿ, ಇಹಲೋಕದಲ್ಲಿ ಸುಖ-ದುಃಖವೆರಡನ್ನೂ ಉಂಟುಮಾಡುವವನ್ನು ನಿಷೇಧಗುರುವೆಂತಲೂ, ಈ ಲೋಕದಲ್ಲಿ ಬೇಕಾದ ಸುಖಗಳನ್ನೂ ಪರಲೋಕದಲ್ಲಿ ಸದ್ಗತಿಯನ್ನೂ ಉಂಟುಮಾಡಿ ಕೊಡುವವನು ಕಾಮ್ಯಗುರುವೆಂತಲೂ ಹೇಳಿಸಿಕೊಳ್ಳುವನು. ॥೧॥

ಭೇದಬುದ್ಧಿಯನ್ನುಂಟುವ ಮಾಡುವ ಮಾರ್ಗಗಳು ಸರಿಯಲ್ಲವೆಂದು ಹೇಳಿ ಶಾಂತಿಯನ್ನೂ ಇಂದ್ರಿಯ ನಿಗ್ರಹವನ್ನೂ ಉಪದೇಶ ಮಾಡುವವನು ಸೂಚಕ ಗುರುವೆನಿಸುವನು. ವೇದೋಕ್ತವಾದ ಮಾರ್ಗದಲ್ಲಿ ತತ್ತ್ವೋಪದೇಶ ಮಾಡುವವನು ವಾಚಕ ಗುರುವೆಂದು ಹೇಳಿಸಿಕೊಳ್ಳುವನು. ॥೨॥

ಜೀವಾತ್ಮ, ಪರಮಾತ್ಮ, ತುರ್ಯವೆಂಬ ವಸ್ತುಗಳ ಯಥಾರ್ಥವಾದ ಅನುಭವವನ್ನು ತಿಳಿಸುವವನು ಕಾರಕಗುರುವೆನಿಸಿಕೊಳ್ಳುವನು. ಪರಿಶುದ್ಧ ಚೈತನ್ಯ ಸ್ವರೂಪನಾದ ಶಿವನಲ್ಲಿ ಲೀನವಾಗುವ ಉಪಾಯವನ್ನು ತಿಳಿಸಿಕೊಡುವವನು ವಿಹಿತ ಗುರುವೆಂದು ಹೇಳಲ್ಪಡುವನು. ॥೩॥

೨

ಸರಿಯಾದ ವಿಧಿಯನ್ನನುಸರಿಸದ ಹೊರತು ಸುಮ್ಮನೆ ಮುಕ್ತಿಯಾದೀತೆ ? ॥ಪ॥ ಬ್ರಹ್ಮವಸ್ತುವು ನಿತ್ಯವಾದದ್ದು, ಜಗತ್ತು ಅಶಾಶ್ವತವಾದದ್ದು ಎಂಬುದನ್ನು ತಿಳಿಯದೆ, ಮನಸ್ಸಿನಲ್ಲಿ ವಿಷಯಭೋಗಾಪೇಕ್ಷೆಯನ್ನು ಬಿಡದೆ,

ಆರು ವಿಧವಾದ ಸಾಧನಗಳಲ್ಲಿ ತೊಡಗದೆ, ಮೋಕ್ಷವನ್ನು ಪಡೆಯಬೇಕೆಂಬ ಆಸೆಯಿಂದ ಪರಿತಪಿಸದೆ ॥೧॥ ಮನಃಪೂರ್ವಕವಾದ ಪ್ರೀತಿಯಿಂದ ಗುರುಶುಶ್ರೂಷೆ ಮಾಡದೆ, ಚತುರ್ವೇದಗಳನ್ನೋದಿ ಹಾಡದೆ, ದೇಹಾಭಿಮಾನವೇ ಮೊದಲಾದ ತೊಂದರೆಗಳನ್ನು ಕಳೆದುಕೊಳ್ಳದೆ, ಜೀವಾತ್ಮ ಪರಮಾತ್ಮರನ್ನು ಒಂದು ಮಾಡದೇ ॥೨॥ ತಾನು ತನಗಿಂತ ಬೇರೆಯಾದದ್ದು ಎಂಬ ಭೇದಜ್ಞಾನವನ್ನು ಬಿಡದೆ, ತಾನು ಜೀವನೆಂಬ ಭಾವನೆ ಬಿಟ್ಟುಹೋಗದೆ, ಅಸದೃಶವಾದ ಈಶ್ವರ ಚೈತನ್ಯವೇ ತಾನಾಗಿ ಬೇರೊಂದು ಪದಾರ್ಥವಿಲ್ಲೆಂದು ಏಕಾಕಿಯಾಗಿ ನಿಲ್ಲದೆ ಸರಿಯಾದ ಮಾರ್ಗವಿದೆಂದು ತಿಳಿಯದೆ ಸುಮ್ಮನೆ ಮುಕ್ತಿಯಾದೀತೆ ? ॥೩॥

ಗುರುಶಿಷ್ಯ ಲಕ್ಷಣಂ

೨

ಭೋಗಗಳನ್ನೂ ಮೋಕ್ಷವನ್ನೂ ಹೊಂದಬೇಕೆಂಬ ಅಪೇಕ್ಷೆಯುಳ್ಳವರು ಜ್ಞಾನವೈರಾಗ್ಯೋಪರತಿಗಳನ್ನು ಸರಿಯಾಗಿ ಸಾಧನೆ ಮಾಡಬೇಕು. ॥ಪ॥

ಶ್ರವಣ, ಮನನ ನಿಧಿಧ್ಯಾಸನಗಳು ಜ್ಞಾನಕ್ಕೆ ಕಾರಣವು. ಆತ್ಮ ಅಹಂಕಾರಗಳ ವಿವೇಕವೇ ಜ್ಞಾನಸ್ವರೂಪವು. ಸಂಸಾರಕ್ಕೆ ಸಾಕ್ಷಿಯಾಗಿರುವಿಕೆಯೇ ಜ್ಞಾನಕಾರ್ಯವು ಎಂದು ಬಲ್ಲವರು ಹೇಳುವರು. ॥೧॥ ದೋಷಗಳೇ ವೈರಾಗ್ಯಕ್ಕೆ ಕಾರಣವು. ಆ ವಿಷಯಗಳ ಸುಖಗಳನ್ನು ಬಿಟ್ಟುಬಿಡುವುದೇ ವೈರಾಗ್ಯಸ್ವರೂಪವು. ಪುನಃ ಆ ಕಡೆಗೆ ಮನಸ್ಸು ಹೋಗದಿರುವುದೇ ಕಾರ್ಯವು, ಈ ಮೂರು ವೈರಾಗ್ಯದ ಭಾಗಗಳು. ॥೨॥ ಮೋಕ್ಷಾಪೇಕ್ಷೆಗೆ ಯಮಾದಿಯಾದ ಅಷ್ಟಾಂಗಯೋಗವೇ ಕಾರಣ. ಯೋಗದಲ್ಲಿ ಮನಸ್ಸು ಸ್ಥಿರವಾಗಿ ನಿಲ್ಲುವುದೇ ಮೋಕ್ಷಾಪೇಕ್ಷೆಯ ಸ್ವರೂಪವು ಬಾಹ್ಯ ವ್ಯಾಪಾರಗಳನ್ನು ಬಿಟ್ಟಿರುವುದೇ ಕಾರ್ಯವು, ಈ ಮೂರೂ ಮೋಕ್ಷಾಪೇಕ್ಷೆಯ ಭಾಗಗಳು. ॥೩॥ ಈ ಮೂರರಲ್ಲಿ ಜ್ಞಾನವಿಲ್ಲದೆ ವೈರಾಗ್ಯ ಮೋಕ್ಷಾಪೇಕ್ಷೆಗಳು ಮಾತ್ರವಿದ್ದರೆ ಮುಕ್ತಿಯಾಗುವುದಿಲ್ಲ ; ಸ್ವರ್ಗವು ಮಾತ್ರ ಉಂಟಾಗುವದು. ಜ್ಞಾನವಿದ್ದು ವೈರಾಗ್ಯವೂ, ಮೋಕ್ಷಾಪೇಕ್ಷೆಯೂ ಇಲ್ಲದಿದ್ದರೆ ಮೋಕ್ಷ ಮಾತ್ರ ಸಿದ್ಧಿಸುವುದು. ಪ್ರಾರಬ್ಧ ಕರ್ಮ ಬಿಡುವುದಿಲ್ಲ. ॥೪॥

ಸಕಲ ವಿಷಯಸುಖಗಳನ್ನೂ ಹುಲ್ಲಿಗಿಂತಲೂ ಕಡೆಯಾಗಿ ಭಾವಿಸುವದೇ ವೈರಾಗ್ಯಕ್ಕೆ ಮೇರೆ, ಪರವಶನಾಗಿ ಮಹಾದೇವನಲ್ಲಿ ಕೂಡುವುದೇ ಮೋಕ್ಷಾಪೇಕ್ಷೆಗೆ ಎಲ್ಲೆ. ತಾನೇ ಶಿವನೆಂದೂ ತಾನು ಬೇರೊಬ್ಬನಲ್ಲವೆಂತಲೂ ಭಾವಿಸುವುದೇ ಜ್ಞಾನಕ್ಕೆ ಅವಧಿ ಎಂದು ತಿಳಿಯಬೇಕು. ॥೫॥

೪

ಜ್ಞಾನದಿಂದ ಮೋಕ್ಷವುಂಟಾಗುವದೆಂದು ಹೇಳಿದರೆ ಆತ್ಮಜಿಜ್ಞಾಸುಗಳು. ಮುಮುಕ್ಷುಗಳು ಮುಂದೆ ಹೇಳಿರುವಂತೆ ನಡೆಯಬೇಕು, ಹೇಗೆಂದರೆ ।೧॥

ಶುಚಿಯಾಗಿ ನಿತ್ಯಕರ್ಮಗಳನ್ನು ಮಾಡುತ್ತಿರುವದರಿಂದ ಧರ್ಮವೃದ್ಧಿಯಾಗವದು. ಧರ್ಮದಿಂದ ಪಾಪವು ನಾಶವಾಗುವದು. ॥೨॥ ಆದರಿಂದ ಮನಶ್ಶುದ್ಧಿಯಾಗುವುದು. ಮನೋನೈರ್ಮಲ್ಯದಿಂದ ಸಂಸಾರದಲ್ಲಿರುವ ದೋಷಗಳು ತಿಳಿದುಬರುವವು. ಅದರಿಂದ ವೈರಾಗ್ಯವುಂಟಾಗುವದು. ಅದರಿಂದ ಮೋಕ್ಷಾಪೇಕ್ಷೆ ಹುಟ್ಟುವದು ॥೩॥

ಕೂಡಲೇ ಕರ್ಮೋಪರತಿ ಶಾಂತಿ, ಮೊದಲಾದವುಗಳಲ್ಲಿ ಪ್ರೀತಿಯುಂಟಾಗಿ ಯೋಗವಮಾಡಬೇಕೆಂಬ ಇಚ್ಛೆಯುಂಟಾಗುವದು. ಆ ಯೋಗಾರೂಢತ್ವದಿಂದ ದಿವ್ಯಜ್ಞಾನವೂ, ಅದರಿಂದ ಮುಕ್ತಿಯೂ ಉಂಟಾಗುವದು. ॥೪॥

೫

ವೇದಾಧ್ಯಯನ ಸಂಪನ್ನರಾಗಿ ಆದರಲ್ಲಿ ನಂಬಿಕೆಯುಳ್ಳ ಯೋಗಿಗಳು ಮುಂದೆ ಹೇಳುವ ರೀತಿಯಿಂದ ಮುಕ್ತಿ ದೊರೆವುದೆಂದು ಆಲೋಚಿಸಿ ತಿಳಿಯಬೇಕು. ॥೧॥ ಜ್ಞಾನದಿಂದ ಮಾಯೆಯೆಂಬ ಅಜ್ಞಾನವು ತೊಲಗುವುದು. ಅಜ್ಞಾನ ನಾಶವಾದ ಮೇಲೆ ಭೇದಬುದ್ಧಿ ಅಳಿದು ಹೋಗುವದು, ಆದರಿಂದ ರಾಗದ್ವೇಷಗಳು ತಪ್ಪಿಹೋಗುವವು. ಆಗ ವಿಧಿ ನಿಷೇಧಗಳೆಂದು ವ್ಯವಹರಿಸುವ ಮನೋವಿಕಾರವು ತಪ್ಪುವುದು. ॥೨॥ ವಿಷಯಗಳಲ್ಲಿ ಇಚ್ಛಾ ದ್ವೇಷಗಳೆರಡೂ ಇಲ್ಲದೆ ಹೋಗಲು, ಕರ್ತವ್ಯಾಕರ್ತವ್ಯಗಳೆಂಬುವು ಬಿಟ್ಟುಹೋಗುವವು. ಆಗ ಪುಣ್ಯ – ಪಾಪಗಳನ್ನು ನಿವೃತ್ತಿ ಮಾಡಬೇಕೆಂಬ ಅಭಿಪ್ರಾಯವೂ

ಇಲ್ಲದಿರಲು ದೇಹವು ನಶ್ವರವಾದದ್ದೆಂದು ತಿಳಿವ ಭಾವನೆಯು ತಪ್ಪಿ ಹೋಗುವದು,

ಮುಂದೆ ಸಂಸಾರ ಭಾವವು ತಿರಸ್ಕೃತವಾಗುವದು, ಅದರಿಂದ ಉತ್ತಮ ದೆಶೆಯು ಪ್ರಾಪ್ತವಾಗುವದು. ಅಗ ಹೇಳುವದಕ್ಕೆ ಅಶಕ್ಯವಾದ ಸುಖವು ಉಂಟಾಗುವದು. ಆದರಿಂದ ತಾನು ದೇವನಲ್ಲಿ ಲೀನವಾಗಿ ಅದ್ವಿತೀಯ ಜ್ಞಾನವುಳ್ಳವನಾಗಿ ಮುಕ್ತನಾಗುವನೆಂದು ತಿಳಿಯಬೇಕು, ॥೩॥

೬

ಎಲೈ ಮನುಷ್ಯನೇ ನೀನು ಜ್ಞಾನವನ್ನೇ ನಂಬು. ಮೋಕ್ಷಾಪೇಕ್ಷೆಯಿಂದ ಯಾಗಾದಿಕರ್ಮಗಳನ್ನು ಮಾಡುವ ಕಷ್ಟವನ್ನೂ ಬಿಡು. ॥೧॥ ಇಪ್ಪತ್ತೆಂಟು ಬಗೆಯಾದ ಆಗಮಗಳೂ, ಹದಿನೆಂಟು ಪುರಾಣಗಳೂ, ನಾಲ್ಕು ವೇದಗಳೂ ಇವುಗಳಲ್ಲಿ ವಿಧಿಸಲ್ಪಟ್ಟಿರುವ ಯಜ್ಞ, ದಾನ, ಜಪ, ನೀತಿ, ಯೋಗ, ಪೂಜೆ ಮೊದಲಾದವುಗಳನ್ನು ಆಚರಿಸುವದರಿಂದುಂಟಾಗುವ ಫಲವು, ಜ್ಞಾನವೊಂದನ್ನನುಸರಿಸುವುದರಿಂದುಂಟಾಗುವ ಪ್ರಯೋಜನದ ಕೋಟಿಭಾಗದಲ್ಲಿ ಒಂದು ಭಾಗಕ್ಕೆ ಸಮವಾಗಲಾರದ್ದರಿಂದ ॥೧॥ ದೇಹವನ್ನು ದಂಡಿಸಬೇಡ, ಮನೋನಿಗ್ರಹ ಮಾಡಬೇಡ, ಧನವನ್ನು ತ್ಯಾಗಮಾಡಬೇಡ, ಮನೆಯನ್ನು ಬಿಟ್ಟು ಕಾಡಿನಲ್ಲಿ ವಾಸಮಾಡಬೇಡ. ತತ್ವಜ್ಞಾನವು ಸ್ವಲ್ಪವಾದರೂ ಉಂಟಾದರೆ ನಿನ್ನ ಪಾಪವೆಲ್ಲವೂ ನಾಶವಾಗುವದಾದ್ದರಿಂದ ॥೨॥ ಮೋಕ್ಷಕ್ಕೆ ಜ್ಞಾನವೊಂದಲ್ಲದೆ ಬೇರೆ ಮಾರ್ಗವಿಲ್ಲೆಂದು ಪ್ರಮಾಣಕ್ಕೆ ನಿಧಿಯಾದ ವೇದವೇ "ನಾನ್ಯಃ ಪಂಥಾ ವಿದ್ಯತೇಽಯನಾಯ" ಎಂದು ಕೂಗಿ ಹೇಳುತ್ತಿದೆ, ನೀನು ಆ ಮಾರ್ಗವನ್ನು ಅನುಸರಿಸು. ಬ್ರಹ್ಮಜ್ಞಾನವು ಸಂಪೂರ್ಣವಾಗಿ ಬೆಳೆದರೆ ಪರಮಾನಂದ ಉಂಟಾಗುವದು. ॥೩॥

೭

ಎಲೈ ಯೋಗಿಯೇ ? ನೀನು ಪೂರ್ವದಲ್ಲಿದ್ದ ಮೌಢ್ಯವನ್ನು ಬಿಟ್ಟು ನನಗೆ ತಕ್ಕದ್ದು ಜ್ಞಾನವೇ ಎಂದು ಖಂಡಿತವಾಗಿ ನಂಬು, ॥೧॥ ಪಾಪವೆಂಬ

ಕಾಡಿಗೆ ಬೆಂಕಿಯಂತೆಯೂ, ಸಂಸಾರವೆಂಬ ಮೇಘಕ್ಕೆ ಬಿರುಗಾಳಿಯಂತೆಯೂ ಅಜ್ಞಾನವೆಂಬ ಕತ್ತಲೆಗೆ ಸೂರ್ಯನಂತೆಯೂ ಮನೋಭ್ರಾಂತಿಯೆಂಬ ಪರ್ವತಕ್ಕೆ ವಜ್ರಾಯುಧದಂತೆಯೂ, ತಾಪತ್ರಯವೆಂಬ ಕಮಲವನ್ನು ಕೊರಗಿಸುವಲ್ಲಿ ಹಿಮದಂತೆಯೂ ಇರುವ ಜ್ಞಾನವು ॥೧॥ ದಿವ್ಯಸುಖಕ್ಕೆ ಕ್ಷೀರಸಮುದ್ರವಾಗಿಯೂ, ಪುಣ್ಯಕ್ಕೆ ಮೇರುವಾಗಿಯೂ, ಮೋಕ್ಷಕ್ಕೆ ಉತ್ಪತ್ತಿಸ್ಥಾನವಾಗಿಯೂ, ಅಣಿಮಾದ್ಯಷ್ಟ ಸಿದ್ಧಿಗಳಿಗೆ ಕಲ್ಪವೃಕ್ಷವಾಗಿಯೂ, ವಿಷಯಗಳಿಗೆ ಆಶ್ರಯವಾಗಿಯೂ, ಎಲ್ಲಾ ಕಾರಣಗಳಿಗೂ ವಾಸಸ್ಥಾನವಾಗಿಯೂ ಇರುವ ಜ್ಞಾನವು ॥೨॥ ವೇದಗಳು ಹುಡುಕುತ್ತಿರುವ, ಋಷಿಗಳೆಲ್ಲರೂ ಧ್ಯಾನಮಾಡುತ್ತಿರುವ, ದೇವತೆಗಳ ಕೌಶಲಕ್ಕೂ ಕಾಣದ, ಪ್ರಪಂಚದ ಸೃಷ್ಟಿ ಸ್ಥಿತಿ ಲಯಗಳಿಗೆ ಒಳಗಾಗದ, ಪರಮೇಶ್ವರ ಸ್ವರೂಪವೇ ತಾನೆಂದು ಹೇಳಿಸಿಕೊಳ್ಳುವ ಜ್ಞಾನವು ॥೩॥

ಜ್ಞಾನೋತ್ಕರ್ಷಂ

೮

ಮನುಷ್ಯರು ತಮ್ಮನ್ನು ತಾವು ನೋಡಿ ತಿಳಿದುಕೊಳ್ಳುವದನ್ನು ಬಿಟ್ಟು ಉಳಿದವನ್ನು ನೋಡಿ ಬ್ರಹ್ಮನನ್ನು ತಿಳಿವೆವೆಂದು ಬಹಳ ಆಯಾಸ ಪಡುತ್ತಿರುವರು, ॥ಪ॥ ಆಲೋಚನೆ ಮಾಡಿ ಮೊದಲು ಪೃಥಿವ್ಯಾದಿ ಪಂಚಭೂತಗಳು ಅವುಗಳ ಅಂಶಗಳಿಂದುತ್ಪನ್ನವಾದ ಇಪ್ಪತ್ತೈದು ತತ್ವಗಳು, ಅನಾತ್ಮವಸ್ತುಗಳು ಅನಿತ್ಯವಾದವವು ಎಂದು ಅದನ್ನು ತಿರಸ್ಕರಿಸಿ, ಅಂತರಂಗದಲ್ಲಿ ಅಧಿಷ್ಠಾನರೂಪವೂ ನಿರ್ವಿಕಾರವೂ, ಜ್ಞಾನಸ್ವರೂಪವೂ ಆದ ಆತ್ಮನೇ ನಾನೆಂದು ತಿಳಿದುಕೊಳ್ಳುವ ಜ್ಞಾನವನ್ನು ನಿಶ್ಚಯಿಸದೆ ॥೧॥ ಜಾಗ್ರತ್‌ಸ್ವಪ್ನ ಸುಷುಪ್ತಿಗಳಲ್ಲಿ ವಿಶ್ವ ತೈಜಸ ಪ್ರಾಜ್ಞ ಎಂಬ ಹೆಸರಿನಿಂದ ಜೀವಾತ್ಮನು ಬದಲಾಯಿಸಿಕೊಂಡು ಹೊಂದುವ ಅವಸ್ಥೆಗಳಲ್ಲಿ ಉಂಟಾಗದೆ ಇರುವ, ದಿವ್ಯಾನಂದಕ್ಷೀರಸಮುದ್ರವಾದ ಆತ್ಮಸ್ವರೂಪವೇ ಇದೆ ಎಂದು ಆತ್ಮಜ್ಞಾನವನ್ನು ಪಡೆಯದೆ ॥೨॥ ತನ್ನಲ್ಲಿರುವ ತನ್ನಂತಿರುವ, ತನಗಿಂತ ಬೇರೆಯಾಗಿರುವುವೆಂಬ ಭೇದಜ್ಞಾನವನ್ನು ಪದಾರ್ಥಗಳಲ್ಲಿ ಕಾಣದೆ ಮಹದಾಕಾಶದಂತೆ ಏಕರೂಪ

ವಾಗಿರುವ ಮಹಾದೇವನನ್ನು ಬಿಟ್ಟು, ನಾನು ಬೇರೆಯೆಂಬ ಅನುಭವವನ್ನು ಹೊಂದದೆ ಬ್ರಹ್ಮವನ್ನು ತಿಳಿದೆವೆಂದು ಬಳಲುವರು. ॥೩॥

೯

ಎಲೈ ಮನುಜ ! ಪರಬ್ರಹ್ಮವು ನಿನಗಿಂತಲೂ ಬೇರೆ ಎಂದು ಭಾವಿಸದೆ, ಅದು ನೀನೇ ಆಗಿದ್ದೆ ಎಂದೂ ತಿಳಿ, ॥ಪ॥ ಇದು ಎಂಬುದಾಗಿ ತೋರಿಬರುವ ಜಗತ್ತೆಲ್ಲಕ್ಕೂ ಆಶ್ರಯವಾಗಿ, ನಾಶವಾಗದೆ ಕಾಣಬರುವ ಸತ್ತೇ ನಿನ್ನ ನಿಜ ವೆಂದು ತಿಳಿ. ॥೧॥

ಜಾಗ್ರತ್ ಸ್ವಪ್ನ, ಸುಷುಪ್ತಿ ಅವಸ್ಥೆಗಳಲ್ಲಿ ಕಾಣಸುವ ಎಲ್ಲವನ್ನು ಬೇರೆ ಮಾಡಿ ತಿಳಿಯುವ, ಯಾವುದಕ್ಕೂ ಗೋಚರಿಸದ, ಜ್ಞಾನಸ್ವರೂಪವಾದ ಚಿತ್ತೇನಿನ್ನ ನಿಜ ॥೨॥

ಇಂದ್ರಾದಿ ಸಮಸ್ತ ಪದವಿಗಳನ್ನೂ ಇಲ್ಲವೆನಿಸಿ ಸ್ವಾನಂದವುಳ್ಳ ಆತ್ಮನು ತಾನಾಗಿರುವ ಆನಂದಸ್ವರೂಪವೇ ತನ್ನ ಸ್ವರೂಪ ॥೩॥

ಮೊದಲು ಇಲ್ಲದೆ ಇದ್ದು, ಈಗ ಉಂಟಾಗಿದೆ ಎಂಬುವ ಕೃತಕವಾದ ಘಟ ಪಟ ಮೊದಲಾದ ನಶ್ವರವಸ್ತುಗಳ ಧರ್ಮವು ತನ್ನಲ್ಲಿಲ್ಲದೆ ಯಾವಾಗಿ ನಿಂದಲೂ ಯಾವಾಗ್ಯೂ ಇರುತ್ತಿರುವ ನಿತ್ಯ ತತ್ತ್ವವೇ ತನ್ನ ನಿಜ ॥೪॥

ಆಕಾಶ ಮೊದಲಾದ ಪಂಚಭೂತಗಳೂ ತನ್ನಲ್ಲಿ ಹುಟ್ಟಿರುವದರಿಂದ ತಾನೇ ಸರ್ವಕ್ಕೂ ಕಾರಣನಾಗಿರುವುದರಿಂದುಂಟಾದ ಪರಿಪೂರ್ಣತ್ವವೇ ತನ್ನ ನಿಜ, ಅಂತೂ ಸಚ್ಚಿದಾನಂದ ನಿತ್ಯ ಪರಿಪೂರ್ಣನೆಂದು ಹೇಳಿಸಿಕೊಳ್ಳುವದೆಲ್ಲ ಆತ್ಮವಸ್ತುವಾದ ನೀನೇ ಎಂದು ತಿಳಿ, ಬೇರೆ ಪರಬ್ರಹ್ಮವಸ್ತುವಿದೆಯೆಂದು ತಿಳಿಯಬೇಡ. ॥೫॥

೧೦

ಬ್ರಹ್ಮತತ್ತ್ವವು ಆಕಾಶದಂತೆ ನಿರವಯವಾಗಿ ಸ್ವಗತ, ಸಜಾತೀಯ ವಿಜಾತೀಯ ಭೇದವಿಲ್ಲದ್ದಾಗಿರುವದು, ॥ಪ॥ ಗಿಡಕ್ಕೆ ತನ್ನಲ್ಲಿಯ ಟೊಂಗೆ,

ಎಲೆ, ಹೂವು ಕಾಯಿ ಮೊದಲಾದ ಭೇದವು ಸ್ವಗತಭೇದವು ಸಜಾತೀಯ ಭೇದವು, ಗಿಡಕ್ಕೆ ಗಿರಿ, ನದಿ ಮೊದಲಾದ ಭೇದವು ವಿಜಾತೀಯ ಭೇದವು. ಹೀಗೆ ಪರಮಾತ್ಮನಲ್ಲಿ ಯಾವ ಭೇದಗಳೂ ಇರುವದಿಲ್ಲ. ||೧||

"ಏಕಮೇವಾದ್ವಿತೀಯಂ ಬ್ರಹ್ಮ" ಎಂಬ ಉಪನಿಷದ್ವಾಕ್ಯದಲ್ಲಿರುವ ಏಕಂ ಏವ ಅದ್ವಿತೀಯಂ ಎಂಬ ಮೂರು ಪದಗಳು ಮೇಲೆ ಹೇಳಿದ ಸ್ವಗತಾದಿ ಭೇದ ಗಳನ್ನು ನಿರಾಕರಿಸುವವು. ಅಂತೆಯೇ ಚಿದ್ರೂಪವಾದ ಬ್ರಹ್ಮವೊಂದೇ ಎಂದು ಸಿದ್ಧವಾಗುವದು. ||೨||

ಜಗತ್ತಿನಲ್ಲಿರುವ ಯಾವ ಪದಾರ್ಥಗಳಿಗೂ ಸ್ವಯಂ ಸತ್ತೆಯಿರುವದಿಲ್ಲ. ಅವು ನಶ್ವರ. ಕೇವಲ ಬ್ರಹ್ಮವೊಂದೇ ಶಾಶ್ವತವಾಗಿ ಉಳಿಯುವದು. ಅಂದ ಮೇಲೆ ಭೇದವೆಂಬುದು ಎಲ್ಲಿಂದ ಬರಬೇಕು, ||೩||

೧೧

ಎಲೈ ಮನುಜನೇ ! ಬ್ರಹ್ಮವೆಂಬುದು ನಿನ್ನಲ್ಲಿಯೇ ಇರುವದು. ಅದನ್ನು ನೀನು ವಿವೇಕದಿಂದ ಅನುಭವಿಸಿದರೆ ಮುಕ್ತನಾಗುವಿ. ||ಪ|| ಹಿಂದಿದ್ದ ದೇಹ, ಇಂದಿರುವ ದೇಹ, ಮುಂಬರುವ ದೇಹ ಇವು ಬೇರೆ ಬೇರೆಯಾಗಿದ್ದರೂ ಇವುಗಳಲ್ಲೆಲ್ಲ ಇದ್ದವನು ನೀನೊಬ್ಬನೆ. ಕರ್ಮಾನುಗುಣವಾಗಿ ದೇಹಗಳು ಭಿನ್ನವಾಗುವವು. ||೧||

ಜಾಗ್ರದವಸ್ಥೆಯಲ್ಲಿ ಸ್ವಪ್ನಸುಷುಪ್ತಿಗಳೂ, ಸ್ವಪ್ನಾವಸ್ಥೆಯಲ್ಲಿ ಜಾಗ್ರತ್ ಸುಷುಪ್ತಿಗಳೂ ಸುಷುಪ್ತ್ಯವಸ್ಥೆಯಲ್ಲಿ ಜಾಗ್ರತ್ ಸ್ವಪ್ನಗಳೂ ಇರುವದಿಲ್ಲ. ಆದರೆ ಅವೆಲ್ಲ ಅವಸ್ಥೆಗಳ ಅನುಭವವನ್ನು ಮಾಡಿಕೊಳ್ಳುವವನು ನೀನೊಬ್ಬನೆ ಯಾಗಿರುವಿ. ||೨||

ಬಾಲ್ಯ, ಯೌವನ, ವಾರ್ಧಕ್ಯ ಎಂಬ ಅವಸ್ಥೆಗಳು ದೇಹಕ್ಕೆ ಸಂಬಂಧಿ ಸಿದವುಗಳಲ್ಲದೆ ಅವು ಆತ್ಮನಿಗೆ ಸಂಬಂಧಿಸಿದವಲ್ಲ, ಭಿನ್ನವಾದ ಅದನ್ನೆಲ್ಲ

ತಿಳಿಯುವವನು ಒಬ್ಬನೇ ಆತ್ಮನು. ॥೩॥ ದಿನ, ಪಕ್ಷ, ಮಾಸ, ವರುಷ, ಯುಗ, ಕಲ್ಪ ಮೊದಲಾದ ಕಾಲಭೇದಗಳು ಒಂದರಲ್ಲೊಂದು ಇರುವದಿಲ್ಲ. ಅವು ಬರುವದನ್ನೂ, ಹೋಗುವದನ್ನೂ, ನೋಡುತ್ತ ಯಾವ ವಿಕಾರಗಳಿಲ್ಲ ದಿರುವವನು ಆತ್ಮನೊಬ್ಬನೇ ! ॥೫॥

ಜ್ಞಾನಾಜ್ಞಾನ, ವಿದ್ಯಾವಿದ್ಯೆಗಳನ್ನು ಅದ್ವಿತೀಯನಾಗಿ ಅರಿಯುವ, ಚಿತ್ಸ್ವ ರೂಪನೇ ನೀನಾದ್ದರಿಂದ ನಿನ್ನಲ್ಲಿಯೇ ಬ್ರಹ್ಮವನ್ನು ತಿಳಿಯುವನಾಗು ॥೫॥

೧೨

ಪೃಥಿವೀ ಮೊದಲಾದ ಜಡತತ್ತ್ವಗಳಲ್ಲಿ ಕೂಡಿಕೊಳ್ಳದೆ ಅವುಗಳಿಗಿಂತ ವಿಲಕ್ಷಣವಾದ ಪರತತ್ತ್ವವೇ ನೀನೆಂದು ತಿಳಿದು ನೋಡು. ॥ಪ॥ ಅದು ಇದು ಎಂದು ಹೇಳಿಸಿಕೊಳ್ಳುವದೆಲ್ಲ ಸತ್ಯವಾಗದೆ ಅದೊಂದು ದಿನ ನಾಶವಾಗು ವದು, ಅವೆಲ್ಲ ಅಳಿದ ಮೇಲೆ ಉಳಿಯುವದೊಂದೇ ಸತ್ಯವು, ಅಖಂಡಿತವು, ಅದ್ವಿತೀಯವು ಆದ ಪರಬ್ರಹ್ಮವೆ ನೀನೆಂದು ತಿಳಿದು ನೋಡು. ॥೧॥ ನೋಡುವದಕ್ಕೆ ಸತ್ಯವೆಂದು ಕಾಣುತ್ತಿರುವ ಈ ಜಗವೆಲ್ಲ ಕನಸಿನಂತೆ ಅಸತ್ಯವೇ ಆಗಿರುವದು. ಜನನ ಮರಣ ಮೊದಲಾದ ವಿಕೃತಿಗಳೆಲ್ಲವೂ ದೇಹಕ್ಕೆ ಸಂಬಂಧಪಟ್ಟವುಗಳಲ್ಲದೆ ಆತ್ಮನಿಗೆ ಅವುಗಳ ಸಂಬಂಧವಿಲ್ಲವೆಂದು ವೇದವು ಸಾರುತ್ತದೆ. ಅದಕ್ಕಾಗಿ ನಿನ್ನ ನಿಜಸ್ವರೂಪವನ್ನು ತಿಳಿದು ನೋಡು. ॥೨॥ ಭೂಮಿ ಮೊದಲು ಮಾಡಿ ಮಾಯೆಯೇ ಕಡೆಯಾದ ಚರಾಚರಾತ್ಮಕವಾದ ಜಗತ್ತಿನಲ್ಲಿ ಕೂಡಿಕೊಳ್ಳದೆ ಅವುಗಳಿಗೆಲ್ಲ ಆಶ್ರಯವಾಗಿರುವ ಬ್ರಹ್ಮವೇ ನೀನೆಂದು ತಿಳಿ. ॥೩॥

೧೩

ಎಲೆ ಜೀವನೇ ! ನೀನು ಜನನ ಮರಣ ರೂಪವಾದ ಸಂಸಾರದಲ್ಲಿ ಸಿಕ್ಕುಕೊಂಡಿರುವೆನೆಂದು ತಿಳಿದಿರುವುದು ನಿಜವಲ್ಲ. ನಿನ್ನನ್ನು ನೀನು ಸರಿ ಯಾಗಿ ವಿಚಾರಿಸಿ ನೋಡಿಕೋ. ॥ಪ॥ ಬುದ್ಧಿಯು ಕೇವಲ ಹೊರಗಿನ ಚಿಂತೆಗಳನ್ನೆಲ್ಲ ಬಿಟ್ಟು ನಿರುಪಾಧಿಕವಾದ ನಾದದಲ್ಲಿ ನಿಶ್ಚಲವಾಗುವಂತಾದರೆ ಚೈತನ್ಯ ಸ್ವರೂಪನಾದ ಪರಶಿವನೇ ನೀನಾಗುವಿ. ॥೧॥

ದೇಹ, ಇಂದ್ರಿಯ, ಕಾರ್ಯ ಇವೆಲ್ಲವುಗಳನ್ನು ಭೂಮ್ಯಾದಿ ಪಂಚಕವನ್ನು ನೀತಿ ಭೀತಿಯನ್ನು ಮೀರಿನಿಂದು ನೋಡಲು ಪರಂಜ್ಯೋತಿಸ್ವರೂಪ ನೀನೇ ಆಗುವಿ. ॥೨॥

ಪಾಪರಹಿತನು, ಅದ್ವಿತೀಯನು, ನಿತ್ಯಮುಕ್ತನು, ನಿತ್ಯಾನಂದನು ಜನನ ಮರಣಾದಿ ವಿಕಾರರಹಿತನು ಆದ ಪರಮಾತ್ಮಸ್ವರೂಪನು ವೇದಹೇಳುವ "ತತ್ತ್ವಮಸಿ" ಎಂಬ ವಾಕ್ಯದಿಂದ ನೀನೇ ಅಗುವಿ, ಆದಕ್ಕಾಗಿ ವಿಚಾರಿಸಿ ನೋಡು.

—೦—

ಚಿದ್ರೂಪಾನುಸಂಧಾನಂ

೧೪

ಕೇವಲ ಚಿದ್ರೂಪವಾಗಿರುವ ಹಾಗು ಉಪಾಧಿರಹಿತವಾದ ಹೇ ಅರಿವೇ ನೀನು ಒಮ್ಮೆಯೂ ಮರೆಯದೆ ಜಗದ ಸ್ವರೂಪವನ್ನು ಈ ರೀತಿಯಾಗಿ ತಿಳಿದು ಕೊಳ್ಳುವೆ. ॥ಪ॥ ಜಾಗ್ರದವಸ್ಥೆಯಲ್ಲಿ ಜಡರೂಪವುಳ್ಳ ಈ ಜಗತ್ತನ್ನು ವಿಶ್ವ ನೆಂಬ ಹೆಸರುಳ್ಳ ಜೀವನಾಗಿ ಕಣ್ಣುಗಳಿಂದ ಪ್ರತ್ಯಕ್ಷವಾಗಿ ನೋಡುವೆ ॥೧॥ ಸ್ವಪ್ನದಲ್ಲಿ ಬಗೆಬಗೆಯ ಸಂಕಲ್ಪಗಳನ್ನು ತೈಜಸವೆಂಬ ಹೆಸರಿನಿಂದ ನೀನು ಮನಸ್ಸಿನ ಮೂಲಕ ತಿಳಿಯುವೆ. ॥೨॥ ನಿದ್ರೆಯಲ್ಲಿ ಶ್ರೇಷ್ಠವಾದ ಸುಖವನ್ನು ಮಾಯೆಯ ಮೂಲಕ ಪ್ರಾಜ್ಞನೆಂಬ ಹೆಸರಿನಿಂದ ತಿಳಿವೆ. ॥೩॥ ವಿಸ್ಮೃತಿ ಯನ್ನು ತಿಳಿವೆ. ಪೂರ್ವದ ವಿಷಯವನ್ನು ತಿಳಿಯುವೆ. ಜ್ಞಾನ ಅಜ್ಞಾನಗಳು ಸೋಂಕದ ಸ್ವರೂಪವನ್ನು ನೀನು ಅರಿವೆ. ॥೪॥ ಶ್ರೇಷ್ಠನಾದ ಶಂಭು ಲಿಂಗನು ತಾನೇ ಅರಿವು ಎಂಬದನ್ನು ವೃತ್ತಿಜ್ಞಾನವನ್ನು ತೊರೆದು ತಿಳಿ ಯುವೆ. ॥೫॥

೧೫

ಜ್ಞಾನವೇ ನೀನು ಎಂದು ಗುರು ಬೋಧಿಸಿದರೆ ಹಾಗೆ ತಿಳಿದುಕೊಳ್ಳು ವನೇ ಜಾಣ. ಆ ತಿಳಿವು ಉಂಟಾದಮೇಲೆ ತನಗಿಂತಲೂ ಬ್ರಹ್ಮವು ಭಿನ್ನ ವೆಂಬ ಭಾವನೆಯನ್ನು ಹೊಂದದವನು ಬಹಳ ಜಾಣನು. ॥ಪ॥ ಅರಿವೆ ಪರ ಬ್ರಹ್ಮವೆಂದು ಭಾವಿಸುವವನೆ ಜಾಣನು. ಅರಿವೆ ನಿತ್ಯನಿರ್ಮಲವೆಂದು ನೆನೆಯು ವವನೆ ಜಾಣನು. ಆ ಅರಿವೆ ಗುಣರಹಿತವಾದುದು, ವಿಕಾರರಹಿತವಾದುದು

ಎಂದು ತಿಳಿಯುವವನೇ ಜಾಣನು. ಅರಿವಿಲ್ಲದಿರುವುದು ಜಡವೆಂದರಿಯುವವನೇ ಜಾಣನು. ॥೧॥ ಅರಿವೆ ಸದಾನಂದ ಎಂದು ತಿಳಿಯುವವನೆ ಜಾಣನು. ಅರಿವು ಜ್ಯೋತಿರ್ಮಯವೆಂದು ತಿಳಿಸುವಾತನೇ ಜಾಣನು. ಅರಿವಿನಲ್ಲಿ ವಿಸ್ಮೃತಿಯು ಒಮ್ಮೆಯಾದರೂ ಇರಲಾರದೆಂದು ಬಗೆಯುವವನೇ ಜಾಣನು. ಅರಿವು ಜಾಗ್ರತ್, ಸ್ವಪ್ನ, ಸುಷುಪ್ತ್ಯವಸ್ಥೆಗಳಿಗೆ ಹೊರಗಾದುದೆಂದು ತಿಳಿವವನೇ ಜಾಣನು, ॥೨॥

ಅರಿವೆ ವಿಶ್ವಕ್ಕೆ ಆಧಾರವಾಗಿರುವದೆಂದೂ, ಅರಿವು ಇಲ್ಲದೆ ಯಾವ ಕಾರ್ಯವೂ ಆಗಲಾರದೆಂದು ಭಾವಿಸುವವನೂ, ಅರಿವು ತಾನೆ ಅರಿವುದು, ಅರುಹಿಸಿಕೊಳ್ಳುವುದು ಎಂಬುದನ್ನು ನಿಶ್ಚಯಿಸಿಕೊಳ್ಳುವವನೂ, ಅರಿದೆ ಸಕಲ ಶಾಸ್ತ್ರಕ್ಕೂ ಸಮ್ಮತವಾಗಿರುವುದೆಂದು ಭಾವಿಸಿಕೊಳ್ಳುವವನೇ ಜಾಣನು. ॥೩॥ ಅರಿವು ಜ್ಞಾತೃ, ಜ್ಞಾನಜ್ಞೇಯಗಳಿಗೆ ಮೂಲವಾಗಿರುವುದೆಂದು ತಿಳಿದವನೇ ಜಾಣನು. ತನ್ನ ಕಣ್ಣಲ್ಲಿ ಜ್ಞಾನರೂಪಾಗಿ ತೋರುವ ವಸ್ತುವೇ ತಾನು ಎಂದು ತಿಳಿವವನು ಜಾಣನು, ಅರಿವೇ ಹಲವು ವಿಷಯ ರೂಪವನ್ನು ತಾಳಿದೆಂದು ಅರಿವಿನಿಂದ ನೋಡುವವನೇ ಜಾಣನು. ಅರಿವೇ ಸತ್ಕ್ರಿಯೆಗಳಿಗೆ ಪ್ರಾಣರೂಪವಾಗಿರುವುದೆಂದು ತಿಳಿವವನೇ ಜಾಣನು. ॥೪॥ ಜ್ಞಾನವೇ ಶಾಸ್ತ್ರವೂ, ದೈವವೂ, ಗುರುವೂ ಎಂದು ಸೇವಿಸುವವನೂ, ಜ್ಞಾನವೇ ಇಹಪರಗಳಲ್ಲಿ ಸುಖರೂಪವಾದದ್ದೆಂದು ಪ್ರೀತಿಮಾಡುವವನು ಜ್ಞಾನಸ್ವರೂಪವೇ ತಾನು ಎಂಬುದರಲ್ಲಿ ನಂಬುಗೆಯುಳ್ಳವನು, ಶಂಭುಲಿಂಗವೇ ಅರಿವೆಂದರಿದವನು ಜಾಣನು. ॥೫॥

೧೬

ಎಲೈ ಜ್ಞಾನವೆ! ನಿನ್ನ ನಿಜಸ್ವರೂಪವನ್ನು ತಿಳಿಯುವದರಿಂದ ಮುಕ್ತಿಯು ಆಗುವದು ಖಚಿತವು ॥ಪ॥ ಬಾಹ್ಯವಾಗಿರುವ ರೂಪು, ರುಚಿ, ಗಂಧ ಮೊದಲಾದವನ್ನು ಜ್ಞಾನೇಂದ್ರಿಯಗಳಿಂದ ಬೇರೆ ಬೇರೆಯಾಗಿ ತಿಳಿಯುವ ಎಲೆ ಅರಿವೆ ॥೧॥ ಜಾಗ್ರತ್ ಸ್ವಪ್ನ, ಸುಷುಪ್ತಿಗಳೆಂದು ಮೂರು ಅವಸ್ಥೆಗಳು ಒಂದರೊಳೊಂದು ಬೆರೆಯದೆ ಬೇರೆ ಬೇರೆಯಾಗಿರುವವು, ಅವುಗಳೆಲ್ಲವುಗಳಿಗೆ ಸಾಕ್ಷಿಯಾಗಿ ಬೆಳಗುವ ಎಲೆ ಅರಿವೆ ॥೨॥

ಬಗೆಬಗೆಯಾದ ದೇಹಗಳು ಉಂಟಾದಾಗಲೂ ಆಯಾ ದೇಹವಾಸಿಯಾಗಿ ನಾಶ. ಚಾಪಲ್ಯ, ಭೇದಗಳು ಯಾವೂ ಇಲ್ಲದೆ ಅವುಗಳೊಡನೆ ಸೇರಿ ಪ್ರಕಾಶಿಸುವ ಎಲೆ ಅರಿವೆ ॥೩॥ ದಿನ, ಪಕ್ಷ, ಮಾಸ, ಭೂತ ಮೊದಲಾದ ಕಾಲ, ದೇಶಭೇದಗಳಲ್ಲಿ ಬೇರೆಯಾಗದೆ ಏಕರೀತಿಯಲ್ಲಿ ಅಖಂಡವಾಗಿರುವ ಎಲೈ ಅರಿವೆ ॥೪॥ ಕಣ್ಣು, ಮನ, ಜೀವಾತ್ಮ, ಪರಮಾತ್ಮ. ಈಶ್ವರ, ಪರಬ್ರಹ್ಮಮಯವಾದ ಶಂಭುಲಿಂಗ ರೂಪವೇ ತಾನೆಂದು ತಿಳಿವ ಎಲೈ ಅರಿವೆ ॥೫॥

೧೭

ಅರಿವೇ ತಾನು ಎಂದು ತಿಳಿದುಕೊಳ್ಳುವದೇ ಮುಕ್ತಿಯು. ತನ್ನಿಂದನ್ಯವಾದುದು ಬೇರೊಂದಿಲ್ಲವೆಂದು ವೇದವು ಹೇಳುತ್ತಿರುವುದು ॥ಪ॥ ದೇಹ, ಇಂದ್ರಿಯ ಸಮೂಹಗಳನ್ನು ಬಿಟ್ಟು, ಮನೋ ಬುದ್ಧಿ ಅಹಂಕಾರಗಳನ್ನು ನಾಶಮಾಡಿ. ಪಂಚ ಮಹಾಭೂತ ಸಮೂಹದ ವಿಷಯವನ್ನು ಬಿಟ್ಟು, ಘನಸ್ವರೂಪವಾದ ನಿರ್ಗುಣ ಬ್ರಹ್ಮತತ್ವವನ್ನು ಸಂಪಾದಿಸಿದವನೆ ಯೋಗಿಯು ॥೧॥ ವಿಕಾರರೂಪವಾದ ವಿಶ್ವವೆನ್ನುವ ಹೊಟ್ಟನ್ನು ತೂರಿ, ಪ್ರಕೃತಿ ಹಾಗೂ ಮಾಯೆಯನ್ನು ಹೊರಹಾಕಿ, ಒಳ್ಳೇ ಕರ್ಮಗಳನ್ನು ಮಾಡುವ ಅಥವಾ ಬಿಡುವ ವಿಚಾರರಸವು ಒಣಗಿಹೋಗಿ ಪ್ರಖ್ಯಾತವಾದ ಬಿಂದುವೆಂಬ ಶಿಖರವನ್ನು ಹತ್ತಿದವನು ಯೋಗಿಯು ॥೨॥

ಮನಸ್ಸಿನ ಸಂಕಲ್ಪ ವಿಕಲ್ಪಗಳು ಹೋಗಿ, ಜೀವಭಾವವನ್ನು ಕಳೆದುಕೊಂಡು ಶಂಭುಲಿಂಗನ ಪ್ರೀತಿಯು ತುಂಬಿ ಕೈವಲ್ಯವನ್ನು ಪಡೆದವನೆ ಯೋಗಿ ॥೩॥

೧೮

ಜೀವಭಾವವನ್ನು ಬಿಟ್ಟು ಸಚ್ಚಿದಾನಂದ ಸ್ವರೂಪವೇ ನಾನಿರುವೆನೆಂಬ ನಿಶ್ಚಯಾತ್ಮಕ ಸ್ಥಿತಿಯು ಯಾವ ಜನ್ಮದ ಪುಣ್ಯಫಲವೆಂದು ಕಂಡುಹಿಡಿಯಬಹುದು, ॥ಪ॥ ರಾಜನು, ಕುಣಿಯುವ ಸ್ತ್ರೀಯಳು, ತಾಳಮದ್ದಳೆಗಳನ್ನು ಬಾರಿಸುವವರು, ನಾಟಕವನ್ನು ನೋಡಲು ಕುಳಿತ ವಿದ್ವಾಂಸರು ಇವರೆಲ್ಲರನ್ನು

ಪ್ರಕಾಶಮಾಡುವ ನಾಟಕದ-ರಂಗಭೂಮಿಯಲ್ಲಿರುವ ದೀಪದಂತೆ, ಕೂಡಿದ ಅಹಂಕಾರ, ಬುದ್ಧಿ, ಇಂದ್ರಿಯ, ವಿಷಯ ಇವೆಲ್ಲವುಗಳ ವ್ಯವಹಾರಕ್ಕೆ ಸಾಕ್ಷಿಯಾದ ಚೈತನ್ಯರೂಪ ಪ್ರತ್ಯಗಾತ್ಮನು ನಾನಾಗಿರುವೆನೆಂಬ ಸುಖವನ್ನು ಆವ ಪುಣ್ಯದ ಫಲವಿದೆಂದು ಕುರುಹಿಡಿಯಬಹುದು ! ॥೧॥ ಇಮನೆಯ ಕಿಂಡಿಯಲ್ಲಿ ಬಿದ್ದಿರುವ ಸೂರ್ಯನ ಪ್ರಕಾಶದಲ್ಲಿ ಕೈಯನ್ನು ತಿರುಗಿಸಲು ಸೂರ್ಯನು ಚಲಿಸಿದನೆಂಬುವಂತೆ ಜನನಮರಣಾಧಿ ಧರ್ಮಗಳು ಜೀವನಿಗೆ ತೋರುತ್ತಿರಲು ಅವು ಸಾಕ್ಷಿಯಾದ ತನಗೆ ಸತ್ಯವಲ್ಲವೆಂದು ತಿಳಿದ ನಿಜಸ್ಥಿತಿಯನ್ನು ಆ ಜನ್ಮದ ಪುಣ್ಯವೆಂದು ತಿಳಿಯಲಿಕ್ಕಾಗದು. ॥೨॥

ಬೆಳಕನ್ನೂ, ಕತ್ತಲೆಯನ್ನೂ ಆಕಾಶವು ಹೊಂದಿದಾಗ್ಯೂ ಅವುಗಳು ಆಕಾಶವನ್ನು ಮುಟ್ಟಲಾರವು, ಅಂದರೆ ಆಕಾಶ ಸ್ವಚ್ಛವಾಗಿಯೇ ಇರುವದು. ಜೀವಾತ್ಮನು ಜ್ಞಾನ ಹಾಗೂ ಅಜ್ಞಾನಗಳೆರಡಕ್ಕೂ ಆಶ್ರಯನಾಗಿದ್ದರೂ ಅವುಗಳೊಡನೆ ಸೇರಲಾರದೆ ಇರುವನು. ಇದೇ ಶುದ್ಧ ಈಶ್ವರ ಸ್ವರೂಪವು. ಇದು ತಾನೆಂದು ತಿಳಿವುದು. ॥೩॥

೧೯

ಸ್ಥೂಲ, ಸೂಕ್ಷ್ಮ, ಕಾರಣವೆಂಬ ಮೂರು ದೇಹವನ್ನು ಹೊಂದಿಕೊಂಡಿರುವ ಜಾಗ್ರದಾದಿ ಮೂರು ಅವಸ್ಥೆಗಳಲ್ಲಿ ಸತ್ವ ರಜ ತಮಗಳೆಂಬ ಮೂರು ಗುಣಗಳಿಂದ ಕೂಡಿದ ವಿಶ್ವ, ತೈಜಸ ಪ್ರಾಜ್ಞರೆಂಬ ಮೂರು ಆತ್ಮರು ಆಣವ, ಮಾಯಾ, ಕಾರ್ಮಿಕವೆಂಬ ಮೂರು ದೋಷವನ್ನು ಹೊಂದದಂಥ ಬ್ರಹ್ಮಸ್ವರೂಪವೇ ತಾನೆಂದು ತಿಳಿದಮೇಲೆ ಹುಟ್ಟು ಸಾವುಗಳುಂಟೆ ? ॥ಪ॥ ಸ್ಥೂಲದೇಹವು ಇಪ್ಪತ್ತೈದು ತತ್ವಗಳೊಡನೆ ಕೂಡಿರುವದು. ಆ ದೇಹದಲ್ಲಿ ಸತ್ವಗುಣವೂ 'ಅ' ಎಂಬ ಅಕ್ಷರವೂ ಉಳ್ಳ ವಿಶ್ವನೆಂಬ ಜೀವನು ನೇತ್ರಸ್ಥಾನದಲ್ಲಿ ಎಂಟು ದಳದ ಕಮಲಗಳಲ್ಲಿ ಸಂಚರಿಸುತ್ತ ವೈಶ್ವಾನರನೆಂಬ ಗುರುವಿನೊಡನೆ ಸಕಲ ಸಾಧನಗಳಿಂದ ಕೂಡಿ, ಸ್ತ್ರೀ ಮೊದಲಾವ ವಿಷಯಗಳ ಸುಖವನ್ನು ಅನುಭವಿಸುವುದೇ ಜಾಗ್ರದವಸ್ಥೆ ॥೧॥ ಎರಡನೆಯದಾದ ಸೂಕ್ಷ್ಮ ಅಥವಾ ಲಿಂಗದೇಹವೆಂಬುದು ಹದಿನೇಳು ತತ್ವಗಳೊಡನೆ ಕೂಡಿ, ಕಂಠಸ್ಥಾನ

ಹಲ್ಲಿ ತೈಜಸನೆಂಬ ಜೀವನು ಹಿರಣ್ಯಗರ್ಭನೆಂಬ ಗುರುವಿನೊಡನೆ ರಜೋ ಗುಣದಿಂದ 'ಉ'ಕಾರವೆಂಬ ಅಕ್ಷರದಿಂದ ಸಂಚಾರ ಮಾಡುತ್ತಾ ಹೃತ್‌ಕಮಲದ ಬೀಜಕೋಶದಲ್ಲಿ ಜಾಗ್ರತ್ತಿನಲ್ಲಿ ವಿಷಯಗಳೊಡನೆ ಉಂಟಾಗಿದ್ದ ಸಂಸ್ಕಾರ ವನ್ನು ಮನಸ್ಸೆಂಬ ಕರಣದೊಡನೆ ಅನುಭವಿಸುವನು. ಇದೇ ಸ್ವಪ್ನಾವಸ್ಥೆ. ॥೨॥

ಎಲ್ಲ ತತ್ವಗಳ ಸಂಗವಿಲ್ಲದೆ ಕೇವಲ ಸಂಸ್ಕಾರ ಮಾತ್ರ ಉಳಿದು ಮಾಯೆ ಯೆಂಬ ಸಾಧನಮಾತ್ರದಿಂದ ತಾಮಸಗುಣವುಳ್ಳ ಕಾರಣ ಶರೀರದಲ್ಲಿ ಜೀವನು ಪ್ರಾಜ್ಞನೆಂಬ ಹೆಸರಿನಿಂದ ಈಶನೆಂಬ ಗುರುವಿನೊಡನೆ ಸೇರಿ, ಮಕಾರವೆಂಬ ಅಕ್ಷರದಲ್ಲಿ ಕೂಡಿ ಹೃತ್ಕಮಲ ಮಧ್ಯದಲ್ಲಿ ನಿರ್ಮಲವಾದ ಆನಂದವನ್ನು ಹೊಂದುವನು. ಇದೇ ಸುಷುಪ್ತಿ ॥೩॥ ಜಾಗ್ರದಾವಸ್ಥೆಯಲ್ಲಿ ಬಳಲಿದ ಮನಸ್ಸನ್ನು ಹೊರಗೆ ಬಿಡದೆ, ಒಳಗೆ ತೇಜೋನಿಧಿಯಾದ 'ಓಂ' ಎಂಬ ಪ್ರಣವಮಂತ್ರದ ನಾದವನ್ನು ಕೇಳುವುದೇ ತುರ್ಯಾವಸ್ಥೆ. ಆ ನಾದಾನು ಸಂಧಾನದಲ್ಲಿ ರಮಿಸುವ ಮನಸ್ಸು ಸ್ಥಿರವಾಗಿ ಚಲಿಸದಂತಿರುವುದೇ ತುರ್ಯಾ ತೀತಾವಸ್ಥೆಯು. ಈ ಎರಡರ ಅಭ್ಯಾಸಿಗೆ ಮೋಕ್ಷವು ದೊರೆವುದು. ॥೪॥

ಈ ರೀತಿಯಾದ ಜಾಗ್ರತ್, ಸ್ವಪ್ನ, ಸುಷುಪ್ತಿ. ತುರ್ಯ ಹಾಗೂ ತುರ್ಯಾ ತೀತವೆಂಬ ಐದು ಅವಸ್ಥೆಗಳಲ್ಲಿ ಮುಳುಗಿ ತೇಲುತ್ತ ಅನುತಾಪ, ಮಮತೆ, ಅಜ್ಞಾನ, ಜನನ ಮೊದಲಾದ ವಿಕಾರಗಳನ್ನು ಹೊಂದುತ್ತಿರುವ ಜೀವನೊಡನೆ ಸೇರದೆ ಸರ್ವಸಾಕ್ಷಿಯೂ, ಚಿದ್ರೂಪನೂ, ಕೂಟಸ್ಥನಾಗಿಯೂ, ನಿತ್ಯಾನಂದ ಸ್ವರೂಪನೂ ಆದ ಶಂಭುಲಿಂಗವೇ ತಾನಾದವನಿಗೆ ಮೇಲೆ ಹೇಳಲ್ಪಟ್ಟ ಅವಸ್ಥೆ ಗಳು ಒಂದೂ ಇರುವುದಿಲ್ಲ. ॥೫॥

೨೦

ಸಂಸಾರ ಬಂಧನಕ್ಕೆ ಹೊರಗಾದವರು ಆಲೋಚಿಸಿ ನೋಡಿದರೆ ಜೀವ ನಿಗೆ ಏಳು ಅವಸ್ಥೆಗಳುಂಟೆಂದು ತಿಳಿದುಬರುತ್ತದೆ. ॥ಪ॥ ತನ್ನನ್ನು ತಾನು ತಿಳಿಯದೆ ವಿಕಾರಕ್ಕೊಳಗಾದ ದೇಹದ ಮೋಹವನ್ನು ಬಿಡದೆ ತಾನೇ ದೇಹ ವೆಂದು ತಿಳಿದು ಬಗೆಬಗೆಯಾಗಿ ಕಾಣಬರುವ ಈ ಜಗತ್ತನ್ನು ನಿತ್ಯವೆಂಬ ನಂಬಿಗೆ ಯನ್ನು ಬಿಡದಿರುವ ಸ್ಥಿತಿಯೇ ಜೀವನಿಗೆ ಅಜ್ಞಾನವೆನಿಸಿಕೊಳ್ಳುವದು. ॥೧॥

ವೇದಮೊದಲಾದವು ಪ್ರಮಾಣವೆಂದು ನಂಬದೆ, ಉಳಿದ ಯುಕ್ತಿ ಮೊದಲಾದವುಗಳಿಂದ ಒಣಮಾತುಗಳನ್ನಾಡುತ್ತ ಸಾಕ್ಷಿ, ತುರ್ಯ, ಕೂಟಸ್ಥವೆಂಬ ವಸ್ತುವಿವೇಕವಿಲ್ಲದೆ ಆ ಬ್ರಹ್ಮವು ತೋರಿಬರುವದಿಲ್ಲವೆಂದು ಪ್ರಮಾದದಿಂದಲೂ ಭಯದಿಂದಲೂ ಹೇಳುವಂತಹ ಸ್ಥಿತಿಯೇ ಜೀವಿಗೆ ಆವರಣವೆನಿಸಿಕೊಳ್ಳುವದು. ॥೨॥

ಯಜ್ಞಾದಿ ಕರ್ಮಗಳನ್ನು ಮಾಡುತ್ತ ಅದರ ಫಲವನ್ನೇ ನಾನೀಗ ಅನುಭವಿಸುತ್ತಿದ್ದೇನೆ. ನಾನು ಕರ್ಮಬದ್ಧನು, ಬ್ರಹ್ಮವಸ್ತುವಿಗಿಂತ ಬೇರೆಯಾದವನು ಎಂದು ತಿಳಿದು ತನಗೆ ಮಾಯೆಯು ಆವರಿಸಿರುವದರಿಂದ ಈ ಭಾವನೆಯುಂಟಾಗಿದೆ ಎಂದು ತಿಳಿದಿರುವ ಜೀವನ ಅವಸ್ಥೆಯೇ ವಿಕ್ಷೇಪ. ॥೩॥

ವೇದಪ್ರಮಾಣವನ್ನು ತಿಳಿದು, ಗುರುಪಾದಸೇವೆಯಿಂದ ಬೋಧೆಯನ್ನು ಪಡೆದು ಸರ್ವಸಾಕ್ಷಿಯಾದ ಜ್ಞಾನಸ್ವರೂಪವು ಬೇರೆಯಾಗಿದೆ, ಅದು ಸ್ವರ್ಗದಂತೆ ನಿಶ್ಚಯವಾದದ್ದು ಎಂದು ತಿಳಿದು, ಪೂರ್ವದಲ್ಲಿ ತಾನು ಸತ್ಯವೆಂದು ಭಾವಿಸಿದ ವೃತ್ತಿ ನಾಶವಾದರೆ ಅದು ಪರೋಕ್ಷಜ್ಞಾನವು. ॥೪॥

"ತತ್ವಮಸಿ" ಎಂಬ ವಾಕ್ಯಾನುಸಾರವಾಗಿ ತಾನು ಪ್ರತ್ಯಗಾತ್ಮನೇ ಬೇರಲ್ಲವೆಂಬ ದೃಢವಾದ ಅನುಭವವುಂಟಾಗಿ, ಅದರ ಹೆಚ್ಚಾದ ಸಾಧನೆಯಿಂದ ಆವರಣವು ನಾಶವಾಗುವದು, ಇದೇ ಜೀವನಿಗೆ ಅಪರೋಕ್ಷ ಜ್ಞಾನವು, ॥೫॥

ಆಮೇಲೆ ಮಾಡುವುದು, ಅನುಭವಿಸುವುದು ಎಂಬ ಕರ್ತೃತ್ವ ಭೋಕ್ತೃತ್ವಗಳು ತನ್ನವೆಂಬ ಭ್ರಾಂತಿಯಿಂದುಂಟಾಗುವ ಸಂಸಾರಬಂಧವು ನಾಶವಾದರೆ ಅದೇ ಜೀವನಿಗೆ ದುಃಖನಿವೃತ್ತಿ ಎಂಬ ಅವಸ್ಥೆ ॥೬॥

ಜ್ಞಾನದಿಂದ ಈ ರೀತಿಯಾಗಿ ದುಃಖಧ್ವಂಸವಾಗಲು ಪರಮಾನಂದ ಸಮುದ್ರಸ್ವರೂಪವಾದ ಪರತರ ಶಂಭುಲಿಂಗನೇ ತಾನಾಗಿ ಇರುವ ಭಾವನೆಯೇ ಜೀವನಿಗೆ ತೃಪ್ತಿಯೆಂಬ ಅವಸ್ಥೆ. ಇವೇ ಆ ಏಳು ಅವಸ್ಥೆಗಳು, ॥೭॥

೨೧

ತಾನು ಯಾರೆಂಬ ವಿಚಾರಮಾಡಿ ತಿಳಿದುಕೊಂಡರೆ ಸಂಸಾರ ಸಮುದ್ರವನ್ನು ದಾಟುವುದು ಕಷ್ಟವಲ್ಲವೇ ಅಲ್ಲ ॥ಪ॥ ದೇಹ, ಇಂದ್ರಿಯ, ಪ್ರಾಣ,

ಅಹಂಕಾರ, ಮನ, ಬುದ್ಧಿ, ಚಿತ್ತ, ಪಂಚ-ಭೂತ ಇವುಗಳಲ್ಲಿ ಒಂದೂ ನಾನಲ್ಲ. ||೧||

ಸತ್ವಮೊದಲಾದ ಗುಣತ್ರಯವೂ. ಮಹತ್ತೂ, ಮಾಯಾಶಕ್ತಿಯೂ ನಾನಲ್ಲ. ಅವುಗಳ ಕಾರ್ಯವೂ ನಾನಲ್ಲ, ಈ ಲೋಕವೂ ನಾನಲ್ಲ. ಇದು ಕಣ್ಣಿಗೆ ತೋರುವುದಾಗಿದೆ. ||೨|| ಜೀವನ ಅವಸ್ಥೆಗಳಾದ ವಿಶ್ವ, ತೈಜಸ, ಪ್ರಾಜ್ಞ, ತುರ್ಯಗಳೂ ನಾನಲ್ಲ. ಆದ್ದರಿಂದ ಪರತರಾನಂದರಸ ಸಂವಿದ್ರೂಪನಾದ ಶಂಭುಲಿಂಗನೇ ನಾನು. ||೩||

೨೨

ನಾವು ಬ್ರಹ್ಮವಸ್ತುವನ್ನು ತಿಳಿದೆವೆಂದು ಹೇಳುವ ಜ್ಞಾನಿಗಳೇ ! ನೀವು ನಿಶ್ಚಯವಾಗಿ ತಿಳಿದುಕೊಂಡ ಬಗೆಯನ್ನು ನನಗೂ ಹೇಳಿರಿ. ||ಪ|| ದೇಹವನ್ನು ಹೊಂದಿರುವ ಜೀವನು ಸತ್ಯವೋ ? ವಾಯುವಿನೊಡನಾಡುತ್ತ ಕಣ್ಣುಗಳಿಂದ ನೋಡುತ್ತ ಇರುವ ಪ್ರಾಣಕಲೆಯು ಸತ್ಯವೊ ? ದೇಹಕ್ಕೂ ಇಂದ್ರಿಯಗಳಿಗೂ ಕಾರಣವಾದ ಪ್ರಾಣವಾಯುವು ಸತ್ಯವೊ ? ದೇಹದಲ್ಲಿ ಅಭಿಮಾನವುಳ್ಳ ಮನಸ್ಸು ಸತ್ಯವೋ ? ||೧|| ಹೊರಗಿನ ಜಗತ್ತೆಲ್ಲವೂ ನನ್ನ ಸ್ವರೂಪವಾದದ್ದು, ನಾನೇ ಜಗತ್ತು ಎಂಬುದು ನಿಶ್ಚಯವೋ ? ನಾನು ಎಂಬ ವಸ್ತುವಿಲ್ಲೆಂದು ತಿಳಿದಮೇಲೆ ಉಂಟಾಗುವ ಬ್ರಹ್ಮಾನಂದವೇ ನಿಶ್ಚಯವೊ ? ಆ ಬ್ರಹ್ಮಾನಂದವನ್ನುಂಟುಮಾಡುವ ವಸ್ತುವನ್ನು ಗ್ರಹಿಸುವದು ನಿಶ್ಚಯವೊ ? ಸಂತೋಷವೂ ತೋರದೆ ಶಾಂತವಾದ ಬಗೆಯೇ ನಿಶ್ಚಯವೊ ? ||೨||

ಸಚ್ಚಿದಾನಂದಾದಿ ಗುಣವಿಶಿಷ್ಟನಾದ ಈಶ್ವರನೇ ತನಗೆ ಮೋಕ್ಷಸ್ಥಾನಾಪನ್ನನಾದದ್ದು ನಿಶ್ಚಯವೊ ? ಸಗುಣನೂ ನಿರ್ಗುಣನೂ ಆದ ತತ್ವರೂಪನು ತಾನೆಂಬುದು ನಿಶ್ಚಯವೊ ? ಸಾಕಾರ ನಿರಾಕಾರಗಳೆರಡೂ ಮನಸ್ಸಿನಲ್ಲಿ ತೊಲಗಿರುವ ಭಾವವು ಸತ್ಯವೊ ? ಸುಗುಣವಸ್ತುಗಳೊಡನೆ ಸೇರದಿರುವುದು ಸತ್ಯವೋ ? ||೩||

ಮನಸ್ಸಿನಿಂದ ಗುರುತು ಹಿಡಿಯಲು ಬರುವ ಬಿಂದುನಾದಗಳೇ ನಿಶ್ಚಯವೊ ? ಮನಸ್ಸಿನ ಪ್ರಕಾಶಕ್ಕೆ ಸಿಕ್ಕದಿರುವುದೇ ಸತ್ಯವೊ ? ಜಗನ್ಮಯನಾಗಿ

ಬಹುತ್ವವನ್ನು ಪಡೆದಿರುವುದು ಯಥಾರ್ಥವೊ ? ಜಗದ್ವಿಲಕ್ಷಣವಾಗಿ ಬೇರೆಯಾಗಿರುವುದು ಸತ್ಯವೊ ? ॥೪॥

ಇವು ಯಾವುದೂ ಅಲ್ಲ. ಈ ರೀತಿಯಾದ ಭಿನ್ನ ಭಿನ್ನವಾದ ಸಿದ್ಧಾಂತಗಳ ವಿವಾದವನ್ನೇ ಬಿಟ್ಟು ನಾನು ನೀನೆಂದೇ ತೋರುವ ಭೇದವನ್ನು ಬಿಟ್ಟು, ಅಪ್ರಮೇಯವಾಗಿ ಉಳಿದ ಚಿದ್ರೂಪವು ಸತ್ಯವು. ಅದೇ ಶಂಭುಲಿಂಗವೆಂದು ತಿಳಿಯಿರಿ. ॥೫॥

ಇತಿ ಚಿದ್ರೂಪ ವಿಚಾರಂ

೨೩

ಎಲೈ ನಿತ್ಯಸುಖವೇ ! ನೀನು ಬಹುಪ್ರಕಾರವೆನಿಸದೆ, ಏಕರೂಪವಾಗಿ ಸರ್ವದಾ ನನ್ನಲ್ಲಿರು ॥ಪ॥ ವಿಷಯಾಭಿಲಾಷೆಯು ಸಿದ್ಧಿಸಲು ಸತ್ವಗುಣದೊಡನೆ ಸೇರಿದ ಬುದ್ಧಿಯುಳ್ಳ ಜೀವನಿಗೆ ತೋರುವಂಥ ಸುಖವೇ ॥೧॥ ಗಾಢನಿದ್ರೆಯಿಂದ ಬುದ್ಧಿ ಮೊದಲಾದವುಗಳು ಲಯವಾಗಿ, ಮಾಯಾವೃತ್ತಿಯಿಂದ ಅನೇಕಮುಖವಾಗಿ ಹೊಳೆವ ಈಶ್ವರ ಸ್ವರೂಪವಾದ ಸುಖವೇ ॥೨॥

ನಿದ್ರೆಯು ಕಳೆದುಹೋಗಿ ಇತರಸ್ಮೃತಿಯಿಲ್ಲದೆ ಮನಸ್ಸು ಸ್ಥಿರವಾಗಿರಲು ಕಾಣಿಸುವ ಪರಿಶುದ್ಧವಾದ ಸುಖವೇ ॥೩॥

ಇಷ್ಟವಾದ ವಿಷಯಗಳ ಗುಂಪಿನಲ್ಲಿ ತಾನೇ ಪ್ರೀತಿಪಾತ್ರನೆಂದು ತಿಳಿಯಲು ತನಗೆ ಅವಿರಳವಾಗಿ ದೊರೆವ ಸುಖವೇ ॥೪॥

ರಾಗ ದ್ವೇಷ ಮೊದಲಾದ ದ್ವಂದ್ವಗಳಿಲ್ಲದೆ ಮನಸ್ಸು ಉಪೇಕ್ಷೆಯಿಂದಿರಲು ಅನುಪಮವಾಗಿ ಕಾಣುವ ಸುಖವೇ. ॥೫॥

ಜಗತ್ತನ್ನು ಕನಸಿನಂತೆ ಸುಳ್ಳಾದುದೆಂದು ತಿಳಿದು, ತನ್ನನ್ನು ತಾನೇ ಅಭೇದ ಭಾವನೆಯಿಂದ ತಿಳಿಯುವದರಿಂದುಂಟಾದ ಸುಖವೇ. ॥೬॥

ಮನಸ್ಸಿಗೆ ಬಹಿಃ ಪ್ರಪಂಚವೇ ಕಾಣ, ಅಂತಃರಂಗದಲ್ಲಿ ಆತ್ಮಾನುಸಂಧಾನದಿಂದುಂಟಾದ ಅಪರೋಕ್ಷವದು ನಿಜಸುಖವೇ. ॥೭॥

ಪರಿಪೂರ್ಣವಾದ ಆನಂದವು ದೊರೆತ ಸಮಯದಲ್ಲಿ ಅದಕ್ಕೆ ಯಾವದೂ ಸರಿಯಾಗಿ ತೋರದಿರುವ ಶ್ರೇಷ್ಠವಾದ ಸುಖವೇ ॥೮॥

ಈ ರೀತಿಯ ಅನೇಕ ಸ್ಥಳದಲ್ಲಿ ತೋರಿ ಪರಾತ್ಪರನಾದ ಈಶ್ವರನಲ್ಲಿ ಏಕಾಕಾರವಾಗಿ ಕಂಡುಬರುವ ಸುಖವೇ ॥೯॥

೨೪

ಯಾವರೀತಿಯ ಸುಖವನ್ನು ವಿಚಾರಿಸಿ ಭಿನ್ನವಾಗಿ ಹೋಲಿಸಿ ನೋಡಿದರೂ ಜೀವಾತ್ಮ ಪರಮಾತ್ಮರ ಯೋಗದ ನಿಜವನ್ನು ಬಲ್ಲವನ ಸುಖಕ್ಕೆ ಸಮಾನವಾದದ್ದು ಯಾವುದೂ ಕಾಣುವದಿಲ್ಲ, ॥ಪ॥

ಕವಿಜನರ ವರ್ಣನೆಯ ಅಳತೆಗೆ ಬಾರದ ಹಾಗು ನೂತನ ಲಾವಣ್ಯವುಳ್ಳ ಪ್ರೌಢ ಸ್ತ್ರೀಯಳ ಅತ್ಯಾತುರದ ರತಿ ಕ್ರೀಡೆಗೆ ಅನುಕೂಲಗಳಾದ ಸಾಮಗ್ರಿಗಳಿಂದೊದಗುವ ಸುಖವನ್ನು ಹೋಲಿಸಿ ನೋಡಿದರೂ ಅದು ಜೀವ ಪರಮರ ಐಕ್ಯವನ್ನು ಪಡೆದವನ ಸುಖಕ್ಕೆ ಸಮಾನವಾಗುವದು. ॥೧॥

ಅತ್ಯುನ್ನತವಾದ ಸಿಂಹಾಸನವು, ಇಂದ್ರಾದಿ ಸಕಲದೇವತೆಗಳೇ ಸೇವಕರು, ಇಲ್ಲದೆ–ಅಣಿಮಾದಿ ಅಷ್ಟೈಶ್ವರ್ಯದಿಂದ ಕೂಡಿಕೊಂಡು ಹದಿನಾಲ್ಕು ಲೋಕಗಳನ್ನು ಆಳುವ ಸಾಮರ್ಥ್ಯವು ಪ್ರಾಪ್ತವಾದಾಗ ದೊರೆಯುವ ಸುಖವನ್ನು ವಿಚಾರಿಸಿ ನೋಡಿದರೂ ಬ್ರಹ್ಮನಿಷ್ಠನ ಆನಂದಕ್ಕೆ ಸರಿಬಾರದು. ॥೨॥

ಬೇಸರಾಗದ, ಕ್ಷಯಿಸದ, ಮತ್ತೊಂದನ್ನು ಅಪೇಕ್ಷಿಸದ, ಕೊನೆಗೆ ತನ್ನ ರಕ್ಷಣೆ ಕಡಿಮೆಯಾಗದ, ಉಪಮಿಸಬಾರದ ಶಂಭುಲಿಂಗನೊಡನೊಂದಾದ ಸುಖಕ್ಕಿಂತ ಬೇರಾವ ಸುಖವೂ ಇರುವದಿಲ್ಲ। ॥೩॥

೨೫

ಬೇರೆ ಬೇರೆ ಬೇಕಾದಷ್ಟು ತಿಳಿದರೂ ಬ್ರಹ್ಮಜ್ಞಾನ ಒಂದಿಲ್ಲದ್ದರಿಂದ ಸುಖವೇ ಕಾಣಬರುವದಿಲ್ಲವಲ್ಲಾ, ॥ಪ॥ ವೇದಗಳನ್ನೂ, ಆಗಮಗಳನ್ನೂ ಅಭ್ಯಾಸ ಮಾಡಿ ಸುಗುಣಗಳುಳ್ಳವನಾಗಿ ಜಗತ್ತಿನಲ್ಲಿ ಪ್ರೀತಿಯನ್ನಿಟ್ಟುಕೊಂಡು ತನ್ನ ಸ್ವರೂಪವನ್ನು ವಿಚಾರ ಮಾಡದೆ ಇರಲು ॥೧॥

ಮೋಸವಿಲ್ಲದೆ ಕೋಟಿಮಂತ್ರಜಪವನ್ನು ಮಾಡಿ, ಘೋರವಾದ ತಪಸ್ಸನ್ನು ಮಾಡಿ. ತತ್ವೋಪದೇಶವನ್ನು ಪಡೆಯದಿರಲು ॥೨॥

ಅಣಿಮಾದಿಯಾದ ಅಷ್ಟ ಸಿದ್ಧಿಗಳನ್ನು ಹೊಂದಿ, ಮಹಾತ್ಮ್ಯೆಯು ಪ್ರಪಂಚದಲ್ಲೆಲ್ಲಾ ಹರಡಿದರೂ ಶಂಭುಲಿಂಗನ ಸ್ವರೂಪವು ತಿಳಿಯದಲೆ ಹೋದರೆ ॥೩॥

೨೬

ಎಲ್ಲೈ ಚಿಚ್ಛಕ್ತಿಯೇ ಮುಕ್ತಿಯುನ್ನು ಪಡೆಯುತ್ತೇನೆಂದು ಹೇಳುವ ಯುಕ್ತಿವಂತನ ರೀತಿಯನ್ನು ನೋಡು ॥ಪ॥ ಸ್ವಪ್ನದ ಶೂರನು, ಮಿಂಚೆಂಬ ಹಗ್ಗದಿಂದ ಇಂದ್ರಧನುಸ್ಸೆಂಬ ಬಿಲ್ಲನ್ನು ಹೂಡಿ, ಅಲಿಕಲ್ಲೆಂಬ ಬಾಣವನ್ನು ಆರೋಪಿಸಿ ಪ್ರಯೋಗಿಸಿ ಮೇಘಮಂಡಲವೆಂಬ ಪಟ್ಟಣದ ಶತ್ರುವನ್ನು ಕೆಡವಿ, ಕೊಲ್ಲುವಂತೆ ದೇಹಧರ್ಮವನ್ನು ಬಿಟ್ಟು ॥೧॥

ಮೊಲದ ಕೊಂಬನ್ನು ಕಿತ್ತು, ಆಕಾಶಪುಷ್ಪವನ್ನು ಕೊಯ್ದು ತಂದು, ಪಿಡಿಯ ಕೂದಲನ್ನು ಹಿಡಿದು ತಂದು, ಮೃಗಜಲದಲ್ಲಿ ಸ್ನಾನಮಾಡಿ ಬಂಜೆಯ ಮಗನ ಸ್ನೇಹ ಮಾಡುವಂತೆ ಮಾಯೆಯನ್ನು ಗೆದ್ದು ॥೨॥

ಮನುಷ್ಯನು ದಕ್ಷಿಣ ದಿಕ್ಕಿಗೆ ಹೋಗಿ ಪರ್ವತವನ್ನು ಕಂಡು, ಹೆಂಗಸಿನ ಪ್ರೀತಿಯನ್ನು ನಿಶ್ಚಯವೆಂದು ನಂಬಿ, ಉರಿಯನ್ನು ತಲೆ ಕೆಳಗು ಮಾಡಿ ಸಂತೋಷವನ್ನು ಪಡುವಂದಿಗೆ ಶಂಭುಲಿಂಗನು ತನಗಿಂತಲು ಭಿನ್ನನೆಂದು ತಿಳಿದು ಮುಕ್ತಿಯನ್ನು ಪಡೆಯಬಹುದು. ॥೩॥

೨೭

ನನಗೆ ಪರಮಾನಂದವುಂಟಾದ ಬಗೆಯನ್ನು ಏನೆಂದು ಹೇಳಲಿ ! ॥ಪ॥ ಭಯಂಕರವಾದ ಸಂಸಾರ ದುಃಖಕ್ಕೆ ಹೆದರಿ, ಈ ದುಃಖವು ಯಾರಿಂದ ನಿವಾರಣೆಯಾದೀತೆಂದು ಆಲೋಚಿಸುತ್ತ ಗುರುವಿನ ಪಾದವನ್ನು ಹಿಡಿಯಲು, ಮೊದಲಿನ ಸಂಸಾರಭ್ರಮೆಯು ಇಲ್ಲವಾಯಿತು. ಆ ರೀತಿಯನ್ನು ಏನೆಂದು ಹೇಳಲಿ ! ॥೧॥

ದೇಹ ಮೊದಲಾದದ್ದೇ ನಾನೆಂದು ಜಡವಾದ ಮಾಯೆಯ ಶಕ್ತಿಯಿಂದ ಮೋಹಿತನಾಗಿ ಮಮಕಾರವನ್ನು ಹೊಂದುತ್ತಿದ್ದನ್ನು ಬಿಟ್ಟು ನಾನು ದೇಹಿಯಲ್ಲ, ದೇಹವು ತನ್ನದಲ್ಲ, ನಾನೇ ಬೇರೆ ಎಂಬುದನ್ನು ತಿಳಿದದ್ದನ್ನು ಏನೆಂದು ಹೇಳಲಿ! ॥೨॥

ನಾನು ಎಂಬುದರ ಅರ್ಥವಿನ್ನಾವುದಿರಬಹುದೆಂದು ವೇದಮೊದಲಾದವುಗಳ ವಿಚಾರದಿಂದ ಪರಮಾತ್ಮನಾದ ಶಂಭುಲಿಂಗನೇ ನಾನೆಂದು ತಿಳಿದು ಅನುಭವಿಸಿ ಸುಖದಿಂದಿರುವುದನ್ನು ಏನೆಂದು ಹೇಳುವೆ. ॥೩॥

೨೮

ತಾನೇ ಬ್ರಹ್ಮನೆಂದು ತಿಳಿಯದೆ ತಾನೇ ಬೇರೆಯೆಂದು ಭೇದವನ್ನು ಇಟ್ಟುಕೊಂಡು ಹುಡುಕುವದಕ್ಕೆ ಹೋದಾಗ ಅದು ಎಲ್ಲಿ ಸಿಕ್ಕೀತು ? ॥ಪಲ್ಲ॥ ವೇದವೂ, ಗುರುವೂ ಆ ಪರಬ್ರಹ್ಮವೇ ನೀನಾಗಿದ್ದಿ ಎಂದು "ತತ್ವಮಸಿ" ಎಂಬ ವಾಕ್ಯದಿಂದ ಬೋಧಿಸುತ್ತಿರುವದರಿಂದ ನಾನು ಯಾರು ? ಎಂಬ ಪ್ರಶ್ನೆಗೆ ಇದೇ ಉತ್ತರವಾಗುವ ಕಾರಣ ತನ್ನಲ್ಲಿ ಉಳಿಯುವ ಪರಮಾತ್ಮಸ್ವರೂಪವೇ ತನಗೆ ಸಿಕ್ಕಮೇಲೆ ಇತರ ವಸ್ತುಗಳಲ್ಲಿ ಹುಡುಕಿನೋಡಿದರೆ ಸಿಕ್ಕುವುದೆ ? ॥೧॥

ಬ್ರಹ್ಮಾಂಡಗಳನ್ನು ತನ್ನಲ್ಲಿ ಅಡಗಿಸಿಕೊಂಡು ಕೇವಲ ಜ್ಞಾನಸ್ವರೂಪವಾಗಿದ್ದ ಬ್ರಹ್ಮವು ತನಗಿಂತ ಬೇರೆಂದು ಹೇಳಿದ್ದರಿಂದ ತನ್ನಲ್ಲಿ ತಾನೆ ವಿಚಾರ ಮಾಡಿ ತಿಳಿದುಕೊಳ್ಳಬೇಕಲ್ಲದೆ ಅದು ಬೇರೆ ಕಡೆ ಸಿಕ್ಕುವುದೇ ? ॥೨॥

ತುಂಬಿತುಳುಕುವ ಆನಂದಾಮೃತ ಸಮುದ್ರವು ತಾನೆಂಬ ಭಾವವೂ ಕೂಡ ತನ್ನಲ್ಲಿ ಲೀನವಾಗಿರಲು ಇದೇ ಮುಕ್ತಿಯೆಂದು ನಂಬಬೇಕಲ್ಲದೆ ಇದರ ಹೊರತು ಬೇರೊಂದು ಇರುವದಿಲ್ಲ. ॥೩॥

೨೯

ಎಲೈ ಜ್ಞಾನಶಕ್ತಿಯೇ ! ಸ್ತ್ರೀ ಸಂಭೋಗ ಮೊದಲಾದವುಗಳ ಸಂಬಂಧ ವಿಲ್ಲದೆ ಅನುಭವಿಸುವ ಮಧುರವಾದ ಸುಖದ ಸ್ಥಾನವಾವುದು ಹೇಳು ? ॥ಪಲ್ಲ॥

ಸದ್ಗುರು, ಇಷ್ಟದೇವತೆ, ಅಷ್ಟವಿಧಾರ್ಚನೆ, ಯೋಗಾಭ್ಯಾಸ, ಸತ್ಕುಲ, ಇಂದ್ರಿಯ ನಿಗ್ರಹ ನಾಲ್ಕು ಆಶ್ರಮಗಳು, ಯಜ್ಞ, ತಪಸ್ಸು, ನಿಯಮ, ಹೆಂಡತಿ, ವಾಹನ, ಬ್ರಹ್ಮಚರ್ಯ ಮೊದಲಾದವುಗಳಲ್ಲಿ ಎಲ್ಲರ ಮನಸ್ಸೂ ಮೋಹಗೊಳ್ಳುವುದು ಏತಕ್ಕೆ ? ಇವುಗಳಲ್ಲಿ ಪ್ರೀತಿಯನ್ನು ಹುಟ್ಟಿಸುವುದಕ್ಕೆ ಯಾವುದು ಕಾರಣ ? ॥೧॥

ಎಷ್ಟು ಅನುಭವಿಸಿದರೂ ಸಾಕೆಂದು ಜಿಗುಪ್ಸೆಯುಂಟಾಗದ, ಎಂದಿಗೂ ಮುಗಿಯದ, ವ್ಯತ್ಯಾಸವಾಗದ, ಗುಣತ್ರಯಗಳಿಗೆ ಸಿಕ್ಕದ, ವಾಙ್ಮನಕ್ಕೆ ಗೋಚರವಾಗದ, ಅದನ್ನುಳಿದು ಬೇರೊಂದು ಸುಖಕರವೆಂದು ತಿಳಿಯಲಾಗದ, ವರ್ಣನಾತೀತವಾದ, ಕಾರಣವಿಲ್ಲದ, ತಿಳಿದವರೆಲ್ಲರೂ ಒಪ್ಪುವ, ಪರಮಪ್ರೀತಿಗೆ ಪಾತ್ರವಾದ ವಸ್ತುವು ಮತ್ತಾವುದಿರುವುದು ? ॥೨॥

ಕಡಿಮೆಯಾಗದೆ, ಹೆಚ್ಚದೆ, ಕಡೆ ಮೊದಲಿಲ್ಲದೆ ಇದ್ದ ಅಣಿಮಾದಿಗಳೆಂಬ ಎಂಟು ರತ್ನಗಳೊಡನೆ ಕೂಡಿ ಬಹಳ ಮಧುರವಾದ, ಸುಖಾಮೃತ ಸಮುದ್ರ ವಾದ ಶಂಭುಲಿಂಗನೇ ನೀನಾಗಿರುವುದರಿಂದ ಇದಕ್ಕಿಂತ ಸೊಗಸಾದ ವಸ್ತು ಯಾವುದಿರುವುದೆಂಬುದನ್ನು ತಿಳಿದು ನೋಡು ಎಲೈ ಜ್ಞಾನಶಕ್ತಿಯೆ. ॥೩॥

ಇತಿ ಆನಂದ ಸ್ವರೂಪ ವಿಚಾರವು

೩೦

ಎಲೈ ಜೀವನೆ ! ನೀನು ಸದ್ರೂಪನಾಗಿರುವಿ. ಅಂತೆಯೇ ಇಲ್ಲೆಂದು ಹೇಳಿಸಿಕೊಳ್ಳುವ ಯಾವ ಅಭಾವವೂ ನಿನ್ನಲ್ಲಿ ಇರುವದಿಲ್ಲ. ಅದಕ್ಕಾಗಿ ನೀನು ನಿತ್ಯನಾಗಿರುವಿಯೆಂಬುದನ್ನು ವಿಚಾರಿಸು. ॥ಪ॥

ಉತ್ಪತ್ತಿಗಿಂತ ಪೂರ್ವದಲ್ಲಿ ಇಲ್ಲವೆನಿಸಿದ ಅಭಾವವು (ಪ್ರಾಗಭಾವವು) ಹುಟ್ಟಿ ನಾಶವಾದ ಮೇಲೆ ತನ್ನ ಸ್ವರೂಪವು ಇಲ್ಲೆನಿಸಿದ ಅಭಾವವು (ಪ್ರಧ್ವಂಸಾಭಾವವು) ಇದರಲ್ಲಿ ಇದಿಲ್ಲವೆಂದು ಹೇಳಿಸಿಕೊಳ್ಳುವ ಅಭಾವವು (ಅನ್ಯೋನ್ಯಾಭಾವವು). ಯಾವಾಗಲೂ ಇಲ್ಲವೇ ಇಲ್ಲೆಂದು ಹೇಳಿಸಿಕೊಳ್ಳುವ ಅಭಾವವು (ಅತ್ಯಂತಾಭಾವವು) ಈ ಎಲ್ಲ ಅಭಾವಗಳು ನಾಮರೂಪಾತ್ಮಕ ಜಗತ್ತಿಗೆ ಸಂಬಂಧಿಸಿರುವವಲ್ಲದೆ ಶಂಭುಃಲಿಂಗ ರೂಪನಾದ ನಿನ್ನಲ್ಲಿ ಇರುವುದಿಲ್ಲ; ಅಂತೆಯೇ ನೀನು ನಿತ್ಯನು.

೩೧

ಎಲೈ ದೇಹವೆಂಬ ಸುಳ್ಳುಗಡಿಗೆಯೇ ! ನೀನು ನಿಶ್ಚಯವೆಂಬಂತೆ ಕಾಣಿಸುತ್ತ ಭ್ರಾಂತಿಗೊಳಿಸುವದನ್ನೇನು ಹೇಳಲಿ ? ॥ಪಲ್ಲ॥ ಮೊದಲು ಮಣ್ಣುಂಡೆಯಲ್ಲಿ ನೀನಿರಲಿಲ್ಲ. ಹುಟ್ಟಿದಮೇಲೆ ಒಡೆದು ಪುಡಿಯಾದರೆ ಅದರಲ್ಲಿಯೂ ನೀನಿಲ್ಲ. ಹೀಗೆ ಮೊದಲಲ್ಲಿಯೂ ಕೊನೆಯಲ್ಲಿಯೂ ನೀನು ಇಲ್ಲವೆಂಬುದು ಸುಸ್ಪಷ್ಟವಾಯಿತು. ಮಧ್ಯಕಾಲದಲ್ಲಿ ನಿನಗೆ ಯಾವ ರೂಪವು ನಿಶ್ಚಯವಾದದ್ದು ? ॥೧॥

ಜನಗಳು ಹೇಳುವ ಮಾತಿನಿಂದ ಮಾತ್ರ ಕಲ್ಪಿತವಾದ ಆಕಾಶದಿಂದ ಅವಿವೇಕಿಗಳಿಗೆ ನಿಶ್ಚಯವೆಂದು ಕಾಣಿಸಿಕೊಳ್ಳುವೆ ನೀನು. ಪರೀಕ್ಷೆ ಮಾಡಿ ನೋಡಿದರೆ ನೀನು ತ್ರಿಕಾಲದಲ್ಲಿಯೂ ಕಾಣಿಸಿಕೊಳ್ಳುವೆಯಾ ? ॥೨॥

ಇಲ್ಲವೆಂದು ಹೇಳಿಸಿಕೊಳ್ಳದೆ, ಮರೆಯಾಗದೆ, ಪ್ರತ್ಯಕ್ಷವಾಗಿರುವ ಮಣ್ಣನ್ನಲ್ಲದೆ ನಿನ್ನನ್ನು ಎಲ್ಲಿಯೂ ನೋಡಲಿಲ್ಲ. 'ಇರುವುದು' ಎನ್ನಿಸಿ

ಕೊಂಡಿರುವ ಮಣ್ಣಿನಂತೆ ಪರಮೇಶ್ವರನಿಂದಲೆ ಈ ಜಗತ್ತೆಲ್ಲವೂ ಆಗಿರುತ್ತದೆ. ಆದರಿಂದ ಕಾರಣವಾದ ಮೃತ್ತಿಕೆಯೇ ಘಟರೂಪವಾದಂತೆ, ಪರತರ ಶಂಭು ಲಿಂಗವೆ ಜಗದ್ರೂಪನಾಗಿರುವನು. ॥೩॥

ನಿತ್ಯಪದ ನಿದರ್ಶನ

೩೨

ಆತ್ಮನು ತಾನೆ ತನ್ನಲ್ಲಿ ತನ್ನ ಸ್ವರೂಪವನ್ನು ವಿಚಾರಮಾಡಿ ನೋಡಿದರೆ ತಾನೇ ಸಚ್ಚಿದಾನಂದರೂಪನೂ, ಅಖಂಡಸ್ವರೂಪನೂ ಆದ ಪರಮಾತ್ಮನಾಗಿ ರುವನು. ॥ಪಲ್ಲ॥

ಬಾಹ್ಯಪ್ರಪಂಚವೆಲ್ಲವನ್ನೂ ತಿಳಿವುದರಿಂದಲೂ, ಮನಸ್ಸನ್ನೂ ಮಾತನ್ನೂ ಮೀರುವದರಿಂದಲೂ, ಇಷ್ಟು ಅಷ್ಟು ಎಂದು ವರ್ಣಿಸಲಸಾಧ್ಯವಾದುದ ರಿಂದಲೂ ಅವಿರಳನಾಗುವನು. ॥೧॥

ಅಣು ಪರಮಾಣು ಎಂಬ ಅಳತೆಗೆ ಸಿಕ್ಕದೆ ಇರುವದರಿಂದಲೂ, ಗುಣ ಜಾತಿ ಕರ್ಮ ಇಲ್ಲದ್ದರಿಂದಲೂ, ಕಾರಣತ್ವವನ್ನು ಹೊಂದದಿರುವದರಿಂದಲೂ. ಏಕನಾಗಿರುವನು. ॥೨॥

ಸಮಸ್ತ ಪ್ರಯೋಜನಗಳಿಗೆ ಕಾರಣನಾದ್ದರಿಂದಲೂ, ಸಕಲಾರ್ಥಗಳಿ ಸಂಬಂಧಿಯಾದ್ದರಿಂದಲೂ, ಸಕಲ ಪ್ರಯೋಜನಗಳಿಗೂ ದೂರವಾಗಿರುವದ ರಿಂದಲೂ ಸಮಸ್ತ ಕಾರ್ಯಸ್ವರೂಪನಾದ್ದರಿಂದಲೂ ನಿಸ್ಸೀಮನಾಗಿರು ವನು. ॥೩॥

ಆಕಾಶದಂತೆ ನಿರವಯನಾಗಿರುವುದರಿಂದಲೂ, ಸ್ವಗತಾದಿ ಭೇದಗಳಿಲ್ಲದ್ದ ರಿಂದಲೂ, ವೇದಗಳು ಅಪರಿಮಿತವೆಂದು ಪೇಳುವುವರಿಂದಲೂ, ಯಾವ ಮನ ಸ್ಸಿಗೂ ತೋರದಿರುವದರಿಂದಲೂ ಗಣಿತಕ್ಕೆ ಸಿಕ್ಕದವನಾಗಿರುವನು. ॥೪॥

ಲೆಕ್ಕಕ್ಕೆ ಬರುವಂತಹ ಸ್ಥಳ, ಕಾಲ, ವಸ್ತು ಮೊದಲಾದವು ಸುಳ್ಳಾದ್ದರಿಂದಲೂ, ಸಂಸಾರಕ್ಕೆ ದೂರನಾದ ಶಂಭುಲಿಂಗನಲ್ಲಿ ಅಭೇದವುಳ್ಳವನಾದ್ದರಿಂದ ಪರಿಪೂರ್ಣನಾಗಿರುವನು. ॥೫॥

೩೩

ಸ್ವಾತ್ಮಾನಂದಾನುಭವವೆಂಬ ಸಮುದ್ರದ ಮೇರೆಯನ್ನು ಮೀರಿ, ಮಾಯೆಯ ಎಲ್ಲ ಕಾರ್ಯಗಳನ್ನು ತುಂಬಿ ಗಂಭೀರವಾಗಿ ಅಭೇದಾತ್ಮಕವಾಗಿರುವ ಬ್ರಹ್ಮವಸ್ತುವನ್ನು ತಿಳಿದವರು ಯಾರು ? ॥ಪ॥

ದೇಹವೂ ಅಲ್ಲದ, ಅಂತಃಕರಣ ಚತುಷ್ಟಯವೂ ಅಲ್ಲದ; ಇಂದ್ರಿಯಗಳೂ ಅಲ್ಲದ; ಅಹಂಕಾರವೂ ಅಲ್ಲದ; ಪೃಥ್ವ್ಯಾದಿ ಪಂಚಭೂತಗಳೂ ಅಲ್ಲದೆ; ಇನ್ನೂ ಊಹೆಯಲ್ಲಿ ತೋರಿಬರುವ ಯಾವ ವಸ್ತುವನ್ನು ಅಲ್ಲದ ಬ್ರಹ್ಮವಸ್ತು ತಿಳಿದವರಾರು ? ॥೧॥

ಪ್ರಮಾಣಕ್ಕೆ ಸಿಕ್ಕದ, ರೂಪಾಂತರವನ್ನು ಹೊಂದದ, ಸಂಕಟಗಳು ಸಂಭವಿಸದ, ಸದಾ ಮೋಕ್ಷಸ್ವರೂಪವಾದ, ಸುಖ ಮೊದಲಾದ ಒಂಭತ್ತು ಗುಣಗಳಿಂದ ಕೂಡದೆ, ಬಹುರೂಪಗಳುಂಟಾಗದ, ಜನ್ಮಾಂತರವಿಲ್ಲದ ಪೂರ್ಣಾತ್ಮನನ್ನು ॥೨॥

ಅಜ್ಞಾನವಿಲ್ಲದ ವೃತ್ತ್ಯಾತ್ಮಕ ಜ್ಞಾನಕ್ಕೆ ತೋರದ, ಎಂದಿಗೂ ಮುಗಿಯದ, ಪ್ರತ್ಯಕ್ಷವಲ್ಲದ, ಐಕ್ಯಭಾವವನ್ನುಳ್ಳ, ತನ್ನಲ್ಲಿ ಇಂತಹವನೆಂದು ಹೇಳುವದಕ್ಕೆ ಅನುಕೂಲವಾದ ಗುರುತುಗಳಿಲ್ಲದ ಶಂಭುಲಿಂಗವನ್ನು ಯಾರು ಅರಿಯುವರು ? ॥೩॥

ಪೂರ್ಣ ರೂಪಾನುಭವ

೩೪

ಬ್ರಹ್ಮಜ್ಞಾನವುಳ್ಳ ಯೋಗಿಗೆ ಆಗಾಮಿ, ಸಂಚಿತ, ಪ್ರಾರಬ್ಧಗಳೆಂಬ ಯಾವ ಕರ್ಮಗಳ ಬಾಧೆಯೂ, ದೇವತಾಪೂಜೆಗಳಿಂದುಂಟಾದ ಯಾವ ಪುಣ್ಯದ

ಫಲವೂ ಇರುವದಿಲ್ಲ ॥ಪ॥ ದೊರೆಯೊಬ್ಬನು ತನಗೆ ಬಡತನ ಬಂದಂಗೆ ಸ್ವಪ್ನವನ್ನು ಕಂಡು, ಸ್ವಪ್ನದಲ್ಲಿ ದುಃಖಪಡುತ್ತಿದ್ದು, ಎಚ್ಚರವಾದ ಮೇಲೆ ನಿಶ್ಚಯಸ್ಥಿತಿಯನ್ನು ಕಂಡು ದುಃಖವನ್ನು ಹೋಗಲಾಡಿಸಿಕೊಂಡ ಹಾಗೆ, ಯೋಗಿಯು ಕೂಡ ತನಗೆ ಮಾಯೆಯುಂಟಾಗಿ ಸಂಸಾರ ತೋರಿಬಂದರೂ ಪುನಃ ಅನುಭವದಿಂದ ನೋಡಿಕೊಳ್ಳಲು ಸುಳ್ಳಾಗುವದರಿಂದ ಆವ ಕರ್ಮದ ಕಾಟವಿಲ್ಲ. ॥೧॥

ಭೂಮಿ ಮೊದಲಾದ ಎಲ್ಲ ಮಾಯಾವರಣಗಳನ್ನು ಮೀರಿದ ಪರಮಾತ್ಮನು, ಈ ದೇಹ ಮೊದಲಾವುಗಳಿಗಿಂತ ಇತರನಾದ ಜೀವಾತ್ಮನು, ಹೀಗೆ ಜೀವಾತ್ಮ ಪರಮಾತ್ಮ ಎಂಬ ಎರಡು ಬಗೆಯಾಗಿ ಕಾಣುತ್ತಿರಲು ತನ್ನಲ್ಲಿರುವ ಸತ್ವಾದಿಗುಣಗಳು ತಾನಲ್ಲವೆಂದು ಚನ್ನಾಗಿ ವಿಚಾರಮಾಡಿ ನೋಡಿದರೆ ಎರಡೂ ಒಂದೇ ಎಂತಲೂ, ತಾನೇ ಬ್ರಹ್ಮಸ್ವರೂಪವೆಂತಲೂ ತಿಳಿಯಬರುವದರಿಂದ ॥೨॥

ಸೂರ್ಯನಂತೆ ಲೌಕಿಕ ಕರ್ಮಗಳಿಗೆ ಸಾಕ್ಷಿಯಾದ್ದರಿಂದ ಬಂಧವಿಲ್ಲ. ಪರಿಪೂರ್ಣನಾದ್ದರಿಂದ ಬೇರೆ ಕಡೆಗೆ ಹೋಗಲು ಸ್ಥಳವಿಲ್ಲ. ದೇಶ ಕಾಲ ವಸ್ತು ಪರಿಚ್ಛೇದ ರಹಿತನಾದ್ದರಿಂದ ಗಣನಕ್ಕೆ ಬರುವದಿಲ್ಲ. ಪರಬ್ರಹ್ಮಸ್ವರೂಪನಾದ ಶಂಭುಲಿಂಗನಾದ್ದರಿಂದ ತನಗೆ ಜನನಮರಣಗಳಿಲ್ಲ. ॥೩॥

೩೫

ಜ್ಞಾನಿಯು ರೀತಿಯನ್ನು ಕಾಣೆವೆಂದು ಹೇಳುವರು, ಈ ಬಗೆಗೆ ಸಂಶಯಪಡುವದೇಕೆ ? ಆ ಜ್ಞಾನಿಯ ಶರೀರವೆ ಜ್ಞಾನಿಯೆಂದು ಸೂಚಿಸುವದು, ॥ಪ॥ ಒಳ್ಳೇದು ಕೆಟ್ಟದ್ದೆಂಬ ತಿಳಿವಳಿಕೆಗೆ ವಿಷಯಗಳ ವೈರಾಗ್ಯವೇ ಗುರುತು. ವೈರಾಗ್ಯವಿದೆ ಎಂಬುದಕ್ಕೆ ಶಾಂತಿಯೇ ಸೂಚನೆ, ಶಾಂತಿಯುಂಟೆಂಬುದಕ್ಕೆ ಮುಕ್ತಿಯಲ್ಲಿ ಆಸಕ್ತಿಯೆ. ಸೂಚನೆ. ॥೧॥ ಮುಕ್ತಿಯಲ್ಲಾಸಕ್ತಿಯುಂಟೆಂಬುದಕ್ಕೆ ಗುರುಸೇವೆಯೇ ಸೂಚನೆ. ಗುರುಸೇವೆ ಮಾಡುವುದಕ್ಕೆ ವೇದಾರ್ಥಗಳಜ್ಞಾನವೇ ಸೂಚನೆ. ವೇದಾರ್ಥವು ತಿಳಿದಿದೆಯೆನ್ನುವದಕ್ಕೆ ದೇಹ ಮೊದಲಾದವು ತಾನಲ್ಲವೆಂದು ತಿರಸ್ಕರಿಸುವುದೇ ಸೂಚನೆ. ಶರೀರಾದ್ಯಭಿಮಾನವಿಲ್ಲದ್ದಕ್ಕೆ ನಾನು ಯಾರು ಎಂಬ ಪ್ರಶ್ನೆಹುಟ್ಟುವದೇ ಸೂಚನೆ. ॥೨॥

ನಾನು ಯಾರೆಂಬುದಕ್ಕೆ ಆ ಶಿವನೇ ನಾನೆಂಬ ಭಾವವೇ ಸೂಚನೆ. ಅವನೇ ನಾನೆಂದು ತಿಳಿಯುವದಕ್ಕೆ ಅಪರಿಮಿತವಾದ ಸುಖವೇ ಸೂಚನೆ. ಸುಖಕ್ಕೆ ನಿತ್ಯನೂ, ನಿಶ್ಚಯನೂ, ನಿರ್ವಿಕಾರಿಯೂ ಆಗಿರುವ ಶಂಭುಲಿಂಗನೇ ತಾನಾಗಿರುವದೆ ಸೂಚನೆ, ಆದ್ದರಿಂದ ಜ್ಞಾನಿಯನ್ನು ತಿಳಿಯುದಲ್ಲಿ ಅನುಮಾನಿಸುವ ಕಾರಣವಿಲ್ಲ. ॥೩॥

೩೬

ಆಲೋಚನೆ ಮಾಡಿ ನೋಡಿದರೆ "ತತ್ವಮಸಿ" ಅಂದರೆ ನೀನು ಪರಬ್ರಹ್ಮನಾಗಿದ್ದೀ ಎಂಬ ವಾಕ್ಯದ ಅರ್ಥವನ್ನು ನಂಬಿ ಗುರುವಿನಿಂದ ಉಪದೇಶ ಹೊಂದಿದರೆ ಶಾಶ್ವತವಾದ ಕೈವಲ್ಯವುಂಟಾಗುವದು. ॥ಪ॥ ದೇಹ. ಇಂದ್ರಿಯ ಮೊದಲಾದವುಗಳನ್ನು ನಾನೆಂದು ತಿಳಿದು ಜನನಾದಿ ವಿಕಾರಗಳನ್ನು ಹೊಂದಿ ತನಗೆ ಅದೇ ಭಾವನೆಯೇ ಉಂಟಾಗಿ ಅದು ಬಿಡದಿರುವ ವಿಶ್ವನೆಂಬ ಜೀವನೇ "ತ್ವಂ" ಪದಕ್ಕೆ ಮುಖ್ಯವಾದ ಅರ್ಥವು ॥೧॥ ಪೂರ್ವದಲ್ಲಿ ಹೇಳಿದ ಸ್ಥಾವರ ಜಂಗಮಾತ್ಮಪ್ರಾಣಿಗಳಿಗುಂಟಾದ ಸುಖದುಃಖ ದೋಷ ಮೊದಲಾದವು ತನಗೆ ಉಂಟಾಗದೆ ಎಲ್ಲಕ್ಕೂ ಸಾಕ್ಷಿಯಾಗಿ ಕೂಟಸ್ಥನಾಗಿರುವನೆನಕೊಂಡ ಆ ವಿಶ್ವನೆಂಬ ಜೀವನೇ "ತ್ವಂ" ಎಂಬ ಪದಕ್ಕೆ ಲಕ್ಷ್ಯಾರ್ಥವು ॥೨॥

ಮಾಯಾಶಕ್ತಿಯೊಡನೆ ಕೂಡಿ ಕರ್ತೃತ್ವ ಮೊದಲಾದ ಗುಣಗಳನ್ನು ಹೊಂದಿ ಎಲ್ಲಕ್ಕೂ ಕಾರಣನಾಗಿ ವಿಕಾರವನ್ನು ಹೊಂದದೆ ಆನಂದ ಸ್ವರೂಪನಾದ ಪರಮನೆಂಬ ಜೀವನೇ "ತತ್" ಎಂಬ ಪದಕ್ಕೆ ಮುಖ್ಯಾರ್ಥವು ॥೩॥

ಹೋಲಿಕ್ಕೆ ಇಲ್ಲದ, ನಿರಾಧಾರನಾದ, ಪರಿಶುದ್ಧನಾದ, ಮಾಯಾರಹಿತನಾದ, ರೂಪರಹಿತನಾದ, ದೋಷರಹಿತನಾದ, ತತ್ವಸ್ವರೂಪನಾದ ಬ್ರಹ್ಮವಸ್ತುವೇ "ತತ್" ಎಂಬ ಪದಕ್ಕೆ ಲಕ್ಷ್ಯಾರ್ಥವು ॥೪॥

ಬಾಲ್ಯದಲ್ಲಿ ನೋಡಿದ್ದ ಒಬ್ಬ ಪುರುಷನನ್ನು ವೃದ್ಧನಾದಮೇಲೆ ಕಂಡು ಅವನೇ ಇವನೆಂದು ಹೇಳುವದಕ್ಕೆ ಕಾಣಬರುವ ಗುರುತುಗಳಿಂದ ನಿರ್ಧರಿಸುವ ಹಾಗೆ ಜೀವನ ಲಕ್ಷಣಗಳನ್ನು ತಿಳಿದು ಅದು ಪರಮಾತ್ಮನಾದ್ದರಿಂದ ಜೀವನ

ಲ್ಲಿದ್ದ ಗುಣಗಳು ಯಾವದೂ ಕಾಣಬಾರದೆ ಪೋಗುವವದರಿಂದ ಇವನು ಜೀವ ನಲ್ಲವೆಂದು ಕಂಡು ಹಿಡಿದು ಜೀವಪರಮರಗಳ ಮುಖ್ಯಾರ್ಥವನ್ನು ಬಿಟ್ಟು ಲಕ್ಷ್ಯಾರ್ಥವನ್ನು ಮಾತ್ರ ಗ್ರಹಿಸುವವದರಿಂದ ಜೀವಪರಮರಗೆ ಐಕ್ಯಭಾವವುಂಟಾಗುವದೇ "ಅಸಿ" ಎಂಬ ಪದಕ್ಕೆ ಅರ್ಥವಾದ್ದರಿಂದ ಆ ಶಂಭುಲಿಂಗನೇ ತಾನೆಂದು ತಿಳಿದು ಮುಕ್ತಿಯನ್ನು ಪಡೆಯಬೇಕು. ॥೫॥

೩೭

ಸತ್ಯವಾಗಿ ಬ್ರಹ್ಮವಸ್ತು ಒಂದೇ ಇರುವದು. ಅದು ಮಾಯೋಪಾಧಿಯಿಂದ ಬಗೆ ಬಗೆಯಾದ ಪ್ರಪಂಚ ಸ್ವರೂಪವಾಗಿ ಕಾಣಬರುವದೆಂದು ತಿಳಿಯಬೇಕು ॥೮॥ ಹಾಗಿಲ್ಲದೆ ಹೋದರೆ ಒಂದೇ ದೇಹದಲ್ಲಿ ಸಂಪೂರ್ಣರಾದ ಅನೇಕಾತ್ಮರುಗಳು ಸೇರಬೇಕಾದೀತು. ಹಾಗೆ ಸೇರಿದರೆ ಈ ಆತ್ಮನಿಗೆ ಇದೇ ಭೋಗವೆಂದು ತಿಳಿದು ಗೊತ್ತು ಮಾಡುವುದು ಅಸಾಧ್ಯವಾಗುವದು. ॥೧॥

ಆದ್ದರಿಂದ ಒಬ್ಬನೇ ಆತ್ಮನು ಉಪಾಧಿಗಳಲ್ಲಿ ಸೇರಿದ್ದಾನೆ, ಒಬ್ಬನಿಗಾದ ಸುಖದುಃಖಗಳು ಎಲ್ಲರಿಗೂ ಆಗುವದು ಎಂದು ಹೇಳುವದಕ್ಕೂ ಆಗದು, ಏಕೆಂದರೆ ಸೂರ್ಯಬಿಂಬ ಒಂದೇ ಬೇರೆ ಬೇರೆ ಜಲದಲ್ಲಿ ಬೇರೆ ಬೇರೆಯಾಗಿ ಕಾಣಿಸುವದರಿಂದ ಯಾವ ದೋಷವಿಲ್ಲ ॥೨॥

ಇನ್ನು ಚರ್ಚೆ ಎಲ್ಲಿ ಬಂತು ? ವೇದವು ಹೇಳುವಂತೆ ಬ್ರಹ್ಮವಸ್ತು ಅಂದರೆ ಶಂಭುಲಿಂಗನು ಒಂದಲ್ಲದೆ ಬೇರಾವುದೂ ಇಲ್ಲವೆಂದು ತೋರುವುದರಿಂದ ಭೇದ ಭಾವನೆಯು ನ್ಯಾಯವಾದದ್ದಲ್ಲ. ಎಲ್ಲವೂ ಒಂದೇ ವಸ್ತುವು ಎಂದು ಹೇಳಬೇಕು. ॥೩॥

ಮಹಾವಾಕ್ಯಾರ್ಥ ಚಿಂತನಂ

೩೮

ಎಲೈ ಯೋಗೀಶ್ವರನೆ ! ನೀನೇ ನಿತ್ಯಾತ್ಮನೆಂಬ ವೇದ ವಾಕ್ಯವನ್ನು ನಂಬು ಮುಕ್ತಿಗಾಗಿ ಬೇರೆ ಯಾವುದಕ್ಕೂ ಚಿಂತಿಸಬೇಡ ॥೮॥

ಕೀಟವು ತನ್ನ ಸ್ವರೂಪವಲ್ಲದ ಭ್ರಮರವನ್ನು ಸ್ಮರಿಸುತ್ತಿರುವ ಭಾವನೆಯಿಂದ ಭೃಂಗವಾದಮೇಲೆ "ತ್ವಂ ಬ್ರಹ್ಮಾಸಿ" ನೀನು ಬ್ರಹ್ಮನಾಗಿದ್ದೀಯೆ ಎಂದು ಹೇಳುವ ವಾಕ್ಯದ ಪ್ರಕಾರ ಬ್ರಹ್ಮನಾಗಿಯೇ ಇರುವ ನೀನು ನಾನೇ ಪರಬ್ರಹ್ಮನೆಂದು ಭಾವಿಸುವುದರಲ್ಲಿ ಕೇಡೇನು ? ॥೧॥ ವೇದವಾಕ್ಯವು ಹೇಳಿದ ಜಾತಿಸೂತಕ ಮೊದಲಾದವುಗಳಲ್ಲಿ ನಿನ್ನ ಬುದ್ಧಿಯು ನಿಶ್ಚಯಜ್ಞಾನವನ್ನು ಹೊಂದಿರುವಂತೆ ಅದೇ ವೇದವು ಬೋಧಿಸುವ "ತತ್ತ್ವಮಸಿ" ಎಂಬ ವಾಕ್ಯದ ವಿಷಯದಲ್ಲಿ ನಿನಗನುಮಾನವೇಕೆ ? ಭೇದರಹಿತನಾದ ಪರಮೇಶ್ವರನೇ ನಾನೆಂದಿರು. ॥೨॥

ಶ್ರೀರಾಮನಿಗೆ ತಾನು ಮನುಷ್ಯನೆಂಬ ಭಾವನೆಯುಂಟಾಗಿರಲು ನಾರದರು ಮಾಡಿದ ಉಪದೇಶದಿಂದ ತಾನೆ ಸಾಕ್ಷಾತ್ಪರಬ್ರಹ್ಮವೆಂದು ತಿಳಿದಂತೆ ನೀನು ಜೀವನು ನಾನೆಂಬ ಬುದ್ಧಿಯನ್ನು ತೊರೆದು ವೇದಬೋಧೆಯಿಂದ ನಾನೇ ಶಂಭುಲಿಂಗನೆಂಬ ಭಾವನೆಯಿಂದಿರು. ॥೩॥

೩೯

ಸದ್ಗುರುವಿನುಪದೇಶವು ಶಿಷ್ಯರ ಯೋಗ್ಯತೆಯ ಮೇಲೆ ಮೂರು ವಿಧವಾಗಿ ಪರಿಣಮಿಸುವದು. ಹೇಗೆಂದರೆ ॥ಪ॥ ಅಧಮನಿಂದ ನೀಚನಿಗೆ ಬೋಧಿಸಿದ್ದು ಕಾದ ಕಬ್ಬಿಣದ ಮೇಲೆ ನೀರನ್ನು ಹುಯ್ದರೆ ಹೇಗೆ ಅದರ ಗುರುತೇ ಇಲ್ಲದಂತೆ ಇಂಗಿ ಹೋಗುವುದೋ ಹಾಗೆ ವ್ಯರ್ಥವಾಗುವದು. ॥೧॥

ಮಧ್ಯಮನಾದವನಿಗೆ ಉಪದೇಶ ಮಾಡಿದ್ದು ತಾವರೆಯ ಎಲೆಯ ಮೇಲಿನ ನೀರು ಮುತ್ತಿನಂತೆ ಕಾಣುವ ಹಾಗೆ ಶಿಷ್ಯನಲ್ಲಿ ನಾಟಿದಂತೆ ಕಾಣಬರುವುದು. ॥೨॥

ಉತ್ತಮನಾದವನಿಗೆ ಮಾಡಿದ ಶಂಭುಲಿಂಗನ ಉಪದೇಶವು ಮುತ್ತಿನ ಚಿಪ್ಪಿನಲ್ಲಿ ಬಿದ್ದ ನೀರು ಮುತ್ತಾಗುವಂತೆ ಶಿಷ್ಯನನ್ನು ಜ್ಞಾನಿಯನ್ನಾಗಿ ಮಾಡಿ ಮುಕ್ತಿಯನ್ನೇ ಕೊಡುವುದು. ॥೩॥

೪೦

ತತ್ತ್ವಜ್ಞಾನಿಯಾಗಿ ಆನಂದಸ್ವರೂಪನಾಗಿ, ಏಕರೂಪನಾಗಿರುವ ಜ್ಞಾನಿಯು ವಿಷಯಗಳಲ್ಲಿ ಮಮತೆಯನ್ನು ಹೊಂದಬಹುದೇ ? ॥ಪ॥ ಸ್ಥೂಲ, ಲಿಂಗ, ಕಾರಣ ಎಂಬ ದೇಹತ್ರಯವೂ ಅಂತಃಕರಣ ಚತುಷ್ಟಯವೂ, ಮನಸ್ಸು ಮೊದಲಾದವು ತನಗೆ ವಿಲಕ್ಷಣವಾದವುಗಳೆಂದು ತಿಳಿದು ಜನ್ಮಾಂತರಗಳನ್ನು ಕಳೆದು ಜೀವಾತ್ಮನೆಂಬ ಭಾವನೆಯನ್ನು ಬಿಟ್ಟಿರುವ ಜ್ಞಾನಿಯು ಮೋಹಿವುದು ಚಿತವೇ ? ॥೧॥

ಈ ಪ್ರಪಂಚವು ಮೃಗಜಲ, ಇಂದ್ರಚಾಪಗಳಂತೆ ಸುಳ್ಳಾದದ್ದು, ಆಸೆ ಪಡುವುದಕ್ಕೆ ಇದರಲ್ಲಿ ನಿಶ್ಚಯವಾದದ್ದು ಯಾವುದೂ ಇಲ್ಲವೆಂದು ಜ್ಞಾನಿಯು ಚೆನ್ನಾಗಿ ತಿಳಿದಿರುವನು, ॥೨॥

ಸಂತೋಷ ಸಮುದ್ರನಾದ ಶಂಭುಲಿಂಗನಲ್ಲಿ ಐಕ್ಯಾನುಸಂಧಾನವನ್ನು ಹೊಂದಿ, ಸಂಸಾರವಾಸನೆಯನ್ನು ಸುಟ್ಟು, ಸಂಕಲ್ಪವಿಕಲ್ಪಗಳಿಲ್ಲದೆ ಏಕರೂಪನಾಗಿರುವ ಜ್ಞಾನಿಯು ಮೋಹಿಸಬಲ್ಲನೇ ? ॥೩॥

೪೧

ಗುರುವಿನಿಂದ ವೇದಾಂತೋಪದೇಶ ಮಾಡಿಸಿಕೊಂಡಾಗಲೂ ಪೂರ್ವದಂತೆ ಜೀವನಿಷ್ಠವಾದ ಗುಣಗಳನ್ನೆಲ್ಲವನ್ನೂ ಆಶ್ರಯಿಸಿದ್ದರೆ ಏನು ಪ್ರಯೋಜನ ? ಅಂಥವನಿಗೆ ಮುಕ್ತಿಯು ಸಾಧ್ಯವಾಗುವುದೇ ? ॥ಪ॥

ಪೂರ್ವದಂತೆಯೇ ಮನ್ಮಥವಿಕಾರ, ಕೋಪ, ಆಸೆ, ಮದ, ಮೋಹ ಮಾತ್ಸರ್ಯ ಹಣದಾಸೆ, ಅವಸ್ಥಾತ್ರಯ, ಹಸಿವು, ಬಾಯಾರಿಕೆ ಇವುಗಳಿದ್ದರೆ ಮುಕ್ತಿಯಿಲ್ಲ. ॥೧॥

ಮೊದಲಿನಂತೆ ಲೋಕವ್ಯವಹಾರ, ಕಾಲತ್ರಯ ವ್ಯಾಪಾರ, ದೇಹಾಭಿಮಾನ, ಕುಲಜಾತ್ಯಾಭಿಮಾನ, ಹೆಸರು, ಆಕಾರ, ಜಗತ್ತಿನ ಸಂಬಂಧ, ಹಾಗು

ಜಾಯತೇ ಮೊದಲಾದ ಆರು ವಿಧದ ವಿಕಾರಗಳು, ಸಂಸಾರವು, ಕರ್ಮಗಳು, ಇಹಪರಲೋಕಗಳ ಸುಖದಾಸೆ ಮೊದಲಾದವುಗಳಿದ್ದರೆ ಮುಕ್ತಿಲಭಿಸದು. ॥೨॥

ಯಥಾ ಪ್ರಕಾರವಾದ ಸುಖದುಃಖ ಮೊದಲಾದ ಒಂಭತ್ತು ಗುಣಗಳು, ಮಮಕಾರ, ಅನ್ಯದೂಷಣೆ, ವಂದನೆ, ದೋಷ ಮೊದಲಾದವು ತೋರುತ್ತವೆ. ಇವುಗಳಿಗೆ ವಿಲಕ್ಷಣವಾದ, ಆನಂದ ಸ್ವರೂಪವಾದ ಶಂಭುಲಿಂಗ ಸ್ವರೂಪ ನಾಗಿರದೆ ಮುಕ್ತಿ ಸಾಧ್ಯವಲ್ಲ. ॥೩॥

೪೨

ಎಲೆ ದೇಹವೆ ! ಪೂರ್ವದಂತೆ ನನ್ನ ಸಂಗಡ ನಿನಗೆ ಸ್ನೇಹವು ಬೇಡ. ನೀನು ನನಗಿಂತ ಬೇರೆಯಾದವನು. ॥ಪ॥ ನೀನು ಸುಳ್ಳು, ನಾನು ನಿಶ್ಚಯ ಆಣವ, ಮಾಯೆ, ಕಾರ್ಮಿಕ ಎಂಬ ಕೊಳೆಯುಳ್ಳವನು ನೀನು. ನಾನು ಪರಿ ಶುದ್ಧನು ಕರ್ದುಬಗ್ಧನು ನೀನು, ಸಾಕ್ಷಿ ನಾನು ಬಂಧವುಳ್ಳವನು ನೀನು ನಾನು ಮೋಕ್ಷ ಸ್ವರೂಪನು ॥೧॥

ಮೂಢನು ನೀನು, ನಾನು ವಿವೇಕಿ. ನಾನಾ ಬಗೆಯಾದವನು ನೀನು, ಏಕರೂಪನು ನಾನು, ನಾಶವಾಗುವನು ನೀನು, ಶಾಶ್ವತನು ನಾನು, ನೀನು ಮಣ್ಣಾಗುವಿ. ನಾನು ವಸ್ತುವಾಗಿರುವೆನು. ॥೨॥

ನಾನು ಏಕಾಕಾರವಾದ ಪರಮಾತ್ಮಸ್ವರೂಪನಾಗಿರುವೆನು. ನೀನು ಅನೇಕ ಪ್ರಕಾರವಾಗಿರುವೆ, ಪೃಥ್ವಿ ಮೊದಲಾದ ಪಂಚಭೂತ ವಿಕಾರನು ನೀನು, ನಿರ್ವಿಕಾರನಾದವನು ನಾನು, ವೃದ್ಧಿಕ್ಷಯಾದಿಗಳು ನಿನಗುಂಟು, ನಾನು ಸಮನು. ॥೩॥

ಜಾಯತೇ ಮೊದಲಾದ ಆರು ವಿಕಾರವುಳ್ಳವನು ನೀನು. ನಾನು ಅವಕ್ಕೆ ದೂರನು. ದೃಶ್ಯವಾಗಿ ಕಾಣುವನು ನೀನು. ಸಾಕ್ಷಿ ನಾನು. ರೋಗಗಳ ನೆಲೆ ನೀನು, ಸುಖವು ನಾನು. ॥೪॥

ನೀನು ತ್ಯಜಿಸಲ್ಪಡತಕ್ಕವನು. ನಾನು ಗ್ರಹಿಸಲ್ಪಡತಕ್ಕವನು. ನಶ್ವರನಾದವನು ನೀನು. ಮಾಯಾರಹಿತನಾದ ಪರತರಶಂಭುಲಿಂಗ ನಾನು. ನೀನಾರು ? ನಾನಾರು ? ಇದನ್ನು ತಿಳಿದು ನೋಡು ಇನ್ನು ನನ್ನ ನಿನ್ನ ಸ್ನೇಹವು ಬೇಡ. ॥೫॥

೪೩

ಶಾಸ್ತ್ರವಿಚಾರ ಮಾತ್ರವಿದ್ದು ಭೂತ ವರ್ತಮಾನ ಭವಿಷ್ಯಗಳೆಂಬ ಪ್ರತಿಬಂಧಕಗಳನ್ನು ಬಿಡದಿದ್ದವನಿಗೆ ಖಂಡಿತವಾಗಿ ಮುಕ್ತಿಯು ಉಂಟಾಗುವದಿಲ್ಲ. ॥ಪ॥

ವೈರಾಗ್ಯದಿಂದ ಸಂಸಾರವನ್ನು ಬಿಟ್ಟು ಗುರುವಿನ ಮೂಲಕ ವೇದ ವೇದಾಂತಾರ್ಥಗಳನ್ನು ತಿಳಿದುಕೊಂಡರೆ ಗುರುಬೋಧೆಯಿಂದುಂಟಾದ ಜ್ಞಾನದಿಂದ ಪೂರ್ವದಂತೆ ಸ್ತ್ರೀ ಮೊದಲಾದವು ಸ್ಮರಣೆತಪ್ಪದೆ ಪ್ರಾಪ್ತವಾಗಿ ಸ್ವಾನುಭವದಿಂದುಂಟಾಗುವ ಅಪರೋಕ್ಷ ಜ್ಞಾನವಿಲ್ಲದ ಕಾರಣ ಮುಕ್ತಿಯಿಲ್ಲ. ॥೧॥

ಜಡಬುದ್ಧಿಯುಳ್ಳವರ ಸಹವಾಸವೂ, ಸ್ತ್ರೀ ಸಂಭೋಗ ಮೊದಲಾದವುಗಳಲ್ಲಿ ಅಪೇಕ್ಷೆಯೂ, ಇವೇ ಮೊದಲಾದವುಗಳನ್ನು ಬಿಡದೆ ಮಾಡುವ ಚರ್ಚೆಯಿಂದ ಅಭಿಮಾನ. ಚಾಪಲ್ಯಗಳು ಹೋಗದೆ, ನ್ಯಾಯವಾದ ತತ್ವಜ್ಞಾನವು ಉಂಟಾಗದೆ ಇರುವ ಕಾರಣ ಮುಕ್ತಿಯಾಗದು. ॥೨॥

ಇನ್ನೂ ಕೆಲವು ಜನ್ಮಗಳನ್ನು ಎತ್ತಬೇಕೆಂಬಾಸೆಯೂ, ಸ್ವರ್ಗ ಮೊದಲಾದ ಲೋಕಗಳನ್ನು ಹೊಂದಬೇಕೆಂಬ ಅಪೇಕ್ಷೆಯೂ ಮನಸ್ಸಿನಲ್ಲಿ ಉಂಟಾಗಿ ನಿಜಾನಂದ ರೂಪವಾದ ಬ್ರಹ್ಮವು ಕಾಣಿಸದೆ ಹೋಗುವದರಿಂದ ಮುಕ್ತಿ ದೊರೆಯದು. ॥೩॥

ಈ ಪ್ರಕಾರವಾಗಿ ಮೂರು ವಿಧವಾದ ಕಟ್ಟನ್ನು ತಿಳಿದು ಬಿಡಿಸಿಕೊಂಡು, ಶಾಂತಿ ಮೊದಲಾದ ಸುಗುಣಗಳಿಲ್ಲದೆ ತ್ರಿಕಾಲಾಬಾಧ್ಯನು ಚಿನ್ಮಯನೂ ಆದ ಪರಮೇಶ್ವರನು ತೋರಿಬರುವದಿಲ್ಲವಾದ್ದರಿಂದ ॥೪॥

ಬಹು ಬಗೆಯಾದ ಕರ್ಮಸಮೂಹವನ್ನು ಬಿಟ್ಟು ಶ್ರವಣಾದಿಗಳನ್ನು ಮಾಡುತ್ತಿದ್ದರೂ ಬಂಧತ್ರಯವು ಎಲ್ಲಿ ನಾಶವಾಗುವದಿಲ್ಲವೋ ಅಲ್ಲಿಲ್ಲಾ ಶಂಭುಲಿಂಗನ ರೂಪವೇ ನಾನೆಂದು ತೋರಿಬರುವದಿಲ್ಲವಾಗಿ ಅದರಿಂದ ಮುಕ್ತಿಯಾಗದು. ॥೫॥

೪೪

ಎಲೈ ಶಿವನೇ ! ನನ್ನನ್ನು ಇನ್ನು ಕಾಡಿಸಿ ಫಲವೇನು ? ಕೃಪಾ ಕಟಾಕ್ಷದಿಂದ ನೋಡಿ ಕಾಪಾಡು. ॥ಪ॥

ಸ್ಥೂಲ ಮೊದಲಾದ ಮೂರು ಬಗೆಯ ದೇಹಗಳನ್ನು ಬಿಟ್ಟು ಹೋಗದೆ ಇರುವಂಥ ರೋಗಗಳ ಬಾಧೆಯನ್ನು ಸ್ಮರಿಸಿಕೊಂಡು ಇರುವ ಬದುಕನ್ನು ಉಂಟುಮಾಡದೆ ನನ್ನನ್ನು ಕಾಪಾಡು. ॥೧॥

ಪಾಪಕೃತ್ಯಗಳನ್ನು ಮಾಡಿ ಪುಣ್ಯ ಕಾರ್ಯಗಳನ್ನು ಬಿಟ್ಟಿದ್ದರಿಂದ ಒದಗುವ ಚಿಂತೆಯನ್ನು ಹೋಗಲಾಡಿಸಿ ಕಾಪಾಡು. ॥೨॥

ಮನುಷ್ಯ ಮೊದಲು, ಬ್ರಹ್ಮಕಡೆಯಾಗಿ ಸರ್ವರಿಗೂ ಉಂಟಾಗುವ ಸಂತೋಷದ ನೂರು ಪಟ್ಟು ಆಗಿರುವ ಆತ್ಮಸುಖದಿಂದ ನನ್ನನ್ನು ಕೂಡಿದವನನ್ನಾಗಿ ಮಾಡು. ॥೩॥

ಬಗೆಬಗೆಯಾದ ವೈದಿಕ. ಲೌಕಿಕ ಕರ್ಮಗಳನ್ನು ಮೊದಲು ಮಾಡಿ ಆ ಮೇಲೆ ನಿನ್ನ ರೀತಿಯನ್ನು ತಿಳಿದೆನು. ಇನ್ನು ಆ ಕರ್ಮಗಳನ್ನು ನಾನು ಅಪೇಕ್ಷಿಸದಂತೆ ಮಾಡು, ॥೪॥

ಬೇರೆ ಸದ್ಗತಿಯನ್ನು ಅಪೇಕ್ಷಿಸುವದಕ್ಕೆ ಅವಕಾಶಕೊಡದೆ, ದಿವ್ಯ ಮೋಕ್ಷಕ್ಕೆ ಆಶ್ರಯವಾದ ಶಂಭುಲಿಂಗವಾದ ನೀನು ಅಗಲದೆ ನನ್ನಲ್ಲಿ ಸೇರಿಕೊಂಡಿರುವುದು ॥೫॥

೪೫

ಅಧಿಕಾರಿ ಪಂಚಕಂ

ಮನುಷ್ಯರಲ್ಲಿ ಪುಣ್ಯಶಾಲಿಗಳೆನಿಸಿಕೊಂಡಿರುವವರು ಐದು ಜನರು. ಅವರ ಶ್ರೇಷ್ಠ ಗುಣಗಳನ್ನು ಕುರಿತು ಹೇಳುವೆನು. ॥ಪ॥

ಶಿವಯೋಗವು ನ್ಯಾಯವಾದದ್ದು ಎಂದು ತಿಳಿದುಕೊಳ್ಳದೆ ಲೋಕವ್ಯವಹಾರದಲ್ಲಿ ಸೇರಿ, ಜಾತಿಯ ಕಟ್ಟಳೆಯಂತೆ ಆಚರಿಸುತ್ತ, ಭೋಗಾಪೇಕ್ಷೆಯಲ್ಲಿರುವವನು ನೂರು ಜನ್ಮಗಳಸಲ್ಲಿ ಮುಕ್ತಿಯನ್ನು ಸಂಪಾದಿಸುವನು. ಇವನು ಕರ್ಮಿ ಎನಿಸಿಕೊಳ್ಳುವನು. ॥೧॥

ಈ ಜಗತ್ತು ನಿಶ್ಚಯವಾದದ್ದು, ಇದರಲ್ಲಿ ಹೊರಗಿನ ಕರ್ಮವೆ ಮುಖ್ಯವಾದದ್ದೆಂದು, ಬ್ರಹ್ಮಚರ್ಯ ಮೊದಲಾದ ನಾಲ್ಕು ಆಶ್ರಮಗಳನ್ನು ಹೊಂದಿ ತನಗೆ ಸದ್ಗತಿಯಾಗಬೇಕೆಂದು ಅಪೇಕ್ಷೆಯುಳ್ಳವನು ಮೂರು ಜನ್ಮಗಳಲ್ಲಿ ಮುಕ್ತಿಯನ್ನು ಸಂಪಾದಿಸುವನು. ಇವನಿಗೆ ಮುಮುಕ್ಷುವೆಂದು ಹೇಳುವ.,

ಸದ್ಗುರುವು 'ಜಗತ್ತನ್ನು ಸುಳ್ಳೆಂತಲೂ, ಆತ್ಮನೇ ನಿತ್ಯನೆಂದೂ' ಬೋಧಿಸಲು ಅದನ್ನು ಕೇಳಿ ಹೊರಗಣ ಚಿಂತೆಯನ್ನು ಬಿಟ್ಟು ಪ್ರೀತಿಯಿಂದ ಅಂತರ್ಮುಖಿಯಾಗಿ ಧ್ಯಾನಿಸುತ್ತಿರುವವನು ಅಭ್ಯಾಸಿ ಎನಿಸುವನು. ಇವನು ಎರಡು ಜನ್ಮಗಳಲ್ಲಿ ಮುಕ್ತನಾಗುವನು. ॥೩॥

ಪ್ರಪಂಚವನ್ನೆಲ್ಲಾ ಮರೆತೂ, ಪರಬ್ರಹ್ಮವನ್ನು ಅಂತರಂಗದಲ್ಲಿ ನೋಡಿ ಧ್ಯಾನಿಸುತ್ತ, ಅಂತರಬಹಿರ್ವ್ಯಾಪಾರಗಳನ್ನೆಲ್ಲಾ ಬಿಟ್ಟು ಇರುವವನು ಅನುಭಾವಿ. ಇವನು ಒಂದು ಜನ್ಮದಲ್ಲಿಯೇ ಮುಕ್ತಿಯನ್ನು ಪಡೆಯುವನು, ॥೪॥

ತಾನೇ ಈಶ್ವರನ ಸ್ವರೂಪನಾಗಿ, ಉಳಿದ ಸಂಕಲ್ಪ ವಿಕಲ್ಪಗಳನ್ನು ಬಿಟ್ಟು ಸುಖಸಮುದ್ರ ಸ್ವರೂಪನಾಗಿ ಪ್ರಕಾಶಿಸುತ್ತಿರುವವನೇ ಆರೂಢನೆನಿಸಿಕೊಳ್ಳುವನು. ಇವನಿಗೆ ಇದೇ ಜನ್ಮದಲ್ಲಿಯೇ ಮುಕ್ತಿಯು, ॥೫॥

೪೬

ನಾನಾವಿಕಾರವುಳ್ಳ ಮಾಯೆಯೆಂಬ ಮುಸುಕು ಮುಚ್ಚಿಕೊಳ್ಳದೆ ತನ್ನ ಅನುಭವವೆಂಬ ಅಮೃತವನ್ನು ಪಾನಮಾಡದೆ, ಸುಮ್ಮನೆ ಕೈವಲ್ಯವುಂಟಾಯಿ ತೆಂದು ಹೇಳುವವನ ರೀತಿಯು ಹೊಸದಾದದ್ದು. ಅವನಿಗೆ ಸುಮ್ಮನೆ ಹೇಗೆ ಮುಕ್ತಿಯು ಉಂಟಾಯಿತೋ ನಾವು ಕಾಣೆವು !

ಸ್ತ್ರೀ ಪುತ್ರರುಗಳನಲ್ಲಿ ಅನುರಾಗವಂತೆ, ಯುಕ್ತಾಯುಕ್ತಜ್ಞಾನವಂತೆ, ಇಂದ್ರಿಯ ನಿಗ್ರಹವಂತೆ, ಮನಸ್ಸಿನಲ್ಲಿ ಸಂಕಲ್ಪವಂತೆ, ಸತ್ಕಾರವಂತೆ, ಸನ್ಮಾರ್ಗ ಪ್ರವರ್ತನೆ ಹಾಗೂ ವೇದದಲ್ಲಿ ಅಭಿಲಾಷೆಯಂತೆ, ಗುರುವಿನ ಅಭಿಪ್ರಾಯ ವನ್ನು ಗ್ರಹಿಸದಿರುವದಂತೆ ॥೧॥

ಜ್ಞಾನವಂತೆ. ದೇಹವನ್ನು ಭಿನ್ನವೆಂದು ತಿಳಿಯನಂತೆ. ಅಭೇದ ಜ್ಞಾನವಂತೆ, ಜೀವನು ತಾನೆಂಬ ಭಾವನೆಯಂತೆ, ವಿಸ್ಮೃತಿಯು ಇಲ್ಲವಂತೆ, ಅನುಮಾನವು ಹೋಗಿಲ್ಲವಂತೆ. ಆತ್ಮನಜ್ಞಾನವು ಮನಸ್ಸಿನಲ್ಲಿ ನಿಶ್ಚಲವಾಗಿದೆ ಯಂತೆ, ವಿಪರೀತಮತಿಯಂತೆ, ॥೨॥

ಅಹಂಕಾರವಿಲ್ಲವಂತೆ, ಕರ್ಮಬದ್ಧತೆಯಂತೆ. ಕೃತಾರ್ಥತೆಯಂತೆ, ಇಚ್ಛೆ ತಪ್ಪಿಲ್ಲವಂತೆ. ಈಶ್ವರನೇ ನಾನೆಂಬ ಎಣಿಕೆಯಂತೆ, ಜನನ ಮರಣಗಳ ಭಯ ವಂತೆ, ನಾವಿದನರಿಯೆವು ॥೩॥

೪೭

ಮುಕ್ತಿಯನ್ನು ಹೊಂದುವ ಬಗೆ ಯಾವುದೆಂದು ಹುಡುಕತಕ್ಕವನು ವೇದಾಂತ ವಿಚಾರ ಮುಂತಾದುವನ್ನು ಕೇಳಿ, ಹಗಲು ರಾತ್ರಿ ಆಲೋಚಿಸುತ್ತಿರ ಬೇಕು. ॥ಪ॥

ಅನೇಕ ವಿಧವಾಗಿರುವ ನಾಲ್ಕು ವೇದಗಳಲ್ಲಿ ಹೇಳಿರುವ ಮಾತುಗಳಿಗೆ ಯಾವಾಗಲೂ ಉಪಕ್ರಮ, ಉಪಸಂಹಾರ, ಅಭ್ಯಾಸ, ಅಪೂರ್ವತೆ, ಫಲ,

ಅರ್ಥವಾದ, ಉಪಪತ್ತಿಗಳೆಂಬ ಆರು ಬಗೆಗಳಿಂದ ತಾತ್ಪರ್ಯವನ್ನೂಹಿಸಿದರೆ ಜೀವಾತ್ಮ ಪರಮಾತ್ಮರಲ್ಲಿ ಐಕ್ಯಭಾವವೇ ಹೊರತು ಭೇದಭಾವನೆ ತೋರವದಿಲ್ಲ. ಈ ತಾತ್ಪರ್ಯವು ಶ್ರೇಷ್ಠವಾದದ್ದೆಂದು ಅಂಗೀಕರಿಸುವುದೇ ಒಳ್ಳೆ ಶ್ರವಣವೆಂದು ಹೇಳಿಸಿಕೊಳ್ಳುವದು. ಇಂತಹ ಶ್ರವಣದಿಂದ ಜಗತ್ತು ಯಾರು, ನಾನು ಯಾರು ಎಂದು ವಿಚಾರ ಮಾಡದೆ, ಪೂರ್ವದ ಅಜ್ಞಾನದಿಂದ ಕೂಡಿರದೆ ನಷ್ಟ ವನ್ನು ಮಾಡದೆ. ॥೧॥

ಜೀವಾತ್ಮನು ಪರಮಾತ್ಮನಿಗಿಂತ ಬೇರೆಯೆಂದು ಹೇಳಲು, ಜೀವನಿಗೆ ಪರಮನಿಂದ ಭೇದವುಂಟಾಗಿ ಘಟದಂತೆ ಇದೂ ಜಡವೆಂಬ ಅನುಮಾನ ಹುಟ್ಟು ವದು. ಆಗ ಸಾಮ್ಯವನ್ನು ಚನ್ನಾಗಿ ಯೋಚನೆ ಮಾಡಬಹುದು. ಇದೇ ಮನನವು. ಜೀವನು ಪರಮಾತ್ಮನಾಗುವದೋ ಅಲ್ಲವೋ ಎಂಬ ಸಂಶಯ ವನ್ನು ಹೋಗಲಾಡಿಸಿ ಸಮಾಧಾನ ಪಡಿಸುವುದು ಈ ಮನನವೇ ॥೨॥ ಹಿಂದೆ ಹೇಳಿದ ಶ್ರವಣ ಮನನಗಳಿಂದ ಗೊತ್ತುಮಾಡಲ್ಪಟ್ಟ ಶಂಭುಲಿಂಗಪದದಲ್ಲಿ ಸ್ಥಿರವಾದ ಧ್ಯಾನವನ್ನು ಇಟ್ಟುಕೊಳ್ಳುವುದೇ ನಿಧಿಧ್ಯಾಸವು. ಮುಚ್ಚಿಕೊಂಡಿ ರುವ ಅಹಂಕಾರ ಮೊದಲಾದವುಗಳಲ್ಲಿ ಆತ್ಮತತ್ವವನ್ನೂ, ಬಗೆಬಗೆಯಾದ ಈ ಪ್ರಪಂಚಕ್ಕೆ ಸತ್ಯತ್ವವನ್ನೂ ಉಂಟುಮಾಡುತ್ತಿರುವ ಈ ಅಜ್ಞಾನವು ಬಿಟ್ಟು ಹೋಗುವುದು; ॥೩॥

ಇತಿ ಭಾವನಾತ್ರಯೋಪಶಮನಂ

ಇತಿ ಮನನಂ

೪೮

ಚೆನ್ನಾಗಿ ಆಲೋಚನೆ ಮಾಡಿ ನೋಡಿ ಈಶ್ವರನ ಅನುಸಂಧಾನವನ್ನೇ ಮಾಡುತ್ತಿದ್ದರೆ ಜಾಗ್ರತೆಯಾಗಿ ಮುಕ್ತಿಯುಂಟಾಗುವುದು. ॥೪॥

ಗಾಸಿ, ಬೆಂಕಿ, ಮನಸ್ಸು, ದೇಹ ಮನೆ, ಪಟ್ಟಣ, ದೇಶ, ಅತಳಾದಿ ಹದಿ ನಾಲ್ಕು ಲೋಕಂಗಳು ಇವುಗಳನ್ನು ಕ್ರಮವಾಗಿ ಹತ್ತಿ, ಮಹತ್ತರನಾದ ಪರಂ

ಜ್ಯೋತಿ ಸ್ವರೂಪನಾದ ಈಶ್ವರನಲ್ಲಿ ಮನಸ್ಸನ್ನು ನಿಲ್ಲಿಸುವುದೇ ಸ್ಥೂಲ ಯೋಗವೆನಿಸುವುದು. ಆ ಮನಸ್ಸು ಸ್ವಲ್ಪ ವ್ಯತ್ಯಾಸವಾದರೆ ಸೂಕ್ಷ್ಮಯೋಗ ವೆನಿಸುವುದು. ॥೧॥

ಜ್ಞಾನವೆಂಬ ತೆರೆಗಳು ಹೊರಡುತ್ತಿರಲು, ಮಾಯೆಯೆಂಬ ಮಳಲು ಕಟ್ಟೆಯು ಕಿತ್ತು ಹಾಳಾಗಿ ಹೋಗಲು ಜೀವಾತ್ಮ ಪರಮಾತ್ಮರುಗಳೆಂಬ ಎರಡು ಸ್ವರೂಪವನ್ನು ಹೋಗಲಾಡಿಸಿ, ಬೋಧಾಂಬು ನಿಧಿಗಳು ಏಕರೂಪವಾಗುವದ ರಿಂವ ಏಕರೂಪವಾಗಲು ಭೇದಬುದ್ಧಿಗೆ ಅವಕಾಶವಿಲ್ಲದಿರುವುದೇ ವಿಸುತ ಯೋಗವು. ॥೨॥

ಈಶ್ವರನೆಂಬ ಅಮೃತಸಮುದ್ರವು ಏಳು ವಿಧವಾದ ತೆರೆಗಳ ಸಂಬಂಧ ವನ್ನು ಬಿಟ್ಟು, ಸಮಸ್ತಲೋಕಗಳು ತನ್ನನ್ನು ಬಿಟ್ಟು ಬೇರಿಲ್ಲದಂತೆ ತನ್ನನ್ನು ಆಶ್ರಯಿಸಿಕೊಂಡು ವಿಕಲ್ಪಗಳಿಗೆ ಅವಕಾಶವಿಲ್ಲದೆ ಇರಲು ಅಧಿಕಯೋಗವು. ॥೩॥

ಬ್ರಹ್ಮಜ್ಞಾನವೆಂಬ ಸಮುದ್ರವು ಕೋಶಗಳನ್ನು ಮೀರಿದ ಪರತತ್ವ ವನ್ನು, ಸಮಸ್ತ ಪ್ರಪಂಚವನ್ನು ಅಂಗೀಕರಿಸಿ, ಬಗೆಬಗೆಯ ಕಲ್ಪನೆಗಳೆಂಬ ತೆರೆ ಗಳಿಲ್ಲದಂತೆ ನಿಶ್ಚಲವಾಗಿರುವುದು ಅಮೃತಯೋಗವು. ॥೪॥

ಜೀವಾತ್ಮ ಪರಮಾತ್ಮರುಗಳು ಕೂಡಿಯಿದ್ದು ಭೇದದಿಂದ ಅಪರೋಕ್ಷ ಜ್ಞಾನವೆಂದು ಹೇಳಿರುವ ಜಡತ್ವವನ್ನು ನಾನಲ್ಲವೆಂದು ಬಿಟ್ಟು ಚಿವಾನಂದ ಮಯನಾದ ಶಂಭುಲಿಂಗನೇ ತಾನೆನಿಸಿ ಕಾಣುತ್ತಿರುವುದೇ ನಿಜಯೋಗವು, ॥೫॥

ಇತಿ ನಿಜ ಧ್ಯಾನದ ಪಂಚಯೋಗ

೪೯

ತನ್ನನ್ನು ತಾನು ಬಿಡದಂತೆ ವಿಚಾರ ಮಾಡುವುದಕ್ಕೆ ತಿಳಿಯದವನಿಗೆ ಆತ್ಮ ಜ್ಞಾನವನ್ನು ಹೊಂದುವುದಕ್ಕೆ ಆಗುವುದಿಲ್ಲ. ॥ಪ॥

ಹೊರಗೆ ಒಂದು ರೂಪವನ್ನು ಲಕ್ಷ್ಯವಾಗಿಟ್ಟುಕೊಳ್ಳದೆ, ಒಳಗೆ ಒಂದು ಗುರುತನ್ನಿಟ್ಟುಕೊಳ್ಳದೆ, ವಿಸ್ಮೃತಿಯನ್ನುಂಟುಮಾಡದ ಅಜಾಗರೂಕತೆಯು ಇಲ್ಲದೆ, ಪೂರ್ವ ಸಂಸ್ಕಾರವು ನಾಶವಾಗದೆ, ಏಕಾಗ್ರಚಿತ್ತವಿಲ್ಲದೆ ಇರುವನಿಗೆ. ||೧||

ಈ ಜಗತ್ತೂ, ನಾನು ಎಂಬ ಭೇದವು ತೋರದೆ. ಇನ್ನೊಂದು ಪದಾರ್ಥದೊಡನೆ ಸೇರದೆ, ಭೇದಭಾವವು ಹುಟ್ಟದೆ, ಉಳಿದ ವಸ್ತುವು ಇದೆಂದು ಅಭಿಮಾನವಿಲ್ಲದೆ ಯಥಾರ್ಥವಾದ ಸಮರಸವನ್ನು ಹೊಂದಿ ನಿಂತವನಿಗಲ್ಲದೆ. ||೨||

ಎರಡೆಂದು ಹೇಳದೆ ಒಂದೆಂಬ ಭಾವನೆಯನ್ನು ತೋರಿಸದೆ ಏನೂ ತಿಳಿಯದವನಂತಿರದೆ ಚಾಂಚಲ್ಯವನ್ನು ಹೊಂದದೆ ಆವರಣಗಳಿಲ್ಲದೆ, ಶಂಭುಲಿಂಗನಾಗಿ ಇರುವ ಯಥಾರ್ಥವಾದ ಮೋಕ್ಷವನ್ನು ಕಂಡವನಿಗಲ್ಲದೆ. ||೩||

೫೦.

ಯಥಾರ್ಥವಾದ ವೈರಾಗ್ಯವುಳ್ಳ, ಜನಗಳಿಂದ ನಮಸ್ಕರಿಸಲ್ಪಡುವ ಗುರುವೇ ! ನೀನು ನನಗೆ ಐದು ವಿಧವಾದ ಯೋಗಗಳ ಸಂಪತ್ತನ್ನು ಉಂಟುಮಾಡಿದೆ. ಆದ್ದರಿಂದ ನಿನಗೆ ನಮಸ್ಕರಿಸುವೆನು, ||ಪ||

ಹೊರಗಿನ ಗಡಿಗೆ ಮೊದಲಾದ ಪದಾರ್ಥಗಳನ್ನು ಅನೇಕ ಬಗೆಯಾಗಿ ತಿಳಿಯುತ್ತಾ, ಹೊಂದಿದ್ದ ಚಿದಾಭಾಸ ಜೀವನ ಗುರುತನ್ನು ಹಿಡಿದು ಅಲ್ಲಿ ಪ್ರಕಾಶಿಸುವ ಪರಬ್ರಹ್ಮಸ್ವರೂಪನೇ ನೀನು ಆಗುತ್ತೀ ಎಂದು ಹೇಳಿದ. ||೧||

ಅಂತರಂಗದಲ್ಲಿ ದೇಹ, ಪ್ರಾಣ, ಮನ, ಬುದ್ಧಿ, ನಿದ್ರೆ ಎಂದು ಹೇಳಿಸಿಕೊಂಡ, ಐದು ಕೋಶಗಳನ್ನೂ ಬೇರೆಮಾಡಿ ತಿಳಿಯುವ ಜಗತ್ಸಾಕ್ಷಿಯಾದ ಕೂಟಸ್ಥನು ನೀನೆ ಪರಬ್ರಹ್ಮನೆಂದು ಬೋಧಿಸಿದ ಶ್ರೀಗುರುವೇ ಶರಣು. ||೨||

ಪರೋಕ್ಷ. ಅಪರೋಕ್ಷಗಳೆಂಬ ಎರಡು ಉಪಾಧಿಗಳನ್ನೂ ಬಿಟ್ಟು,

ಚರ್ಚೆಗೆ ಅವಕಾಶವಿಲ್ಲದೆ ಅಖಂಡಾಕಾರವಾದ ಏಕರಸವುಳ್ಳ ಸ್ವರೂಪವುಳ್ಳದ್ದು ಎಂದೆನಿಸಿರುವ ಉಪದೇಶವೆಂಬ ಸಮುದ್ರಸ್ವರೂಪವಾದ ಪರಮೇಶ್ವರನೇ ನೀನಾಗಿರು. ಇದೇ ನಿನಗೆ ಮುಕ್ತಿಯೆಂದು ಪ್ರೀತಿಯಿಂದ ತಿಳಿಸಿದ ಶ್ರೀಗುರುವೇ ಶರಣು. ||೩||

೫೧

ಬೇರೆ ಬೇರೆಯಾಗಿರುವ ಯೋಗಾಭ್ಯಾಸದಿಂದ ಆಯಾಸಪಡದೆ ಬ್ರಹ್ಮಾನಂದವನ್ನು ಕೊಡುವ ಸ್ವರೂಪ ಜ್ಞಾನದಲ್ಲಿ ನಿಷ್ಠರಾಗಿರಿ. ||ಪ||

ಪ್ರಾರಬ್ಧ ಕರ್ಮಕ್ಕೆ ಒಳಗಾಗಿ ಜನಿಸುವ ಮನ್ಮಥವಿಕಾರ ಮೊದಲಾದವುಗಳೆಲ್ಲ ನನಗೆ ಕಾಣಿನತಕ್ಕುವು, ಅವುಗಳನ್ನು ತಿಳಿಯುವ ಅರಿವೇ ನಾನು ಎಂಬ ಸ್ಮರಣೆಯು ಯಾವಾಗಲೂ ತಪ್ಪದಿರುವುದೇ ಯೋಗವು. ||೧||

ಮಹದಾದಿ ಶಕ್ತಿಗಳ ವಿಕಾರಕ್ಕೆ ಒಳಗಾಗದೆ, ಅದ್ವಿತೀಯನಾಗಿಯೂ, ಶಾಶ್ವತನಾಗಿಯೂ, ಸಚ್ಚಿದಾನಂದರೂಪನಾಗಿಯೂ ಸತ್‌ಸ್ವರೂಪನಾಗಿಯೂ ಇರುವ ಪರಮಾತ್ಮನೇ ನಾನೆಂಬ ಭಾವನೆಯನ್ನು ಮರೆಯದೆ ಇರುವುದೇ ವೇದಗಳಲ್ಲಿ ಹೇಳಲ್ಪಟ್ಟಿರುವ ಯೋಗ ||೨||

ಅಂತಃಕರಣ ಚತುಷ್ಟಯ, ಸತ್ವಾದಿ ಗುಣತ್ರಯ ಹಾಗೂ ವಿಷಯಗಳಿಗೆ ಸಾಕ್ಷಿಯಾದ ಈಶ್ವರನೇ ನಾನಾಗಿದ್ದೇನೆಂಬ ಭಾವನೆಯನ್ನು ಬಿಟ್ಟು ಶಾಂತವಾದ ಸಮುದ್ರದಂತೆ ನಿಶ್ಚಲವಾಗಿ ಸುಮ್ಮನಿರುವುದೇ ಯೋಗವು ||೩||

೫೨

ಎಲ್ಲಾ ಕಷ್ಟಗಳನ್ನೂ ಕಳೆದುಳಿದು ನಿಜಸುಖದಲ್ಲಿ ಎಂದಿರುವನೋ ? ||ಪ||

ಹೆಂಡತಿ, ಮಕ್ಕಳು, ಸ್ನೇಹಿತರು, ಅಣ್ಣತಮ್ಮಂದಿರು, ನೆಂಟರು, ದೇಹವು, ಹಣವು ಇವುಗಳನ್ನು ನನ್ನವೆಂದು ತಿಳಿದುಬಿಡಲಾರದೆ ಈ ಲೋಕದಲ್ಲಿ ಇರುವುದರಿಂದ ಉಂಟಾಗುವ ಚಿಂತೆಯನ್ನು ಕಳೆದುಕೊಂಡು ಶಾಶ್ವತವಾದ ಆನಂದವನ್ನು ಪೊಂದಿ ॥೧॥

ಇಂದ್ರಪದವಿ ಮೊದಲಾದವುಗಳನ್ನು ಬಯಸಿ, ಜ್ಯೋತಿಷ್ಟೋಮ ಮೊದಲಾದ ಯಾಗಗಳನ್ನು ಮಾಡಬೇಕೆಂಬ ಪೀಡೆಯು ನಿವಾರಣೆಯಾಗಿ, ತಾನೇ ಜಗನ್ಮಯನಾಗಿ ॥೨॥

ಪಾಪಕರ್ಮದ ಕೋಟಲೆಯಿಲ್ಲದೆ, ಪಾಪ ಪರಿಹಾರಕ್ಕಾಗಿ ಅಂತರಂಗ ಬಹಿರಂಗವಾದ ಪೂಜೆ ವ್ರತನಿಯಮ ಮುಂತಾದವುಗಳನ್ನು ಮಾಡಬೇಕೆಂಬ ಕಳವಳವು ತಪ್ಪಿ ಪರಿಶುದ್ಧನಾಗಿ ॥೩॥

ಮರವೆ, ಸಂಶಯ ವಿಪರೀತ ಭಾವ ಈ ತ್ರಿಪುಟಿಯ ಗುರುತು ಕಾಣಿಸದೆ ಇರುವದರಿಂದ ಶ್ರವಣ, ಮನನ, ನಿಧಿಧ್ಯಾಸವೆಂಬ ಯೋಗಲಕ್ಷಣದ ಸಂಬಂಧವಿಲ್ಲದೆ ಸ್ವತಂತ್ರನಾಗಿ ॥೪॥

ಸಾಂಖ್ಯಯೋಗ ಮೊದಲಾದ ಯಾವ ಸಿದ್ಧಾಂತಗಳ ಭಾವನೆಯನ್ನು ಬಯಸದೆ, ಪರಿಶುದ್ಧನಾದ ಶಂಭುಲಿಂಗನನ್ನು ಕೂಡಿ ಜೀವನ್ಮುಕ್ತಿ ಸ್ಥಿತಿಯುಳ್ಳವನಾಗಿ ಎಂದು ಇರುವೆ ? ॥೫॥

೫೩

ಲೋಕವೆಲ್ಲವನ್ನೂ ತಿಳಿಯಬಹುದು. ನನ್ನದೆಂಬುದನ್ನು ಬಿಡಬಹುದು. ಎಲ್ಲಕ್ಕೂ ನಾನೆಂಬ ಅಹಂಕಾರವನ್ನು ಮಾತ್ರ ಬಿಡುವುದು ಅಸಾಧ್ಯವು. ॥೫॥

ಪ್ರಕೃತಿ, ಮಹದಂಕಾರ, ಜೀವಾತ್ಮ, ಅಂತಃಕರಣಚತುಷ್ಟಯ, ಇಪ್ಪತ್ತೈದು ತತ್ವಗಳು, ವಿಶ್ವ ತೈಜಸ ಪ್ರಾಜ್ಞರೆಂಬ ಜೀವಾತ್ಮತ್ರಯ ಭೇದ

ಗಳು, ಸಾಕ್ಷಿಗಳಾದ ವಿರಾಟ್, ಹಿರಣ್ಯಗರ್ಭ, ಅಂತರ್ಯಾಮಿಗಳೆಂಬ ಬ್ರಹ್ಮ ತ್ರಯ ಇವರನ್ನೆಲ್ಲಾ ಗುರುಮುಖದಿಂದಲೂ, ವೇದದಿಂದಲೂ ತಿಳಿಯ ಬಹುದು. ॥೧॥

ಹಣ, ಚಿನ್ನ, ವಸ್ತ್ರ, ಒಡವೆ, ಗಂಧ, ಹೂ, ವಾಹನ. ಮನೆ, ಹೆಂಗಸು ಮೊದಲಾದವುಗಳು ಮುಂದಿರಲು ಅವುಗಳನ್ನು ಅನುಭವಿಸುವ ಶಕ್ತಿಯು ತನಗಿದ್ದರೂ ಅವುಗಳನ್ನೆಲ್ಲ ಹುಲ್ಲುಕಡ್ಡಿಗೆ ಸಮವೆಂದು ತಿಳಿದುಬಿಡಬಹುದು. ॥೨॥

ಜ್ಞಾನವಂತನು, ತಾಳ್ಮೆಯುಳ್ಳವನು, ಶಾಸ್ತ್ರಜ್ಞನು, ಸದ್ಗುಣವುಳ್ಳವನು, ಜಿತೇಂದ್ರಿಯನು, ವಿವೇಕಿ, ಯೋಗಿ, ಗೌರವಶಾಲಿ. ಪರಿಶುದ್ಧನು, ಮಹಾನು ಭಾವನು, ಉದಾರಿ ಎಂದು ಜನಗಳು ತನ್ನನ್ನು ಹೊಗಳುತ್ತಿರಲು ನಾನು ಇಂಥ ಮಹಾತ್ಮನೆಂದು ತಿಳಿದು ಗರ್ವಿಸದೆ ಇರುವುದು ಆಶ್ಚರ್ಯವು ಹೇ ಶಂಭು ಲಿಂಗನೇ ! ॥೩॥

೫೪

ಎಲೈ ಗುರುವೇ, ನಿನ್ನ ಕರುಣದಿಂದ ನಾನೇ ಪರಶಿವನೆಂಬ ಜ್ಞಾನವನ್ನು ಪಡೆದು ನಿತ್ಯಾನಂದವುಳ್ಳವನಾದೆನು. ॥ಪ॥

ಹೆಸರು, ಆಕಾರವುಳ್ಳವನು ನಾನೆಂದು ಅಭಿಮಾನವನ್ನಿಟ್ಟುಕೊಂಡು ತಾಮಸ ಗುಣವುಳ್ಳ ಬುದ್ಧಿಯುಳ್ಳವನಾಗಿ ನಾನಿರಲು ಆನಂದವು ಇದೆ, ಪ್ರಕಾ ಶಿಸುತ್ತಿದೆ ಎಂಬುದೆಲ್ಲಾ ನಿನ್ನನ್ನೇ ಆಶ್ರಯಿಸಿದೆ ಎಂದು ಪ್ರೀತಿಸಿ ಬೋಧಿಸ ಲಾಗಿ ॥೧॥

ದೇಹ, ಕಣ್ಣು, ಮನಸ್ಸು ಎಂಬುವಗಳೆಲ್ಲವೂ ನಿನಗೆ ಕಾಣಬರುವುದರಿಂದ ನಿನಗೆ ಇವುಗಳು ಪ್ರತಿಬಂಧಕಗಳಾಗಬಹುದೇ ? ನೀನು ಅವುಗಳಿಗೆ ಸಾಕ್ಷಿ ಮಾತ್ರನು ಎಂಬುದನ್ನು ಚೆನ್ನಾಗಿ ತಿಳಿಸಲಾಗಿ ನಿತ್ಯ ಸುಖಿಯಾದೆ. ॥೨॥

ಸೂಚಿಕಾಂತ ಶಿಲೆಯ ಸಮೀಪದಲ್ಲಿ ಕಬ್ಬಿಣವು ಇದ್ದರೆ ಅದಕ್ಕೆ ಚಲನೆಯು ಹೇಗೆ ಉಂಟಾಗುತ್ತದೆಯೋ ಹಾಗೆ ಜೀವಾತ್ಮನ ಸನ್ನಿಧಿ ಮಾತ್ರದಿಂದಲೇ ದೇಹಕ್ಕೆ ಚಲನೆಯುಂಟಾಗುವದೆಂದು ಸೂಚಿಸಲಾಗಿ. ॥೩॥

ಶುದ್ಧವಾದ ಸ್ಫಟಿಕವು ಯಾವ ಬಣ್ಣವುಳ್ಳ ವಸ್ತುವಿನೊಡನೆ ಸೇರಿದರೂ ಆ ಬಣ್ಣವುಳ್ಳದ್ದಾಗಿ ಕಾಣುವ ಹಾಗೆ, ನೀನು ಉಪಾಧಿಭೇದದಿಂದ ನಾನಾ ಬಗೆಯಾಗಿ ಕಾಣಬಂದರೂ ಪರಿಶುದ್ಧನೂ, ಏಕರೂಪನೂ ನೀನಾಗಿರುವಿ ಎಂದು ಬೋಧಿಸಲಾಗಿ ॥೪॥

ಪ್ರಾಣದಲ್ಲಿ ಪ್ರಾಣರೂಪನಾಗಿದ್ದು ತನಗೆ ಸ್ವಲ್ಪವೂ ನ್ಯೂನತೆ ಇಲ್ಲದೆ, ಪರಿಪೂರ್ಣನಾದ ಅಪರೋಕ್ಷರೂಪನೆನಿಸಿಕೊಂಡಿರುವ ಶಂಭುಲಿಂಗನನ್ನು ಕೂಡಿ ವಿವೇಕಿಯಾಗೆಂದು ಉಪದೇಶವ ಮಾಡಲಾಗಿ ನೀನೇ ನಿತ್ಯಸುಖಿಯು. ॥೫॥

೫೫

ಯಥಾರ್ಥವಾದ ಪರಬ್ರಹ್ಮೋಪದೇಶವಾದಮೇಲೆ ದುಃಖವು ತನ್ನಲ್ಲಿ ಎಂದಿಗೂ ತೋರದು, ॥ಪ॥

ಆನಂದಸ್ವರೂಪನಾದ ಪರಮಾತ್ಮನೇ ಜಗತ್ತನ್ನು ಸೃಷ್ಟಿಸಿ, ವಿಜ್ಞಾನಮಯನೆನಿಸಿಕೊಂಡು ಕರ್ಮಬದ್ಧನಾಗಿ ಕೇಡಿಗೊಳಗಾಗುವನಲ್ಲವೆ ನಾನು ಸಾಕ್ಷಿರೂಪನೆನಿಸಿಕೊಂಡು ನಿಶ್ಚಯ ಜ್ಞಾನವನ್ನು ಹೊಂದಿದಮೇಲೆ. ॥೧॥

ಜೀವಾತ್ಮ. ಪರಮಾತ್ಮರೆಂಬ ಚೈತನ್ಯವೆರಡನ್ನು ತಿರಸ್ಕರಿಸಿ, ತುರಿಯ ಪರಬ್ರಹ್ಮವೆಂಬ ಭೇದವನ್ನೂ ಬಿಟ್ಟು ಕೇವಲ ಚಿನ್ಮಾತ್ರವೇ ತಾನೆಂದು ತಿಳಿದ ಮೇಲೆ ॥೨॥

ಮೊದಲು ಸ್ವಸ್ವರೂಪವನ್ನು ಮರೆತು, ಗುರೂಪದೇಶದಿಂದ ಸ್ಮರಣ ಉಂಟಾಗಿ ಬ್ರಹ್ಮನಲ್ಲಿ ಮನಸ್ಸು ನಿಂತಿತು ಎಂದು ತಿಳಿಯುವ ಬುದ್ಧಿಗೂ ಬೇರೆ

ಯಾದ ಶಂಭುಲಿಂಗನು ತಾನೆಂದು ತಿಳಿದು ಅಭಿಮಾನವನ್ನು ಬಿಟ್ಟಮೇಲೆ ಬಾಧೆ ತನ್ನೊಳು ತೋರದು, ॥೩॥

೫೦

ಈ ಸ್ಥಲದಲ್ಲಿ ಗುರು-ಶಿಷ್ಯರಿಬ್ಬರಲ್ಲಿ ಮೊದಲು ಯಾರೆಂಬುದನ್ನು ತಿಳಿದು ಹೇಳಿರಿ ಬಲ್ಲವರು ? ॥ಪ॥

ಶಿಷ್ಯನನ್ನು ಕಾಪಾಡಬೇಕೆಂಬ ಗುರುವಿನ ಅಪೇಕ್ಷೆ ಮೊದಲೋ ಅಥವಾ ವೈರಾಗ್ಯದಿಂದ ಪರಿಪಕ್ವವಾದ ಮನಸ್ಸುಳ್ಳ ಶಿಷ್ಯನು ಮೊದಲೊ ? ಕೃಪೆ ಮಾಡುವ ಗುರುವಿನ ಕೃಪಾದೃಷ್ಟಿ ಮೊದಲೊ ? ಬಂದು ಮೊರೆ ಹೊಕ್ಕು ಶುಶ್ರೂಶಿಸುವ ಶಿಷ್ಯ ಮೊದಲೊ ? ॥೫॥

ಮಮತೆಯುಳ್ಳ ಗುರುವಿನ ಪರೀಕ್ಷೆ ಮೊದಲೊ ? ನಾನು ಯಾರೆಂದು ಕೇಳುವ ಶಿಷ್ಯನ ಪ್ರಶ್ನೆ ಮೊದಲೊ ? ಪರಮಾತ್ಮನೇ ತಾನೆಂದು ತಿಳಿ ಎಂದು ಪದೇಶಮಾಡುವ ಗುರುವಿನ ಉಪದೇಶ ಮೊದಲೊ, ಗುರುತು ಗೊತ್ತಾಗದ ಶಿಷ್ಯನ ನಂಜಿಕೆ ಮೊದಲೊ ? ॥೨॥

ಮಾತನಾಡದೆ ಸುಮ್ಮನೆ ಕೂತುಕೊಂಡಿರುವ ಗುರುವಿನ ಸನ್ನೆ ಮೊದಲೊ ? ತನ್ನ ಸ್ವರೂಪವೇ ತಾನೆಂದು ತಿಳಿದು ಆನಂದ ಹೊಂದಿದ ಶಿಷ್ಯನ ಪ್ರೀತಿ ಮೊದಲೊ ? ಏನೂ ಇಲ್ಲದೆ ಸುಖಸ್ವರೂಪನಾದ ಶಂಭ ಲಿಂಗ ಮೊದಲೊ ? ಅಭಿಮಾನವನ್ನು ಬಿಟ್ಟು ಏಕರೂಪನಾಗಿ ನಿಂತ ಶಿಷ್ಯನ ಮುಕ್ತಿ ಮೊದಲೊ ? ॥೩॥

೫೭

ಎಲ್ಲವೂ ಒಂದೇ ಎಂಬ ಅಭೇದ ಭಾವನೆಯಿಂದ ಭೋಗವನ್ನು ಹೊಂದು

ತ್ತಿರುವ ಬ್ರಹ್ಮಜ್ಞಾನಿಗೆ ಯಾವ ಬಾಧೆಯನ್ನುಂಟು ಮಾಡುವದಕ್ಕೆ ಸಾಧ್ಯವಾದೀತು ? ॥ಪ॥

ಸೂರ್ಯನು ಎಲ್ಲಾ ಪದಾರ್ಥಗಳಲ್ಲಿರುವ ರಸವನ್ನು ಹೀರಿಕೊಂಡಾಗಲೂ, ಅಗ್ನಿಯು ಒಳ್ಳೆಯದು, ಕೆಟ್ಟುದೆಂಬ ಭೇದಭಾವವಿಲ್ಲದೆ ಸರ್ವಪದಾರ್ಥಗಳನ್ನು ದಹಿಸಿದಾಗಲೂ, ಗಾಳಿಯು ಎಲ್ಲಾ ವಸ್ತುಗಳನ್ನು ಸೋಂಕಿದಾಗಲೂ, ಅದು ಹೇಗೆ ಪರಿಶುದ್ಧವೆನಿಸಿಕೊಂಡಿರುವವೋ ಹಾಗೆ ಎಲ್ಲವೂ ಸರಿಸಮಾನವೆಂದೆಸಸಿಕೊಂಡಿರುವ ಶಿವಯೋಗಿಗೆ ॥೧॥

ಸ್ಫಟಿಕವು ಮತ್ತೊಂದುಪಾಧಿಯನ್ನು ಹೊಂದಿದಾಗಲೂ ಮಲಿನವಾಗದೆ. ತಾವರೆಯು ನೀರಿನಲ್ಲಿದ್ದರೂ ಅದರಿಂದ ಬಳಿಯಲ್ಪಡದೆ, ಆಕಾಶವು ಮೇಘದೊಡನೆ ಕೂಡಿದಾಗಲೂ ಮಲಿನವಾಗದೆ ಹೇಗಿರುವವೋ ಹಾಗೆ ಆತ್ಮಜ್ಞಾನನೆಲೆ ಗೊಂಡಿರುವ ಯತಿವರನಿಗೆ ॥೨॥

ಮರದಲ್ಲಿ ಬೆಂಕಿ ಇದ್ದಾಗ್ಗೂ ಬೇಕಿಯಲ್ಲಿ ಮರವು ಇಲ್ಲ, ಹಾಗೆ ಜ್ಞಾನಿಯು ಸಂಸಾರದಲ್ಲಿದ್ದರೂ ಜ್ಞಾನಿಯಲ್ಲಿ ಸಂಸಾರವು ನಿಲ್ಲಲಾರದು. ॥೩॥

೫೮

ಜೀವನ್ಮುಕ್ತರ ಪ್ರಾರಬ್ಧ ಕರ್ಮ ಸಂಸ್ಕಾರವು ನಾಲ್ಕು ಬಗೆಯಾಗಿರುವುದು. ॥ಪ॥

ಬ್ರಹ್ಮಜ್ಞಾನವಾದ ಮೇಲೆ ದೇಹವನ್ನು ಹೊಂದಿರುವದರಿಂದ ಭೋಗಾಪೇಕ್ಷೆಯುಂಟಾಗಿ ಪಶುವಿನಂತೆ ಕೇವಲ ಜೀವನಲ್ಲಿ ಪ್ರೀತಿಯೊಂದು ಉಂಟಾಗಿರುವುದು. ಇದು ತೀವ್ರ ಸಂಸ್ಕಾರವೆನಿಸಿಕೊಳ್ಳುವುದು. ॥೧॥

ಭೋಗಾಪೇಕ್ಷೆಯುಂಟಾಗಲು ತಾನು ಆತ್ಮವಶನಾಗಿ ಹುಡುಗನಂತೆ ವಿನೋದವುಳ್ಳವನಾಗಿ, ವಿಷಯಾಭಿಲಾಷೆಯುಳ್ಳವನೆನಿಸಿಕೊಂಡು ಆಡುತ್ತಿರಲು ಇದು ಮಧ್ಯ ಸಂಸ್ಕಾರವೆನಿಸಿಕೊಳ್ಳುತ್ತದೆ. ॥೨॥

ಭೋಗಗಳನ್ನು ಬಿಟ್ಟು ಬ್ರಹ್ಮವಸ್ತುವಿನೊಡನೆ ಮನಸ್ಸು ಸೇರಿ, ಸುರತ ಕ್ರೀಡೆಯಲ್ಲಿ ಸುಖವನ್ನು ಹೊಂದಿ ನಿಶ್ಚಲವಾಗಿರುವ ಸ್ತ್ರೀ ಪುರುಷರ ಜೋಡಿಯಂತೆ ಸ್ವಾತ್ಮಾನಂದದಲ್ಲಿದ್ದುಕೊಂಡಿರುವುದು ಮಂದಸಂಸ್ಕಾರವು. ॥೩॥

ಉಪಮಾತೀತನಾಗಿಯೂ, ಅದ್ವಿತೀಯನಾಗಿಯೂ, ಶಾಶ್ವತನಾಗಿಯೂ, ಸಂಪೂರ್ಣಾನಂದವುಳ್ಳವನಾಗಿಯೂ, ಜ್ಞಾನಸ್ವರೂಪನಾಗಿಯೂ, ತುರ್ಯಾತ್ಮಕನಾಗಿಯೂ ಇದ್ದು ಸತ್ತವನ ಹಾಗೆ ನಿಶ್ಚಲನಾಗಿದ್ದರೆ ಅದು ಸುಪ್ತಸಂಸ್ಕಾರವೆನ್ನಿಸಿಕೊಳ್ಳುವುದು. ॥೪॥

ಹೀಗೆ ನಾಲ್ಕು ಬಗೆಯಾದ ಸಂಸ್ಕಾರಗಳು ಯಾವನಿಗೆ ಯಾವ ರೀತಿಯಲ್ಲಿರುವವೋ ಅವನು ಆ ಬಗೆಯಲ್ಲಿರುವನು, ಅದೇ ಸ್ಥಿತಿಯು ಶ್ರೀಶಂಭುಲಿಂಗರೂಪವಾದ ಮೋಕ್ಷವೆಂದೆನಿಸಿಕೊಳ್ಳುವುದು; ॥೫॥

೫೯

ಪರಂಜ್ಯೋತಿಯು ಪ್ರಕಾಶಿಸುತ್ತಲಿದೆ, ಸ್ವಚ್ಛವಾದ ಶ್ರೇಷ್ಠ ಪ್ರಕಾಶವು ಪ್ರಕಾಶಿಸುತ್ತಲಿದೆ, ಮನಸ್ಸು ಮಾತುಗಳಿಗೆ ಅತೀತವಾದ ಮತ್ತು ನಿರುಪಾಧಿಕವಾದ ಅತಿಶಯವಾದ ಜ್ಯೋತಿ ಬೆಳಗುತಿದೆ. ॥ಪ॥

ಶಿವಧರ್ಮ ನಾಳವೆಂಬ ಕಂಭದ ಮೇಲೆ, ಸಮಬುದ್ಧಿಯೆಂಬ ಹೃದಯ ಕಮಲದ ಪ್ರಣತಿಯಲ್ಲಿ ಅಕ್ಷಯವಾದ ಭಕ್ತಿತೈಲವನ್ನು ತುಂಬಿ, ಅತಿಶಯ ಕಳೆಯೆಂಬ ಬತ್ತಿಯ ಆಧಾರದಿಂದ ಶ್ರೇಷ್ಠವಾದ ಜ್ಯೋತಿಯು ಬೆಳಗುತ್ತದೆ, ॥೧॥

ವಿಷಯ ಸುಖವೆಂಬ ಪತಂಗವು ಅದರಲ್ಲಿ ಬೀಳಲು, ತಾಮಸ ಬುದ್ಧಿಯೆಂಬ ಕತ್ತಲೆಯು ನಾಶವಾಗಲು, ಸುಜ್ಞಾನವೆಂಬ ಶ್ರೇಷ್ಠ ಪ್ರಕಾಶವು ಪಸರಿಸಲು ಮಾಯೆಯೆಂಬ ಕಾಳಿಕೆಯಳಿದು ಸುಜ್ಞಾನವು ಉಂಟಾಗಲು; ॥೨॥

ಮೂರು ಗುಣಗಳ ಕಾಟದಿಂದ ದೂರವಾದ ಓಂಕಾರ ಸ್ವಸ್ವರೂಪವಾದ ಲೆಕ್ಕಕ್ಕೆ ಅಸಾಧ್ಯವೆಂದು ತೋರುವ, ಕಿಂಚಿತ್ತಾದರೂ ಚಲನೆ ಇಲ್ಲದ ಮೋಕ್ಷವೆಂಬ ಚಿಂತಾಮಣಿಯೆನಿಸಿಕೊಳ್ಳುವ ಶಂಭುಲಿಂಗನೇ ತಾನೆಂದೆನಿಸಿಕೊಂಡ ಜ್ಯೋತಿಯು ಬೆಳಗುತಿದೆ. ||೩||

ಶ್ರೀ ಕಂಬಿ ಅವರು ರಚಿಸಿದ ಜ್ಞಾನಪ್ರತ್ರಿಪಾದನ ಸ್ಥಲದ
ಭಾವಪ್ರಕಾಶ ಸಮಾಪ್ತ

ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ
ಪ್ರಕಾಶನ

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
14–3 A ನೃಪತುಂಗ ರಸ್ತೆ
ಬೆಂಗಳೂರು 560 002